ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಕೋವಿಡ್ ಅಲೆಗಳ ಮಧ್ಯೆ ಗ್ರಾಮೀಣ ಭಾಗದ ಸಂಕ್ರಾಂತಿಯ ನೋಟಗಳ ಒಂದು ಝಲಕ್

ಪೌಷ್ಟಿಕ ಆಹಾರದ ಪೊಟ್ಟಣದಲ್ಲಿ ₹1.5 ಕೋಟಿ ಮೌಲ್ಯದ ಡ್ರಗ್ಸ್ 4

ಈ ತಿಂಗಳು ನಿತ್ಯ ಸರಾಸರಿ 4.31 ಲಕ್ಷ ಡೋಸ್ ವಿತರಣೆ

‘ಓಮೈಕ್ರಾನ್‌ನಿಂದಲೇ ಮೂರನೇ ಅಲೆ’ 5

ಕೋವಿಡ್–19: ಲಸಿಕೆ ವಿತರಣೆಗೆ ವೇಗ 5

ಸೇವಾ ಭದ್ರತೆಗೆ ಉಪನ್ಯಾಸಕರ ಕೂಗು; ಕನಿಷ್ಠ ವೇತನ ಇಲ್ಲ ಎಂಬ ಕೊರಗು

ಅಭದ್ರತೆಯಲ್ಲಿ ‘ಅತಿಥಿ’ಗಳು

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ‘ಅತಿಥಿ’ಗಳಾಗಿ ಹೆಚ್ಚುವರಿ ಕಾರ್ಯಭಾರ ನಿಭಾಯಿಸುತ್ತಿರುವ ಉಪನ್ಯಾಸಕರು ಅಭದ್ರತೆಯ ಸುಳಿಯಲ್ಲಿದ್ದಾರೆ. ಗೌರವಯುತ-ಘನತೆಯ ಜೀವನ ಸಾಗಿಸಲು ಸಾಕಾಗುವಷ್ಟು ವೇತನ ಇಲ್ಲ ಎಂಬ ಕೊರಗು ಅನೇಕರದ್ದು. ವಯೋಮಿತಿ ದಾಟಿದವರಿಗೆ, ದಾಟುತ್ತಿರುವವರಿಗೆ ಸರ್ಕಾರಿ ‘ಸಹಾಯಕ ಪ್ರಾಧ್ಯಾಪಕ’ ಹುದ್ದೆಯ ಅವಕಾಶ ವಂಚಿತರಾಗಿ ಬದುಕು–ಭವಿಷ್ಯ ಕಳೆದುಕೊಳ್ಳುವ ಆತಂಕ.

ರಾಜ್ಯದಾದ್ಯಂತ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಸಕ್ತ ಸಾಲಿನಲ್ಲಿ 12,868 ಅತಿಥಿ ಉಪನ್ಯಾಸಕರು ಸೇವೆ ಸಲ್ಲಿಸುತ್ತಿದ್ದಾರೆ. ಈ ಪೈಕಿ, 5,163 ಮಂದಿ 36 ವರ್ಷ ವಯೋಮಾನ ದಾಟಿದವರು. ಅದರಲ್ಲಿ, 2,648 ಮಂದಿ 36ರಿಂದ 40ರ ಮಧ್ಯದ ವಯಸ್ಸಿನವರು. 1,303 ಮಂದಿ 41ರಿಂದ 45ರ ಮಧ್ಯದವರು. 781 ಮಂದಿ 46ರಿಂದ 50ರ ನಡುವಿನವರು. ಇನ್ನು 51 ವರ್ಷ ವಯಸ್ಸು ದಾಟಿದವರು 431 ಮಂದಿ.

ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸದ್ಯದ ಕಾರ್ಯನಿರತ ಹುದ್ದೆಗಳ ಜೊತೆಗೆ ಹೊಸ ಹುದ್ದೆಗಳನ್ನು ಸೃಜಿಸಬೇಕು ಅಥವಾ ಸೇರಿಸಬೇಕು. ಕಾನೂನು ತಿದ್ದುಪಡಿ ಮೂಲಕ ಆ ಹುದ್ದೆಗಳಿಗೆ ತಮ್ಮನ್ನು ಸೇರಿಸಿ ಸೇವೆ ಸಕ್ರಮಗೊಳಿಸಬೇಕು ಎಂಬುದು ಅತಿಥಿ ಉಪನ್ಯಾಸಕರ ಒಕ್ಕೊರಲ ಧ್ವನಿ.

ಹೀಗೆ ಸೇವೆ ಸಲ್ಲಿಸುತ್ತಿರುವವರಲ್ಲಿ ಅರ್ಹ, ಬೋಧನಾ ಕೌಶಲ ಹೊಂದಿದ ಪ್ರತಿಭಾವಂತರಿದ್ದಾರೆ. ಆದರೆ, ಅವರಿಗೆ ಸಾಮರ್ಥ್ಯಕ್ಕೆ ತಕ್ಕಂತೆ ಶೈಕ್ಷಣಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಅವಕಾಶವಿಲ್ಲ. ಅತ್ಯಂತ ಕಡಿಮೆ ವೇತನ, ಸಮಯಕ್ಕೆ ಸರಿಯಾಗಿ ಸಿಗದ ಗೌರವಧನ, ವರ್ಷವಿಡೀ ಕೆಲಸ ಇಲ್ಲದಿರುವುದು ಈ ಸಮೂಹವನ್ನು ಸಾಮಾಜಿಕವಾಗಿ ಅತಂತ್ರಗೊಳಿಸಿದೆ. ಸೇವಾ ಭದ್ರತೆ ಇಲ್ಲದ ಇವರ ಬದುಕು ಅಭದ್ರವಾಗಿದೆ ಎನ್ನುವುದು ಕಟು ವಾಸ್ತವ.

6ನೇ ಪುಟ ನೋಡಿ

ಒಳನೋಟ

ಬದುಕು ಅತಂತ್ರ

ಪ್ರತಿಕ್ರಿಯಿಸಿ: 9606038256

feedback@prajavani.co.in

‘ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಸಿ’

ಬೆಂಗಳೂರು: ‘ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರನ್ನು ಸರ್ಕಾರ ಶೋಷಣೆ ಮಾಡದೆ, ಅವರ ಬೇಡಿಕೆಗಳನ್ನು ಈಡೇರಿಸಬೇಕು’ ಎಂದು ಒತ್ತಾಯಿಸಿ ಮುಖ್ಯಮಂತ್ರಿ ಮತ್ತು ಉನ್ನತ ಶಿಕ್ಷಣ ಸಚಿವರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

‘ರಾಜ್ಯದ 440 ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು ಹಲವು ದಿನಗಳಿಂದ ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಉಪನ್ಯಾಸಕರ ಜೊತೆ ಮಾನವೀಯತೆಯಿಂದ ವರ್ತಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 6

ಕಲಬುರಗಿ ಜಿಲ್ಲಾಧಿಕಾರಿ ಕಚೇರಿ ರಸ್ತೆ ಬಳಿ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಹಿತರಕ್ಷಣ ಸಮಿತಿ ವತಿಯಿಂದ ಇತ್ತೀಚೆಗೆ ಪ್ರತಿಭಟನೆ ನಡೆಸಲಾಗಿತ್ತು –ಪ್ರಜಾವಾಣಿ ಚಿತ್ರ

‘ಸಕ್ರಮಾತಿಗೆ ಕಾನೂನು ತೊಡಕು’

ತಾತ್ಕಾಲಿಕ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸೇವೆಯನ್ನು ಸಕ್ರಮಗೊಳಿಸಿದರೆ, ಈ ಹಿಂದೆ ವಿವಿಧ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಕರ್ನಾಟಕ ಆಡಳಿತ ನ್ಯಾಯಮಂಡಳಿ ವ್ಯಕ್ತಪಡಿಸಿರುವ ನಿಲುವಿನಂತೆ ಕಾನೂನು ಹಾಗೂ ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗುತ್ತದೆ ಎನ್ನುತ್ತಾರೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ.

‘ಉಮಾದೇವಿ ವಿರುದ್ಧ ಕರ್ನಾಟಕ ಸರ್ಕಾರ ಮತ್ತು ಇತರರು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸಾಂವಿಧಾನಿಕ ಪೀಠವು 2006 ಏ. 10ರಂದು ನೀಡಿದ ತೀರ್ಪಿನಲ್ಲಿ, ‘ನೇಮಕಾತಿ ನಿಯಮಗಳಂತೆ ನೇಮಕ ಆಗದಿರುವ ವ್ಯಕ್ತಿಗಳಿಗೆ ಸಕ್ರಮಾತಿಯ ಹಕ್ಕು ದೊರೆಯುವುದಿಲ್ಲ. ಇಂಥ ನಿಯಮಬಾಹಿರ ನೇಮಕಾತಿಯನ್ನು ಸಕ್ರಮಗೊಳಿಸಬಾರದು’ ಎಂದು ತೀರ್ಪು ನೀಡಿದೆ ಎನ್ನುತ್ತಾರೆ ಅವರು.

6ನೇ ಪುಟ ನೋಡಿ

‘ಅಸಡ್ಡೆ ತೋರುತ್ತಿರುವುದು ಸರಿಯಲ್ಲ’

ಬೆಂಗಳೂರು: ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಲು ಮುಖ್ಯಮಂತ್ರಿ ಮತ್ತು ಉನ್ನತ ಶಿಕ್ಷಣ ಸಚಿವರು ಮುಂದಾಗಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ರಾಜ್ಯದ ಪದವಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ 14,500 ಅತಿಥಿ ಉಪನ್ಯಾಸಕರ ಬಗ್ಗೆ ರಾಜ್ಯ ಸರ್ಕಾರ ಅಸಡ್ಡೆ ತೋರುತ್ತಿರುವುದು ಸರಿಯಲ್ಲ ಎಂದು ಟ್ವೀಟ್ ಮಾಡಿದ್ದಾರೆ. ತಿಂಗಳಿಗೆ ₹11,000 ರಿಂದ ₹13,000 ಗೌರವಧನ ನೀಡಲಾಗುತ್ತಿದೆ. ಇದು ಸರ್ಕಾರವೇ ನಿಗದಿ ಮಾಡಿರುವ ಮೂಲ ವೇತನಕ್ಕಿಂತ ಕಡಿಮೆ ಇದೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ಹಣಾಹಣಿಗೆ ಮುಹೂರ್ತ ನಿಗದಿ

ಉತ್ತರ ಪ್ರದೇಶ, ಉತ್ತರಾಖಂಡ, ಪಂಜಾಬ್, ಮಣಿಪುರ, ಗೋವಾ ಚುನಾವಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: 2024ರಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಗೂ ಮೊದಲಿನ ಅತ್ಯಂತ ಮಹತ್ವದ ವಿಧಾನಸಭಾ ಚುನಾವಣೆಯ ದಿನಾಂಕಗಳನ್ನು ಚುನಾವಣಾ ಆಯೋಗವು ಶನಿವಾರ ಪ್ರಕಟಿಸಿದೆ. ಕೇಂದ್ರದಲ್ಲಿ ಅಧಿಕಾರ ಹಿಡಿಯಲು ನಿರ್ಣಾಯಕ ಎಂದು ಪರಿಗಣಿಸಲಾಗುವ ಉತ್ತರ ಪ್ರದೇಶ ಹಾಗೂ ಪಂಜಾಬ್, ಉತ್ತರಾಖಂಡ, ಮಣಿಪುರ, ಗೋವಾ ರಾಜ್ಯಗಳಲ್ಲಿ ಫೆಬ್ರುವರಿ 10ರಿಂದ ಮಾರ್ಚ್ 7 ನಡುವೆ ಮತದಾನ ನಡೆಯಲಿದೆ.

ಉತ್ತರ ಪ್ರದೇಶದಲ್ಲಿ ಏಳು ಹಂತಗಳಲ್ಲಿ ಮತದಾನ ನಡೆಸಲು ಆಯೋಗವು ನಿರ್ಧರಿಸಿದೆ. ಫೆಬ್ರುವರಿ 10, 14, 20, 23, 27, ಮಾರ್ಚ್ 3 ಮತ್ತು 7ರಂದು ಈ ರಾಜ್ಯದಲ್ಲಿ ಮತದಾನ ನಡೆಯಲಿದೆ. ಮಣಿಪುರದಲ್ಲಿ ಫೆ. 27 ಮತ್ತು ಮಾರ್ಚ್ 3ರಂದು ಎರಡು ಹಂತಗಳಲ್ಲಿ ಮತದಾನ ಆಗಲಿದೆ. ಪಂಜಾಬ್, ಉತ್ತರಾಖಂಡ ಮತ್ತು ಗೋವಾದಲ್ಲಿ ಫೆಬ್ರುವರಿ 14ರಂದು ಒಂದೇ ಹಂತದಲ್ಲಿ ಮತದಾನ ನಡೆಸಲು ತೀರ್ಮಾನಿಸಲಾಗಿದೆ.

ಎಲ್ಲ ಐದು ರಾಜ್ಯಗಳಲ್ಲಿ ಮತ ಎಣಿಕೆಯು ಮಾರ್ಚ್ 10ರಂದು ನಡೆಯಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ಸುಶೀಲ್ ಚಂದ್ರ ಅವರು ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಚುನಾವಣಾ ಆಯೋಗದ ಮಾಹಿತಿಯ ಪ್ರಕಾರ, ಐದೂ ರಾಜ್ಯಗಳಲ್ಲಿ ಒಟ್ಟಾಗಿ 18.34 ಕೋಟಿ ಮತದಾರರಿದ್ದಾರೆ. ಅವರಲ್ಲಿ 8.55 ಕೋಟಿ ಮಹಿಳೆಯರು. 24.98 ಲಕ್ಷ ಮಂದಿ ಮೊದಲ ಬಾರಿಗೆ ಮತ ಚಲಾಯಿಸುವ ಹಕ್ಕು ಪಡೆದಿದ್ದಾರೆ. ಅವರಲ್ಲಿ 11.4 ಲಕ್ಷ ಮಂದಿ ಮಹಿಳೆಯರು.

ವಿರೋಧ ಪಕ್ಷಗಳಿಗೆ ಅದರಲ್ಲೂ ಮುಖ್ಯವಾಗಿ ಕಾಂಗ್ರೆಸ್‌ಗೆ ಈ ಬಾರಿಯ ಚುನಾವಣೆ ಅತ್ಯಂತ ನಿರ್ಣಾಯಕ ಎನಿಸಿಕೊಳ್ಳಲಿದೆ. 2024ರ ಲೋಕಸಭಾ ಚುನಾವಣೆಗೆ ಮುನ್ನ ತಾನಿನ್ನೂ ಪ್ರಸ್ತುತ ಎಂದು ತೋರಿಸಿಕೊಳ್ಳಲು ಈ ಚುನಾವಣೆಯು ಕಾಂಗ್ರೆಸ್ ಪಕ್ಷಕ್ಕೆ ಅವಕಾಶ ಕೊಟ್ಟಿದೆ.

ವೇಳಾಪಟ್ಟಿ

ಉತ್ತರ ಪ್ರದೇಶ	
7 ಹಂತಗಳಲ್ಲಿ ಮತದಾನ	ಒಟ್ಟು ಕ್ಷೇತ್ರಗಳು 404
ಹಂತ 1	ಫೆ.10 (58 ಕ್ಷೇತ್ರಗಳು)
ಹಂತ 2	ಫೆ. 14 (55 ಕ್ಷೇತ್ರಗಳು)
ಹಂತ 3	ಫೆ. 20 (60 ಕ್ಷೇತ್ರಗಳು)
ಹಂತ 4	ಫೆ. 23 (60 ಕ್ಷೇತ್ರಗಳು)
ಹಂತ 5	ಫೆ. 27 (60 ಕ್ಷೇತ್ರಗಳು)
ಹಂತ 6	ಮಾರ್ಚ್ 3 (57 ಕ್ಷೇತ್ರಗಳು)
ಹಂತ 7	ಮಾರ್ಚ್ 7 (54 ಕ್ಷೇತ್ರಗಳು)

ಮಣಿಪುರ	
2 ಹಂತಗಳಲ್ಲಿ ಮತದಾನ	ಒಟ್ಟು ಕ್ಷೇತ್ರಗಳು 60
ಹಂತ 1	ಫೆ. 27 (38 ಕ್ಷೇತ್ರಗಳು)
ಹಂತ 2	ಮಾರ್ಚ್ 3 (22 ಕ್ಷೇತ್ರಗಳು)
ಹಂತ 1	ಫೆ. 14 ಪಂಜಾಬ್ (117 ಕ್ಷೇತ್ರಗಳು), ಉತ್ತರಾಖಂಡ (70 ಕ್ಷೇತ್ರಗಳು), ಗೋವಾ (40 ಕ್ಷೇತ್ರಗಳು)
ಮತ ಎಣಿಕೆ	ಮಾರ್ಚ್ 10

ಸರಾಸರಿಗಿಂತ ಕಡಿಮೆ ಮತದಾನ ಆಗಿದ್ದ ಮತಗಟ್ಟೆಗಳಲ್ಲಿ ಅದಕ್ಕೆ ಕಾರಣವೇನು ಎಂದು ಗುರುತಿಸಲಾಗುವುದು, ಮತದಾನ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು

ಸುಶೀಲ್ ಚಂದ್ರ

ಮುಖ್ಯ ಚುನಾವಣಾ ಆಯುಕ್ತ

ತಾನು ಅಧಿಕಾರದಲ್ಲಿರುವ ಉತ್ತರ ಪ್ರದೇಶ, ಉತ್ತರಾಖಂಡ, ಗೋವಾ ಮತ್ತು ಮಣಿಪುರ ರಾಜ್ಯಗಳಲ್ಲಿ ಮತ್ತೆ ಗೆದ್ದು ಕೇಂದ್ರದಲ್ಲಿ ತನ್ನ ಸ್ಥಾನವನ್ನು ಇನ್ನಷ್ಟು ಭದ್ರಪಡಿಸಲು ಬಿಜೆಪಿ ಪ್ರಯತ್ನಿಸಲಿದೆ. ಪಂಜಾಬ್‌ನಲ್ಲಿ ಗೆಲ್ಲಲು ಸಾಧ್ಯವಾಗದೇ ಇದ್ದರೂ ತನ್ನ ಪ್ರಧಾನ ಪ್ರತಿಸ್ಪರ್ಧಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರ ಸ್ಥಾನದಿಂದ ಕಿತ್ತೊಗೆಯಲು ಬಿಜೆಪಿ ಹವಣಿಸಲಿದೆ.

7ನೇ ಪುಟ ನೋಡಿ

ಕೋವಿಡ್: ಶೇ 5.42ಕ್ಕೇರಿದ ದೃಢ ಪ್ರಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶನಿವಾರ 8,906 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣ ಶೇ 5.42ಕ್ಕೆ ಏರಿಕೆಯಾಗಿದೆ.



ಈ ಪ್ರಮಾಣ ಶೇ 5ರ ಗಡಿ ದಾಟಿದಲ್ಲಿ ಸೋಂಕು ಹರಡುವಿಕೆ ತಡೆಗೆ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳುವಂತೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಈ ತಿಂಗಳು 8 ದಿನಗಳಲ್ಲಿ 32,621 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 38,507ಕ್ಕೆ ಏರಿಕೆಯಾಗಿದೆ.

ರಾಜ್ಯದ 28 ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಹೊಸದಾಗಿ ಪತ್ತೆಯಾಗಿವೆ. ಆರು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರಂಕಿ, 18 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಹಾವೇರಿ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಬೆಂಗಳೂರಿನಲ್ಲಿ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, 7,113 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಬೆಂಗಳೂರಿನಲ್ಲಿ ಕೋವಿಡ್ ದೃಢ ಪ್ರಮಾಣ ಶೇ 10 ರಷ್ಟಿದೆ.

5ನೇ ಪುಟ ನೋಡಿ

ದೇಶದಲ್ಲಿ 1.41 ಲಕ್ಷ ಪ್ರಕರಣ ದೃಢ

ನವದೆಹಲಿ (ಪಿಟಿಐ): ಶನಿವಾರ ಬೆಳಿಗ್ಗೆ 8 ಗಂಟೆಯ ಹಿಂದಿನ 24 ತಾಸು ಅವಧಿಯಲ್ಲಿ ದೇಶದಲ್ಲಿ ಕೋವಿಡ್‌ನ 1,41,986 ಹೊಸ ಪ್ರಕರಣಗಳು ದೃಢಪಟ್ಟಿವೆ. ಇದರಲ್ಲಿ, ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್‌ನ 3,071 ಪ್ರಕರಣಗಳೂ ಸೇರಿವೆ. 27 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಓಮೈಕ್ರಾನ್ ಸೋಂಕು ಈವರೆಗೆ ಪತ್ತೆ ಆಗಿದೆ.

ಇದೇ ಅವಧಿಯಲ್ಲಿ, ದೆಹಲಿಯಲ್ಲಿ ಕೋವಿಡ್‌ನ 20,181 ಹೊಸ ಪ್ರಕರಣಗಳು ಪತ್ತೆಯಾಗಿವೆ. ಕಳೆದ ವರ್ಷದ ಮೇ 2ರ ನಂತರ ಇದೇ ಮೊದಲಿಗೆ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಪ್ರಕರಣಗಳು ದೃಢಪಟ್ಟಿವೆ. ಕೋವಿಡ್ ದೃಢಪಡುವಿಕೆ ಪ್ರಮಾಣವು 19.60ಕ್ಕೆ ಏರಿಕೆ ಆಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕನಕಪುರ ತಾಲ್ಲೂಕಿನ ಸಂಗಮ ಬಳಿ ಇಂದು ವಿಧ್ಯುಕ್ತ ಚಾಲನೆ

ಕುತೂಹಲ ಘಟ್ಟದಲ್ಲಿ ಪಾದಯಾತ್ರೆ

• ಆರ್. ಜಿತೇಂದ್ರ

ಸಂಗಮ (ರಾಮನಗರ): ದಕ್ಷಿಣ ಭಾರತೀಯರ ಪವಿತ್ರ ನದಿಗಳಲ್ಲಿ ಒಂದಾದ ಕಾವೇರಿಯ ತಟದಲ್ಲಿ ಭಾನುವಾರ ಮುಂಜಾನೆ ಮೇಕೆದಾಟು ಪಾದಯಾತ್ರೆ ಆರಂಭಿಸಲು ಕಾಂಗ್ರೆಸ್ ತುದಿಗಾಲಲ್ಲಿ ನಿಂತಿದೆ. ಪಾದಯಾತ್ರೆಗೆ ತಡೆಯೊಡ್ಡಲು ರಾಜ್ಯ ಸರ್ಕಾರವೂ ಪ್ರತಿತಂತ್ರ ರೂಪಿಸತೊಡಗಿದ್ದು, ‘ನೀರಿಗಾಗಿ ನಡಿಗೆ’ ಸೋಮವಾರಕ್ಕೂ ಮುಂದುವರಿಯುತ್ತದೆಯೇ ಎಂಬುದು ಸದ್ಯದ ಕುತೂಹಲವಾಗಿದೆ.

ಬಂಡೆಗಳ ನಾಡು ಕನಕಪುರದಲ್ಲಿ ಶನಿವಾರ ಸಂಜೆ ಕಾಂಗ್ರೆಸ್ ನಾಯಕರೆಲ್ಲ ಒಗ್ಗಟ್ಟಾಗಿ ಪಾದಯಾತ್ರೆಯ ರಣಕಹಳೆ ಊದಿದರು. ‘ಜೈಲಿಗೆ ಕಳುಹಿಸಿದರೂ ಸಿದ್ಧ. ಎಲ್ಲಿ ನಮ್ಮನ್ನು ಬಂಧಿಸಿ ಬಿಡುಗಡೆ ಮಾಡುತ್ತೀರೋ ಅಲ್ಲಿಂದಲೇ ಮತ್ತೆ ನಡೆಯುತ್ತೇವೆ’ ಎಂದು ಗುಡುಗಿದರು.

ಮೇಕೆದಾಟು ಪಾದಯಾತ್ರೆ ಘೋಷಣೆಯಾದ ದಿನದಿಂದ ಈವರೆಗೂ ಈ ವಿಚಾರಕ್ಕೆ ಗದ್ದಲ ನಡೆಯುತ್ತಲೇ ಇದ್ದು, ಭಾನುವಾರ ಇದಕ್ಕೊಂದು ಕ್ಲೈಮ್ಯಾಕ್ಸ್ ದೊರಕುವ ನಿರೀಕ್ಷೆ ಇದೆ.

ಅತ್ಯುತ್ಸಾಹದಲ್ಲಿ ಕಾಂಗ್ರೆಸ್: ಕಾವೇರಿ ವನ್ಯಜೀವಿಧಾಮದ ಪರಿಸರ ಸೂಕ್ಷ್ಮ ವಲಯದ ಸೌಂದರ್ಯ ಮರೆಮಾಚುವಂತೆ ನಾನಾ ನಮೂನೆಯ ಬಾವುಟಗಳು ಈಗಾಗಲೇ ಹಾರಾಡತೊಡಗಿವೆ. ಇದರ ಜೊತೆಗೆ ಇಡೀ ಪಾದಯಾತ್ರೆ ಸಾಗುವ ಮಾರ್ಗದ ತುಂಬೆಲ್ಲ ಕಾಂಗ್ರೆಸ್ ನಾಯಕರ ಭಾವಚಿತ್ರ ಹೊತ್ತ ಫ್ಲೆಕ್ಸ್‌ಗಳು ತೂಗುತ್ತಿವೆ. ಶಿವರಾಜಕುಮಾರ್ ಸೇರಿದಂತೆ ಚಿತ್ರರಂಗದ ಮಂದಿಗೂ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವಂತೆ ಕಾಂಗ್ರೆಸ್ ಆಹ್ವಾನಿಸಿದೆ.

ಕಾಂಗ್ರೆಸ್ ತಂತ್ರ: ಕೋವಿಡ್ ನಿಯಮ ಪಾಲಿಸಿಕೊಂಡು ಪಾದಯಾತ್ರೆ ಆರಂಭಿಸುವುದು. ಒಂದೊಮ್ಮೆ ರಾಜ್ಯ ಸರ್ಕಾರ ಇದಕ್ಕೆ ಅಡ್ಡಿಪಡಿಸಿ ಪ್ರಮುಖ ನಾಯಕರನ್ನು ಬಂಧಿಸಿ ಕರೆದೊಯ್ದಲ್ಲಿ ಉಳಿದ ಮುಖಂಡರ ನೇತೃತ್ವದಲ್ಲಿ ಕಾರ್ಯಕರ್ತರೇ ನಡಿಗೆ ಮುಂದುವರಿಸುವುದು ಎಂಬ ನಿರ್ಧಾರಕ್ಕೆ ಪಕ್ಷ ಬಂದಿದೆ.

ಮೊದಲ ದಿನ ಕಾಂಗ್ರೆಸ್‌ನ ನೂರಕ್ಕೂ ಹೆಚ್ಚು ಶಾಸಕರು, ವಿಧಾನ ಪರಿಷತ್ ಸದಸ್ಯರ ಜೊತೆಗೆ ಜಿಲ್ಲೆಯ ಕಾರ್ಯಕರ್ತರು ಮಾತ್ರ ಪಾಲ್ಗೊಳ್ಳಲಿದ್ದಾರೆ. ಪ್ರತಿ ನೂರು ಮಂದಿಗೆ ಒಂದು ತಂಡದಂತೆ ಪರಸ್ಪರ ಅಂತರ ಕಾಯ್ದುಕೊಂಡು ನಡೆಯುವ ತೀರ್ಮಾನಕ್ಕೆ ಬರಲಾಗಿದೆ.

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ಸಂಗಮದ ಕಾವೇರಿ ನದಿ ದಂಡೆಯಲ್ಲಿ ಪಾದಯಾತ್ರೆಯ ಮುಖ್ಯ ವೇದಿಕೆ ನಿರ್ಮಾಣ ಕಾರ್ಯ ಶನಿವಾರ ನಡೆದಿತ್ತು –ಪ್ರಜಾವಾಣಿ ಚಿತ್ರ/ಚಂದ್ರೇಗೌಡ

ಪಾದಯಾತ್ರೆ ನಡೆಸಲು ನಮಗೆ ಯಾರ ಅಪ್ಪಣೆಯೂ ಬೇಕಿಲ್ಲ. ನೋಟಿಸ್ ನೀಡುವ ಅಧಿಕಾರ ಜಿಲ್ಲಾಡಳಿತಕ್ಕೆ ಇಲ್ಲವೇ ಇಲ್ಲ. ಜೈಲಿಗೆ ಹಾಕಿದರೂ ಭಯವಿಲ್ಲ

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಪಾದಯಾತ್ರೆ ನಡೆಸದಂತೆ ರಾಮನಗರ ಜಿಲ್ಲಾಧಿಕಾರಿ ಈಗಾಗಲೇ ನೋಟಿಸ್ ನೀಡಿದ್ದಾರೆ. ನಿಯಮ ಉಲ್ಲಂಘಿಸಿ ಪಾದಯಾತ್ರೆ ಆರಂಭಿಸಿದರೆ ಕಾನೂನು ಕ್ರಮ ಕೈಗೊಳ್ಳುತ್ತೇವೆ

ಗಿರೀಶ್, ಎಸ್‌.ಪಿ., ರಾಮನಗರ

ಒಳ ಪುಟ

‘ಮೇಕೆದಾಟು ಸತ್ಯ ತಿಳಿಸಲು ಜಾಹೀರಾತು’ 4

ಚಿನಕುರಳಿ

ಪ್ರಕಾಶ್ ಶೆಟ್ಟಿ



ನೀಟ್ ಕೌನ್ಸೆಲಿಂಗ್ ಬಳಿಕ ಖಾಲಿ ಸೀಟುಗಳ ಸಂಖ್ಯೆ ಹೆಚ್ಚಳ

ಎಂಜಿನಿಯರಿಂಗ್: 23 ಸಾವಿರ ಸೀಟು ಖಾಲಿ

• ರಶ್ಮಿ ಬೇಲೂರು

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ವರ್ಷದಲ್ಲೂ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಬೇಡಿಕೆ ಕಡಿಮೆಯಾಗಿದೆ. ಈ ವರ್ಷವೂ 23 ಸಾವಿರ ಎಂಜಿನಿಯರಿಂಗ್ ಸೀಟುಗಳು ಖಾಲಿ ಉಳಿದಿವೆ. ಇದು ಹಿಂದಿನ ಐದು ವರ್ಷಗಳಲ್ಲೇ ಅತಿ ಹೆಚ್ಚಿನ ಸಂಖ್ಯೆಯಾಗಿದೆ.

ಕೋವಿಡ್ ಕಾರಣಕ್ಕೆ ಪಿಯುಸಿಯ ಎಲ್ಲ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಿದ್ದರಿಂದ ಈ ಬಾರಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಎಂಜಿನಿಯರಿಂಗ್ ಕೋರ್ಸ್ ಪಡೆಯಲು ಅರ್ಹರಾಗಿದ್ದರು. ಹೀಗಾಗಿ, ಈ ಬಾರಿ ಖಾಲಿ ಉಳಿಯುವ ಸಾಧ್ಯತೆಗಳು ಕಡಿಮೆ ಎಂದು ನಿರೀಕ್ಷಿಸಲಾಗಿತ್ತು.

ನೀಟ್ ಕೌನ್ಸೆಲಿಂಗ್ ಆರಂಭವಾದ ಬಳಿಕ ವೈದ್ಯಕೀಯ ಪದವಿ ಪಡೆಯುವ ಆಕಾಂಕ್ಷಿಗಳು ಎಂಜಿನಿಯರಿಂಗ್ ಕೋರ್ಸ್ ತೊರೆಯುವ ಸಾಧ್ಯತೆ ಹೆಚ್ಚಿದ್ದು, ಆಗ ಖಾಲಿ ಉಳಿದಿರುವ ಸಂಖ್ಯೆ ಮತ್ತಷ್ಟು ಹೆಚ್ಚಾಗಲಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಇದುವರೆಗೆ ಎಂಜಿನಿಯರಿಂಗ್ ಸೀಟುಗಳನ್ನು ಭರ್ತಿ ಮಾಡಲು ಮೂರು ಸುತ್ತು ಕೌನ್ಸೆಲಿಂಗ್ ನಡೆಸಿದೆ. ಎರಡನೇ ಸುತ್ತಿನ ಬಳಿಕ, ಎಂಜಿನಿಯರಿಂಗ್ ಪ್ರವೇಶದ ಕೊನೆಯ ದಿನಾಂಕ ವಿಸ್ತರಿಸಲು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಅನುಮತಿ ಪಡೆದಿತ್ತು. ಖಾಲಿ ಉಳಿದಿರುವ ಸೀಟುಗಳನ್ನು ಭರ್ತಿ ಮಾಡಲು ಮೂರನೇ ಸುತ್ತಿನ ಕೌನ್ಸೆಲಿಂಗ್ ಅನ್ನು 2021ರ ಡಿಸೆಂಬರ್ 31ರವರೆಗೆ ನಡೆಸಿತ್ತು. ಹಾಗಿದ್ದರೂ 23,001 ಸೀಟುಗಳು ಖಾಲಿ ಉಳಿದಿವೆ.

4ನೇ ಪುಟ ನೋಡಿ

ಪ್ರಜಾವಾಣಿ ವಿಶೇಷ

ಖಾಲಿ ಉಳಿಯಲು ದುಬಾರಿ ಶುಲ್ಕ ಕಾರಣ?

‘ಸರ್ಕಾರಿ ಕಾಲೇಜುಗಳು ಮತ್ತು ಸರ್ಕಾರಿ ಕೋಟಾದ ಸೀಟುಗಳ ಶುಲ್ಕವನ್ನು ಹೆಚ್ಚಿಸಿದ್ದರಿಂದ ವಿದ್ಯಾರ್ಥಿಗಳು ಎಂಜಿನಿಯರಿಂಗ್ ಕೋರ್ಸ್ ಪಡೆಯಲು ಹಿಂದೇಟು ಹಾಕಿದ್ದಾರೆ’ ಎಂದು ಕೆಲವು ಕಾಲೇಜು ಆಡಳಿತ ಮಂಡಳಿಗಳು ಅಭಿಪ್ರಾಯಪಟ್ಟಿವೆ. ರಾಜ್ಯ ಸರ್ಕಾರ ಸರ್ಕಾರಿ ಕಾಲೇಜುಗಳಲ್ಲಿನ ಶುಲ್ಕವನ್ನು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ₹19,090ರಿಂದ ₹33,810ಕ್ಕೆ ಹೆಚ್ಚಿಸಿದೆ. ಸರ್ಕಾರಿ ಕೋಟಾ ಸೀಟುಗಳ ಶುಲ್ಕವನ್ನು ₹65,340ರಿಂದ ₹83,526ಕ್ಕೆ ಹೆಚ್ಚಿಸಿದೆ.

’ಕೋವಿಡ್‌ನಿಂದ ಹಲವು ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ಹಲವು ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್ ಕಲಿಕೆ ಬಗ್ಗೆ ಆಸಕ್ತಿ ಇದ್ದರೂ ಹಣಕಾಸಿನ ಸಮಸ್ಯೆ ಮತ್ತು ಶುಲ್ಕ ಹೆಚ್ಚಳದಿಂದ ಪ್ರವೇಶ ಪಡೆದಿಲ್ಲ’ ಎಂದು ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರೊಬ್ಬರು ತಿಳಿಸಿದ್ದಾರೆ.

ಎಂ.ಜಿ. ರಸ್ತೆಯಲ್ಲಿ ಮಲಬಾರ್ ಗೋಲ್ಡ್‌ನ 'ಆರ್ಟಿಸ್ಟ್ರಿ' ಮಳಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯು ನಗರದ ಎಂ.ಜಿ. ರಸ್ತೆಯಲ್ಲಿ ತನ್ನ ಆರ್ಟಿಸ್ಟ್ರಿ ಮಳಿಗೆಯನ್ನು ಆರಂಭಿಸಿದೆ. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಈ ಮಳಿಗೆಯನ್ನು ಉದ್ಘಾಟಿಸಿದರು.

ಗ್ರಾಹಕರಿಗೆ ಹೊಸ ಬಗೆಯ ಖರೀದಿ ಶಾಪಿಂಗ್ ಅನುಭವವನ್ನು ಈ ಮಳಿಗೆ ನೀಡಲಿದೆ. ಇದೇ ತಿಂಗಳಿನಲ್ಲಿ ವಿಶ್ವದ ಹಲವೆಡೆ 22 ಮಳಿಗೆಗಳನ್ನು ಆರಂಭಿಸುವ ಮೊದಲ ಹೆಜ್ಜೆಯಾಗಿ ಈ ಮಳಿಗೆಯನ್ನು ತೆರೆಯಲಾಗಿದೆ. 22 ಸಾವಿರ ಚದರ ಅಡಿಯ ವಿಸ್ತೀರ್ಣದಲ್ಲಿ ಈ ಮಳಿಗೆ ಇದೆ ಎಂದು ಕಂಪನಿಯು ತಿಳಿಸಿದೆ.

ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಮಳಿಗೆಯ ಉದ್ಘಾಟನೆ ಕಾರ್ಯಕ್ರಮದಲ್ಲಿ ಕಂಪನಿಯ ಭಾರತದ ಕಾರ್ಯಾಚರಣೆಯ ವ್ಯವಸ್ಥಾಪಕ ನಿರ್ದೇಶಕ ಒ. ಆಶರ್, ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಮಹಮದ್, ಶಾಸಕ ಎನ್‌.ಎ. ಹ್ಯಾರಿಸ್, ಸಚಿವ ಸಚಿವ ಡಾ.ಸಿ.ಎನ್‌. ಅಶ್ವತ್ಥನಾರಾಯಣ, ಕಂಪನಿಯ ಅಂತರ ರಾಷ್ಟ್ರೀಯ ಕಾರ್ಯಾಚರಣೆಯ ವ್ಯವಸ್ಥಾಪಕ ನಿರ್ದೇಶಕ ಶಾಮಲಾಲ್ ಅಹಮದ್, ಮಲಬಾರ್ ಸಮೂಹದ ಉಪಾಧ್ಯಕ್ಷ ಕೆ.ಪಿ. ಅಬ್ದುಲ್ ಸಲಾಂ ಮತ್ತಿತರರು ಇದ್ದರು

ಬೆಂಗಳೂರು ಬೆಳಗಿದ ವಿದ್ಯುತ್ ಸ್ಟೇಷನ್‌ಗಳು

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಮಹಾನಗರದಲ್ಲಿ ವಿದ್ಯುತ್ ದೀಪಗಳು ಬೆಳಗಿ ಶತಮಾನವೇ ಕಳೆದಿದೆ. ನಗರದಲ್ಲಿ 117 ವರ್ಷಗಳಿಂದ ವಿದ್ಯುತ್ ದೀಪಗಳು ಪ್ರಕಾಶಿಸುತ್ತಿವೆ. ಮೈಸೂರು ಸರ್ಕಾರ, ಬ್ರಿಟಿಷರ ಆಡಳಿತ ಹಾಗೂ ಇಂದಿನ ಆಡಳಿತದವರೆಗೂ ನಿರಂತರ ಬದಲಾವಣೆಗಳನ್ನು ವಿದ್ಯುತ್ ವಲಯ ಕಂಡಿದೆ. ಈ ಬದಲಾವಣೆಯೂ ಬೆಂಗಳೂರು ನಗರದ ಅಭಿವೃದ್ಧಿಯ ಹಾದಿಗೆ ಹೊಸ ಸ್ವರೂಪಗಳನ್ನು ನೀಡುತ್ತಾ ಬಂದಿವೆ.

1905ರ ಆಗಸ್ಟ್ 5ರಂದು ನಗರದಲ್ಲಿ ಸಂಭ್ರಮದ ವಾತಾವರಣ. ಅಂದು ಬೆಂಗಳೂರು ನಗರದ ವಿದ್ಯುತ್ ಪೂರೈಕೆ ವ್ಯವಸ್ಥೆಗೆ ಚಾಲನೆ ನೀಡಿದ ಐತಿಹಾಸಿಕ ದಿನವದು. ದಕ್ಷಿಣ ಏಷ್ಯಾದಲ್ಲೇ ಜಲ ವಿದ್ಯುತ್ ಪಡೆದ ಮೊದಲ ನಗರ ಇದಾಗಿತ್ತು.

1902ರ ಜೂನ್ 30ರಂದು ಶಿವನಸಮುದ್ರದಲ್ಲಿ ಜಲ ವಿದ್ಯುತ್ ಉತ್ಪಾದನೆ ಆರಂಭವಾದ ಎರಡು ವರ್ಷದ ಬಳಿಕ ಬೆಂಗಳೂರು ನಗರಕ್ಕೆ ವಿದ್ಯುತ್ ಪೂರೈಕೆಯ ಯೋಜನೆಗೆ ಅನುಮೋದನೆ ದೊರೆಯಿತು. ಮೈಸೂರು ಸರ್ಕಾರದಲ್ಲಿ ಆಗ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್ ಅವರು ಈ ಯೋಜನೆಯಿಂದಾಗುವ ಪ್ರಯೋಜನಗಳನ್ನು ಅರಿತು ಶಿವನಸಮುದ್ರದ ಯೋಜನೆಗೆ ಅನುಮೋದನೆ ನೀಡಿದ್ದರು. ಕೆಜಿಎಫ್‌ನಲ್ಲಿ ಚಿನ್ನದ ಗಣಿ ಕಾರ್ಯಾಚರಣೆ ಕೈಗೊಳ್ಳುವ ಉದ್ದೇಶದಿಂದ ಈ ವಿದ್ಯುತ್ ಯೋಜನೆಗೆ ಚಾಲನೆ ದೊರೆತಿತ್ತು.

ಕಾವೇರಿ ಯೋಜನೆಯ ವಿಸ್ತರಣೆಯ ಎರಡನೇ ಹಂತಕ್ಕೆ ಮೈಸೂರು ಮಹಾರಾಜರಿಂದ 1903ರಲ್ಲಿ ನವೆಂಬರ್ 10ರಂದು ಸಮ್ಮತಿ ದೊರೆಯಿತು. ಎರಡನೇ ಹಂತದ ವಿಸ್ತರಣೆಯಿಂದ ಕೆಜಿಎಫ್‌ಗೆ ಅಗತ್ಯಕ್ಕಿಂತ ಹೆಚ್ಚು ವಿದ್ಯುತ್ ಉತ್ಪಾದನೆ ಸಾಧ್ಯವಾಯಿತು. ಈ ಸಂದರ್ಭದಲ್ಲೇ ಹೆಚ್ಚುವರಿ ವಿದ್ಯುತ್ ಅನ್ನು ಬೆಂಗಳೂರಿಗೆ ಪೂರೈಸುವ ಚಿಂತನೆ ಮೊಳಕೆ ಒಡೆದಿತ್ತು.

'ಬೆಂಗಳೂರಿಗೆ ವಿದ್ಯುತ್ ಒದಗಿಸಲು 35 ಸಾವಿರ ವೋಲ್ಟ್‌ನ 57 ಮೈಲು ಉದ್ದದ ಏಕಮಾರ್ಗವನ್ನು ಶಿವನಸಮುದ್ರದಿಂದ ಬೆಂಗಳೂರಿಗೆ ನಿರ್ಮಿಸಲಾಯಿತು' ಎಂದು 'ಬೆಳಕಾಯಿತು ಕರ್ನಾಟಕ' ಪುಸ್ತಕದಲ್ಲಿ ಗಜಾನನ ಶರ್ಮಾ ಅವರು ಉಲ್ಲೇಖಿಸಿದ್ದಾರೆ.

ವಿದ್ಯುತ್ ಪೂರೈಕೆ ಆರಂಭವಾದ ಬಳಿಕ ನಗರದಲ್ಲಿ ಜಾಲವನ್ನು ವಿಸ್ತರಿಸಲು ವಿವಿಧೆಡೆ ಸ್ಟೇಷನ್‌ಗಳನ್ನು ನಿರ್ಮಿಸುವ ಮಹತ್ವದ ಕಾರ್ಯ ಕೈಗೊಳ್ಳಲಾಯಿತು. ಈ ಸ್ಟೇಷನ್‌ಗಳು ಬೆಂಗಳೂರಿನ ವಿದ್ಯುತ್ ಜಾಲದ ಹೆಗ್ಗುರುತುಗಳಾಗಿವೆ.

1905ರಲ್ಲಿ ವಿಕ್ಟೋರಿಯಾ ಆಸ್ಪತ್ರೆ ಬಳಿ 'ಎಂ' ಸ್ಟೇಷನ್ ಆರಂಭಿಸಲಾಯಿತು. ಇಲ್ಲಿಂದಲೇ ಬೀದಿ ದೀಪಗಳಿಗೆ ವಿದ್ಯುತ್ ಪೂರೈಕೆಯಾಗುತ್ತಿತ್ತು. ಬಳಿಕ, ಸರ್ಕಾರಿ ಕಚೇರಿಗಳಿಗೆ ಮತ್ತು ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಯಿತು.

ನಂತರ, ಮಹಾತ್ಮ ಗಾಂಧಿ ರಸ್ತೆ ಮತ್ತು ಕಂಟೋನ್ಮೆಂಟ್‌ನಲ್ಲಿ ವಿದ್ಯುತ್ ಪೂರೈಕೆಗೆ 1907ರಲ್ಲಿ ಘಟಕಗಳನ್ನು ಸ್ಥಾಪಿಸಲಾಯಿತು. ಇವುಗಳನ್ನು 'ಬಿ' ಮತ್ತು 'ಸಿ' ಸ್ಟೇಷನ್‌ಗಳನ್ನು ಎಂದು ಕರೆಯಲಾಯಿತು.

ವಿದ್ಯುತ್ ಪೂರೈಕೆಯ ಒತ್ತಡ ಹೆಚ್ಚಿದಂತೆ ಆನಂದರಾವ್ ವೃತ್ತದ ಬಳಿ 1920ರಲ್ಲಿ ಮತ್ತೊಂದು ಸ್ಟೇಷನ್ ಆರಂಭಿಸಲಾಯಿತು. ನಗರದ ಪ್ರಮುಖ ಪ್ರದೇಶಗಳಿಗೆ ಈ ಸ್ಟೇಷನ್‌ನಿಂದಲೇ ವಿದ್ಯುತ್ ಪೂರೈಕೆಯಾಗುತ್ತಿತ್ತು. ಬೆಂಗಳೂರು ವಿದ್ಯುತ್ ಮತ್ತು ದೀಪಗಳ ಯೋಜನೆ ಅಡಿ ಈ ಘಟಕ ಸ್ಥಾಪಿಸಲಾಗಿತ್ತು. ಇದನ್ನು ₹5.81 ಲಕ್ಷ ಅಂದಾಜು ವೆಚ್ಚದಲ್ಲಿ ನಿರ್ಮಿಸಲಾಗಿತ್ತು. ಈ ಸ್ಟೇಷನ್ ಆರಂಭವಾದ ಬಳಿಕ 'ಎಂ' ಸ್ಟೇಷನ್ ಸ್ಥಗಿತಗೊಳಿಸಲಾಯಿತು.

1905ರಲ್ಲಿ ನಗರದಲ್ಲಿ 1,395 ಬೀದಿ ದೀಪಗಳಿದ್ದವು. ಇವುಗಳ ನಿರ್ವಹಣೆಗೆ ವಾರ್ಷಿಕ ₹20 ಸಾವಿರ ವೆಚ್ಚವಾಗುತ್ತಿತ್ತು ಎನ್ನುವುದನ್ನು 'ಬೆಂಗಳೂರು ಮುನ್ಸಿಪಲ್ ಹ್ಯಾಂಡ್ ಬುಕ್'ನಲ್ಲಿ ಪ್ರಸ್ತಾಪಿಸಲಾಗಿದೆ.

ವಿದ್ಯುತ್ ಸ್ಟೇಷನ್‌ಗಳ ಕಟ್ಟಡಗಳು ಸಹ ಗಮನಸೆಳೆಯುವಂತಿದ್ದು, ನಗರದ ಇತಿಹಾಸ ಬಿಂಬಿಸುತ್ತಿವೆ.

ನಗರದ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ 'ಬೆಂಗಳೂರು ಎಲೆಕ್ಟ್ರಿಕಲ್ ಸಪ್ಲೈನ 'ಬಿ' ಸ್ಟೇಷನ್ – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಬೆಂಗಳೂರು ನಮ್ಮ ಹೆಮ್ಮೆ...

ಯಲಹಂಕ: ₹270 ಕೋಟಿ ವೆಚ್ಚದ ಮೇಲ್ಸೇತುವೆಗಳ ನಿರ್ಮಾಣಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಇಲ್ಲಿನ ಮೂರು ಪ್ರಮುಖ ವೃತ್ತಗಳಲ್ಲಿ ₹270 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ 'ಇಂಟಿಗ್ರೇಟೆಡ್ ಎಲಿವೇಟೆಡ್ ಫ್ಲೈಓವರ್'ಗಳ ನಿರ್ಮಾಣ ಕಾಮಗಾರಿಗೆ ಶಾಸಕ ಎಸ್. ಆರ್. ವಿಶ್ವನಾಥ್ ಎನ್‌ಇಎಸ್ ವೃತ್ತದಲ್ಲಿ ಚಾಲನೆ ನೀಡಿದರು.

'ಯಲಹಂಕ ಅತಿ ವೇಗವಾಗಿ ಬೆಳೆಯುತ್ತಿದೆ. ಇಲ್ಲಿನ ಎಲ್ಲ ವೃತ್ತಗಳಲ್ಲಿ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಪೊಲೀಸ್ ವೃತ್ತದಿಂದ ಸಂದೀಪ್ ಉನ್ನಿಕೃಷ್ಣನ್ ವೃತ್ತದವರೆಗೆ ₹1.75 ಕೋಟಿ ವೆಚ್ಚದಲ್ಲಿ 1.84 ಕಿಲೋಮೀಟರ್ ಉದ್ದದ ಮೇಲ್ಸೇತುವೆ ನಿರ್ಮಿಸಲಾಗುವುದು. ಇದು ಬೆಂಗಳೂರಿನಲ್ಲಿ 3ನೇ ಅತಿ ಉದ್ದದ ಸಂಯೋಜಿತ ಮೇಲ್ಸೇತುವೆಯಾಗಲಿದೆ' ಎಂದು ತಿಳಿಸಿದರು.

'ಹಳೇನಗರದ ಕೆಂಪೇಗೌಡ ವೃತ್ತದಿಂದ ಕೋಗಿಲು ವೃತ್ತದವರೆಗೆ ₹70 ಕೋಟಿ ವೆಚ್ಚದಲ್ಲಿ ಮೇಲ್ಸೇತುವೆ ಹಾಗೂ ₹15 ಕೋಟಿ ವೆಚ್ಚದಲ್ಲಿ ರೈಲ್ವೆ ನಿಲ್ದಾಣದಿಂದ ದೊಡ್ಡಬಳ್ಳಾಪುರ ರಸ್ತೆ ಹಾಗೂ ಉಪನಗರಕ್ಕೆ ಸಂಪರ್ಕ ಕಲ್ಪಿಸುವ ರೈಲ್ವೆ ಕೆಳಸೇತುವೆ ನಿರ್ಮಾಣ ಕಾಮಗಾರಿಗೂ ಚಾಲನೆ ನೀಡಲಾಗಿದೆ. ಒಂದೂವರೆ ವರ್ಷದಲ್ಲಿ ಈ ಮೇಲ್ಸೇತುವೆಗಳ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ಗುತ್ತಿಗೆದಾರರಿಗೆ ಸಮಯ ನಿಗದಿಪಡಿಸಲಾಗಿದೆ' ಎಂದರು.

'ಮುಖ್ಯಮಂತ್ರಿಯವರು ಬೆಂಗಳೂರಿನ ಅಭಿವೃದ್ಧಿಗಾಗಿ ಅಮೃತ ನಗರೋತ್ಥಾನ ಯೋಜನೆಯಡಿ ₹6,000 ಕೋಟಿ ಅನುದಾನ ಘೋಷಿಸಿದ್ದಾರೆ. ಅದರಲ್ಲಿಯೂ ಯಲಹಂಕದ ಅಭಿವೃದ್ಧಿಗೆ ಸಾಕಷ್ಟು ಅನುದಾನ ಬಿಡುಗಡೆ ಮಾಡುವುದರಿಂದ ಬಾಕಿ ಕೆಲಸಗಳನ್ನು ಪೂರ್ಣಗೊಳಿಸಲಾಗುವುದು' ಎಂದು ತಿಳಿಸಿದರು.

ಬಿಬಿಎಂಪಿ ವಿಶೇಷ ಆಯುಕ್ತ (ಯೋಜನೆಗಳು) ಮನೋಜ್ ಜೈನ್, ಯಲಹಂಕ ವಲಯದ ಜಂಟಿ ಆಯುಕ್ತರಾದ ಪೂರ್ಣಿಮಾ, ಮುಖಂಡರಾದ ಎಂ.ಸತೀಶ್, ಎಂ.ಮುನಿರಾಜು, ಬಿಬಿಎಂಪಿ ಮುಖ್ಯ ಎಂಜಿನಿಯರ್ (ರಸ್ತೆ, ಮೂಲಭೂತ ಸೌಕರ್ಯ) ಬಿ.ಎಸ್.ಪ್ರಹ್ಲಾದ್, ಯಲಹಂಕ ವಲಯದ ಕಾರ್ಯಪಾಲಕ ಎಂಜಿನಿಯರ್ ಶಿವಕುಮಾರ್ ಇದ್ದರು.

ಯಲಹಂಕದಲ್ಲಿ ಶಾಸಕ ವಿಶ್ವನಾಥ್ ಅವರು ಮೇಲ್ಸೇತುವೆಗಳ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು. ಬಿಬಿಎಂಪಿ ಯಲಹಂಕ ವಲಯದ ಜಂಟಿ ಆಯುಕ್ತರಾದ ಪೂರ್ಣಿಮಾ ಇದ್ದರು.

ವಾರಾಂತ್ಯ ಕರ್ಫ್ಯೂ ವೇಳೆ ಅನಗತ್ಯವಾಗಿ ರಸ್ತೆಗೆ ಇಳಿದವರಿಗೆ ಬಿಸಿ ಮುಟ್ಟಿಸಿದ ಪೊಲೀಸರು

ಮೆಜೆಸ್ಟಿಕ್ ಖಾಲಿ; ರೈಲು ನಿಲ್ದಾಣದಲ್ಲಿ ಜನ ಜಂಗುಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಿಸಲು ಶನಿವಾರ ವಾರಾಂತ್ಯ ಕರ್ಫ್ಯೂ ಜಾರಿಗೊಳಿಸಲಾಗಿದ್ದರೂ ನಗರದ ಹಲವೆಡೆ ಜನರು ರಸ್ತೆಯಲ್ಲಿ ಸಂಚರಿಸುತ್ತಿದ್ದುದು ಕಂಡುಬಂತು. ಪ್ರಮುಖ ರಸ್ತೆಗಳಲ್ಲಿ ಹೋಟೆಲ್‌ಗಳು, ಔಷಧದ ಅಂಗಡಿಗಳು ಹೊರತುಪಡಿಸಿ ಬಹುತೇಕ ಅಂಗಡಿ–ಮಳಿಗೆಗಳು ಮುಚ್ಚಿದ್ದವು.

ಕೆ.ಆರ್.ಮಾರುಕಟ್ಟೆ, ಕಾರ್ಪೊರೇಷನ್ ವೃತ್ತ, ಮೆಜೆಸ್ಟಿಕ್, ಮಲ್ಲೇಶ್ವರ, ಯಶವಂತಪುರ, ವಿಜಯ ನಗರ ಹೀಗೆ ಪ್ರಮುಖ ಸ್ಥಳಗಳಲ್ಲಿ ಮುಂಜಾನೆಯಿಂದಲೇ ಪೊಲೀಸರು, ವಾಹನಗಳನ್ನು ತಡೆದು ತಪಾಸಣೆ ನಡೆಸಿದರು. ಅನಗತ್ಯವಾಗಿರಸ್ತೆಗಿಳಿದಿದ್ದವಾಹನಗಳನ್ನುಜಪ್ತಿಮಾಡಿದರು. ಕೆ.ಆರ್.ಮಾರುಕಟ್ಟೆ ಬಳಿ ಕಾರುಗಳನ್ನು ಜಪ್ತಿ ಮಾಡುವ ಜೊತೆಗೆ ಚಾಲಕರನ್ನು ಸ್ಥಳದಲ್ಲೇ ಕೋವಿಡ್ ಪರೀಕ್ಷೆಗೂ ಒಳಪಡಿಸಿದರು.

ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ಬಸ್‌ಗಳ ಸಂಚಾರ ವಿರಳವಾಗಿತ್ತು. ಮೆಜೆಸ್ಟಿಕ್ ನಿಲ್ದಾಣ ಬಿಕೊ ಎನ್ನುತ್ತಿತ್ತು. ಬೇರೆ ಊರುಗಳಿಂದ ಬಂದಿದ್ದವರು ಬಸ್‌ಗಳಿಗಾಗಿ ಗಂಟೆ ಗಟ್ಟಲೆ ಕಾಯಬೇಕಾದ ಅನಿವಾರ್ಯ ಪರಿಸ್ಥಿತಿಯಲ್ಲಿ ಸಿಲುಕಿದ್ದರು.

ನಗರದಿಂದ ಬೇರೆ ಬೇರೆ ಊರುಗಳಿಗೆ ಹೋಗುವವರು ಬೆಳಿಗ್ಗೆಯೇ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದತ್ತ ದೌಡಾಯಿಸಿದ್ದರು. ಹೀಗಾಗಿ ರೈಲು ನಿಲ್ದಾಣದ ಮುಂಭಾಗದಲ್ಲಿ ಜನದಟ್ಟಣೆ ಏರ್ಪಟ್ಟಿತು. ಪ್ಲ್ಯಾಟ್‌ಫಾರ್ಮ್‌ಗಳೂ ಪ್ರಯಾಣಿಕರಿಂದ ಗಿಜಿಗುಡುತ್ತಿದ್ದವು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲೂ ಜನದಟ್ಟಣೆ ಕಂಡುಬಂತು.

ವಾರಾಂತ್ಯ ಕರ್ಫ್ಯೂ ಜಾರಿಯಾಗಿದ್ದರಿಂದ ಬ್ರಿಗೇಡ್ ರಸ್ತೆ ಜನರಿಲ್ಲದೆ ಬಿಕೊ ಎನ್ನುತ್ತಿತ್ತು – ಪ್ರಜಾವಾಣಿ ಚಿತ್ರ

ಒಂದೇ ದಿನ 798 ವಾಹನ ಜಪ್ತಿ

ವಾರಾಂತ್ಯ ಕರ್ಫ್ಯೂ ವೇಳೆ ಅನಗತ್ಯವಾಗಿ ರಸ್ತೆಗೆ ಇಳಿದಿದ್ದ ಒಟ್ಟು 798 ವಾಹನಗಳನ್ನು ಪೊಲೀಸರು ಶನಿವಾರ ಜಪ್ತಿ ಮಾಡಿದ್ದಾರೆ.

'ಪಶ್ಚಿಮ (359), ದಕ್ಷಿಣ (151) ಹಾಗೂ ಉತ್ತರ (108) ವಿಭಾಗಗಳಲ್ಲೇ ಗರಿಷ್ಠ ವಾಹನಗಳನ್ನು ಜಪ್ತಿ ಮಾಡಲಾಗಿದೆ. 729 ದ್ವಿಚಕ್ರ, 25 ತ್ರಿಚಕ್ರ ಮತ್ತು 44 ಕಾರುಗಳನ್ನು ಜಪ್ತಿ ಮಾಡಿದ್ದೇವೆ' ಎಂದು ಪೊಲೀಸರು ತಿಳಿಸಿದ್ದಾರೆ.

ಹಾಡಿನ ಮೂಲಕ ಅರಿವು ಮೂಡಿಸಿದ ನಿರ್ವಾಹಕ

ಬಿಎಂಟಿಸಿಯ 31ನೇ ಘಟಕದಲ್ಲಿ ಕಾರ್ಯನಿರ್ವಹಿಸುವ ನಿರ್ವಾಹಕ ಮುನಿಕೃಷ್ಣ 'ಬಂದಿದೆ ಕೊರೊನಾ, ಜಾಗ್ರತೆ ವಹಿಸೋಣ' ಎಂಬ ಗೀತೆಯ ಮೂಲಕ ಪ್ರಯಾಣಿಕರಿಗೆ ಕೋವಿಡ್ ಬಗ್ಗೆ ಅರಿವು ಮೂಡಿಸುತ್ತಿದ್ದದ್ದು ಗಮನ ಸೆಳೆಯಿತು.

'ಬಸ್ ಪ್ರಯಾಣಿಕರ ಪೈಕಿ ಹಲವರು ಮುಖಗವಸು ಧರಿಸುವುದಿಲ್ಲ. ಹೀಗಾಗಿ ಹಾಡಿನ ಮೂಲಕ ಜಾಗೃತಿ ಮೂಡಿಸುತ್ತಿದ್ದೇನೆ' ಎಂದು ಅವರು ಹೇಳಿದರು.

ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ತೀರಾ ಕಡಿಮೆ, ಆತಂಕ ಬೇಡ– ಬಿಬಿಎಂಪಿ

ಒಂದೇ ದಿನ 7,113 ಜನರಿಗೆ ಸೋಂಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಶನಿವಾರ ಭಾರಿ ಪ್ರಮಾಣದಲ್ಲಿ ಹೆಚ್ಚಳ ಕಂಡಿದೆ. ಒಂದೇ ದಿನ 7,113 ಮಂದಿ ಸೋಂಕು ಹೊಂದಿರುವುದು ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಒಟ್ಟು ಸಂಖ್ಯೆ 32,157ಕ್ಕೆ ಏರಿಕೆಯಾಗಿದೆ.

ಕೋವಿಡ್ ಪರೀಕ್ಷೆಗೆ ಒಳಗಾದವರಲ್ಲಿ ಸೋಂಕು ಪತ್ತೆ ಪ್ರಮಾಣವೂ ಏರಿಕೆ ಕಾಣುತ್ತಿದೆ. ಶುಕ್ರವಾರ ಶೇ 7.54ರಷ್ಟಿದ್ದ ಸೋಂಕು ಪತ್ತೆ ದರ, ಶನಿವಾರ ಶೇ 9.80ಕ್ಕೆ ಏರಿಕೆ ಆಗಿದೆ.

ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿರುವುದರಿಂದ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆಯಲ್ಲೂ ತುಸು ಹೆಚ್ಚಳವಾಗಿದೆ. ಸದ್ಯ 201 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಇವರಲ್ಲಿ 24 ಮಂದಿ ತೀವ್ರ ನಿಗಾ ಘಟಕ ಹಾಗೂ 6 ಮಂದಿ ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಯಲ್ಲಿ ದಾಖಲಾಗಿದ್ದಾರೆ.

ಕಳೆದ 24 ಗಂಟೆಗಳಲ್ಲಿ 72,594 ಜನರನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಅವರಲ್ಲಿ ಸೋಂಕು ಪತ್ತೆಯಾದವರ ಪ್ರಮಾಣ ಶೇ 10ರ ಆಸುಪಾಸಿನಲ್ಲಿದೆಯಾದರೂ, ಆತಂಕ ಪಡುವ ಸ್ಥಿತಿ ಇಲ್ಲ ಎಂದು ಬಿಬಿಎಂಪಿ ಹೇಳಿದೆ.

'ಕೋವಿಡ್ ಸೋಂಕಿತರ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂಬ ಕಾರಣಕ್ಕೆ ಆತಂಕದ ಸ್ಥಿತಿ ಇದೆ ಎಂದು ಹೇಳಲಾಗದು. ಏಕೆಂದರೆ, ಸದ್ಯಕ್ಕೆ 743 ಜನ ಮಾತ್ರ ಆಸ್ಪತ್ರೆಗೆ ದಾಖಲಾಗಿದ್ದು, ಆ ಪೈಕಿ 6 ಜನರು ಮಾತ್ರ ವೆಂಟಿಲೇಟರ್ ವ್ಯವಸ್ಥೆ ಹೊಂದಿರುವ ಐಸಿಯುವಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಲ್ಲಿ ವಯಸ್ಸಾದವರು ಮತ್ತು ಬೇರೆ ಕಾಯಿಲೆಗಳಿಂದ ಬಳಲುತ್ತಿರುವವರೇ ಜಾಸ್ತಿ' ಎಂದು ಬಿಬಿಎಂಪಿಯ ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಡಾ. ಬಾಲಸುಂದರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕೋವಿಡ್ ಪರೀಕ್ಷೆಗೆ ಒಳಪಡಿಸಿದ ಜನರ ಸಂಖ್ಯೆಯನ್ನು ಗಮನಿಸಿದರೆ ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣ ತೀರಾ ಕಡಿಮೆ. ಅವರಲ್ಲಿ ಶೇ 1ರಷ್ಟು ಜನರಷ್ಟೇ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಹೊಸ ಖಾಯಿಲೆ ಆಗಿರುವುದರಿಂದ, ಇದರ ಹರಡುವಿಕೆ ಮುಂದೆ ಯಾವ ರೀತಿ ತಿರುವು ಪಡೆಯಲಿದೆ ಎಂದು ಈಗಲೇ ಹೇಳಲಾಗದು. ಬೇರೆ ಬೇರೆ ದೇಶಗಳಲ್ಲಿನ ಸ್ಥಿತಿಯನ್ನು ಗಮನಿಸುತ್ತಿದ್ದೇವೆ. ನಮ್ಮ ದೇಶದಲ್ಲಿ ಕೊರೊನಾ ವೈರಾಣು ಬೇರೆಯೇ ರೀತಿಯಲ್ಲಿ ವರ್ತಿಸುತ್ತಿದೆ. ಆಸ್ಪತ್ರೆಗೆ ದಾಖಲಾಗುವ ಸೋಂಕಿತರ ಸಂಖ್ಯೆ ಏರಿಕೆಯಾಗುವುದಿಲ್ಲ ಎಂಬ ನಿರೀಕ್ಷೆ ಇಟ್ಟುಕೊಂಡಿದ್ದೇವೆ' ಎಂದು ಹೇಳಿದರು.

'ಪರಿಸ್ಥಿತಿ ಬಿಗಡಾಯಿಸಿದರೆ ಎದುರಿಸಲು ಎಲ್ಲಾ ರೀತಿಯ ಸಿದ್ಧತೆಗಳನ್ನು ಬಿಬಿಎಂಪಿ ಮಾಡಿಕೊಂಡಿದೆ. ಸೋಂಕಿತರ ಚಿಕಿತ್ಸೆಗೆ ಅಗತ್ಯ ಇರುವ ಹಾಸಿಗೆ ಸಂಖ್ಯೆಗಳನ್ನು ಹೆಚ್ಚಿಸಲಾಗಿದೆ. ಕೋವಿಡ್ ಪರೀಕ್ಷೆ ನಡೆಸುವ ಪ್ರಮಾಣವನ್ನೂ ಹೆಚ್ಚಿಸಲಾಗಿದೆ. ಶಾಲಾ ಮಕ್ಕಳಿಗೆ ಲಸಿಕೆ ನೀಡುವ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ' ಎಂದು ವಿವರಿಸಿದರು.

'ಮನೆಯಲ್ಲಿ ಪ್ರತ್ಯೇಕ ವಾಸಕ್ಕೆ ಒಳಗಾಗುತ್ತಿರುವ ಸೋಂಕಿತರ ಬಗ್ಗೆ ನಿಗಾ ವಹಿಸಲಾಗುತ್ತಿದೆ. ಸಂಪರ್ಕಿತರನ್ನು ಗುರುತಿಸಿ ಅವರು ಪ್ರತ್ಯೇಕ ವಾಸ ಇರುವಂತೆ ಸೂಚಿಸಲಾಗಿತ್ತು. ಕಂಟೈನ್‌ಮೆಂಟ್ ವಲಯ 250ಕ್ಕೆ ಏರಿಕೆಯಾಗಿದ್ದು, ಅಲ್ಲಿಯೂ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಲಾಗುತ್ತಿದೆ. ಕೋವಿಡ್ ವಿರುದ್ಧದ ಹೋರಾಟಕ್ಕೆ ಬಿಬಿಎಂಪಿ ಎಲ್ಲಾ ರೀತಿಯಲ್ಲೂ ಸಜ್ಜಾಗಿದೆ' ಎಂದರು.

ನಗರದಲ್ಲಿ ಸರ್ಕಾರಿ ಕೋಟಾದಡಿ 1,753 ಹಾಸಿಗೆಗಳನ್ನು ಕೋವಿಡ್ ಪೀಡಿತರಿಗೆ ಮೀಸಲಿಡಲಾಗಿದೆ. ಅವುಗಳಲ್ಲಿ ಸದ್ಯ 1,542 ಹಾಸಿಗೆಗಳು ಖಾಲಿಯಿವೆ. 10 ಹಾಸಿಗೆಗಳನ್ನು ಬ್ಲಾಕ್ ಮಾಡಲಾಗಿದೆ.

ಕೆ.ಸಿ.ಜನರಲ್ ಆಸ್ಪತ್ರೆಗೆ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಅವರು ಶನಿವಾರ ಭೇಟಿ ನೀಡಿದರು. ಬಿಬಿಎಂಪಿ ಪಶ್ಚಿಮ ವಲಯದ ಕೋವಿಡ್ ಉಸ್ತುವಾರಿ ಉಜ್ವಲ್ ಘೋಷ್, ಬಿಬಿಎಂಪಿ ಪಶ್ಚಿಮ ವಲಯದ ಆಯುಕ್ತ ದೀಪಕ್ ಇದ್ದರು

ಕೋವಿಡ್: ರಾಜಧಾನಿಯದ್ದೇ ಸಿಂಹಪಾಲು

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕು ಹರಡುವಿಕೆ ದಿಢೀರ್ ಏರುಗತಿ ಪಡೆದುಕೊಂಡಿದೆ. ಸೋಂಕು ದೃಢಪಟ್ಟ ಪ್ರಕರಣಗಳಲ್ಲಿ ಸಿಂಹಪಾಲು ರಾಜಧಾನಿಯದ್ದು.

ರಾಜ್ಯದಲ್ಲಿ ವರದಿಯಾದ ಒಟ್ಟು ಪ್ರಕರಣಗಳಲ್ಲಿ ಬೆಂಗಳೂರಿನಲ್ಲಿಯೇ ಶೇ 79 ರಷ್ಟು ಪ್ರಕರಣಗಳು ಪತ್ತೆಯಾಗಿವೆ. ಏಳು ತಿಂಗಳ ಬಳಿಕ ನಗರದಲ್ಲಿ ಏಳು ಸಾವಿರಕ್ಕೂ ಅಧಿಕ (7,113) ಸಂಖ್ಯೆಯಲ್ಲಿ ದಿನವೊಂದಕ್ಕೆ ಸೋಂಕಿತರು ಪತ್ತೆಯಾಗಿದ್ದಾರೆ. ನಗರದಲ್ಲಿ ಈವರೆಗೆ ವರದಿಯಾದ ಪ್ರಕರಣಗಳ ಒಟ್ಟು ಸಂಖ್ಯೆ 12.90 ಲಕ್ಷ ದಾಟಿದೆ. ಸೋಂಕಿತರಾದವರಲ್ಲಿ ಈವರೆಗೆ 12.41 ಲಕ್ಷಕ್ಕೂ ಅಧಿಕ ಮಂದಿ ಗುಣಮುಖರಾಗಿದ್ದಾರೆ. ಎಂಟು ದಿನಗಳಲ್ಲಿ 26,681 ಮಂದಿಗೆ ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಕಳೆದ 10 ದಿನಗಳಿಂದ ಏರಿಕೆ ಕಾಣುತ್ತಿದ್ದು, ಸದ್ಯ 32 ಸಾವಿರಕ್ಕೂ ಅಧಿಕ ಸೋಂಕಿತರು ನಗರದಲ್ಲಿ ಇದ್ದಾರೆ.

ಕೋವಿಡ್ ಚಿಕಿತ್ಸೆ: ಕೆ.ಸಿ. ಜನರಲ್ ಆಸ್ಪತ್ರೆ ಸಿದ್ಧತೆ ಪರಿಶೀಲನೆ

ಬೆಂಗಳೂರು: ಕೊರೊನಾ ಮತ್ತು ಓಮೈಕ್ರಾನ್ ಪ್ರಕರಣ ಹೆಚ್ಚಳದಿಂದ ಉಂಟಾಗಬಹುದಾದ ಪರಿಸ್ಥಿತಿ ಎದುರಿಸಲು ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಮಾಡಿಕೊಳ್ಳಲಾದ ಸನ್ನದ್ಧತೆ ಮತ್ತು ಲಭ್ಯ ಇರುವ ಸೌಕರ್ಯಗಳನ್ನು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಶನಿವಾರ ಪರಿಶೀಲಿಸಿದರು.

ಆಸ್ಪತ್ರೆಯಲ್ಲಿ ವೈದ್ಯಕೀಯ ಮತ್ತು ಅರೆವೈದ್ಯಕೀಯ ಸಿಬ್ಬಂದಿಯ ತೀವ್ರ ಕೊರತೆ ಇದ್ದು, ನೇಮಕಾತಿ ನಡೆಸಲು ಪ್ರಸ್ತಾವ ಸಲ್ಲಿಸಬೇಕು. ಸರ್ಕಾರದಿಂದ ಕೂಡಲೇ ಅನುಮೋದನೆ ಕೊಡಿಸಲಾಗುವುದು ಎಂದು ಸಚಿವರು ಭರವಸೆ ನೀಡಿದರು.

'ಕೋವಿಡ್ ಪರೀಕ್ಷೆಗೆ ಒಳಗಾಗುವವರ ಗಂಟಲ ದ್ರವದ ಮಾದರಿಯನ್ನು ಅವರ ಮನೆಗೇ ತೆರಳಿ ಸಂಗ್ರಹಿಸುವ ವ್ಯವಸ್ಥೆಯನ್ನು ಕ್ಷೇತ್ರದಲ್ಲಿ ಜಾರಿಗೆ ತರಬೇಕು. ಸೋಂಕಿತರಿಗೆ ದಿನದ 24 ಗಂಟೆಯೂ ಚಿಕಿತ್ಸೆ ದೊರಕಿಸುವ ಪ್ರಾಥಮಿಕ ಆರೋಗ್ಯ ಕೇಂದ್ರವೊಂದನ್ನು ಗುರುತಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೋವಿಡ್ ಎರಡನೇ ಅಲೆ ತೀವ್ರವಾಗಿದ್ದಾಗ ಮಲ್ಲೇಶ್ವರ ವ್ಯಾಪ್ತಿಯಲ್ಲಿ ಸಹಾಯವಾಣಿ ಮತ್ತು ನಿಯಂತ್ರಣಾ ಕೊಠಡಿ ಸ್ಥಾಪಿಸಲಾಗಿತ್ತು. ಅದನ್ನು ಮತ್ತೆ ಸಕ್ರಿಯಗೊಳಿಸಬೇಕು. ಕೋವಿಡ್ ಆರೈಕೆ ಕೇಂದ್ರವನ್ನು ಸಜ್ಜುಗೊಳಿಸಬೇಕು ಎಂದು ಹೇಳಿದರು.

ಸೋಂಕು ಕಂಡುಬಂದವರಿಗೆ ಕೆಲವು ವೈದ್ಯಕೀಯ ಪರೀಕ್ಷೆಗಳನ್ನು ಮಾಡಿಸಬೇಕಾಗುತ್ತದೆ. ಅದಕ್ಕಾಗಿ 'ಲೈಫ್ ಸೈನ್ಸ್ ಡಯಾಗ್ನೋಸ್ಟಿಕ್ ಸೆಂಟರ್' ಸಂಸ್ಥೆ ಜತೆ ಒಪ್ಪಂದ ಮಾಡಿಕೊಳ್ಳಬೇಕು. ಆಸ್ಪತ್ರೆಗೆ ದಾಖಲಾಗುವವರಿಗೆ ಪೌಷ್ಟಿಕ ಆಹಾರ ಪೂರೈಸಲು ಹಿಂದಿನಂತೆ ಇಸ್ಕಾನ್ ಸಂಸ್ಥೆಯೊಂದಿಗೆ ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದರು.

ಆಸ್ಪತ್ರೆಯ ಆವರಣದಲ್ಲಿ ನಿರ್ಮಾಣವಾಗುತ್ತಿರುವ 50 ಹಾಸಿಗೆಗಳ ಸಾಮರ್ಥ್ಯದ ಮಕ್ಕಳ ಚಿಕಿತ್ಸಾ ಕಟ್ಟಡ ಮತ್ತು ಜಯದೇವ ಹೃದ್ರೋಗ ಸಂಸ್ಥೆಯ ಸಹಯೋಗದಲ್ಲಿ ನಿರ್ಮಾಣವಾಗುತ್ತಿರುವ 60 ಹಾಸಿಗೆಗಳ ಸಾಮರ್ಥ್ಯದ ಹೃದ್ರೋಗ ಚಿಕಿತ್ಸಾ ಕೇಂದ್ರದ ಕಟ್ಟಡ ಕಾಮಗಾರಿಯನ್ನೂ ಪರಿಶೀಲಿಸಿದ ಸಚಿವರು ಇವುಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸೂಚಿಸಿದರು.

5 ಸಾವಿರಕ್ಕೂ ಅಧಿಕ ಹಾಸಿಗೆಗಳು ಚಿಕಿತ್ಸೆಗೆ ಮೀಸಲು

ಕೋವಿಡ್: ಸಜ್ಜಾಗುತ್ತಿವೆ ಖಾಸಗಿ ಆಸ್ಪತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗಳೂ ಸಜ್ಜಾಗುತ್ತಿದ್ದು, ಸರ್ಕಾರಿ ಕೋಟಾದಡಿ ಚಿಕಿತ್ಸೆಗೆ 5 ಸಾವಿರಕ್ಕೂ ಅಧಿಕ ಹಾಸಿಗೆಗಳು ವಾರದಲ್ಲಿ ಲಭ್ಯವಾಗಲಿವೆ.

ಹತ್ತು ದಿನಗಳಿಂದ ನಗರದಲ್ಲಿ ಸೋಂಕಿತರ ಸಂಖ್ಯೆ ಏರುಮುಖವಾಗಿದೆ. 24 ಗಂಟೆಗಳ ಅವಧಿಯಲ್ಲಿ ವರದಿಯಾಗುತ್ತಿರುವ ಪ್ರಕರಣಗಳ ಸಂಖ್ಯೆ ದುಪ್ಪಟ್ಟಾಗುತ್ತಿದೆ. ಹೀಗಾಗಿ, ಆರೋಗ್ಯ ಇಲಾಖೆಯ ಅಧಿಕಾರಿಗಳು ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರ ಜೊತೆಗೆ ಎರಡು ದಿನಗಳ ಹಿಂದೆ ಸಭೆ ನಡೆಸಿ, ಅಗತ್ಯ ವ್ಯವಸ್ಥೆ ಮಾಡಿಕೊಳ್ಳಲು ತಿಳಿಸಿದ್ದಾರೆ. ಶೇ 50ರಷ್ಟು ಹಾಸಿಗೆಗಳನ್ನು ಮೀಸಲಿಡುವಂತೆ ಸೂಚಿಸಿದ್ದಾರೆ.

ಕಳೆದ ವರ್ಷ ಮಾರ್ಚ್ ಮೂರನೇ ವಾರದ ಬಳಿಕ ಎರಡನೇ ಅಲೆ ಕಾಣಿಸಿಕೊಂಡಿತ್ತು. ಕೊರೊನಾ ಸೋಂಕಿತರ ಸಂಖ್ಯೆ ಏರುಗತಿ ಪಡೆಯುತ್ತಿದ್ದಂತೆ ಹಾಸಿಗೆಗಳ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿತ್ತು. ಹಲವರು ಚಿಕಿತ್ಸೆ ಸಂಬಂಧ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಖಾಸಗಿ ಆಸ್ಪತ್ರೆಗಳಲ್ಲಿ ಶಿಫಾರಸು ಅನುಸಾರ ಚಿಕಿತ್ಸೆಗೆ ವ್ಯವಸ್ಥೆ ಮಾಡಿದ್ದರೂ ಕೆಲವರಿಗೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ದೊರೆತಿರಲಿಲ್ಲ. ಈ ಬಾರಿ ಮುನ್ನೆಚ್ಚರಿಕಾ ಕ್ರಮವಾಗಿ ಈಗಲೇ ಹಾಸಿಗೆಗಳನ್ನು ಮೀಸಲಿರಿಸಿಕೊಳ್ಳುವಂತೆ ಸೂಚಿಸಲಾಗಿದೆ.

ಸದ್ಯ ಸರ್ಕಾರಿ ವ್ಯವಸ್ಥೆಯಡಿ ಸರ್. ಸಿ.ವಿ. ರಾಮನ್ ಆಸ್ಪತ್ರೆಯನ್ನು ಕೋವಿಡ್ ಮೀಸಲು ಆಸ್ಪತ್ರೆ ಎಂದು ಗುರುತಿಸಲಾಗಿದೆ. ವಿಕ್ಟೋರಿಯಾ, ಬೌರಿಂಗ್ ಮತ್ತು ಲೇಡಿ ಕರ್ಜನ್, ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ, ಕೆ.ಸಿ. ಜನರಲ್, ಜಯನಗರ ಸಾರ್ವಜನಿಕ ಆಸ್ಪತ್ರೆ, ಇಂದಿರಾನಗರದ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಸೇರಿದಂತೆ ವಿವಿಧ ಆಸ್ಪತ್ರೆಗಳಲ್ಲಿಯೂ ಹಾಸಿಗೆಗಳನ್ನು ಮೀಸಲಿಡಲಾಗಿದೆ.

500ಕ್ಕೂ ಅಧಿಕ ಆಸ್ಪತ್ರೆ: ನಗರದಲ್ಲಿ ಕೋವಿಡ್ ಚಿಕಿತ್ಸೆಗೆ ಮೀಸಲಿಟ್ಟ 1,836 ಹಾಸಿಗೆಗಳಲ್ಲಿ ಸದ್ಯ 1,667 ಹಾಸಿಗೆಗಳು ಖಾಲಿ ಉಳಿದಿವೆ. ಕೊರೊನಾ ಸೋಂಕಿತರಲ್ಲಿ 166 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಖಾಸಗಿ ವ್ಯವಸ್ಥೆಯಡಿ ಕೋವಿಡ್ ಚಿಕಿತ್ಸೆಗೆ 500ಕ್ಕೂ ಅಧಿಕ ಆಸ್ಪತ್ರೆಗಳನ್ನು ಗುರುತಿಸಲಾಗಿದೆ.

'ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಕಾಣುತ್ತಿರುವುದರಿಂದ ಚಿಕಿತ್ಸೆಗೆ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ. ಬಹುತೇಕ ಪ್ರಕರಣಗಳಲ್ಲಿ ಸೋಂಕಿತರಿಗೆ ಲಕ್ಷಣಗಳು ಅಷ್ಟಾಗಿ ಗೋಚರಿಸುತ್ತಿಲ್ಲ. ಹೀಗಾಗಿ, ಹೆಚ್ಚಿನವರು ಮನೆ ಆರೈಕೆಗೆ ಒಳಗಾಗುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಶೇ 90ಕ್ಕೂ ಅಧಿಕ ಹಾಸಿಗೆಗಳು ಸದ್ಯ ಖಾಲಿಯಿವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಅರ್ಧಕ್ಕೂ ಅಧಿಕ ಹಾಸಿಗೆಗಳು ಭರ್ತಿಯಾದಲ್ಲಿ ಖಾಸಗಿ ಆಸ್ಪತ್ರೆಗಳನ್ನು ಬಳಸಿಕೊಳ್ಳಲಾಗುತ್ತದೆ' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ವೈದ್ಯಕೀಯ ಕಾಲೇಜುಗಳಲ್ಲಿ ವ್ಯವಸ್ಥೆ'

'ಈ ಹಿಂದೆ ಕೋವಿಡ್ ಪ್ರಕರಣಗಳು ಏರಿಕೆ ಕಂಡಾಗ ಸರ್ಕಾರ ಶಿಫಾರಸು ಮಾಡಿದ ರೋಗಿಗಳಿಗೆ ಚಿಕಿತ್ಸೆ ಒದಗಿಸಲಾಗಿತ್ತು. ಎರಡು ಅಲೆಗಳನ್ನು ಎದುರಿಸಿರುವುದರಿಂದ ಈ ಬಾರಿ ಸಮಸ್ಯೆಯಾಗದಂತೆ ಚಿಕಿತ್ಸೆಗೆ ಕ್ರಮವಹಿಸಲಾಗುವುದು. ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಚಿಕಿತ್ಸೆಗೆ ವ್ಯವಸ್ಥೆ ಮಾಡಿಕೊಳ್ಳಲು ಸರ್ಕಾರ ತಿಳಿಸಿದೆ. ಈಗಾಗಲೇ ನಮ್ಮ ಆಸ್ಪತ್ರೆಗಳು ಚಿಕಿತ್ಸೆಗೆ ಸಜ್ಜಾಗಿವೆ' ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫಾನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,90,299 ಒಟ್ಟು ಸೋಂಕಿತರು (12,83,186 ನಿನ್ನೆಯ ವಿವರ)

32,157	12,41,721	16,420
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	7,113
ಗುಣಮುಖ	323
ಸಾವು	03

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್: ನಕಲಿ ಪ್ರಮಾಣಪತ್ರ ವಿತರಣೆ ಇಬ್ಬರ ಬಂಧನ

ಬೆಂಗಳೂರು: ಹಣದ ಆಸೆಗೆ ಬಿದ್ದು, ಕೋವಿಡ್ ಪರೀಕ್ಷೆಯ ನಕಲಿ ಪ್ರಮಾಣಪತ್ರಗಳನ್ನು ನೀಡುತ್ತಿದ್ದ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಹೊರ ರಾಜ್ಯಗಳಿಗೆ ತೆರಳಲು, ಕರ್ನಾಟಕಕ್ಕೆ ಬರಲು ಕೋವಿಡ್ ನೆಗೆಟಿವ್ ಪ್ರಮಾಣ ಪತ್ರವನ್ನು ಕಡ್ಡಾಯಗೊಳಿಸಲಾಗಿದೆ. ಕಾವಲ್‌ಬೈರಸಂದ್ರದ ಸ್ಕೈಲೈನ್ ಡಯಾಗ್ನಸ್ಟಿಕ್ಸ್ ಹೆಸರಿನಲ್ಲಿ ಆರೋಪಿಗಳು, 'ಕೋವಿಡ್ ಸೋಂಕು ಇಲ್ಲ' ಎಂಬಂತೆ ಪರೀಕ್ಷಾ ವರದಿಯ ನಕಲಿ ಪ್ರಮಾಣಪತ್ರ ಸಿದ್ಧಪಡಿಸುತ್ತಿದ್ದರು. ಅಗತ್ಯವಿರುವವರಿಗೆ ವಿತರಿಸುತ್ತಿದ್ದರು. ಈ ಬಗ್ಗೆ ಖಚಿತ ಮಾಹಿತಿ ಆಧಾರದಲ್ಲಿ ದಾಳಿ ನಡೆಸಿ ಇಬ್ಬರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ರಜಾ ದಿನಗಳಲ್ಲಿಯೂ ಕೆಲಸಕ್ಕೆ ಸಿದ್ಧರಾಗಿ'

ಬೆಂಗಳೂರು: ಕೋವಿಡ್ ನಿಯಂತ್ರಣ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಾರ್ವಜನಿಕ ರಜಾ ದಿನಗಳಲ್ಲೂ ಕಾರ್ಯನಿರ್ವಹಿಸಲು ಸಜ್ಜಾಗಿರಬೇಕು ಎಂದು ಆರೋಗ್ಯ ಇಲಾಖೆ ತನ್ನ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಸೂಚಿಸಿದೆ.

ಈ ಕುರಿತು ಸುತ್ತೋಲೆ ಹೊರಡಿಸಿರುವ ಇಲಾಖೆಯ ಆಯುಕ್ತ ಡಿ. ರಂದೀಪ್, 'ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್ ನಿಯಂತ್ರಣದಲ್ಲಿ ಆರೋಗ್ಯ ಇಲಾಖೆಯ ಪಾತ್ರ ಮಹತ್ವದ್ದಾಗಿದೆ. ಅಧಿಕಾರಿಗಳು ಹಾಗೂ ಸಿಬ್ಬಂದಿ ಈ ವೇಳೆ ಸಮರೋಪಾದಿಯಲ್ಲಿ ಕೆಲಸ ನಿರ್ವಹಿಸಬೇಕು. ಯಾವುದೇ ಕ್ಷಣದಲ್ಲಿ ತುರ್ತು ಸಭೆಗಳು ಹಾಗೂ ತ್ವರಿತ ನಿಯಂತ್ರಣ ಕಾರ್ಯಗಳನ್ನು ಕೈಗೊಳ್ಳಬೇಕಾಗಿ ಬರುತ್ತದೆ. ಆದ್ದರಿಂದ ಪೂರ್ವಾನುಮತಿ ಇಲ್ಲದೆಯೇ ಕೇಂದ್ರ ಸ್ಥಾನ ಬಿಟ್ಟು ತೆರಳುವಂತಿಲ್ಲ' ಎಂದು ಹೇಳಿದ್ದಾರೆ.

'ಅಧಿಕಾರಿಗಳು ಹಾಗೂ ಸಿಬ್ಬಂದಿ ಸೂಚನೆಗಳನ್ನು ತ್ವರಿತವಾಗಿ ಪಾಲಿಸಬೇಕಾಗುತ್ತದೆ. ತುರ್ತು ಸಂದರ್ಭಗಳಲ್ಲಿ, ರಜಾ ದಿನಗಳಲ್ಲಿಯೂ ಮೇಲಾಧಿಕಾರಿಗಳು ವಹಿಸಿದ ಕೆಲಸಗಳನ್ನು ಪೂರ್ಣಗೊಳಿಸಬೇಕು' ಎಂದು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಕೋವಿಡ್ ಅಂಕಿ–ಅಂಶ

ಆಧಾರ: ವ್ಯೆಗೌ.ಇನ್/ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	30.45 ಕೋಟಿ	3.53 ಕೋಟಿ
ಸಕ್ರಿಯ ಪ್ರಕರಣ	4.00 ಕೋಟಿ	4.72 ಲಕ್ಷ
ಗುಣಮುಖ	25.85 ಕೋಟಿ	3.44 ಕೋಟಿ
ಸಾವು	55.00 ಲಕ್ಷ	4.83 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	27.19 ಲಕ್ಷ	1.41 ಲಕ್ಷ
ಗುಣಮುಖ	7.20 ಲಕ್ಷ	40,895
ಸಾವು	6,721	285

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಫ್ರಾನ್ಸ್	ಬ್ರಿಟನ್
8.49 ಲಕ್ಷ	3.28 ಲಕ್ಷ	1.78 ಲಕ್ಷ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

ಅಮೆರಿಕ	ಫ್ರಾನ್ಸ್	ಬ್ರಿಟನ್
1.74 ಕೋಟಿ	29.33 ಲಕ್ಷ	33.74 ಲಕ್ಷ

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.41 ಲಕ್ಷ
ಕೇರಳ	49,305
ತಮಿಳುನಾಡು	36,833

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	68.34
ಕೇರಳ	52.73
ತಮಿಳುನಾಡು	27.76

ಭಾರತದ ಕೋವಿಡ್ ಸಂಖ್ಯೆ ವಿವರ: ಶನಿವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ಪ್ರಜಾವಾಣಿ ಗ್ರಾಫಿಕ್ಸ್

ಬಹುಮಹಡಿ ಕಟ್ಟಡದಲ್ಲಿ ಬೆಂಕಿ: ದಟ್ಟೈಸಿದ ಹೊಗೆ

ಬೆಂಗಳೂರು: ಕೋಣನಕುಂಟೆ ಕ್ರಾಸ್ ಮೆಟ್ರೊ ನಿಲ್ದಾಣದ ಬಳಿಯ ನಿರ್ಮಾಣ ಹಂತದ ಬಹುಮಹಡಿ ಕಟ್ಟಡದಲ್ಲಿ ಶನಿವಾರ ಅಗ್ನಿ ಅವಘಡ ಸಂಭವಿಸಿದೆ. ಈ ದುರ್ಘಟನೆ ನಡೆದ ಸಂದರ್ಭದಲ್ಲಿ ಕಾರ್ಮಿಕರು ಕಟ್ಟಡದಲ್ಲಿ ಇರಲಿಲ್ಲ.

'ಬೆಂಕಿಯ ತೀವ್ರತೆಗೆ ಕಟ್ಟಡದಲ್ಲಿದ್ದ ವಸ್ತುಗಳೆಲ್ಲ ಸುಟ್ಟು ಹೋಗಿದ್ದು, ಕಡುಗಪ್ಪು ಹೊಗೆ ದಟ್ಟೈಸಿತ್ತು. ಹೀಗಾಗಿ ಸುತ್ತಲಿನ ನಿವಾಸಿಗಳು ಆತಂಕಕ್ಕೆ ಒಳಗಾಗಿದ್ದರು. ಕಟ್ಟಡವು ಪ್ರೆಸ್ಟೀಜ್ ಸಮೂಹಕ್ಕೆ ಸೇರಿದ್ದು ಎಂಬ ವಿಚಾರ ಗೊತ್ತಾಗಿದೆ. ಇಲ್ಲಿ ಸುಮಾರು ಎರಡು ವರ್ಷಗಳಿಂದ 'ಪ್ರೆಸ್ಟೀಜ್ ಫಾಲ್ಕನ್' ಹೆಸರಿನ ಮಾಲ್‌ನ ಕಟ್ಟಡ ನಿರ್ಮಾಣ ಕಾರ್ಯ ನಡೆಯುತ್ತಿತ್ತು. ಇದು ಈ ವರ್ಷದ ಮಾರ್ಚ್‌ನಲ್ಲಿ ಉದ್ಘಾಟನೆಯಾಗಬೇಕಿತ್ತು' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಮಧ್ಯಾಹ್ನ 12.30ರ ಸುಮಾರಿಗೆ ಕಟ್ಟಡದಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡಿತು. ದಟ್ಟ ಹೊಗೆ ಹೊರಹೊಮ್ಮುತ್ತಿತ್ತು. ಗಾಬರಿಗೊಂಡು ಕೂಡಲೇ ವಿಷಯವನ್ನು ಪೊಲೀಸರಿಗೆ ತಿಳಿಸಿದೆ. ಅಗ್ನಿಶಾಮಕ ದಳದವರಿಗೂ ಮಾಹಿತಿ ಮುಟ್ಟಿಸಿದೆ' ಎಂದು ಸ್ಥಳೀಯರೊಬ್ಬರು ತಿಳಿಸಿದ್ದಾರೆ.

'ಮೂರು ವಾಹನಗಳಲ್ಲಿ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಸುಮಾರು 2 ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು' ಎಂದರು.

'ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಅಗ್ನಿ ಅವಘಡ ಸಂಭವಿಸಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಬೆಂಕಿ ಕಾಣಿಸಿಕೊಂಡ ಕಟ್ಟಡದಿಂದ ದಟ್ಟ ಹೊಗೆ ಹೊರಹೊಮ್ಮುತ್ತಿದ್ದ ದೃಶ್ಯ

ಆಂಬುಲೆನ್ಸ್ ಚಾಲಕರಿಗೆ ನಾಳೆ ಉಚಿತ ಲಸಿಕೆ

ಬೆಂಗಳೂರು: ಮಣಿಪಾಲ್ ಆಸ್ಪತ್ರೆಗಳ ಸಮೂಹವು ಆಂಬುಲೆನ್ಸ್ ಚಾಲಕರು ಹಾಗೂ ಅರೆವೈದ್ಯಕೀಯ ಸಿಬ್ಬಂದಿಗೆ ಸೋಮವಾರ (ಜ.10) ತನ್ನ ಕೇಂದ್ರಗಳಲ್ಲಿ ಕೋವಿಡ್ ಲಸಿಕೆಯ ಮೂರನೇ ಡೋಸ್ ಅನ್ನು ಉಚಿತವಾಗಿ ವಿತರಿಸುವ ಅಭಿಯಾನವನ್ನು ಹಮ್ಮಿಕೊಂಡಿದೆ.

ಕೋವಿಡ್ ಮುಂಚೂಣಿ ಕಾರ್ಯಕರ್ತರಿಗೆ ರಕ್ಷಣೆ ಒದಗಿಸುವುದು ಈ ಕಾರ್ಯಕ್ರಮದ ಹಿಂದಿನ ಉದ್ದೇಶ ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಸಿಲಿಂಡರ್ ರಿಫಿಲ್ಲಿಂಗ್ ವೇಳೆ ಬೆಂಕಿ ಅವಘಡ; ಇಬ್ಬರಿಗೆ ಗಾಯ

ಬೆಂಗಳೂರು: ಸಿಲಿಂಡರ್ ರಿಫಿಲ್ಲಿಂಗ್ ವೇಳೆ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡಿದ್ದರಿಂದ ಇಬ್ಬರು ಗಾಯಗೊಂಡಿದ್ದಾರೆ. ಗೋವಿಂದರಾಜನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮೂಡಲಪಾಳ್ಯದ ಅನ್ನಪೂರ್ಣೇಶ್ವರಿ ನಗರದಲ್ಲಿ ವಾಸವಿದ್ದ ಬೆಟ್ಟಯ್ಯ ಎಂಬುವರು ಭಾರತ್ ಭವಾನಿ ಗ್ಯಾಸ್ ಹೆಸರಿನ ಏಜೆನ್ಸಿ ನಡೆಸುತ್ತಿದ್ದರು. ಮೂಡಲಪಾಳ್ಯ ವೃತ್ತದ ಬಳಿಯ ತಮ್ಮ ಮನೆಯ ಎದುರು ಸಣ್ಣ ಸಿಲಿಂಡರ್‌ಗಳಿಗೆ ಅಕ್ರಮವಾಗಿ ಅಡುಗೆ ಅನಿಲ ಮರುಪೂರಣ (ಫಿಲ್ಲಿಂಗ್) ಮಾಡುತ್ತಿದ್ದರು. ಈ ವೇಳೆ ಅನಿಲ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡಿದೆ. ಕೂಡಲೇ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದರಿಂದ ಅವರು ಸ್ಥಳಕ್ಕೆ ಬಂದು ಬೆಂಕಿ ನಂದಿಸಿದ್ದಾರೆ. ಹೀಗಾಗಿ ದೊಡ್ಡ ಅನಾಹುತವೊಂದು ತಪ್ಪಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ತಿಳಿಸಿದರು.

'ಏಜೆನ್ಸಿಯ ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಲಾಗಿದೆ' ಎಂದರು.

ನಿಧನ ವಾರ್ತೆ

ಎಸ್.ಎಂ.ಇಂದಿರಾ

ಗಂಗೇನಹಳ್ಳಿ ಬಡಾವಣೆ ನಿವಾಸಿ ಎಸ್.ಎಂ. ಇಂದಿರಾ (63) ಶನಿವಾರ ರಾತ್ರಿ ನಿಧನರಾದರು.

ಅವರಿಗೆ ಪತಿ,ಪುತ್ರ ಮತ್ತು ಪುತ್ರಿ ಇದ್ದಾರೆ. ರಾಷ್ಟ್ರ ಸೇವಿಕಾ ಸಮಿತಿಯಲ್ಲಿ ಅವರು ಸಕ್ರಿಯ ಕಾರ್ಯಕರ್ತೆಯಾಗಿ ಸೇವೆ ಸಲ್ಲಿಸಿದ್ದರು.

ಅಂತ್ಯಕ್ರಿಯೆ ಭಾನುವಾರ ಬೆಳಿಗ್ಗೆ 9ಕ್ಕೆ ಹೆಬ್ಬಾಳ ಚಿತಾಗಾರದಲ್ಲಿ ನಡೆಯಲಿದೆ. ಕುಟುಂಬದವರನ್ನು ಸಂಪರ್ಕಿಸಲು 8867637797.

ಪಾದಯಾತ್ರೆಗೆ ಬೆಂಬಲ

ಪೀಣ್ಯ ದಾಸರಹಳ್ಳಿ: ಮೇಕೆದಾಟು ಯೋಜನೆಗಾಗಿ ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿರುವ ಪಾದಯಾತ್ರೆಗೆ ಬೆಂಬಲ ನೀಡಲಾಗುವುದು' ಎಂದು ಜಯ ಕರ್ನಾಟಕ ಸಂಘಟನೆ ರಾಜ್ಯ ಘಟಕದ ಅಧ್ಯಕ್ಷ ಬಿ.ಎನ್. ಜಗದೀಶ್ ತಿಳಿಸಿದರು.

REQUIRE
SUPER STOCKIST / STOCKIST / DISTRIBUTORS IN PAN INDIA
FOR COSMETIC PRODUCTS
9741383892
9886635942

ವಕೀಲ ಎಸ್.ನಾಗಪ್ಪ ನಿಧನ

ಸಾಗರ: ಇಲ್ಲಿನ ಹಿರಿಯ ವಕೀಲ ಎಸ್. ನಾಗಪ್ಪ (85) ಶುಕ್ರವಾರ ಸಂಜೆ ಬೆಂಗಳೂರಿನಲ್ಲಿರುವ ತಮ್ಮ ಪುತ್ರನ ನಿವಾಸದಲ್ಲಿ ನಿಧನರಾದರು. ಅವರಿಗೆ ಪತ್ನಿ, ಪುತ್ರಿ, ಮೂವರು ಪುತ್ರರಿದ್ದಾರೆ.

ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಹಾಗೂ ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಅವರ ಸಮಕಾಲೀನರಾಗಿದ್ದ ನಾಗಪ್ಪ ಅವರು 1978ರಲ್ಲಿ ಸೊರಬ ವಿಧಾನಸಭಾ ಕ್ಷೇತ್ರದಿಂದ ಬಂಗಾರಪ್ಪ ಅವರ ವಿರುದ್ಧ ಸ್ಪರ್ಧಿಸಿ ಸೋಲು ಕಂಡಿದ್ದರು. ನಂತರ ರಾಜಕೀಯದಿಂದ ದೂರವಿದ್ದು, ವಕೀಲ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಭೂಸುಧಾರಣೆ ಕಾಯ್ದೆ ಜಾರಿಯಾದ ನಂತರ ಬಡ ವರ್ಗಕ್ಕೆ ಭೂಮಿಯ ಹಕ್ಕು ಕೊಡಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.



ದುಷ್ಕರ್ಮಿಗಳಿಂದ ವ್ಯಕ್ತಿ ಕೊಲೆ

ಬೆಂಗಳೂರು: ಎಪಿಎಂಸಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ವ್ಯಕ್ತಿಯನ್ನು ದುಷ್ಕರ್ಮಿಗಳು ಕೊಲೆ ಮಾಡಿದ್ದಾರೆ. ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೊಲೆಯಾದ ವ್ಯಕ್ತಿಯನ್ನು ಚಂದ್ರ (32) ಎಂದು ಗುರುತಿಸಲಾಗಿದೆ. ಈತ ಕೆಲಸ ಮುಗಿಸಿಕೊಂಡು ನಂದಿನಿ ಲೇಔಟ್‌ನಲ್ಲಿರುವ ಸಹೋದರಿ ಮನೆಗೆ ಹೋಗಿ ಅಲ್ಲೇ ತಂಗುತ್ತಿದ್ದ. ಒಮ್ಮೊಮ್ಮೆ ಎಪಿಎಂಸಿಯಲ್ಲೇ ಉಳಿಯುತ್ತಿದ್ದ. ಒಂದು ವಾರದಿಂದ ಅವರು ಸಹೋದರಿ ಮನೆಗೆ ಹೋಗಿರಲಿಲ್ಲ. ಮಾರಪ್ಪನ ಪಾಳ್ಯದಲ್ಲಿ ವ್ಯಕ್ತಿಯ ಮೃತದೇಹ ಪತ್ತೆಯಾಗಿದೆ. ಸ್ಥಳೀಯರು ಈ ಕುರಿತು ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿದಾಗ ಆತ ಚಂದ್ರ ಎಂಬುದು ಗೊತ್ತಾಗಿದೆ. ಕೊಲೆಗೆ ಕಾರಣ ತಿಳಿದುಬಂದಿಲ್ಲ' ಎಂದು ಪೊಲೀಸರು ಹೇಳಿದ್ದಾರೆ.

ನೈಸ್ ರಸ್ತೆಯಲ್ಲಿ ಸರಣಿ ಅಪಘಾತ: ನಾಲ್ವರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಸ್ ರಸ್ತೆಯಲ್ಲಿ ಶುಕ್ರವಾರ ರಾತ್ರಿ ನಡೆದ ಸರಣಿ ಅಪಘಾತದಲ್ಲಿ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮೊಹಮ್ಮದ್ ಫಾದಿಲ್ (25), ಅಭಿಲಾಷ್ (25), ಜೀನಾ (26) ಹಾಗೂ ಶಿಲ್ಪಾ (30) ಮೃತಪಟ್ಟವರು. ಕೇರಳದವರಾದ ಇವರು ಬೊಮ್ಮನಹಳ್ಳಿಯಲ್ಲಿ ವಾಸವಿದ್ದರು. ಜೀನಾ, ಅಭಿಲಾಷ್ ಹಾಗೂ ಫಾದಿಲ್ ಸಾಫ್ಟ್‌ವೇರ್ ಕಂಪನಿ ಉದ್ಯೋಗಿಗಳಾಗಿದ್ದರು. ಶಿಲ್ಪಾ ಅವರು ಖಾಸಗಿ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದ್ದಾರೆ.

'ಮೃತರೆಲ್ಲರೂ ಕೇರಳದ ನೋಂದಣಿ ಸಂಖ್ಯೆ ಹೊಂದಿದ್ದ ವ್ಯಾಗನ್ ಆರ್ ಕಾರಿನಲ್ಲಿ ನೈಸ್ ರಸ್ತೆಯ ಪುರವಾಂಕರ ವಸತಿ ಸಮುಚ್ಚಯದ ಬಳಿ ಸಾಗುತ್ತಿದ್ದರು. ಈ ವೇಳೆ ತಮಿಳುನಾಡಿನ ನೋಂದಣಿ ಸಂಖ್ಯೆ ಹೊಂದಿದ್ದ ಲಾರಿಯೊಂದು ಅತಿ ವೇಗವಾಗಿ ಬಂದು ಕಾರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕಾರು ಸಂಪೂರ್ಣವಾಗಿ ನುಜ್ಜುಗುಜ್ಜಾಗಿದ್ದು ಒಳಗಿದ್ದ ನಾಲ್ವರೂ ಮೃತಪಟ್ಟಿದ್ದಾರೆ' ಎಂದು ತಿಳಿಸಿದ್ದಾರೆ.

'ಕ್ವಾಲಿಸ್ ಕಾರಿನಲ್ಲಿದ್ದ ನಾಲ್ವರಿಗೆ ಗಂಭೀರ ಗಾಯಗಳಾಗಿವೆ. ಸ್ವಿಫ್ಟ್ ಕಾರಿನಲ್ಲಿದ್ದ ಇಬ್ಬರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಎಲ್ಲರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳದಲ್ಲೇ ಲಾರಿಯನ್ನು ಬಿಟ್ಟು ಚಾಲಕ ಪರಾರಿಯಾಗಿದ್ದಾನೆ. ಆತನಿಗಾಗಿ ಶೋಧ ಆರಂಭಿಸಿದ್ದೇವೆ' ಎಂದರು.

ಯಲಹಂಕ:ಸ್ಕೂಟರ್ ಸವಾರ ಸಾವು

ಸ್ಕೂಟರ್‌ನಲ್ಲಿ ಸಾಗುತ್ತಿದ್ದ ವ್ಯಕ್ತಿಯೊಬ್ಬರಿಗೆ ಅಪರಿಚಿತ ವಾಹನ ಡಿಕ್ಕಿಯಾಗಿದ್ದರಿಂದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಯಲಹಂಕ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬೆಟ್ಟಹಲಸೂರು ನಿವಾಸಿಯಾಗಿರುವ ಉದಯ್‌ಕುಮಾರ್ (58) ಶುಕ್ರವಾರ ರಾತ್ರಿ 8 ಗಂಟೆ ಸುಮಾರಿಗೆ ರೈತ ಸಂತೆ ಬಳಿ ಸ್ಕೂಟರ್‌ನಲ್ಲಿ ಹೋಗುತ್ತಿದ್ದರು. ಈ ವೇಳೆ ವಾಹನವೊಂದು ಡಿಕ್ಕಿಯಾಗಿತ್ತು. ವಾಹನ ಸಮೇತ ಚಾಲಕ ಪರಾರಿಯಾಗಿದ್ದಾನೆ. ಆತನಿಗಾಗಿ ಹುಡುಕುತ್ತಿದ್ದೇವೆ' ಎಂದು ಪೊಲೀಸರು ಹೇಳಿದ್ದಾರೆ.

ಬೈಕ್‌ಗಳ ನಡುವೆ ಡಿಕ್ಕಿ

ಬೈಕ್‌ಗಳ ನಡುವಣ ಮುಖಾಮುಖಿ ಡಿಕ್ಕಿಯಿಂದಾಗಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಬಾಣಸವಾಡಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಜೇವರ್ಗಿಸ್ ಮೃತಪಟ್ಟವರು. ಬಾಬೂಸಾಪಾಳ್ಯ ನಿವಾಸಿದ್ದಾರೆ. ಶುಕ್ರವಾರ ರಾತ್ರಿ 9.30ರ ಸುಮಾರಿಗೆ ಟಿ.ಸಿ.ಪಾಳ್ಯದಿಂದ ಮನೆಗೆ ಬೈಕ್‌ನಲ್ಲಿ ಬರುತ್ತಿದ್ದರು. ಹೊರಮಾವು ಬಳಿಯ ಅಗ್ರಹಾರ ವೃತ್ತದಲ್ಲಿ ವೇಗವಾಗಿ ಬಂದ ಬೈಕ್‌ವೊಂದು ಡಿಕ್ಕಿ ಹೊಡೆದಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಅಸುನೀಗಿದ್ದಾರೆ. ಬೈಕ್‌ನೊಂದಿಗೆ ಸವಾರ ಪರಾರಿಯಾಗಿದ್ದಾನೆ' ಎಂದು ಪೊಲೀಸರು ತಿಳಿಸಿದರು.

ಎಂ.ಬಿ. ಪಾಟೀಲರು ನಾಲಿಗೆ ಹರಿಬಿಡುವಾಗ ಜ್ಞಾನ ಇಟ್ಟುಕೊಳ್ಳಲಿ: ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ

‘ಮೇಕೆದಾಟು ಸತ್ಯ ತಿಳಿಸಲು ಜಾಹೀರಾತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್‌ನವರು ಮೇಕೆದಾಟು ವಿಚಾರದಲ್ಲಿ ರಾಜಕೀಯ ಮಾಡುತ್ತಿದ್ದಾರೆ. ರಾಜಕೀಯವಾಗಿಯೇ ಉತ್ತರ ಕೊಡಲು ಸತ್ಯವನ್ನು ತಿಳಿಸಿದ್ದೇವೆ. ಜಾಹೀರಾತಿನಲ್ಲಿ ನಾನು ನನ್ನ ಅಥವಾ ಮುಖ್ಯಮಂತ್ರಿ ಫೋಟೊ ಹಾಕಿಕೊಂಡಿಲ್ಲ. ಜನರಿಗೆ ಇದ್ದುದನ್ನು ಇದ್ದಂತೆ ತೋರಿಸಿದ್ದೇವೆ. ಸರ್ಕಾರದ ಕಡತದಲ್ಲಿದ್ದ ಮಾಹಿತಿಯನ್ನು ಮುಂದಿಟ್ಟಿದ್ದೇವೆ’ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ಗೋವಿಂದ ಕಾರಜೋಳ

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ಅವರಿಗೆ (ಕಾಂಗ್ರೆಸ್) ಹೋರಾಟ ಮಾಡುವ ಅಧಿಕಾರ ಇದೆ, ಮಾಡಲಿ. ಮೇಕೆದಾಟು ಯೋಜನೆ ಬಗ್ಗೆ 2013ರಿಂದ 2018ರವರೆಗೆ ನಡೆದ ಸತ್ಯವನ್ನು ಜನರ ಮುಂದೆ ಬಿಚ್ಚಿಡುವ ಪ್ರಯತ್ನ ಮಾಡಿದ್ದೇನೆ. ಹಿಂದೆ ಜಲಸಂಪನ್ಮೂಲ ಸಚಿವರಾಗಿದ್ದ ಎಂ.ಬಿ. ಪಾಟೀಲ ಅವರಿಗೆ ಸತ್ಯ ಕಹಿ ಯಾಕೆ ಆಯಿತೊ ಗೊತ್ತಿಲ್ಲ. ಅವರು ನನ್ನ ವಿರುದ್ಧ ಕಟ್ಟು ಶಬ್ದಗಳಿಂದ ಯಾಕೆ ಮಾತನಾಡಿದ್ದಾರೊ ಗೊತ್ತಿಲ್ಲ. ನಾನು ಎಂದೂ ಸತ್ಯ ಮುಚ್ಚಿಟ್ಟಿಲ್ಲ. ಸುಳ್ಳು ಹೇಳಿಲ್ಲ’ ಎಂದರು.

‘ಎಂ.ಬಿ. ಪಾಟೀಲ ಅವರ ಬಗ್ಗೆ ವೈಯಕ್ತಿಕವಾಗಿ ಒಂದೂ ಶಬ್ದ ಕೂಡ ಮಾತನಾಡಿಲ್ಲ. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಎರಡೂವರೆ ವರ್ಷದಿಂದ ಬಿಜೆಪಿ ಸರ್ಕಾರ ಏನೂ ಮಾಡಿಲ್ಲ ಅಂದರು. ಅದನ್ನು ಹೇಳಿದ್ದೇನೆ. ಅವಾಚ್ಯವಾಗಿ ಮಾತನಾಡುವುದು ನನ್ನ ಸಂಸ್ಕೃತಿಯೂ ಅಲ್ಲ. ಸಂಸ್ಕಾರವೂ ಅಲ್ಲ. ನನ್ನ ತಂದೆ-ತಾಯಿ ಅದನ್ನು ನನಗೆ ಕಲಿಸಿಲ್ಲ’ ಎಂದು ಹೇಳಿದರು.

‘ಎಂ.ಬಿ. ಪಾಟೀಲರು ವಯಸ್ಸಿನಲ್ಲಿ ನನಗಿಂತ ಚಿಕ್ಕವರು. ನಾಲಿಗೆ ಹರಿಬಿಡುವಾಗ ಸ್ವಲ್ಪ ಜ್ಞಾನದಿಂದ ಮಾತನಾಡಬೇಕು. ನನ್ನನ್ನು ಸಚಿವ ಸ್ಥಾನದಿಂದ ವಜಾ ಮಾಡಬೇಕು ಎಂದು ಅವರು ಹೇಳಿದ್ದಾರೆ. ಬಹುಶಃ ಅವರು ನಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಮತ್ತು ಪ್ರಧಾನಿ ನರೇಂದ್ರ ಮೋದಿ ಸ್ಥಾನದಲ್ಲಿ ಇದ್ದಂತೆ ಕಾಣಿಸುತ್ತದೆ. ಅದಕ್ಕಿಂತ ಹೆಚ್ಚು ನಾನು ಏನೂ ಹೇಳುವುದಿಲ್ಲ’ ಎಂದು ವ್ಯಂಗ್ಯವಾಡಿದರು.

‘ಟೀಕೆ, ಟಿಪ್ಪಣಿ ಮಾಡುವುದೇ ಪ್ರಜಾಪ್ರಭುತ್ವದ ಸೌಂದರ್ಯ. ಆದರೆ, ಸಂಸ್ಕಾರವಂತರಾಗಿ, ಜನರ ಮುಂದೆ ಮಾದರಿಯಾಗಿ ಇರಬೇಕೇ ಹೊರತು ರೌಡಿ ಥರ ಯಾರೂ ಮಾತನಾಡಬಾರದು. ವೈಯಕ್ತಿಕವಾಗಿ ನನಗೆ ಯಾರ ಬಗ್ಗೆಯೂ ದ್ವೇಷ, ಅಸೂಯೆ ಇಲ್ಲ. ನಾನು ಯಾರ ಬಗ್ಗೆಯೂ ವೈಯಕ್ತಿಕವಾಗಿ ಮಾತನಾಡುವುದಿಲ್ಲ’ ಎಂದರು.

‘ಮಂತ್ರಿ ಸ್ಥಾನಕ್ಕೆ ಕಾರಜೋಳ ನಾಲಾಯಕ್’

ಬೆಂಗಳೂರು: ‘ಕಾರಜೋಳ ಒಬ್ಬ ಮೂರ್ಖ ಮಂತ್ರಿ. ಮಂತ್ರಿ ಸ್ಥಾನಕ್ಕೆ ನಾಲಾಯಕ್. ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಬೇಕು’ ಎಂದು ಕಾಂಗ್ರೆಸ್ ಶಾಸಕ ಎಂ.ಬಿ. ಪಾಟೀಲ ಆಗ್ರಹಿಸಿದರು.

ಎಂ.ಬಿ. ಪಾಟೀಲ

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ‘ಅಂತರ್ ರಾಜ್ಯ ಜಲವಿವಾದದ ಬಗ್ಗೆ ಕಾರಜೋಳ ಅವರಿಗೆ ಗೊತ್ತೇ ಇಲ್ಲ. ಬೆಂಗಳೂರಿಗೆ ಕುಡಿಯಲು ನೀರು ಸಿಕ್ಕಿದ್ದರೆ ಅದು ನಮ್ಮ ಪ್ರಯತ್ನ. ಸಾಮಾನ್ಯ ಪರಿಜ್ಞಾನವೂ ಅವರಿಗಿಲ್ಲ. ಅವರನ್ನು ಜಲಸಂಪನ್ಮೂಲ ಸಚಿವರಾಗಿ ಇಟ್ಟುಕೊಂಡಷ್ಟು ದಿನವೂ ಕರ್ನಾಟಕಕ್ಕೆ ಹಾನಿಯಾಗುತ್ತಲೇ ಇರುತ್ತದೆ’ ಎಂದರು.

‘ಪತ್ರಿಕೆಯಲ್ಲಿ ಜಾಹೀರಾತು ನೀಡುವ ಮೂಲಕ ಕಾರಜೋಳ ಅವರು ಮೂರನೇ ದರ್ಜೆಯ ಕೆಲಸ ಮಾಡಿದ್ದಾರೆ. ಜಾಹೀರಾತು ಪ್ರಾಯೋಜಿತ ಎಂದೂ ಹಾಕಿದ್ದಾರೆ. ಅನಾಮಧೇಯರು ಹಾಕಿದ್ದು ಅದು. ಯಾರ ಸತ್ಯ ದರ್ಶನ ಇದು. ಇದು ಯಾರ ವಿವೇಕ. ಬಿಜೆಪಿನೂ ಕೊಟ್ಟಿಲ್ಲ, ಸರ್ಕಾರ ಕೊಟ್ಟಿಲ್ಲ, ಸಂಘ ಸಂಸ್ಥೆಗಳೂ ಕೊಟ್ಟಿಲ್ಲ. ಹಾಗಿದ್ದರೆ ಕೊಟ್ಟವರು ಯಾರು? ಚಿಲ್ಲರೆಯಾಗಿ ವರ್ತನೆ ಮಾಡುತ್ತಿರುವುದು ಯಾರು. ಇದಕ್ಕೆಲ್ಲ ಕಾರಜೋಳ ಕಾರಣ’ ಎಂದೂ ಟೀಕಿಸಿದರು.

‘ನಾನು ಜಲಸಂಪನ್ಮೂಲ ಸಚಿವನಾನಾಗಿದ್ದಾಗ (2013ರಲ್ಲಿ) ಕಾವೇರಿ ಅಧಿಸೂಚನೆ ಆಯಿತು. ಪ್ರಥಮ ಬಾರಿಗೆ ಮೇಕೆದಾಟು ಆರಂಭಿಸಿದ್ದು ನಾವು. ಆರಂಭಿಕ ಹೆಜ್ಜೆ ಇಟ್ಟವರು ನಾವು. ಕಾರಜೋಳ ಅವರಿಗೆ ಯಾರ ಭಯ ಕಾಡುತ್ತಿದೆಯೊ ಗೊತ್ತಿಲ್ಲ. ಸಾಮಾನ್ಯ ಜ್ಞಾನ ಇಲ್ಲ. ಸುಮ್ಮನೆ ನನ್ನ ಮೇಲೆ ಗೂಬೆ ಕೂರಿಸುತ್ತಿದ್ದಾರೆ’ ಎಂದೂ ವಾಗ್ದಾಳಿ ನಡೆಸಿದರು.

‘ಬಿಜೆಪಿ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರು ಮೇಕೆದಾಟು ಯೋಜನೆ ಕುರಿತು ಪತ್ರ ಒಂದನ್ನು ಬರೆಯುವುದು ಬಿಟ್ಟರೆ ಮತ್ತೇನು ಮಾಡಿದ್ದಾರೆ’ ಎಂದು ಅವರು ಪ್ರಶ್ನಿಸಿದರು.

‘ಪಾದಯಾತ್ರೆಯಿಂದ ಡಬ್ಬಲ್ ಎಂಜಿನ್ ಸರ್ಕಾರ ಚುರುಕಾಗುತ್ತದೆ. ಆ ಆಸೆ ಇಟ್ಟುಕೊಂಡೇ ಯಾತ್ರೆ ಮಾಡುತ್ತಿದ್ದೇವೆ. ಹಾಗಾದರೂ ಸರ್ಕಾರ ಚುರುಕಾಗಲಿ’ ಎಂದು ಎಂ.ಬಿ. ಪಾಟೀಲ ಹೇಳಿದರು.

‘ಜನರ ಹಾದಿ ತಪ್ಪಿಸಲು ಸುಳ್ಳು ಜಾಹೀರಾತು’

ಬೆಂಗಳೂರು: ‘ಮೇಕೆದಾಟು ಯೋಜನೆ ಸೇರಿದಂತೆ ನೀರಾವರಿ ಯೋಜನೆಗಳ ವಿಷಯದಲ್ಲಿ ಎರಡೂವರೆ ವರ್ಷದಿಂದ ಏನನ್ನೂ ಮಾಡದ ಬಿಜೆಪಿ ಸರ್ಕಾರ, ಸುಳ್ಳು ಜಾಹೀರಾತು ನೀಡಿ ಜನರನ್ನು ಹಾದಿ ತಪ್ಪಿಸುವ ಹುನ್ನಾರ ನಡೆಸಿದೆ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

ಸಿದ್ದರಾಮಯ್ಯ

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ಯೋಜನೆಯ ವಿಷಯದಲ್ಲಿ ಬಿಜೆಪಿಯಿಂದ ವಿಳಂಬ ದ್ರೋಹ ಆಗಿದೆ. ಯಾವುದೇ ಅಡೆತಡೆ ಇಲ್ಲದಿದ್ದರೂ ಕೆಲಸವನ್ನೇ ಆರಂಭಿಸಿಲ್ಲ. ಕೇಂದ್ರಕ್ಕೆ ಒತ್ತಾಯ ಮಾಡಿಯೇ ಇಲ್ಲ. ಈಗ ಅದಕ್ಕೆ ರಾಜಕೀಯ ಬಣ್ಣ ನೀಡುವ ಪ್ರಯತ್ನ ಮಾಡುತ್ತಿದೆ. ಬಿಜೆಪಿ ಸರ್ಕಾರ ಇನ್ನೊಬ್ಬರ ಮೇಲೆ ಗೂಬೆ ಕೂರಿಸುತ್ತಿದೆ’ ಎಂದು ದೂರಿದರು.

‘ನಾವು ಪಾದಯಾತ್ರೆ ಮಾಡಿಯೇ ಮಾಡುತ್ತೇವೆ. ನಿಷೇಧಾಜ್ಞೆ ವಿಧಿಸಿದರೆ ಐದೈದು ಜನ ಹೋಗಿ ಮಾಡುತ್ತೇವೆ. ರಾಜ್ಯದಲ್ಲಿ ಎಲ್ಲಿಯೂ 144 ಸೆಕ್ಷನ್ ಅನ್ವಯ ನಿಷೇಧಾಜ್ಞೆ ಹೇರಿಲ್ಲ.ರಾಮನಗರದಲ್ಲಿ ಮಾತ್ರ ನಿಷೇಧಾಜ್ಞೆ ಹಾಕಿದ್ದಾರೆ ಅಂದರೆ ಅರ್ಥ ಏನು? ಇದು ನಮ್ಮ ಪಾದಯಾತ್ರೆ ಹತ್ತಿಕ್ಕುವ ಹುನ್ನಾರವಲ್ಲವೇ’ ಎಂದು ಕಿಡಿಕಾರಿದರು.

‘2008ರಿಂದ ಗೋವಿಂದ ಕಾರಜೋಳ ಮಂತ್ರಿ ಆಗಿದ್ದರು. ಬಸವರಾಜ ಬೊಮ್ಮಾಯಿ ನೀರಾವರಿ ಸಚಿವರಾಗಿದ್ದರು. ಅವರು ಏನು ಮಾಡಿದ್ದರು’ ಎಂದು ಪ್ರಶ್ನಿಸಿದರು.

‘ಕಾಂಗ್ರೆಸ್‌ನವರಂತೆ ಕೋವಿಡ್ ನಿಯಮಾವಳಿ ಉಲ್ಲಂಘಿಸಿ ಹಟಕ್ಕೆ ಬಿದ್ದು ಯಾತ್ರೆ ಮಾಡುವುದಿಲ್ಲ’ ಎಂಬ ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಕುಮಾರಸ್ವಾಮಿ ಹತಾಶರಾಗಿದ್ದಾರೆ. ಹೀಗಾಗಿ ಏನೇನೋ ಮಾತನಾಡುತ್ತಿದ್ದಾರೆ. ಅವರ ಹೇಳಿಕೆಗಳ ಬಗ್ಗೆ ಸುಮ್ಮನೆ ಯಾಕೆ ಮಾತನಾಡಬೇಕು. ಅವರ ಬಗ್ಗೆ ಏನೂ ಮಾತನಾಡುವುದಿಲ್ಲ’ ಎಂದರು.

ಸುದ್ದಿ 2 ನಿಮಿಷ

ವಾಲ್ಮೀಕಿ ಜಾತ್ರೆಯಲ್ಲಿ ಐತಿಹಾಸಿಕ ನಿರ್ಣಯ: ಸ್ವಾಮೀಜಿ ಎಚ್ಚರಿಕೆ

ಹರಿಹರ: ‘ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣವನ್ನು ಶೇ 7.5ಕ್ಕೆ ಹೆಚ್ಚಿಸುವ ಸಂಬಂಧ ಸರ್ಕಾರಕ್ಕೆ ಕಡೆಯ ಅವಕಾಶ ನೀಡುತ್ತಿದ್ದು, ಶೀಘ್ರವೇ ನಿರ್ಧಾರ ಕೈಗೊಳ್ಳಬೇಕು. ಇಲ್ಲದಿದ್ದರೆ ಫೆ.8, 9ರಂದು ನಡೆಯುವ 4ನೇ ವಾಲ್ಮೀಕಿ ಜಾತ್ರಾ ಮಹೋತ್ಸವದಲ್ಲಿ ಐತಿಹಾಸಿಕ ನಿರ್ಣಯ ಕೈಗೊಳ್ಳಬೇಕಾಗುತ್ತದೆ’ ಎಂದು ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಪೀಠದ ಪ್ರಸನ್ನಾನಂದ ಸ್ವಾಮೀಜಿ ಎಚ್ಚರಿಸಿದರು.

ವಾಲ್ಮೀಕಿ ಜಾತ್ರಾ ಮಹೋತ್ಸವದ ಅಂಗವಾಗಿ ರಾಜನಹಳ್ಳಿಯ ವಾಲ್ಮೀಕಿ ಮಠದಲ್ಲಿ ಶನಿವಾರ ನಡೆದ ಪೂರ್ವಭಾವಿ ಸಭೆಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

‘ಹಿಂದಿನ ವರ್ಷದ ಜಾತ್ರೆಯಲ್ಲಿ ಹೋರಾಟದ ಅಂತಿಮ ಹಂತವನ್ನು ಘೋಷಿಸಲು ಬಯಸಿದ್ದೆವು. ಆದರೆ, ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮೇಲಿನ ವಿಶ್ವಾಸದಿಂದ ಸುಮ್ಮನಾದೆವು. ಒಂದು ಬಾರಿ, ಎರಡು ಬಾರಿ ಸಹಿಸಿಕೊಳ್ಳಬಹುದು. ಆದರೆ, ಪದೇ ಪದೇ ಸಹಿಸಿಕೊಳ್ಳಲಾಗುವುದಿಲ್ಲ. ಮೀಸಲಾತಿ ಏರಿಕೆ ಸೇರಿ ನಮ್ಮ ಹಕ್ಕುಗಳನ್ನು ಪಡೆಯಲು ಈ ಬಾರಿಯ ಜಾತ್ರೆಯಲ್ಲಿ ಸಮುದಾಯವು ಐತಿಹಾಸಿಕ ನಿರ್ಣಯ ಕೈಗೊಳ್ಳಲಿದೆ’ ಎಂದು ಹೇಳಿದರು.

ವಾಲ್ಮೀಕಿ ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷರೂ ಆಗಿರುವ ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ, ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಫೆ.9ರಂದು ವಾಲ್ಮೀಕಿ ರಥೋತ್ಸವಕ್ಕೆ ಚಾಲನೆ ನೀಡುವರು. ನಾಲ್ಕು ಗೋಷ್ಠಿಗಳು ನಡೆಯಲಿವೆ. ಎಸ್‌ಟಿ ಮೀಸಲಾತಿ ಪ್ರಮಾಣವನ್ನು ಶೇ 7.5ಕ್ಕೆ ಏರಿಸುವ ವಿಚಾರದ ಬಗ್ಗೆ ಮುಖ್ಯವಾಗಿ ಚರ್ಚಿಸಲಾಗುವುದು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಹಲವು ಸಚಿವರು, ಸಂಸದರು, ಶಾಸಕರು ಹಾಗೂ ಸಮಾಜದ ಗಣ್ಯರು ಭಾಗವಹಿಸುವರು’ ಎಂದರು.

ಕೊಟ್ಟೂರಿನ ‘ತರಳಬಾಳು ಹುಣ್ಣಿಮೆ’ ಮತ್ತೆ ಮುಂದೂಡಿಕೆ

ಸಿರಿಗೆರೆ (ಚಿತ್ರದುರ್ಗ ಜಿಲ್ಲೆ): ಇಲ್ಲಿನ ತರಳಬಾಳು ಬೃಹನ್ಮಠದಿಂದ ವಿಜಯನಗರ ಜಿಲ್ಲೆಯ ಕೊಟ್ಟೂರಿನಲ್ಲಿ ಫೆ. 8ರಿಂದ 16ರವರೆಗೆ ನಡೆಯಬೇಕಿದ್ದ ‘ತರಳಬಾಳು ಹುಣ್ಣಿಮೆ’ ಮಹೋತ್ಸವವನ್ನು ಕೋವಿಡ್ ಕಾರಣದಿಂದ ಮುಂದೂಡಲಾಗಿದೆ ಎಂದು ಮಠದ ಕಾರ್ಯದರ್ಶಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

2021ರಲ್ಲಿ ಕೊಟ್ಟೂರಿನಲ್ಲಿ ನಡೆಯಬೇಕಿದ್ದ ‘ತರಳಬಾಳು ಹುಣ್ಣಿಮೆ’ ಮಹೋತ್ಸವವನ್ನೂ ಕೊರೊನಾ ಕಾರಣಕ್ಕೆ ಮುಂದೂಡಲಾಗಿತ್ತು. 9 ದಿನಗಳ ಕಾರ್ಯಕ್ರಮವನ್ನು ಮಠದಲ್ಲೇ ಸರಳವಾಗಿ ನಡೆಸಿ, ಸಾಮಾಜಿಕ ಜಾಲತಾಣಗಳ ಮೂಲಕ ಬಿತ್ತರಿಸಲಾಗಿತ್ತು.

ಈ ವರ್ಷವೂ ಮಾಘ ಶುದ್ಧಪೂರ್ಣಿಮೆ (ಫೆ.16ರಂದು) ದಿನದಂದು ತರಳಬಾಳು ಮಠದಲ್ಲಿಯೇ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ಸಾಂಪ್ರದಾಯಿಕವಾಗಿ ಸದ್ಧರ್ಮ ಪೀಠಾರೋಹಣ ಮಾಡಲಿದ್ದಾರೆ.

‘ಸಾಯಬೇಡ್ರಿ ಅಂತೀನಿ, ಸಾಯೋರೆ ಎಂದರೆ ಏನು ಮಾಡೋಣ?’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಕೋವಿಡ್ ಸಮಯದಲ್ಲಿ ಹಮ್ಮಿಕೊಂಡಿರುವ ಹೋರಾಟ ನಿಲ್ಲಿಸಿ ಎಂದು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರಿಗೆ ಪ್ರಾರ್ಥನೆ ಮಾಡ್ತೀನಿ. ಸಾಯಬೇಡ್ರಿ ಅಂತೀನಿ. ಇಲ್ಲ, ನಾವು ಸಾಯೋರೆ ಅಂತಾ ಚಂಡಿ ಹಟ ಹಿಡಿದ್ರೆ ಏನು ಮಾಡೋಣ?’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಕುಟುಕಿದರು.

ಕೆ.ಎಸ್.ಈಶ್ವರಪ್ಪ

ನಗರದಲ್ಲಿ ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ನೀವು ಇಬ್ಬರೇ ಹೋಗ್ತೀನಿ ಅಂದ್ರೂ, ನಿಮ್ಮ ಕಾರ್ಯಕರ್ತರು ಬಿಡುವುದಿಲ್ಲ. ಜಿಲ್ಲಾ, ತಾಲ್ಲೂಕು ಪಂಚಾಯಿತಿ ಟಿಕೆಟ್‌ಗಾಗಿಯಾದರೂ ನಿಮ್ಮ ಹಿಂದೆ ಬರುವರು. ಅವರನ್ನೆಲ್ಲ ಏಕೆ ಸಾಯಿಸ್ತೀರಿ’ ಎಂದು ಪ್ರಶ್ನಿಸಿದರು.

‘ದೇವೇಗೌಡರು, ಯಡಿಯೂರಪ್ಪ, ಸಿದ್ದರಾಮಯ್ಯ ಸೇರಿದಂತೆ ಎಲ್ಲ ಹಿರಿಯರೂ ನಮ್ಮ ರಾಜ್ಯದ ಆಸ್ತಿ. ಸಿದ್ದರಾಮಯ್ಯ ಅವರನ್ನು ಕಳೆದುಕೊಳ್ಳಲು ನಮಗೆ ಇಷ್ಟವಿಲ್ಲ. ಕೋವಿಡ್ ಸಮಯದಲ್ಲಿ ಹಮ್ಮಿಕೊಂಡಿರುವ ನಿಮ್ಮ ಹೋರಾಟವನ್ನು ನಿಲ್ಲಿಸಿ’ ಎಂದು ಕಿವಿಮಾತು ಹೇಳಿದರು.

‘ಅಧಿಕಾರದಲ್ಲಿ ಇದ್ದಾಗ ಕೃಷ್ಣಾ, ಕಾವೇರಿ, ಮೇಕೆದಾಟು ಮರೆತು ಹೋಗಿತ್ತು. ಕೇಂದ್ರದಲ್ಲಿ ಸಾಕಷ್ಟು ವರ್ಷ ಅಧಿಕಾರದಲ್ಲಿ ಇದ್ದರೂ ಕಾಂಗ್ರೆಸ್ ಏನೂ ಮಾಡಲಿಲ್ಲ. ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ನಿಮಗೆ ಎಲ್ಲ ನೆನಪಾಗುತ್ತದೆ. ಈ ಹೋರಾಟವನ್ನು ಕೋವಿಡ್ ಮುಗಿದ ಮೇಲೆ ಮಾಡಿ, ಮೊದಲು ನೀವು ಬದುಕಿ. ರಾಜ್ಯದಲ್ಲಿ ವಿರೋಧ ಪಕ್ಷ ಇರಬೇಕು. ಇಲ್ಲದಿದ್ದರೆ ಮುಂದಿನ ಚುನಾವಣೆಯಲ್ಲಿ ವಿರೋಧ ಪಕ್ಷವೇ ಇಲ್ಲದಂತೆ ಆಗುತ್ತದೆ’ ಎಂದು ವ್ಯಂಗ್ಯವಾಡಿದರು.

‘ಕಾಂಗ್ರೆಸ್ ನಾಯಕರೇ ಹಟ ಬಿಡಿ’

ಬೆಂಗಳೂರು: ‘ಕಾಂಗ್ರೆಸ್ ನಾಯಕರು ಹಟ ತೊರೆದು, ಕೋವಿಡ್ ಸೋಂಕು ನಿಯಂತ್ರಣ ಕಾರ್ಯದಲ್ಲಿ ಸರ್ಕಾರದ ಜೊತೆಗೆ ಕೈಜೋಡಿಸಬೇಕು. ಯಾರೇ ನಿರ್ಬಂಧ ಉಲ್ಲಂಘಿಸಿದವರೂ ಅಂತಹವರ ವಿರುದ್ಧ ಕ್ರಮ ಜರುಗಿಸಲಾಗುವುದು’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಎಚ್ಚರಿಕೆ ನೀಡಿದರು.


ಆರಗ ಜ್ಞಾನೇಂದ್ರ

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ‘ರಾಜ್ಯದಲ್ಲಿ ಹೆಚ್ಚುತ್ತಿರುವ ಕೋವಿಡ್ ಸೋಂಕು ತಡೆಯಲು ವಿಧಿಸಿದ ನಿರ್ಬಂಧಗಳನ್ನು ಉಲ್ಲಂಘಿಸಿದವರ ವಿರುದ್ಧ ಪ್ರಕೃತಿ ವಿಕೋಪ ತಡೆ ಕಾಯ್ದೆಯಡಿ ಕ್ರಮ ತೆಗೆದುಕೊಳ್ಳಲೇಬೇಕಾಗುತ್ತದೆ’ ಎಂದರು.

‘ಕೋವಿಡ್ ಸಾಂಕ್ರಾಮಿಕ ಉಲ್ಬಣ ವಾಗುತ್ತಿರುವ ಈ ಸಂದರ್ಭದಲ್ಲಿ ಮುಂಜಾಗ್ರತಾ ಕ್ರಮವಾಗಿ ತೆಗೆದುಕೊಂಡ ನಿರ್ಬಂಧಗಳನ್ನು ಎಲ್ಲರೂ ಪಾಲಿಸಿ, ಸಹಕರಿಸಬೇಕು’ ಎಂದು ಹೇಳಿದರು.

‘ಮೇಕೆದಾಟು ಯೋಜನೆಗೆ ಸಂಬಧಿಸಿದ ವ್ಯಾಜ್ಯ ಸುಪ್ರಿಂಕೋರ್ಟ್‌ನಲ್ಲಿದೆ. ಕಾಂಗ್ರೆಸ್ಸಿನವರು ಸರ್ಕಾರ ನಡೆಸಿದವರು. ಅವರು ಜವಾಬ್ದಾರಿಯಿಂದ ವರ್ತಿಸಬೇಕು' ಎಂದರು.

‘ಅನಾರೋಗ್ಯ ಬಂದ ಬಳಿಕ ಸಮಸ್ಯೆ ಎದುರಿಸುವುದಕ್ಕಿಂತ ಬಾರದಂತೆ ತಡೆಯುವುದು ಅತ್ಯುತ್ತಮ ಪ್ರಯತ್ನ’ ಎಂದ ಸಚಿವರು, ‘ಕಾಂಗ್ರೆಸ್ ಪಾದಯಾತ್ರೆ ರಾಜಕೀಯ ಪ್ರೇರಿತ’ ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಚಿವರು, ‘ವಾರಾಂತ್ಯ ಕರ್ಫ್ಯೂ ಹಾಗೂ ನೈಟ್ ಕರ್ಫ್ಯೂ ಜಾರಿ ವೇಳೆ ಪೊಲೀಸರು ಅತ್ಯಂತ ಸಹನೆಯಿಂದ ವರ್ತಿಸಬೇಕು. ಸಾರ್ವಜನಿಕರೂ ಸಹಕರಿಸಬೇಕು' ಎಂದು ಮನವಿ ಮಾಡಿದರು.

ಪಾದಯಾತ್ರೆಗೆ ಚಾಲನೆ ದೊರೆಯಲಿರುವ ಸಂಗಮದಲ್ಲಿನ ಮುಖ್ಯ ವೇದಿಕೆ ಸಿದ್ಧತೆಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪರಿಶೀಲಿಸಿದರು –ಪ್ರಜಾವಾಣಿ ಚಿತ್ರ

ಕುತೂಹಲ ಘಟ್ಟದಲ್ಲಿ ಪಾದಯಾತ್ರೆ

ಒಂದನೇ ಪುಟದಿಂದ

ಸರ್ಕಾರ ಪ್ರತಿತಂತ್ರ: ರಾಜ್ಯ ಸರ್ಕಾರವು ಪಾದಯಾತ್ರೆ ಕೈಬಿಡುವಂತೆ ಒತ್ತಾಯಿಸಿ ಕಾಂಗ್ರೆಸ್ ನಾಯಕರ ಮೇಲೆ ನಾನಾ ತಂತ್ರ ಪ್ರಯೋಗಿಸತೊಡಗಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ರವಿಕುಮಾರ್ ತಮ್ಮೊಡನೆ ಮಾತನಾಡಿದ್ದಾಗಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಜಿಲ್ಲಾಡಳಿತವು ನೋಟಿಸ್ ನೀಡಿದ್ದು, ಕರ್ಫ್ಯೂ ಆದೇಶ ಮೀರಿ ಪಾದಯಾತ್ರೆ ನಡೆಸಿದಲ್ಲಿ ಕಾನೂನು ಕ್ರಮ ಜರುಗಿಸುವ ಎಚ್ಚರಿಕೆ ನೀಡಿದೆ.

ಶನಿವಾರ ಮಧ್ಯಾಹ್ನ ಸಂಗಮದಲ್ಲಿ, ಶಿವಕುಮಾರ್ ಅವರು ಕಾರ್ಯಕ್ರಮದ ವೇದಿಕೆ ಸಿದ್ಧತೆ ಪರಿಶೀಲಿಸುವ ವೇಳೆ ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್. ಗಿರೀಶ್ ಸ್ಥಳಕ್ಕೆ ಬಂದಿದ್ದು, ಅಲ್ಲಿನ ಹೋಟೆಲ್‌ನ ಕೊಠಡಿಯೊಂದರಲ್ಲಿ ಇಬ್ಬರೂ ರಹಸ್ಯವಾಗಿ ಮಾತುಕತೆ ನಡೆಸಿದ್ದಾರೆ.

‘ಜಿಲ್ಲಾಡಳಿತ ಈಗಾಗಲೇ ನಿಮಗೆ ನೋಟಿಸ್ ನೀಡಿದೆ. ಕರ್ಫ್ಯೂ ಇರುವ ಕಾರಣ ಪಾದಯಾತ್ರೆ ಕೈಬಿಡಿ’ ಎಂದು ಗಿರೀಶ್ ಮನವಿ ಮಾಡಿದರು. ಆದರೆ ಇದಕ್ಕೆ ಒಪ್ಪದ ಡಿಕೆಶಿ, ‘ನೀರಿಗಾಗಿ ಪಾದಯಾತ್ರೆ ನಡೆಸುವುದು ನಮ್ಮ ಹಕ್ಕು. ಇದಕ್ಕೆ ಅಡ್ಡಿಪಡಿಸುವ ಅಧಿಕಾರ ನಿಮ್ಮ ಜಿಲ್ಲಾಧಿಕಾರಿಗೂ ಇಲ್ಲ. ನೀವು ಏನು ಕ್ರಮ ಕೈಗೊಳ್ಳುತ್ತೀರೋ ಮಾಡಿ. ಎಲ್ಲದ್ದಕ್ಕೂ ಸಿದ್ಧರಿದ್ದೇವೆ’ ಎಂಬ ಸಂದೇಶ ನೀಡಿ ಕಳುಹಿಸಿದರು.

ಪರಿಣಾಮ ಬೀರದ ನಿಷೇಧಾಜ್ಞೆ: ಪಾದಯಾತ್ರೆ ಆರಂಭ ಆಗಲಿರುವ ಸಂಗಮ ಪ್ರದೇಶದಲ್ಲಿ ಜಿಲ್ಲಾಡಳಿತವು ಶನಿವಾರದಿಂದಲೇ ನಿಷೇಧಾಜ್ಞೆ ಜಾರಿಗೊಳಿಸಿತ್ತು. ಆದರೆ, ಮೊದಲ ದಿನ ಕನಿಷ್ಠ ಪೊಲೀಸ್ ಭದ್ರತೆಯೂ ಈ ಪ್ರದೇಶದಲ್ಲಿ ಇರಲಿಲ್ಲ. ಎಲ್ಲಿಯೂ ಚೆಕ್ ಪೋಸ್ಟ್ ಹಾಕಿರಲಿಲ್ಲ. ಸಾರ್ವಜನಿಕರ ಓಡಾಟಕ್ಕೆ ಮುಕ್ತ ಅವಕಾಶ ನೀಡಿತ್ತು. ನೂರಾರು ವಾಹನ ಓಡಾಡಿದರೂ ಪೊಲೀಸರು ಪ್ರಶ್ನಿಸುವ ಗೋಜಿಗೆ ಹೋಗಲಿಲ್ಲ. ಇದು ಅನುಮಾನಗಳಿಗೆ ಕಾರಣವಾಗಿದೆ.

ಭಾರಿ ಭದ್ರತೆ: ಪೊಲೀಸ್ ಇಲಾಖೆ ಎಲ್ಲ ರೀತಿಯ ಕ್ರಮಗಳಿಗೂ ಸನ್ನದ್ಧವಾಗಿದ್ದು, ಅದಕ್ಕೆ ಅಗತ್ಯವಾದ ಸಿಬ್ಬಂದಿಯನ್ನು ಆಯಾಕಟ್ಟಿನ ಸ್ಥಳಗಳಲ್ಲಿ ನಿಯೋಜಿಸಿದೆ. ರಾಮನಗರ ಎಸ್‌.ಪಿ ಗಿರೀಶ್ ನೇತೃತ್ವದಲ್ಲಿ ಇಬ್ಬರು ಹೆಚ್ಚುವರಿ ಎಸ್‌.ಪಿಗಳು ಪಾದಯಾತ್ರೆ ಭದ್ರತೆಯ ನೇತೃತ್ವ ವಹಿಸಲಿದ್ದಾರೆ. 7 ಕೆಎಸ್‌ಆರ್‌ಪಿ, ಎಂಟು ಡಿಎಆರ್ ತುಕಡಿಗಳು, ಎರಡು ಕೆಂಪೇಗೌಡ ಪಡೆ, 6 ಡಿವೈಎಸ್‌ಪಿ, 24 ಇನ್‌ಸ್ಪೆಕ್ಟರ್, 60 ಸಬ್ ಇನ್‌ಸ್ಪೆಕ್ಟರ್, 180 ಎಎಸ್‌ಐ, 1,200 ಕಾನ್‌ಸ್ಟೆಬಲ್‌ಗಳನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ.

ಮಂದಿರ, ಮಸೀದಿ ಸುತ್ತಿದ ಡಿಕೆಶಿ

ಮೇಕೆದಾಟು ಪಾದಯಾತ್ರೆ ಯಶಸ್ಸಿಗೆ ಪ್ರಾರ್ಥಿಸಿ ಡಿ.ಕೆ. ಶಿವಕುಮಾರ್ ಶನಿವಾರ ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿನ ಧಾರ್ಮಿಕ ಕ್ಷೇತ್ರಗಳಿಗೆ ಪ್ರದಕ್ಷಿಣೆ ಹಾಕಿದರು.

ಮೊದಲಿಗೆ ಮನೆದೇವರಾದ ಕೆಂಕೇರಮ್ಮನಿಗೆ ಪೂಜೆ ಸಲ್ಲಿಸಿದರು. ನಂತರ ಕರ್ಫ್ಯೂ ಕಾರಣಕ್ಕೆ ಬಾಗಿಲು ಮುಚ್ಚಿದ್ದ ಕಬ್ಬಾಳಮ್ಮ ದೇಗುಲವನ್ನು ಡಿಕೆಶಿ ಅವರಿಗಾಗಿ ತೆರೆಯಲಾಯಿತು. ಬಳಿಕ ಅವರು ಕನಕಪುರ ಜಾಮಿಯಾ ಮಸೀದಿ ಹಾಗೂ ಕುಪ್ಪೇದೊಡ್ಡಿಯ ಸೇಂಟ್ ತೆರೇಸಾ ಚರ್ಚ್‌ಗೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು.

ಕನಕಪುರದಲ್ಲೇ ವಾಸ್ತವ್ಯ

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ರಾಜ್ಯಸಭೆಯ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಕಾಂಗ್ರೆಸ್‌ನ ನಾಯಕರೆಲ್ಲರೂ ಶನಿವಾರ ರಾತ್ರಿ ಕನಕಪುರದಲ್ಲಿಯೇ ವಾಸ್ತವ್ಯ ಹೂಡಿದ್ದು, ಭಾನುವಾರ ಬೆಳಿಗ್ಗೆ 9ಕ್ಕೆ ಆರಂಭ ಆಗಲಿರುವ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಲಿದ್ದಾರೆ.

ಅವರಿಗಾಗಿ ಸಂಗಮದಲ್ಲಿ ಇರುವ ಕೆಎಸ್‌ಟಿಡಿಸಿ ಹೋಟೆಲ್‌ನಲ್ಲಿ ಕೊಠಡಿಗಳನ್ನು ಕಾಯ್ದಿರಿಸಲಾಗಿದೆ. ಇನ್ನಿತರ ಕೆಲವು ನಾಯಕರೂ ಇವರೊಟ್ಟಿಗೆ ತಂಗಲಿದ್ದಾರೆ. ಜೊತೆಗೆ ಕನಕಪುರ ಪ್ರಮುಖ ಹೋಟೆಲ್‌ಗಳಲ್ಲಿ ಕಾಂಗ್ರೆಸ್ ಮುಖಂಡರ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ.

ಶಾಸಕರೊಂದಿಗೆ ಸಭೆ

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಶನಿವಾರ ಸಂಜೆ ಕನಕಪುರದಲ್ಲಿ ಇರುವ ಡಿ.ಕೆ. ಶಿವಕುಮಾರ್ ನಿವಾಸದಲ್ಲಿ ಕಾಂಗ್ರೆಸ್ ಜನಪ್ರತಿನಿಧಿಗಳು ಹಾಗೂ ಕೆಪಿಸಿಸಿ ಪದಾಧಿಕಾರಿಗಳ ಸಭೆ ನಡೆಯಿತು. ಪಾದಯಾತ್ರೆ ನಡೆಯಲಿರುವ ರೀತಿ, ಒಂದು ವೇಳೆ ಸರ್ಕಾರ ಅಡ್ಡಿಪಡಿಸಿದಲ್ಲಿ ಮುಂದೆ ಕೈಗೊಳ್ಳಬಹುದಾದ ಪರ್ಯಾಯ ಮಾರ್ಗಗಳ ಕುರಿತು ಚರ್ಚೆ ನಡೆಯಿತು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಜಿ. ಪರಮೇಶ್ವರ, ಆರ್. ವಿ. ದೇಶಪಾಂಡೆ, ಎಚ್‌.ಕೆ. ಪಾಟೀಲ, ಎಂ.ಬಿ. ಪಾಟೀಲ ಸೇರಿದಂತೆ ಕಾಂಗ್ರೆಸ್ ಶಾಸಕರು, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಈಶ್ವರ ಖಂಡ್ರೆ, ಸಲೀಂ ಅಹಮ್ಮದ್, ರಾಮಲಿಂಗಾರೆಡ್ಡಿ, ಆರ್. ಧ್ರುವನಾರಾಯಣ, ಸಂಸದ ಡಿ.ಕೆ. ಸುರೇಶ್ ಇದ್ದರು.

ಕೆಟ್ಟ ಹೆಸರು ತರುವ ಪ್ರಯತ್ನ: ಶಿವಕುಮಾರ್

ಕನಕಪುರ (ರಾಮನಗರ): ‘ಅಧಿಕಾರಿಗಳಿಗೆ ಒತ್ತಡ ಹಾಕಿ, ಸೋಂಕಿತರ ಸಂಖ್ಯೆಯನ್ನು ಬೇಕಂತಲೇ ಏರಿಕೆ ಮಾಡಿ ನಮ್ಮ ಹೋರಾಟ ಹತ್ತಿಕ್ಕುವ ಪ್ರಯತ್ನ ನಡೆದಿದೆ. ಈ ಮೂಲಕ ನಮಗೆ ಕೆಟ್ಟ ಹೆಸರು ತರುವ ಪ್ರಯತ್ನ ನಡೆದಿದೆ. ನನ್ನನ್ನು ಬಂಧಿಸಿ ಬಟ್ಟೆ ಬಿಚ್ಚಿಸಿ ಜೈಲಿಗೆ ಹಾಕಿದರೂ ಪಾದಯಾತ್ರೆ ಮಾಡುವುದು ನಿಶ್ಚಿತ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕನಕಪುರದ ತಮ್ಮ ನಿವಾಸದಲ್ಲಿ ಶನಿವಾರ ರಾತ್ರಿ ಪಕ್ಷದ ಶಾಸಕಾಂಗ ಸದಸ್ಯರ ಸಭೆ ಬಳಿಕ ಪತ್ರಕರ್ತರ ಜೊತೆ ಅವರು ಮಾತನಾಡಿದರು.

‘ಅಂತರ ಕಾಪಾಡಿಕೊಳ್ಳುತ್ತೇವೆ. ಸ್ಯಾನಿಟೈಸರ್ ಬಳಕೆ ಮಾಡುತ್ತೇವೆ. ನೂರಾರು ವೈದ್ಯರ ಸೇವೆ ಪಡೆಯುತ್ತಿದ್ದೇವೆ. ನಾನು, ಸಿದ್ದರಾಮಯ್ಯ ಸೇರಿ ಮೈಸೂರಿನಲ್ಲಿ ಮಾಡಿದ್ದ ಘೋಷಣೆಗೆ ಈಗಲೂ ಬದ್ಧರಾಗಿದ್ದೇವೆ’ ಎಂದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ, ‘ನಾವು ಮೂರನೇ ಅಲೆ ಪ್ರಾರಂಭಕ್ಕೂ ಮುನ್ನವೇ ಹೋರಾಟದ ರೂಪರೇಷೆ ಸಿದ್ಧಪಡಿಸಿದ್ದೆವು. ಆದರೆ, ಕೋವಿಡ್ ಕರ್ಫ್ಯೂ ಹೆಸರಿನಲ್ಲಿ ರಾಜ್ಯ ಸರ್ಕಾರ ಅಧಿಕಾರ ದುರ್ಬಳಕೆ ನಡೆಸಿದೆ. ಹೋರಾಟ ಹತ್ತಿಕಲು ಬಿಜೆಪಿ ನಾನಾ ರೀತಿಯಲ್ಲಿ ಷಡ್ಯಂತ್ರ ಮಾಡುತ್ತಿದೆ. ನಾವು ಅದಕ್ಕೆ ತಕ್ಕ ಉತ್ತರ ನೀಡುತ್ತೇವೆ. ಕೋವಿಡ್ ನಿಯಮ ಪಾಲನೆ ಮಾಡುತ್ತಿರುವ ಬಗ್ಗೆ ಪರಿಶೀಲಿಸಿ, ಪೊಲೀಸರು ಕೇಸ್ ಹಾಕಬಹುದು ಅಷ್ಟೆ. ನಿಯಮ ಪಾಲಿಸಿದರೆ ಕೇಸ್ ಏಕೆ ಹಾಕುತ್ತಾರೆ’ ಎಂದು ಪ್ರಶ್ನೆಗೆ ಉತ್ತರಿಸಿದರು.

‘ಮೇಕೆದಾಟು ಹೋರಾಟ ಕುಡಿಯುವ ನೀರಿನ ಯೋಜನೆ. ಇದಕ್ಕೆ ಮೊದಲ ಆದ್ಯತೆ ನೀಡುವಂತೆ ಸುಪ್ರಿಂ ಕೋರ್ಟ್ ಸಹ ಹೇಳಿದೆ. ಇದು ನೀರಾವರಿ ಯೋಜನೆ ಅಲ್ಲ. ಈ ಯೋಜನೆಯಿಂದ ಬೆಂಗಳೂರಿಗರಿಗೆ ಮುಂದಿನ 50 ವರ್ಷ ಕಾಲ ನೀರಿನ ಬವಣೆ ಬರುವುದಿಲ್ಲ. ಎರಡೂವರೆ ಕೋಟಿ ಜನರಿಗೆ ಅನುಕೂಲವಾಗಲಿದೆ. ನಾವು ಇಲ್ಲಿ ರಾಜಕೀಯ ಮಾಡುತ್ತಿಲ್ಲ. ನೀರಿಗಾಗಿ ಹೋರಾಟ ಮಾಡುತ್ತಿದ್ದೇವೆ’ ಎಂದರು.

ಎಂಜಿನಿಯರಿಂಗ್: 23 ಸಾವಿರ ಸೀಟು ಖಾಲಿ

ಒಂದನೇ ಪುಟದಿಂದ

‘ಯುಜಿ–ನೀಟ್ ಕೌನ್ಸೆಲಿಂಗ್‌ಗೆ ಸುಮಾರು 30 ಸಾವಿರ ವಿದ್ಯಾರ್ಥಿಗಳು ನೋಂದಣಿ ಮಾಡಿಸಿಕೊಂಡಿದ್ದಾರೆ. ಇವರಲ್ಲಿ ಕನಿಷ್ಠ 25 ಸಾವಿರ ವಿದ್ಯಾರ್ಥಿಗಳು ಎಂಜಿನಿಯರಿಂಗ್ ಸೀಟುಗಳನ್ನು ಕರ್ನಾಟಕದ ಕಾಲೇಜುಗಳಲ್ಲಿ ಪಡೆದಿದ್ದಾರೆ. ಇವರಿಗೆ ವೈದ್ಯಕೀಯ, ದಂತ ವೈದ್ಯಕೀಯ ಅಥವಾ ಇತರ ಯಾವುದಾದರೂ ಕೋರ್ಸ್ ಲಭ್ಯವಾದರೂ ಆ ಸೀಟುಗಳು ಭರ್ತಿಯಾಗದೆ ಖಾಲಿ ಉಳಿಯಲಿವೆ. ಹೀಗಾದಲ್ಲಿ, ಒಟ್ಟಾರೆ ಖಾಲಿ ಉಳಿಯುವ ಸಂಖ್ಯೆ 30 ಸಾವಿರ ದಾಟಬಹುದು ‘ ಎಂದು ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

ಈ ವರ್ಷ ವಿದ್ಯಾರ್ಥಿಗಳಿಗೆ 64,484 ಎಂಜಿನಿಯರಿಂಗ್ ಸೀಟುಗಳು ಲಭ್ಯವಿದ್ದವು. ಇವುಗಳಲ್ಲಿ 48,027 ಸೀಟುಗಳನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡಿದ್ದರು. ಆದರೆ, ಇವರಲ್ಲಿ 41,483 ವಿದ್ಯಾರ್ಥಿಗಳು ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದಾರೆ.

ಕರ್ನಾಟಕದಲ್ಲಿ ಸುಮಾರು 230 ಎಂಜಿನಿಯರಿಂಗ್ ಕಾಲೇಜುಗಳಿವೆ. ಇವುಗಳಲ್ಲಿ 11 ಸರ್ಕಾರಿ ಕಾಲೇಜುಗಳಿವೆ. ಸಿವಿಲ್ ಮತ್ತು ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗಗಳಲ್ಲೇ ಅತಿ ಹೆಚ್ಚು ಸೀಟುಗಳು ಖಾಲಿ ಉಳಿದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶೈಕ್ಷಣಿಕ ವರ್ಷ	ಲಭ್ಯ ಸೀಟುಗಳು	ಖಾಲಿ ಸೀಟುಗಳು
2017	54,100	19,000
2018	50,185	20,150
2019	55,640	21,360
2020	56,760	22,800
2021	64,484	23,001

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನಿಯಮ ಉಲ್ಲಂಘನೆ: ದೋಣಿ ವಿಹಾರಿಗಳ ವಿರುದ್ಧ ಪ್ರಕರಣ

ಹೊನ್ನಾವರ: ವಾರಾಂತ್ಯದ ಕರ್ಫ್ಯೂ ಹಾಗೂ ಕೋವಿಡ್ ನಿಯಮ ಉಲ್ಲಂಘಿಸಿ ಶನಿವಾರ ಶರಾವತಿ ನದಿಯಲ್ಲಿ ದೋಣಿ ವಿಹಾರಕ್ಕೆ ತೆರಳಿದ್ದ ಐದು ಜನರ ವಿರುದ್ಧ ಇಲ್ಲಿನ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ತಾಲ್ಲೂಕಿನ ಸಾನಾಮೋಟಾದ ಅಮ್ಮೂಸ್ ತಿಮ್ಮಪ್ಪ ಗೌಡ, ಸಾಲೆಹಿತ್ತಲಿನ ಗಜಾನನ ಶಂಭು ಗೌಡ, ಬೆಂಗಳೂರಿನ ಸಿ.ಪಳನಿಚಂದ್ರನ್ ಎಸ್., ಗೌತಮ ಯು., ಉಮಾಪತಿ ವಿ. ಹಾಗೂ ಸೌಮ್ಯಾ ಕೆ ವಿರುದ್ಧ ಪ್ರಕರಣ ದಾಖಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ವೀರಾಂಜನೇಯ ಹೆಸರಿನ ದೋಣಿಯೊಂದನ್ನು ವಶಪಡಿಸಿಕೊಳ್ಳಲಾಗಿದೆ.

ವಿದ್ಯಾರ್ಥಿನಿ ವಿವಸ್ತ್ರಗೊಳಿಸಿದ್ದ ಮುಖ್ಯ ಶಿಕ್ಷಕಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಮಂಡ್ಯ: ಶ್ರೀರಂಗಪಟ್ಟಣ ತಾಲ್ಲೂಕು ಸರ್ಕಾರಿ ಪ್ರೌಢಶಾಲೆಯೊಂದರಲ್ಲಿ ವಿದ್ಯಾರ್ಥಿನಿಯನ್ನು ವಿವಸ್ತ್ರಗೊಳಿಸಿ ಥಳಿಸಿದ ಆರೋಪದ ಮೇಲೆ ಅಮಾನತುಗೊಂಡಿರುವ ಮುಖ್ಯ ಶಿಕ್ಷಕಿ ಸ್ನೇಹಲತಾ ವಿರುದ್ಧ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆಯಲ್ಲಿ ಶನಿವಾರ ಎಫ್‌ಐಆರ್ ದಾಖಲಾಗಿದೆ.

‘ಮಕ್ಕಳ ನ್ಯಾಯ ರಕ್ಷಣೆ ಮತ್ತು ಪೋಷಣೆ ಕಾಯ್ದೆ (ಜೆಜೆ ಆ್ಯಕ್ಟ್) ಅಡಿ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು’ ಎಂದು ಸಹಾಯಕ ಮಕ್ಕಳ ರಕ್ಷಣಾಧಿಕಾರಿ ಅಮೃತಾ ವಿ ಕುರಣೆ ದೂರು ನೀಡಿದ್ದರು.

ವಿದ್ಯಾರ್ಥಿನಿ ಮೊಬೈಲ್ ಫೋನ್ ತಂದಿದ್ದಾಳೆ ಎಂಬ ಕಾರಣಕ್ಕೆ ಡಿ.22 ರಂದು ಮುಖ್ಯ ಶಿಕ್ಷಕಿ ಸ್ನೇಹಲತಾ, ಆಕೆಯನ್ನು ವಿವಸ್ತ್ರಗೊಳಿಸಿ, ಥಳಿಸಿ ದೌರ್ಜನ್ಯ ಎಸಗಿದ್ದರು. ಊಟಕ್ಕೂ ಬಿಡದೇ ಹಿಂಸಿಸಿದ್ದರು ಎಂಬ ಆರೋಪದ ಕುರಿತು ಪೋಷಕರಾಗಲೀ, ಸಹಶಿಕ್ಷಕರಾಗಲೀ ಪೊಲೀಸರಿಗೆ ದೂರು ನೀಡಿಲ್ಲ.

ಪೌಷ್ಟಿಕ ಆಹಾರದ ಪೊಟ್ಟಣದಲ್ಲಿ ₹1.5 ಕೋಟಿ ಮೌಲ್ಯದ ಡ್ರಗ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳಿಗಾಗಿಯೇ ವಿಶೇಷವಾಗಿ ತಯಾರಿಸುವ ನೆಸ್ಲೆ ಕಂಪನಿಯ ರಾಗಿ ಹಿಟ್ಟಿನ ಪೊಟ್ಟಣಗಳಲ್ಲಿ ಮಾದಕ ವಸ್ತುಗಳನ್ನು ಅಡಗಿಸಿ ಸಾಗಾಣೆ ಮಾಡುತ್ತಿದ್ದ ಉಗಾಂಡದ ಮಹಿಳೆಯನ್ನು ಎನ್‌ಸಿಬಿ ಅಧಿಕಾರಿಗಳು ಹುಬ್ಬಳ್ಳಿ ರೈಲ್ವೆ ನಿಲ್ದಾಣದಲ್ಲಿ ಶುಕ್ರವಾರ ಬಂಧಿಸಿದ್ದಾರೆ.

‘ನಗ್ಗಾಯ್ ಅಗ್ನಿಸ್ (30) ಬಂಧಿತ ಮಹಿಳೆ. ಈಕೆಯಿಂದ ₹1.5 ಕೋಟಿ ಮೌಲ್ಯದ 995 ಗ್ರಾಂ ಮೆಟಾಂಪೆಟಮೈನ್ ಮಾದಕ ವಸ್ತು ಜಪ್ತಿ ಮಾಡಲಾಗಿದೆ’ ಎಂದು ಎನ್‌ಸಿಬಿ ಬೆಂಗಳೂರು ವಲಯದ ಅಧಿಕಾರಿಗಳು ತಿಳಿಸಿದ್ದಾರೆ.

‘ದೆಹಲಿಯಿಂದ ರೈಲಿನ ಮೂಲಕ ಬೆಂಗಳೂರಿಗೆ ದೊಡ್ಡ ಮೊತ್ತದ ಮಾದಕ ವಸ್ತು ಸಾಗಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ಲಭಿಸಿತ್ತು. ಹೀಗಾಗಿ ತಂಡವೊಂದು ಹುಬ್ಬಳ್ಳಿಗೆ ಹೋಗಿ ರೈಲು ನಿಲ್ದಾಣದ ಅಧಿಕಾರಿಗಳನ್ನು ಸಂಪರ್ಕಿಸಿತ್ತು. ಅವರ ಜೊತೆ ಚರ್ಚಿಸಿ ದೆಹಲಿಯಿಂದ ಯಶವಂತಪುರಕ್ಕೆ ಬರುತ್ತಿದ್ದ ಹಜರತ್ ನಿಜಾಮುದ್ದಿನ್ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 12630) ರೈಲಿನ ಪರಿಶೀಲನೆ ನಡೆಸಿತ್ತು. ಬೋಗಿಯೊಂದರಲ್ಲಿ ಕುಳಿತಿದ್ದ ಮಹಿಳೆ ಅಧಿಕಾರಿಗಳನ್ನು ಕಂಡೊಡನೆ ಬೇರೆಡೆಗೆ ಎದ್ದು ಹೋಗಲು ಮುಂದಾಗಿದ್ದಳು. ಅನುಮಾನಗೊಂಡ ಅಧಿಕಾರಿಗಳು ಆಕೆಯನ್ನು ತಡೆದು ಬ್ಯಾಗ್ ಪರಿಶೀಲಿಸಿದ್ದರು’ ಎಂದು ಅವರು ವಿವರಿಸಿದ್ದಾರೆ.

‘ಆಕೆಯ ಬ್ಯಾಗ್‌ನಲ್ಲಿ ನೆಸ್ಲೆ ಕಂಪನಿಯ ಎರಡು ಪೊಟ್ಟಣಗಳಿದ್ದವು. ಅವುಗಳನ್ನು ತೆರೆದು ನೋಡಿದಾಗ ತಲಾ 497.5 ಗ್ರಾಂ ಮೆಟಾಂಪೆಟಮೈನ್ ಪತ್ತೆಯಾಗಿತ್ತು. ತಪಾಸಣೆ ವೇಳೆ ಅಧಿಕಾರಿಗಳಿಗೆ ಗೊತ್ತಾಗಬಾರದು ಎಂಬ ಕಾರಣಕ್ಕೆ ಅವುಗಳನ್ನು ಕಪ್ಪು ಬಣ್ಣದ ಕವರ್‌ನಲ್ಲಿ ಅಡಗಿಸಿಡಲಾಗಿತ್ತು. ಇದನ್ನು ಬೆಂಗಳೂರು ಹಾಗೂ ರಾಜ್ಯದ ಇತರ ಭಾಗಗಳಲ್ಲಿ ನಡೆಯುವ ಪಾರ್ಟಿಗಳಿಗೆ ಸರಬರಾಜು ಮಾಡಲು ತಂದಿರಬಹುದು ಎಂಬ ಅನುಮಾನವಿದೆ’ ಎಂದರು.

‘ಮಹಿಳೆಯು ಡ್ರಗ್ಸ್ ಜಾಲದಲ್ಲಿ ಸಕ್ರಿಯಳಾಗಿರುವುದು ಗೊತ್ತಾಗಿದೆ. ಆಕೆ ಯಾರೊಂದಿಗೆಲ್ಲಾ ಸಂಪರ್ಕದಲ್ಲಿದ್ದಳು ಎಂಬುದರ ಕುರಿತು ವಿಚಾರಣೆ ನಡೆಸಲಾಗುತ್ತಿದೆ. ಆಕೆ ಭಾರತಕ್ಕೆ ಬಂದಿದ್ದು ಹೇಗೆ. ತಾನು ತಂದ ಡ್ರಗ್ಸ್ ಅನ್ನು ಯಾರಿಗೆ ಪೂರೈಕೆ ಮಾಡಲು ಮುಂದಾಗಿದ್ದಳು ಎಂಬ ಮಾಹಿತಿಗಳನ್ನೂ ಕಲೆಹಾಕಲಾಗುತ್ತಿದೆ. ಎನ್‌ಡಿಪಿಎಸ್ ಕಾಯ್ದೆಯ ಅಡಿ ಪ್ರಕರಣ ದಾಖಲಿಸಿದ್ದು, ಆಕೆಯನ್ನು ಧಾರವಾಡದ ಜಿಲ್ಲಾ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ’ ಎಂದೂ ಮಾಹಿತಿ ನೀಡಿದರು.

ಕೋವಿಡ್ ಮಾರ್ಗಸೂಚಿ ಉಲ್ಲಂಘನೆ

ಕರ್ಫ್ಯೂ ನಡುವೆ ಭರ್ಜರಿ ಕುರಿ ಸಂತೆ

ಪ್ರಜಾವಾಣಿ ವಾರ್ತೆ

ಕೊರಟಗೆರೆ (ತುಮಕೂರು): ರಾಜ್ಯದಲ್ಲಿಯೇ ಅತಿ ಹೆಚ್ಚು ಕುರಿ, ಮೇಕೆ ವಹಿವಾಟು ನಡೆಯುವ ತಾಲ್ಲೂಕಿನ ಅಕ್ಕಿರಾಂಪುರ ಸಂತೆಯಲ್ಲಿ ಶನಿವಾರ ವಾರಾಂತ್ಯ ಕರ್ಫ್ಯೂ ನಡುವೆಯೂ ಭರ್ಜರಿ ವಹಿವಾಟು ನಡೆಯಿತು.

ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿ ನೂರಾರು ಜನರು ಗುಂಪು, ಗುಂಪಾಗಿ ಸಂತೆಯಲ್ಲಿ ಕುರಿ, ಮೇಕೆ ಮಾರಾಟ ಹಾಗೂ ಖರೀದಿಯಲ್ಲಿ ತೊಡಗಿರುವುದು ಕಂಡುಬಂತು.

ಕೊರಟಗೆರೆ ತಾಲ್ಲೂಕಿನ ಅಕ್ಕಿರಾಂಪುರ ಕುರಿ, ಮೇಕೆ ಸಂತೆಯಲ್ಲಿ ಸೇರಿದ್ದ ಜನ

ಅಕ್ಕಿರಾಂಪುರದಲ್ಲಿ ಪ್ರತಿ ಶನಿವಾರ ಕುರಿ, ಮೇಕೆ ಸಂತೆ ನಡೆಯುತ್ತದೆ. ಸಂತೆ ಮೈದಾನಕ್ಕೆ ನಿರ್ಬಂಧ ಹೇರಿದ್ದರಿಂದ ಅಕ್ಕಿರಾಂಪುರ– ಹೊಳವನಹಳ್ಳಿ ಮುಖ್ಯ ರಸ್ತೆಯಲ್ಲೆ ರೈತರು ಹಾಗೂ ಗ್ರಾಹಕರು ವಹಿವಾಟು ನಡೆಸಿದರು.

ಮುಂದಿನ ವಾರದ ಸಂಕ್ರಾಂತಿ ಹಿನ್ನೆಲೆಯಲ್ಲಿ ವ್ಯಾಪಾರ ಜೋರಾಗಿ ನಡೆಯಬೇಕಿತ್ತು. ಕರ್ಫ್ಯೂ ಕಾರಣ ವಹಿವಾಟು ತುಸು ಮಂಕಾಗಿತ್ತು. ಯಾವುದೇ ಹಬ್ಬಕ್ಕೆ ಮೊದಲು ನಡೆಯುವ ಸಂತೆಯಲ್ಲಿ ಮರಿಗಳ ವ್ಯಾಪಾರ ದೊಡ್ಡ ಮಟ್ಟದಲ್ಲಿ ನಡೆಯುತ್ತದೆ.

‘ಏಕಾಏಕಿ ಲಾಕ್‌ಡೌನ್, ಕರ್ಫ್ಯೂ ಹೇರಿದರೆ ಬದುಕು ಸಂಕಷ್ಟಕ್ಕೆ ಸಿಲುಕುತ್ತದೆ. ಎರಡು ವರ್ಷಗಳಿಂದ ಕೋವಿಡ್ ನಿರ್ಬಂಧ, ಲಾಕ್‌ಡೌನ್‌ನಿಂದಾಗಿ ಸಾಕಷ್ಟು ಹೈರಾಣಾಗಿದ್ದೇವೆ. ಅನೇಕ ಕುರಿ, ಮೇಕೆಗಳು ರೋಗದಿಂದ ಸತ್ತವು. ಈಗ ಇರುವ ಮರಿಗಳನ್ನು ಮಾರಿ ಜೀವನ ಸಾಗಿಸೋಣ ಎಂದರೆ ಕರ್ಫ್ಯೂ ಅಡ್ಡ ಬಂದಿದೆ. ಇದರಿಂದ ಮರಿಗಳಿಗೆ ಬೇಡಿಕೆ ಇಲ್ಲವಾಗಿದೆ. ಗ್ರಾಹಕರು ಕೇಳಿದ ಬೆಲೆಗೆ ಮಾರಾಟ ಮಾಡಬೇಕಾದ ಅನಿವಾರ್ಯತೆ ಇದೆ’ ಎನ್ನುತ್ತಾರೆ ರೈತರಾದ ನಾಗರೆಡ್ಡಿ ಮತ್ತು ಚಂದ್ರಣ್ಣ.

ಕರ್ಫ್ಯೂ ನಡುವೆ ಮೂರ್ತಿ ಪ್ರತಿಷ್ಠಾಪನೆ

ಪ್ರಜಾವಾಣಿ ವಾರ್ತೆ

ಸೋಮವಾರಪೇಟೆ: ವಾರಾಂತ್ಯ ಕರ್ಫ್ಯೂ ನಡುವೆಯೂ ಇಲ್ಲಿನ ಕಿಬ್ಬೆಟ್ಟ ಅಯ್ಯಪ್ಪ ಕಾಲೋನಿಯಲ್ಲಿ ಶನಿವಾರ ಗಣಪತಿ, ಭಗವತಿ ಮತ್ತು ಅಯ್ಯಪ್ಪ ಸ್ವಾಮಿ ಪ್ರತಿಷ್ಠಾಪನೆ ಕಾರ್ಯದಲ್ಲಿ ನೂರಾರು ಭಕ್ತರು ಪಾಲ್ಗೊಂಡರು.

ಕೇರಳ ಕಣ್ಣೂರಿನ ಬ್ರಹ್ಮಶ್ರೀ ಹರಿಕೃಷ್ಣನ್ ನಂಬೂದರಿ ಮಾರ್ಗದರ್ಶನದಲ್ಲಿ ಮೂರ್ತಿಗಳ ಪ್ರತಿಷ್ಠಾಪನೆ ನಡೆಯಿತು. ವಿರಾಜಪೇಟೆ ಅರಮೇರಿ ಕಳಂಚೇರಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಕೊಡ್ಲಿಪೇಟೆ ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ ಮೂರ್ತಿ ಉಪಸ್ಥಿತರಿದ್ದರು.

ಕೋವಿಡ್: ಶೇ 5.42ಕ್ಕೇರಿದ ಸೋಂಕು ದೃಢ ಪ್ರಮಾಣ

ಒಂದನೇ ಪುಟದಿಂದ

ದಕ್ಷಿಣ ಕನ್ನಡದಲ್ಲಿ 295, ಮೈಸೂರಿನಲ್ಲಿ 203, ಉಡುಪಿಯಲ್ಲಿ 186, ಮಂಡ್ಯದಲ್ಲಿ 183, ಹಾಸನದಲ್ಲಿ 139 ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ 111 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ಕ್ಕಿಂತ ಕಡಿಮೆ ಇವೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30.39 ಲಕ್ಷ ದಾಟಿದೆ.

ಸೋಂಕಿತರಲ್ಲಿ 505 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.63 ಲಕ್ಷ ದಾಟಿದೆ. ಬೆಂಗಳೂರಿನಲ್ಲಿ 32,157 ಸಕ್ರಿಯ ಪ್ರಕರಣಗಳಿವೆ. ದಕ್ಷಿಣ ಕನ್ನಡದಲ್ಲಿ 994 ಮಂದಿ, ಉಡುಪಿಯಲ್ಲಿ 716 ಮಂದಿ ಹಾಗೂ ಮೈಸೂರಿನಲ್ಲಿ 672 ಸೋಂಕಿತರಿದ್ದಾರೆ. ಮಂಡ್ಯ, ಹಾಸನ, ಬೆಳಗಾವಿ, ಬಳ್ಳಾರಿ, ಕೋಲಾರ, ಕೊಡಗು, ಧಾರವಾಡ, ತುಮಕೂರು, ಶಿವಮೊಗ್ಗ ಹಾಗೂ ಕಲಬುರಗಿ ಜಿಲ್ಲೆಯಲ್ಲಿ 200ಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿವೆ.

ದೈನಂದಿನ ಕೋವಿಡ್ ಪ್ರಕರಣ ಏರಿಕೆ

ದಿನಾಂಕ 2022	ಪ್ರಕರಣ	ಸೋಂಕು ದೃಢ ಪ್ರಮಾಣ(%)	ಮರಣ ಪ್ರಕರಣ
ಜ.1	1,033	0.86	05
ಜ.2	1,187	1.08	06
ಜ.3	1,290	1.60	05
ಜ.4	2,479	2.59	04
ಜ.5	4,246	3.33	02
ಜ.6	5,031	3.95	01
ಜ.7	8,449	4.15	04
ಜ.8	8,906	5.42	04

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಮೂವರು ಹಾಗೂ ಕಲಬುರಗಿಯಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 0.04 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,366ಕ್ಕೆ ಏರಿಕೆಯಾಗಿದೆ.

ಕೋವಿಡ್ ಸೋಂಕಿತ ಮಗನನ್ನು ಡಿಕ್ಕಿಯೊಳಗೆ ಕೂರಿಸಿದ್ದ ತಾಯಿ ಬಂಧನ

ಹ್ಯೂಸ್ಟನ್: ಕೋವಿಡ್–19 ದೃಢಪಟ್ಟಿದ್ದ ಮಗನಿಂದ ತನ್ನನ್ನು ರಕ್ಷಿಸಿಕೊಳ್ಳಲು ಕಾರಿನ ಡಿಕ್ಕಿಯೊಳಗೆ ಲಾಕ್ ಮಾಡಿ ಪ್ರಾಣವನ್ನು ಅಪಾಯಕ್ಕೆ ಸಿಲುಕಿಸಿದ ಆರೋಪದ ಮೇಲೆ ಅಮೆರಿಕದ ಟೆಕ್ಸಾಸ್‌ನಲ್ಲಿ ಶಿಕ್ಷಕಿಯೊಬ್ಬರನ್ನು ಬಂಧಿಸಲಾಗಿದೆ.

41 ವರ್ಷದ ಸಾರಾ ಬೀಮ್ ಎಂಬುವವರನ್ನು ಬಂಧಿಸಲಾಗಿದೆ ಎಂದು‘ಹ್ಯೂಸ್ಟನ್ ಕ್ರೊನಿಕಲ್’ ದೈನಿಕ ವರದಿ ಮಾಡಿದೆ.

ಶಿಕ್ಷಕಿಯ 13 ವರ್ಷದ ಮಗನಿಗೆ ಕೋವಿಡ್–19 ದೃಢಪಟ್ಟಿತ್ತು. ಆತನಿಗೆ ಮತ್ತೊಂದು ಪರೀಕ್ಷೆಯನ್ನು ನಡೆಸಲು ಅವರು ಹ್ಯಾರಿಸ್ ಕಂಟ್ರಿಗೆ ತೆರಳುವಾಗ ಜ. 3ರಂದು ಆತನನ್ನು ಕಾರಿನ ಡಿಕ್ಕಿಯೊಳಗೆ ಕೂರಿಸಿ ಕರೆದೊಯ್ಯುತ್ತಿದ್ದರು.

ಡಿಕ್ಕಿಯಿಂದ ಬರುತ್ತಿದ್ದ ಧ್ವನಿಯನ್ನು ಕೇಳಿದ ಕೆಲವರು, ಶಿಕ್ಷಕಿ ಯನ್ನು ವಿಚಾರಿಸಿ ಡಿಕ್ಕಿಯನ್ನು ತೆರೆದಾಗ ಒಳಗೆ ಆಕೆಯ ಮಗ ಮಲಗಿದ್ದು ಪತ್ತೆಯಾಯಿತು ಎಂದು ಪತ್ರಿಕೆ ವರದಿ ಮಾಡಿದೆ.

ಸೋಂಕು ಹೆಚ್ಚಳ: ಕೋವಿಡ್ ಮಾರ್ಗಸೂಚಿ ಪಾಲಿಸಲು ಜನರಿಗೆ ಕೇಂದ್ರ ಸರ್ಕಾರದ ಸೂಚನೆ

‘ಒಮೈಕ್ರಾನ್‌ನಿಂದಲೇ ಮೂರನೇ ಅಲೆ’

ನವದೆಹಲಿ (ಪಿಟಿಐ): ಕೊರೊನಾ ವೈರಾಣುವಿನ ಹೊಸ ರೂಪಾಂತರಿ ತಳಿ ಒಮೈಕ್ರಾನ್ ಸೋಂಕು ವೇಗವಾಗಿ ಹರಡುತ್ತಿದ್ದು ಎಲ್ಲಾ ರಾಜ್ಯಗಳಲ್ಲೂ ಕೋವಿಡ್–19 ಮೂರನೇ ಅಲೆಗೆ ಕಾರಣವಾಗುತ್ತಿದೆ ಎಂದು ಇತ್ತೀಚಿನ ಅಂಕಿಅಂಶಗಳನ್ನು ಆಧರಿಸಿ ಅಧಿಕೃತ ಮೂಲಗಳು ಶನಿವಾರ ತಿಳಿಸಿವೆ.

ಕೆಲವೇ ದಿನಗಳ ಕೆಳಗೆ ದೇಶದ ಪೂರ್ವಭಾಗದಲ್ಲಿ ಮಾತ್ರ ಒಮೈಕ್ರಾನ್ ಸೋಂಕಿನ ಕಾರಣ ಕೋವಿಡ್ ಪ್ರಕರಣಗಳಲ್ಲಿ ಹೆಚ್ಚಳವಾಗಿತ್ತು. ಪಶ್ಚಿಮ ಬಂಗಾಳ, ಛತ್ತೀಸಗಡ ಮತ್ತು ಒಡಿಶಾ ಸೇರಿ ಈಶಾನ್ಯ ಭಾಗದ ರಾಜ್ಯಗಳಲ್ಲಿ ಡೆಲ್ಟಾ ತಳಿ ಸೋಂಕು ಪ್ರಮುಖವಾಗಿ ಕಂಡುರುತ್ತಿತ್ತು. ಆದರೆ ಈಶಾನ್ಯ ರಾಜ್ಯಗಳಲ್ಲೂ ಒಮೈಕ್ರಾನ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿ ಆಗಿವೆ. ಕೋವಿಡ್–19 ಮೂರನೇ ಅಲೆ ಒಮೈಕ್ರಾನ್ ತಳಿಯಿಂದಲೇ ಬರುತ್ತದೆ ಎಂದು ಈ ಎಲ್ಲಾ ಕಾರಣಗಳಿಂದಾಗಿ ಹೇಳಬಹುದಾಗಿದೆ ಎಂದು ಮೂಲಗಳು ತಿಳಿಸಿವೆ.

ಒಂದೇ ದಿನದಲ್ಲಿ 1.41 ಲಕ್ಷ ಕೋವಿಡ್ ಪ್ರಕರಣಗಳು ದೇಶದಲ್ಲಿ ಪತ್ತೆ ಆಗಿವೆ. ಶನಿವಾರದ ಹೊತ್ತಿಗೆ ದೇಶದಲ್ಲಿ ಒಟ್ಟು 3.53 ಕೋಟಿ ಪ್ರಕರಣಗಳು ವರದಿಯಾಗಿವೆ ಎಂದು ಆರೋಗ್ಯ ಸಚಿವಾಲಯದ ದತ್ತಾಂಶ ಹೇಳಿದೆ.

ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸಲು ಜನರಿಗೆ ಸರ್ಕಾರ ಸೂಚನೆ ನೀಡಿದೆ.

ಆಸ್ಪತ್ರೆ ಸೇರಿ ಇತರ ಮೂಲಸೌಕರ್ಯಗಳ ಸ್ಥಿತಿಗತಿಗಳ ಕುರಿತು ಪರಿಶೀಲನೆ ನಡೆಸುವಂತೆ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳಿಗೆ ಕೇಂದ್ರ ಸರ್ಕಾರವು ನಿರ್ದೇಶನ ನೀಡಿದೆ.

ಕೋವಿಡ್ ಹರಡುವಿಕೆ ತಡೆಗೆ ಹೇರಲಾಗಿರುವ ವಾರಾಂತ್ಯ ಕರ್ಫ್ಯೂ ಕಾರಣ ದೆಹಲಿಯ ಖಾರಿ ಬಾವೊಲಿ ಬೀದಿಯು ಶನಿವಾರ ನಿರ್ಜನವಾಗಿತ್ತು –ಪಿಟಿಐ ಚಿತ್ರ

‘ಎರಡು ಕೋಟಿ ಮಕ್ಕಳಿಗೆ ಲಸಿಕೆ’

15ರಿಂದ 18 ವರ್ಷದೊಳಗಿನ ಸುಮಾರು ಎರಡು ಕೋಟಿಗೂ ಹೆಚ್ಚು ಮಕ್ಕಳಿಗೆ ಕೋವಿಡ್–19 ಲಸಿಕೆಯ ಮೊದಲ ಡೋಸ್ ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ಶನಿವಾರ ತಿಳಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ‘ನನ್ನ ಯುವ ಮಿತ್ರರೇ, ಇದು ಉತ್ತಮ ಬೆಳವಣಿಗೆ. ಮಕ್ಕಳಿಗೆ ಲಸಿಕೆ ನೀಡುವ ಅಭಿಯಾನ ಆರಂಭಿಸಿ ಒಂದು ವಾರ ಕಳೆಯುವಷ್ಟರಲ್ಲಿ 15ರಿಂದ 18 ವರ್ಷದೊಳಗಿನ ಸುಮಾರು ಎರಡು ಕೋಟಿ ಯುವಜನರು ಮೊದಲ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ’ ಎಂದಿದ್ದಾರೆ.

ಕಳೆದ 24 ಗಂಟೆಗಳಲ್ಲಿ 90.59 ಲಕ್ಷ ಡೋಸ್ ಲಸಿಕೆ ನೀಡಲಾಗಿದೆ. ದೇಶದಲ್ಲಿ ಈ ವರೆಗೆ 150.61 ಕೋಟಿ ಡೋಸ್ ಲಸಿಕೆ ನೀಡಲಾಗಿದೆ ಎಂದು ಅವರು ಹೇಳಿದರು.

ಆರೋಗ್ಯ ಸಚಿವಾಲಯದ ಪ್ರಕಾರ, ದೇಶದ ಶೇ 91ಕ್ಕಿಂತ ಹೆಚ್ಚು ವಯಸ್ಕರು ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ. ಶೇ 66ರಷ್ಟು ವಯಸ್ಕರು ಎರಡೂ ಡೋಸ್ ಲಸಿಕೆ ಪಡೆದಿದ್ದಾರೆ.

ಸೌಮ್ಯ ಎಂದು ನಿರ್ಲಕ್ಷಿಸುವಂತಿಲ್ಲ: ಡಬ್ಲ್ಯುಎಚ್‌ಒ

ಏಷ್ಯಾದ ನೈಋತ್ಯ ಭಾಗದ ದೇಶಗಳಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚಾಗುತ್ತಿರುವ ಕಾರಣದಿಂದ ಸಾರ್ವಜನಿಕ ಆರೋಗ್ಯ ಮತ್ತು ಅಂತರ ಕಾಯ್ದುಕೊಳ್ಳುವಿಕೆಯ ವಿಚಾರದಲ್ಲಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವಂತೆ ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಶನಿವಾರ ಕರೆ ನೀಡಿದೆ.

ಒಮೈಕ್ರಾನ್ ರೂಪಾಂತರಿ ತಳಿಯ ಸೋಂಕು ಸೌಮ್ಯ ಎಂದು ಕಂಡುಬಂದರೂ ಅದನ್ನು ‘ಸೌಮ್ಯ’ ಎಂದು ನಿರ್ಲಕ್ಷಿಸುವಂತಿಲ್ಲ ಎಂದು ಹೇಳಿದೆ.

‘ವೈರಾಣು ಮತ್ತಷ್ಟು ಹರಡುವುದನ್ನು ನಿಯಂತ್ರಿಸಲು ಅಗತ್ಯ ಕ್ರಮಗಳನ್ನು ಸರ್ಕಾರಗಳು ಜಾರಿ ಮಾಡಬೇಕು. ಜನರು ಈ ಕ್ರಮಗಳಿಗೆ ಬದ್ಧರಾಗಿರಬೇಕು. ಮಾಸ್ಕ್‌ಗಳು, ಕೈಗಳ ಸ್ವಚ್ಛತೆ, ಕೆಮ್ಮುವಾಗ ಮತ್ತು ಸೀನುವಾಗ ಅನುಸರಿಸುವ ಕ್ರಮಗಳು, ಗಾಳಿಯಾಡುವಂಥ ಒಳಾಂಗಣ ವ್ಯವಸ್ಥೆ, ದೈಹಿಕ ಅಂತರ ಕಾಪಾಡಿಕೊಳ್ಳುವುದು ಅಗತ್ಯವಾಗಿ ಪಾಲಿಸಬೇಕಾದ ಕ್ರಮಗಳು’ ಎಂದು ಡಬ್ಲ್ಯುಎಚ್‌ಒ ನೈಋತ್ಯ ಏಷ್ಯಾ ಪ್ರಾದೇಶಿಕ ನಿರ್ದೇಶಕಿ ಪೂನಂ ಖೇತ್ರಪಾಲ್ ಸಿಂಗ್ ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

‘ಒಮೈಕ್ರಾನ್ ಅತ್ಯಂತ ಪ್ರಮುಖ ತಳಿ ಆಗಿ ಹೊರಹೊಮ್ಮಿದೆ. ಅತ್ಯಂತ ವೇಗವಾಗಿ ಹರಡುವ ಈ ತಳಿಯ ಸೋಂಕಿನಿಂದ ಜಗತ್ತಿನ ಹಲವೆಡೆ ಆರೋಗ್ಯ ವ್ಯವಸ್ಥೆಯಲ್ಲಿ ಏರುಪೇರಾಗಿದೆ. ಆಸ್ಪತ್ರೆ ದಾಖಲಾತಿ ಮತ್ತು ಸಾವುಗಳನ್ನು ನಾವು ನೋಡುತ್ತಿದ್ದೇವೆ. ವರದಿ ಆಗುತ್ತಿರುವ ಎಲ್ಲಾ ಕೊರೊನಾ ಪ್ರಕರಣಗಳೂ ಒಮೈಕ್ರಾನ್ ತಳಿ ಸೋಂಕು ಅಲ್ಲ ಎಂಬುದನ್ನು ನಾವು ಮರೆಯಬಾರದು. ಡೆಲ್ಟಾ ಸೇರಿ ಇತರ ಕೊರೊನಾ ತಳಿಗಳ ಸೋಂಕು ಕೂಡಾ ಹರಡುತ್ತಿದೆ. ಅವುಗಳಿಂದ ಗಂಭೀರವಾದ ಸೋಂಕು ಮತ್ತು ಸಾವುಗಳು ಸಂಭವಿಸುತ್ತಿರುವುದು ನಮಗೆ ತಿಳಿದಿದೆ. ಕೋವಿಡ್–19ನ ಎಲ್ಲಾ ಪ್ರಕರಣಗಳೂ ಕಳವಳಕ್ಕೆ ಕಾರಣವಾಗಿವೆ’ ಎಂದರು.

ಕೋವಿಡ್ ತಡೆಯಲು ಲಸಿಕೆ ಅಭಿಯಾನ ಉತ್ತಮ ಕ್ರಮ. ಲಸಿಕೆ ತೆಗೆದುಕೊಂಡಿರುವವರೂ ಎಲ್ಲಾ ರೀತಿಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಜನರ ಪ್ರಾಣ ಉಳಿಸಲು ನಾವು ಆರೋಗ್ಯ ವ್ಯವಸ್ಥೆ ಮೇಲೆ ಹೆಚ್ಚು ಹೊರೆ ಬೀಳುವುದನ್ನು ತಡೆಯಬೇಕು. ಆರೋಗ್ಯ ವ್ಯವಸ್ಥೆ ಮೇಲೆ ಹೆಚ್ಚು ಹೊರೆ ಬಿದ್ದರೆ ಕೋವಿಡ್–19 ಸಂಬಂಧಿ ಸಾವುಗಳನ್ನು ತಡೆಯಲು ಸಾಧ್ಯವಾಗುವುದಿಲ್ಲ ಎಂದರು.

- ಕೋವಿಡ್ ಹರಡುವಿಕೆಯ ಪ್ರಮಾಣವನ್ನು ಸೂಚಿಸುವ ಆರ್ ನಾಟ್ ಮೌಲ್ಯ ಅಥವಾ ಆರ್‌ಒ ಸಂಖ್ಯೆಯು ಈ ವಾರ 4ಕ್ಕೆ ಏರಿದೆ ಎಂದು ಐಐಟಿ ಮದ್ರಾಸ್‌ನ ತಜ್ಞರು ನಡೆಸಿದ ವಿಶ್ಲೇಷಣೆ ಹೇಳಿದೆ. ಒಬ್ಬ ಸೋಂಕಿತ ವ್ಯಕ್ತಿಯಿಂದ ಸೋಂಕು ಎಷ್ಟು ಜನರಿಗೆ ಹರಡುತ್ತದೆ ಎಂಬುದನ್ನು ಆರ್‌ಒ ಸಂಖ್ಯೆಯು ಸೂಚಿಸುತ್ತದೆ. ಕಳೆದ ವಾರ (ಕಳೆದ ಡಿಸೆಂಬರ್ 25ರಿಂದ 31) ಈ ಸಂಖ್ಯೆಯು 2.9 ಇತ್ತು. ಆರ್‌ಒ ಸಂಖ್ಯೆಯು 4ಕ್ಕೆ ಏರಿದೆ ಎಂಬುದು ಕೋವಿಡ್ ತೀವ್ರವಾಗಿ ಹರಡುತ್ತಿದೆ ಎಂಬುದರ ಸೂಚನೆ
- ಒಮೈಕ್ರಾನ್ ಸೋಂಕಿನ ವಿರುದ್ಧ ಕೋವಿಡ್ ಲಸಿಕೆಯ ಮೂರನೇ ಡೋಸ್ ಅಥವಾ ಬೂಸ್ಟರ್ ಡೋಸ್ ಅತ್ಯಂತ ಹೆಚ್ಚು ರಕ್ಷಣೆ ಒದಗಿಸುತ್ತದೆ ಎಂದು ಬ್ರಿಟನ್‌ನ ಯುಕೆ ಹೆಲ್ತ್ ಸೆಕ್ಯುರಿಟಿ ಏಜೆನ್ಸಿ ನಡೆಸಿದ ವಿಶ್ಲೇಷಣೆಯು ಕಂಡುಕೊಂಡಿದೆ
- ಕೇರಳದಲ್ಲಿ ಸಂಪೂರ್ಣ ಲಾಕ್‌ಡೌನ್ ಸಾಧ್ಯತೆ ಇಲ್ಲ. ಪೂರ್ಣ ಲಾಕ್‌ಡೌನ್ ಹೇರಿಕೆಯಾದರೆ ಅದು ಜನರ ದೈನಂದಿನ ಜೀವನವನ್ನು ಬಾಧಿಸುತ್ತದೆ ಎಂದು ಅಲ್ಲಿನ ಆರೋಗ್ಯ ಸಚಿವೆ ವೀಣಾ ಜಾರ್ಜ್ ಶನಿವಾರ ಹೇಳಿದ್ದಾರೆ

ರಾಜ್ಯದಲ್ಲಿ ಈ ತಿಂಗಳು ನಿತ್ಯ ಸರಾಸರಿ 4.31 ಲಕ್ಷ ಡೋಸ್ ಲಸಿಕೆ ನೀಡಿಕೆ

ಕೋವಿಡ್–19: ಲಸಿಕೆ ವಿತರಣೆಗೆ ವೇಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿರುವುದರಿಂದ ಲಸಿಕಾ ಅಭಿಯಾನಕ್ಕೆ ವೇಗ ನೀಡಲಾಗಿದೆ. ಈ ತಿಂಗಳು ನಿತ್ಯ ಸರಾಸರಿ 4.31 ಲಕ್ಷ ಡೋಸ್‌ಗಳಷ್ಟು ಲಸಿಕೆ ವಿತರಿಸಲಾಗಿದೆ.

5 ಸಾವಿರಕ್ಕೂ ಅಧಿಕ ಕೇಂದ್ರಗಳಲ್ಲಿ ಪ್ರತಿನಿತ್ಯ ಲಸಿಕೆ ನೀಡಲಾಗುತ್ತಿದೆ. 15ರಿಂದ 17 ವರ್ಷದವರಿಗೆ ಶಾಲಾ–ಕಾಲೇಜುಗಳಲ್ಲಿ ಲಸಿಕೆ ಹಾಕಲಾಗುತ್ತಿದೆ. ಈ ವಯೋಮಾನದವರಲ್ಲಿ 15.51 ಲಕ್ಷ ಮಂದಿ ಲಸಿಕೆಯ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ.

ಇದೇ 10ರಿಂದ ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಹಾಗೂ ಅಸ್ವಸ್ಥತೆ ಹೊಂದಿರುವ 60 ವರ್ಷಗಳು ಮೇಲ್ಪಟ್ಟವರಿಗೆ ಮೂರನೇ ಡೋಸ್ ಲಸಿಕೆ ವಿತರಣೆ ಪ್ರಾರಂಭವಾಗಲಿದೆ. ಎರಡನೇ ಡೋಸ್ ಪಡೆದು 9 ತಿಂಗಳಾದವರು ಮತ್ತೊಂದು ಡೋಸ್ ಪಡೆಯಲು ಅರ್ಹರಾಗಿರುತ್ತಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ 2021ರ ಜ.16ರಿಂದ ಲಸಿಕೆ ವಿತರಣೆ ಪ್ರಾರಂಭವಾದರೂ ದೈನಂದಿನ ಸರಾಸರಿ ಮಾರ್ಚ್ ತಿಂಗಳ ಬಳಿಕ ಲಕ್ಷದ ಗಡಿ ದಾಟಿತ್ತು. ಬಳಿಕ ಲಸಿಕೆ ವಿತರಣೆ ಏರುಗತಿ ಪಡೆದುಕೊಂಡಿತ್ತು. ಸೆಪ್ಟೆಂಬರ್ ತಿಂಗಳಲ್ಲಿ ಪ್ರತಿನಿತ್ಯ ಸರಾಸರಿ 4.83 ಲಕ್ಷ ಡೋಸ್‌ಗಳಷ್ಟು ಲಸಿಕೆಯನ್ನು ವಿತರಿಸಲಾಗಿದೆ. ಈಗ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಅಧಿಕ ಮಂದಿಗೆ ಲಸಿಕೆ ನೀಡಲಾಗುತ್ತಿದೆ. ರಾಜ್ಯದಲ್ಲಿ ಈವರೆಗೆ 8.95 ಕೋಟಿಗೂ ಅಧಿಕ ಡೋಸ್‌ಗಳು ಲಸಿಕೆ ವಿತರಿಸಲಾಗಿದೆ.

18 ರಿಂದ 44 ವರ್ಷದೊಳಗಿನವರಲ್ಲಿ 2.80 ಕೋಟಿ ಮಂದಿ ಮೊದಲ ಡೋಸ್ ಹಾಗೂ 2.19 ಕೋಟಿ ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. 45 ವರ್ಷ ಮೇಲ್ಪಟ್ಟವರಲ್ಲಿ 1.85 ಕೋಟಿ ಮಂದಿ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ. ಅವರಲ್ಲಿ 1.61 ಕೋಟಿ ಮಂದಿ ಎರಡೂ ಡೋಸ್‌ಗಳನ್ನು ಪಡೆದಿದ್ದಾರೆ.

ಆರೋಗ್ಯ ಕಾರ್ಯಕರ್ತರಲ್ಲಿ 7.64 ಲಕ್ಷ ಹಾಗೂ ಕೋವಿಡ್ ಮುಂಚೂಣಿ ಯೋಧರಲ್ಲಿ 9.43 ಲಕ್ಷ ಮಂದಿ ಮೊದಲ ಡೋಸ್ ಪಡೆದಿದ್ದಾರೆ. ಇವರಲ್ಲಿ ಕ್ರಮವಾಗಿ 7.23 ಲಕ್ಷ ಮಂದಿ ಹಾಗೂ 8.97 ಲಕ್ಷ ಮಂದಿ ಎರಡೂ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ.

ಲಸಿಕೆ ಪಡೆದ ಐವರು ವಿದ್ಯಾರ್ಥಿನಿಯರಲ್ಲಿ ಸೋಂಕು ಪತ್ತೆ

ದೇವನಹಳ್ಳಿ: ಸೂಲಿಬೆಲೆ ರಸ್ತೆಯಲ್ಲಿರುವ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ 9ನೇ ತರಗತಿಯ ಏಳು ವಿದ್ಯಾರ್ಥಿನಿಯರಲ್ಲಿ ಕೋವಿಡ್ ದೃಢಪಟ್ಟಿದೆ. ಈ ಪೈಕಿ ಐವರು ವಿದ್ಯಾರ್ಥಿನಿಯರು ಕಳೆದ ಸೋಮವಾರ ಕೋವಿಡ್ ಲಸಿಕೆ ಪಡೆದಿದ್ದರು.

ಲಸಿಕೆ ಪಡೆದ ಒಬ್ಬ ವಿದ್ಯಾರ್ಥಿನಿಗೆ ಗುರುವಾರ ಕೋವಿಡ್ ದೃಢಪಟ್ಟಿತ್ತು. ಉಳಿದ 46 ವಿದ್ಯಾರ್ಥಿನಿಯರನ್ನು ಪರೀಕ್ಷೆಗೆ ಒಳಪಡಿಸಿದ್ದು, ಶನಿವಾರ ಉಳಿದ ಆರು ಮಂದಿಯಲ್ಲಿ ಕೋವಿಡ್ ದೃಢಪಟ್ಟಿದೆ. ಕೋವಿಡ್ ದೃಢಪಟ್ಟವರ ಪೈಕಿ ಐವರು ವಿದ್ಯಾರ್ಥಿಗಳು ಲಸಿಕೆ ಪಡೆದಿದ್ದಾರೆ. ಎಲ್ಲ ವಿದ್ಯಾರ್ಥಿಗಳನ್ನು ಹೋಂ ಕ್ವಾರಂಟೈನ್‌ನಲ್ಲಿರಲು ಸೂಚಿಸಲಾಗಿದೆ ಎಂದು ಶಿಕ್ಷಣ ಇಲಾಖೆಯ ಉಪನಿರ್ದೇಶಕ ಗಂಗಮಾರೇಗೌಡ ತಿಳಿಸಿದ್ದಾರೆ.

15 ವರ್ಷ ಮೇಲಿನ 150 ವಿದ್ಯಾರ್ಥಿನಿಯರ ಪೈಕಿ 135 ಮಂದಿಗೆ ಲಸಿಕೆ ನೀಡಲಾಗಿದೆ. ಇನ್ನುಳಿದ 15 ವಿದ್ಯಾರ್ಥಿನಿಯರಿಗೆ ಲಸಿಕೆ ನೀಡಬೇಕಾಗಿದೆ.

12 ವಿದ್ಯಾರ್ಥಿನಿಯರಿಗೆ ಕೋವಿಡ್: ಸೈನಿಕ ಶಾಲೆ ಸೀಲ್ ಡೌನ್

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ‘ಇಲ್ಲಿನ ಕಿತ್ತೂರು ರಾಣಿ ಚನ್ನಮ್ಮ ಸ್ಮಾರಕ ವಸತಿ ಸೈನಿಕ ಶಾಲೆಯ (ಖಾಸಗಿ) 12 ವಿದ್ಯಾರ್ಥಿನಿಯರಿಗೆ ಶನಿವಾರ ಕೋವಿಡ್ ದೃಢಪಟ್ಟಿದೆ’ ಎಂದು ತಹಶೀಲ್ದಾರ್ ಸೋಮಲಿಂಗಪ್ಪ ಹಾಲಗಿ ತಿಳಿಸಿದ್ದಾರೆ.

‘ಅಲ್ಲಿ 760 ವಿದ್ಯಾರ್ಥಿನಿಯರು ಪ್ರವೇಶ ಪಡೆದಿದ್ದಾರೆ. 600 ವಿದ್ಯಾರ್ಥಿನಿಯರು ಬೇರೆ ಜಿಲ್ಲೆಗಳು ಹಾಗೂ ರಾಜ್ಯಗಳಿಂದ ಬಂದಿದ್ದಾರೆ. ಅವರಲ್ಲಿ 104 ಮಂದಿಯಲ್ಲಿ ಸೋಂಕಿನ ಲಕ್ಷಣಗಳು ಕಂಡುಬಂದಿದ್ದವು. ಆರ್‌ಟಿ–ಪಿಸಿಆರ್ ತಪಾಸಣೆ ಮಾಡಿದಾಗ 12 ವಿದ್ಯಾರ್ಥಿನಿಯರಲ್ಲಿ ಸೋಂಕು ಇರುವುದು ದೃಢಪಟ್ಟಿದೆ’ ಎಂದು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಸೋಂಕಿತರು ಮತ್ತು ಲಕ್ಷಣಗಳಿದ್ದ ವಿದ್ಯಾರ್ಥಿನಿಯರನ್ನು ಪ್ರತ್ಯೇಕ ವಾಸದಲ್ಲಿರಿಸಲಾಗಿದೆ. ಮುಂಜಾಗ್ರತ ಕ್ರಮವಾಗಿ ಶಾಲೆ ಸೀಲ್‌ಡೌನ್ ಮಾಡಲಾಗಿದೆ. 104 ವಿದ್ಯಾರ್ಥಿನಿಯರ ಗಂಟಲು ದ್ರವದ ಮಾದರಿಯನ್ನು ಪರೀಕ್ಷೆಗಾಗಿ ಬೆಳಗಾವಿಯ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದರು.

‘ಆ ಶಾಲೆಯಲ್ಲಿ 6ನೇ ತರಗತಿಯಿಂದ ಪಿಯುವರೆಗೆ ನಡೆಸಲಾಗುತ್ತದೆ. ಇವರಲ್ಲಿ ಹೊಸದಾಗಿ ಪ್ರವೇಶ ಪಡೆದ 6 ಮತ್ತು 10ನೇ ತರಗತಿ ವಿದ್ಯಾರ್ಥಿನಿಯರು ಇನ್ನೂ ಬಂದಿರಲಿಲ್ಲ. ಅವರಿಗೆ, ಸದ್ಯಕ್ಕೆ ಹಾಜರಾಗದಂತೆ ಶಾಲೆಯವರು ಮಾಹಿತಿ ನೀಡಿದ್ದಾರೆ’ ಎಂದು ಅವರು ಹೇಳಿದರು.

ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ
ಮುಖ್ಯ ಅಧೀಕ್ಷಕರ ಕಾರ್ಯಾಲಯ, ಕೇಂದ್ರ ಕಾರಾಗೃಹ, ಪರಪ್ಪನ ಅಗ್ರಹಾರ, ಎಲೆಕ್ಟ್ರಾನಿಕ್ ಸಿಟಿ ಪೋಸ್ಟ್, ಬೆಂಗಳೂರು – 560100.

ಸಂಖ್ಯೆ: ಕೇಕಾಬೆಂ/ದರಖಾಸ್ತು/ 208 /2021–22 ದಿನಾಂಕ: 07–01–2022.

ಇ–ಟೆಂಡರ್ ನೋಟಿಸ್

2022–23 ನೇ ಸಾಲಿಗೆ ಬೆಂಗಳೂರು ಕೇಂದ್ರ ಕಾರಾಗೃಹ ಹಾಗೂ ಅಧೀನ ಕಾರಾಗೃಹಗಳಿಗೆ ಅವಶ್ಯಕವಿರುವ ಆಹಾರ ಪದಾರ್ಥಗಳು / ತರಕಾರಿಗಳು / ಮಾಂಸ ಮತ್ತು ಮೊಟ್ಟೆ / ಇತರೆ ವಸ್ತುಗಳು, ಕಾರ್ಖಾನೆ ಕಚ್ಚಾ ವಸ್ತುಗಳು, ಬೇಕರಿ ಕಚ್ಚಾ ವಸ್ತುಗಳನ್ನು ಖರೀದಿಸುವ ಸಲುವಾಗಿ ಕೆ.ಟಿ.ಟಿ.ಪಿ ನಿಯಮದನ್ವಯ ಇ–ದರಖಾಸ್ತು ಮೂಲಕ ಖರೀದಿಸಲು ನಿರ್ಧರಿಸಿದೆ.
1. ಕೇಂದ್ರ ಕಾರಾಗೃಹ, ಬೆಂಗಳೂರು ಮತ್ತು ಬೆಂಗಳೂರು ವಲಯದ ಕಾರಾಗೃಹಗಳಿಗೆ ಭಾಗ–1, 2, 3, 4, 5, 6, 7 & 8 ರಲ್ಲಿ ಬರುವ ಆಹಾರ ಪದಾರ್ಥಗಳನ್ನು ಖರೀದಿಸುವ ಬಗ್ಗೆ.
2. ಕೇಂದ್ರ ಕಾರಾಗೃಹ, ಬೆಂಗಳೂರು ಮತ್ತು ಬೆಂಗಳೂರು ವಲಯದ ಕಾರಾಗೃಹಗಳಿಗೆ ಭಾಗ–9 & 10 ರಲ್ಲಿ ಬರುವ ಹಣ್ಣು ಮತ್ತು ತರಕಾರಿಗಳನ್ನು ಖರೀದಿಸುವ ಬಗ್ಗೆ 3. ಕೇಂದ್ರ ಕಾರಾಗೃಹ, ಬೆಂಗಳೂರು ಮತ್ತು ಬೆಂಗಳೂರು ವಲಯದ ಕಾರಾಗೃಹಗಳಿಗೆ ಭಾಗ–11 ರಲ್ಲಿ ಬರುವ ಗಂಡು ಕುರಿಯ ಮೂಳೆ ರಹಿತ ಮಾಂಸ, ಚಿಕನ್ ಮತ್ತು ಮೊಟ್ಟೆ ಖರೀದಿಸುವ ಬಗ್ಗೆ.
4. ಕೇಂದ್ರ ಕಾರಾಗೃಹ, ಬೆಂಗಳೂರು ಮತ್ತು ಬೆಂಗಳೂರು ವಲಯದ ಕಾರಾಗೃಹಗಳಿಗೆ ಭಾಗ–12 ರಲ್ಲಿ ಬರುವ ಇತರೇ ವಸ್ತುಗಳನ್ನು ಖರೀದಿಸುವ ಬಗ್ಗೆ. 5. ಬೆಂಗಳೂರು ಕೇಂದ್ರ ಕಾರಾಗೃಹದ ಬೇಕರಿ ವಿಭಾಗಕ್ಕೆ ಅಗತ್ಯವಿರುವ ಭಾಗ–13 ರಲ್ಲಿ ಬರುವ ಬೇಕರಿ ಕಚ್ಚಾವಸ್ತುಗಳನ್ನು ಖರೀದಿಸುವ ಬಗ್ಗೆ. 6. ಬೆಂಗಳೂರು ಕೇಂದ್ರ ಕಾರಾಗೃಹದ ಕಾರ್ಖಾನೆ ವಿಭಾಗಕ್ಕೆ ಅಗತ್ಯವಿರುವ ಭಾಗ–14 & 15 ರಲ್ಲಿ ಬರುವ ಕಾರ್ಖಾನೆ ಕಚ್ಚಾವಸ್ತುಗಳನ್ನು ಖರೀದಿಸುವ ಬಗ್ಗೆ.
ದರಖಾಸ್ತುದಾರರು ಇ–ಪೋರ್ಟಲ್ ದೂರವಾಣಿ ಸಂಖ್ಯೆ: 080–25501227, 25501216 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ **https://eproc.karnataka.gov.in** ಅಥವಾ ಸಹಾಯವಾಣಿ ಸಂಖ್ಯೆ 080–25501227, 25501216 ಗಳಿಗೆ ಸಂಪರ್ಕಿಸತಕ್ಕದ್ದು.

ಸಹಿ/–
ಮುಖ್ಯ ಅಧೀಕ್ಷಕರು
ಕೇಂದ್ರ ಕಾರಾಗೃಹ, ಬೆಂಗಳೂರು

DIPR/DDU/2767/G.FMC/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಎಸ್ಪಿ, ಎಎಸ್ಪಿ ಸೇರಿ 15 ಪೊಲೀಸ್ ಸಿಬ್ಬಂದಿಗೆ ಕೋವಿಡ್

ಮಂಡ್ಯ: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಎಎಸ್ಪಿ ಧನಂಜಯ ಸೇರಿ 15 ಪೊಲೀಸ್ ಸಿಬ್ಬಂದಿಗೆ ಶನಿವಾರ ಕೋವಿಡ್–19 ಸೋಂಕು ದೃಢಪಟ್ಟಿದೆ.

ಡಿವೈಎಸ್ಪಿಗಳಾದ ಮಳವಳ್ಳಿಯ ಲಕ್ಷ್ಮಿನಾರಾಯಣ ಪ್ರಸಾದ್, ಮಂಡ್ಯದ ಮಂಜುನಾಥ್, ಇನ್‌ಸ್ಪೆಕ್ಟರ್‌ಗಳಾದ ಕೆ.ಆರ್.ಪೇಟೆ ಠಾಣೆಯ ನಿರಂಜನ್, ಮಂಡ್ಯ ಗ್ರಾಮೀಣ ಠಾಣೆಯ ಆನಂದೇಗೌಡ, ಶ್ರೀರಂಗಪಟ್ಟಣ ಠಾಣೆಯ ಪುನೀತ್, ನಾಲ್ವರು ಎಎಸ್‌ಐ, ನಾಲ್ವರು ಕಾನ್‌ಸ್ಟೆಬಲ್‌ಗಳಿಗೆ ಸೋಂಕು ದೃಢಪಟ್ಟಿದೆ.

‘ಕಳೆದ ವಾರ ಪೊಲೀಸ್ ಸಿಬ್ಬಂದಿಯ ಕ್ರೀಡಾಕೂಟ ನಡೆದಿತ್ತು. ಆದಿಚುಂಚನಗಿರಿಯಲ್ಲಿ ನಡೆದ ಯುವಜನೋತ್ಸವದಲ್ಲಿ ಜ.4ರಂದು ರಾಜ್ಯಪಾಲ ಥ್ಯಾವರ್‌ಚಂದ್ ಗೆಹಲೋತ್, ಜ.5ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್.ಅಶೋಕ ಭಾಗವಹಿಸಿದ್ದರು. ಪೊಲೀಸರು ಭದ್ರತೆ ಒದಗಿಸಿದ್ದರು. ಕೋವಿಡ್ ಕರ್ತವ್ಯದಲ್ಲೂ ತೊಡಗಿದ್ದರು. ಆ ವೇಳೆ ಸೋಂಕು ತಗುಲಿರಬಹುದು’ ಎಂದು ಶಂಕಿಸಲಾಗಿದೆ.

‘ಎಲ್ಲರೂ ಆರೋಗ್ಯದಿಂದಿದ್ದು ಪ್ರತ್ಯೇಕವಾಗಿ ಚಿಕಿತ್ಸೆ ನೀಡಲಾಗುತ್ತಿದೆ’ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಟಿ.ಎನ್. ಧನಂಜಯ ತಿಳಿಸಿದರು.

ರಾಜ್ಯ ಕೋವಿಡ್ ಅಂಕಿ–ಅಂಶ

30,39,958 ▲ ಒಟ್ಟು ಸೋಂಕಿತರು (30,22,603 ನಿನ್ನೆಯ ವಿವರ)
38,507 ▲ ಸಕ್ರಿಯ ಪ್ರಕರಣಗಳು
29,63,056 ▲ ಗುಣಮುಖರಾದವರು
38,366 ಒಟ್ಟು ಸಾವು ▲

ದಿನದ ಮಾಹಿತಿ

ಹೊಸ ಪ್ರಕರಣ	8,906	▲
ಗುಣಮುಖ	508	▲
ಸಾವು	04	–

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಜಿಲ್ಲಾಸ್ಪತ್ರೆಯ ಎಂಟು ವೈದ್ಯರಿಗೆ ಕೋವಿಡ್

ಹಾಸನ: ಜಿಲ್ಲಾಸ್ಪತ್ರೆಯ ಮೂವರು ವೈದ್ಯರು ಮತ್ತು ಐವರು ವೈದ್ಯಕೀಯ ವಿದ್ಯಾರ್ಥಿಗಳಿಗೆ ಕೋವಿಡ್ –19 ಸೋಂಕು ದೃಢಪಟ್ಟಿದೆ.

‘ಎಂಟು ಮಂದಿಯನ್ನು ಕ್ವಾರಂಟೈನ್ ಮಾಡಿ, ಪ್ರಾಥಮಿಕ ಸಂಪರ್ಕಿತರ ಪತ್ತೆ ಕಾರ್ಯ ಮಾಡಲಾಗುತ್ತಿದೆ’ ಎಂದು ಹಿಮ್ಸ್ ವೈದ್ಯಕೀಯ ಅಧೀಕ್ಷಕ ಡಾ.ಕೃಷ್ಣಮೂರ್ತಿ ಅವರು ತಿಳಿಸಿದರು.

ಕ್ಯಾಲಿಫೋರ್ನಿಯಾ: ಪರೀಕ್ಷಾ ಕಿಟ್‌ಗಳ ಕೊರತೆ

ಲಾಸ್ ಏಂಜಲೀಸ್ (ಎಪಿ): ಕ್ಯಾಲಿಫೋರ್ನಿಯಾ ರಾಜ್ಯದ ಅನೇಕ ಭಾಗಗಳಲ್ಲಿ ಕೋವಿಡ್ ಪರೀಕ್ಷೆ ಕಿಟ್‌ಗಳ ಕೊರತೆ ಹಾಗೂ ವರದಿ ಬರುವುದರಲ್ಲಿ ವಿಳಂಬವಾಗುತ್ತಿದೆ. ಇದು ಕೋವಿಡ್–19 ಪ್ರಕರಣಗಳು ಹೆಚ್ಚಲು ಕಾರಣವಾಗುತ್ತಿದೆ.

ಎರಡು ವಾರಗಳ ಅವಧಿಯಲ್ಲಿ ರಾಜ್ಯದ ಆಸ್ಪತ್ರೆಗಳಿಗೆ ದಾಖಲಾಗುತ್ತಿರುವ ಕೋವಿಡ್ ರೋಗಿಗಳ ಸಂಖ್ಯೆ ದ್ವಿಗುಣಗೊಂಡಿದೆ ಎಂದು ಮೂಲಗಳು ಹೇಳಿವೆ.

‘ಪರೀಕ್ಷಾ ವರದಿಗಳು ಕೈಸೇರುವುದು ವಿಳಂಬವಾಗುತ್ತಿದೆ. ಹೀಗಾಗಿ ಸೌಮ್ಯ ಲಕ್ಷಣ ಇರುವ ಅಥವಾ ಲಕ್ಷಣ ರಹಿತ ಕೋವಿಡ್–19 ಇರುವವರು ತಮಗೆ ಕೊರೊನಾ ಸೋಂಕು ಇಲ್ಲ ಎಂದೇ ಭಾವಿಸುತ್ತಿದ್ದಾರೆ. ದೈನಂದಿನ ಕೆಲಸ-ಕಾರ್ಯಗಳಿಗೆ ಹೊರಗಡೆ ಹೋಗುತ್ತಿದ್ದಾರೆ. ಇಂಥವರಿಂದ ಸೋಂಕು ಪ್ರಸರಣ ಹೆಚ್ಚುತ್ತಿದೆ’ ಎಂದು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ವೈದ್ಯರಾಗಿರುವ ಅಬ್ರಾರ್ ಕರಣ್ ಹೇಳುತ್ತಾರೆ.

ರಾಜ್ಯದ ಮೂರನೇ ದೊಡ್ಡ ನಗರ ಆರೇಂಜ್ ಕೌಂಟಿಯ ಆಸ್ಪತ್ರೆಗಳು ರೋಗಿಗಳಿಂದ ತುಂಬಿವೆ. ಇನ್ನೊಂದೆಡೆ, ಆಸ್ಪತ್ರೆಗಳಲ್ಲಿನ ಸಿಬ್ಬಂದಿಗೂ ಕೋವಿಡ್–19 ತಗುಲಿರುವ ಕಾರಣ ಅವರು ಕರ್ತವ್ಯದಿಂದ ದೂರ ಉಳಿದಿದ್ದಾರೆ. ಇದು ಸಮಸ್ಯೆ ಮತ್ತಷ್ಟೂ ಬಿಗಡಾಯಿಸುವಂತೆ ಮಾಡಿದೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನಂ.1, 4ನೇ ಮಹಡಿ, ಕಾಫಿ ಮಂಡಳಿ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–1. ದೂರವಾಣಿ : 080–22283074–78
ಫ್ಯಾಕ್ಸ್ : 080–22386015 ವೆಬ್‌ಸೈಟ್: http:\\www.knnlindia.com.
CIN : U85110KA1998SGC024503

ಸಂ: ಕನೀನಿನಿ(ಆರ್)/ನೇಮಕಾತಿ(ಸಿಎಸ್)/ಸಿ&ಆರ್/2021–22/5369 ದಿನಾಂಕ: 07.01.2022

ನೇಮಕಾತಿ ಅಧಿಸೂಚನೆ
ಕಂಪನಿ ಕಾರ್ಯದರ್ಶಿ ಹುದ್ದೆಗೆ ನೇಮಕಾತಿ (On contract basis)

ಕರ್ನಾಟಕ ನೀರಾವರಿ ನಿಗಮ ನಿಯಮಿತವು (ಕನೀನಿನಿ) ಕರ್ನಾಟಕ ಸರ್ಕಾರದ ಉದ್ಯಮವಾಗಿದ್ದು, ರಾಜ್ಯದ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ನಿಗಮವು ಬೆಂಗಳೂರಿನಲ್ಲಿರುವ ನೋಂದಾಯಿತ ಕಛೇರಿಯಲ್ಲಿ **ಕಂಪನಿ ಕಾರ್ಯದರ್ಶಿ (Grade-I or Grade-II) (On contract basis)** ಹುದ್ದೆಗೆ ಸೂಕ್ತ ಅಭ್ಯರ್ಥಿಯ ಆಯ್ಕೆಗಾಗಿ ಈ ಅಧಿಸೂಚನೆಯನ್ನು ಹೊರಡಿಸಿದೆ.
ಆಸಕ್ತಿಯುಳ್ಳ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಕನೀನಿನಿ ವೆಬ್‌ಸೈಟ್: **http:\\www.knnlindia.com** ನಲ್ಲಿ ಪಡೆಯಬಹುದಾಗಿದೆ. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 27.01.2022 ಸಂಜೆ 5.30 ರವರೆಗೆ ಆಗಿದ್ದು,** ನೋಂದಾಯಿತ ಕಛೇರಿಯಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. ಫೋನ್ : 080–22265383
website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಡಿಪಿಆರ್–08/2021–22 ದಿನಾಂಕ: 07.01.2022

ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಕಂಡ ಯೋಜನೆಗೆ ವಿವರವಾದ ಯೋಜನಾ ವರದಿಯನ್ನು ಸಿದ್ದಪಡಿಸುವುದಕ್ಕಾಗಿ ಇದೇ ರೀತಿಯ ಕಾಮಗಾರಿಯನ್ನು ನಿರ್ವಹಿಸಿದ ದಾಖಲೆಯುಳ್ಳ ಮತ್ತು ಹೆಚ್ಚಿನ ಅನುಭವವಿರುವ, ಬೆಂಗಳೂರಿನಲ್ಲಿ ಕಛೇರಿಯುಳ್ಳ ಪ್ರತಿಷ್ಠಿತ ಅರ್ಹ ಸಮಾಲೋಚಕರು / ಸಂಸ್ಥೆಗಳಿಂದ ದ್ವಿ–ಲಕೋಟೆ ಬಿಡ್ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದೆ.
ಕಾಮಗಾರಿಯ ಹೆಸರು: ರಾಮನಗರ ಜಿಲ್ಲೆ, ಬಿಡದಿ ಹೋಬಳಿಯಲ್ಲಿ ಪ್ರಸ್ಥಾಪಿತ ಹಾರೋಹಳ್ಳಿ 5ನೇ ಹಂತ ಕೈಗಾರಿಕಾ ಪ್ರದೇಶದ ರಚನೆಗಾಗಿ ಆರ್ಥಿಕ ವಿಶ್ಲೇಷಣೆ, ಸಮೀಕ್ಷೆ, ಬಡಾವಣೆ ನಕ್ಷೆ, ವಿನ್ಯಾಸ, ಅಂದಾಜು ಪಟ್ಟಿ, ಇತ್ಯಾದಿ ಒಳಗೊಂಡಂತೆ ವಿವರವಾದ ಯೋಜನಾ ವರದಿ (ಡಿಪಿಆರ್)ಯನ್ನು ಒಳಗೊಂಡಂತೆ ಸಲಹಾ ಸೇವೆಗಳನ್ನು ಒದಗಿಸುವುದು. (2) ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಳ ತಾಲ್ಲೂಕಿನಲ್ಲಿ ಪ್ರಸ್ತಾಪಿತ ಓಬಳಾಪುರ ಕೈಗಾರಿಕಾ ಪ್ರದೇಶದ ರಚನೆಗಾಗಿ ಆರ್ಥಿಕ ವಿಶ್ಲೇಷಣೆ, ಸಮೀಕ್ಷೆ, ಬಡಾವಣೆ ನಕ್ಷೆ, ವಿನ್ಯಾಸ, ಅಂದಾಜು ಪಟ್ಟಿ, ಇತ್ಯಾದಿ ಒಳಗೊಂಡಂತೆ ವಿವರವಾದ ಯೋಜನಾ ವರದಿ (ಡಿಪಿಆರ್)ಯನ್ನು ಒಳಗೊಂಡಂತೆ ಸಲಹಾ ಸೇವೆಗಳನ್ನು ಒದಗಿಸುವುದು.
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 24.01.2022, ಸಂಜೆ 4.00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ದಿನಾಂಕ: 10.01.2022 ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
DIPR/DDU/R.O:2762/2021-22 ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ಮಿಕರ ರಾಜ್ಯ ವಿಮಾ ನಿಗಮ **कर्मचारी राज्य बीमा निगम**
EMPLOYEES' STATE INSURANCE CORPORATION
Ministry of Labour & Employment, Government of India
Regional Office Karnataka
No.10, Tank Bund Road, Near Binny Mill, Next to ETA Mall,Binnypet,
Bengaluru- 560023, Ph: 080-26742485 Fax: 080-26741307 E-mail: rd-karnataka@esic.in
क.रा.बी.नि. ESIC

RECRUITMENT TO THE POST OF UPPER DIVISION CLERK (UDC), STENOGRAPHER (STENO.) AND MULTI-TASKING STAFF (MTS) FOR KARNATAKA REGION IN ESI CORPORATION

ONLINE Applications (through the website of ESIC at www.esic.nic.in) are invited for filling up the post of **Upper Division Clerk (UDC), Stenographer (Steno.) and Multi-Tasking Staff (MTS)** on regular basis by Direct Recruitment in ESIC as under:

DETAILS OF VACANCIES

POST	Category										
							PWD*				
	UR	SC	ST	OBC	EWS	Total	Category (a)	Category (b)	Category (c)	Category (d) & (e)	Ex.SM
UDC	67	37	5	71	19	199	2	2	2	1	19
Steno.	8	3	1	5	1	18	Nil	Nil	Nil	Nil	1
MTS	30	7	3	19	6	65	1	1	Nil	Nil	6

SCALE OF PAY

UDC & Steno.	Pay Level – 4 (Rs. 25,500-81,100) as per 7th Central Pay Commission.
MTS	Pay Level – 1 (Rs. 18,000-56,900) as per 7th Central Pay Commission.

In addition to Pay they will also be eligible for DA, HRA and Transport Allowance and other allowances as per rules in force from time to time.

ESSENTIAL EDUCATIONAL AND OTHER QUALIFICATIONS

UDC	1. A degree of a recognized University or equivalent. 2. Working knowledge of computer including use of office suites and databases.
Steno.	1. 12th class pass or equivalent from a recognized Board or University. 2. Skill Test Norms: Dictation: 10 Minutes @ 80 words per minute. Transcription (Only on computers): 50 minutes (English), 65 minutes (Hindi).
MTS	Matriculation or equivalent pass from recognized Board.

AGE LIMIT

UDC & Steno.	Between 18 to 27 years as on the closing date for receipt of applications i.e. 15th February, 2022.
MTS	Between 18 to 25 years as on the closing date for receipt of applications i.e. 15th February, 2022.

Note: Upper age limit is relaxable for persons belonging to reserved categories i.e. SC/ST/OBC/PWD/Ex-Servicemen, for ESIC Employees/Government Servants and for other categories of persons in accordance with the instructions and orders of Govt. of India issued from time to time.
The detailed advertisement is available on the website of the ESIC **www.esic.nic.in/recruitment**.
The candidates willing to apply for above posts are advised to refer to the detailed advertisement regarding eligibility criteria, application fee etc.
The link for submission of online application will be available on ESIC website **www.esic.nic.in** from **15th January, 2022.**
The Closing Date for submission of Online Application through ESIC website **www.esic.nic.in** is **15th February, 2022.**

Sd/-
Regional Director
Dated: 27th December, 2021

2020–21ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರು			
ಸೇವಾ ಅವಧಿ	ಯುಜಿಸಿ ಅರ್ಹತೆ ಹೊಂದಿದವರು	ಯುಜಿಸಿ ಅರ್ಹತೆ ಹೊಂದಿಲ್ಲದವರು	ಒಟ್ಟು
10 ವರ್ಷಕ್ಕಿಂತ ಹೆಚ್ಚು	627	737	1,364
10 ವರ್ಷಕ್ಕಿಂತ ಕಡಿಮೆ	3,821	7,683	11,504

ಅತಿಥಿ ಉಪನ್ಯಾಸಕರ ವಯೋಮಾನ– ವಿದ್ಯಾರ್ಹತೆ			
ವಯೋಮಾನ	ನೆಟ್/ಕೆ–ಸೆಟ್/ಪಿಎಚ್.ಡಿ ಆದವರು	ಸ್ನಾತಕೋತ್ತರ ಪದವಿ ಮಾತ್ರ	ಒಟ್ಟು
23-30	858	3,164	4,022
31-35	1,117	2,566	3,683
36-40	1,256	1,392	2,648
41-45	659	644	1,303
46-50	403	378	781
51 ದಾಟಿದವರು	155	276	431
ಒಟ್ಟು	4,448	8,420	12,868

‘ಅಭದ್ರತೆ’ಯಲ್ಲಿ ‘ಅತಿಥಿ’ಗಳು

ಒಂದನೇ ಪುಟದಿಂದ...

‘ಯುಜಿಸಿ ನಿಯಮಾವಳಿ ಪ್ರಕಾರ, ಅರ್ಹ ವಿದ್ಯಾರ್ಹತೆ ಹೊಂದಿದವರಿಗೆ ಪ್ರತಿ ತಿಂಗಳು ₹ 50 ಸಾವಿರ ವೇತನ ನೀಡಬೇಕು. ಆದರೆ, ರಾಜ್ಯ ಸರ್ಕಾರ ಅದಕ್ಕೆ ಸಿದ್ಧವಿಲ್ಲ. ಕಾಯಂ ಉಪನ್ಯಾಸಕರಿಗೆ ತಿಂಗಳಿಗೆ ₹ 1.50 ಲಕ್ಷ ವೇತನವಿದೆ. ಅತಿಥಿ ಶಿಕ್ಷಕರಿಗೆ ಕೇವಲ ₹ 11 ಸಾವಿರದಿಂದ ₹ 13 ಸಾವಿರ ವೇತನ, ಅದೂ ವರ್ಷದಲ್ಲಿ ಎಂಟು ತಿಂಗಳು ಮಾತ್ರ ನೀಡಿ, ಬೇಕಾದಾಗ ಬಳಸಿ, ಬೇಡವಾದಾಗ ಕೈ ಬಿಟ್ಟರೆ ಸರ್ಕಾರಕ್ಕೆ ಲಾಭವಿದೆ. ಈ ಕಾರಣಕ್ಕೆ ನಮ್ಮನ್ನು ನಿರ್ಲಕ್ಷಿಸಲಾಗುತ್ತಿದೆ’ ಎನ್ನುವುದು ಅವರ ಅಳಲು ಮತ್ತು ಆಕ್ರೋಶ.

‘ದೆಹಲಿ ಸರ್ಕಾರ ವಿಶೇಷ ನಿಯಮ ರೂಪಿಸಿ 16 ಸಾವಿರ ಅತಿಥಿ ಶಿಕ್ಷಕರನ್ನು ಕಾಯಂ ಮಾಡಿದೆ. ಹರಿಯಾಣ ಸರ್ಕಾರ ಕೂಡಾ ಇದೇ ರೀತಿ ಮಾಡಿದೆ. ರಾಜ್ಯದಲ್ಲೂ ಈ ಹಿಂದೆ ಅತಿಥಿ ಶಿಕ್ಷಕರನ್ನು, ಅರೆಕಾಲಿಕ ಉಪನ್ಯಾಸಕರನ್ನು ಜೆಒಸಿ ಸೇವೆ ಸಲ್ಲಿಸಿದ ಬೋಧಕ, ಬೋಧಕೇತರ ಸಿಬ್ಬಂದಿಯನ್ನು, ಮೊರಾರ್ಜಿ ದೇಸಾಯಿ ಶಾಲೆಯ ಬೋಧಕ, ಬೋಧಕೇತರ ಸಿಬ್ಬಂದಿಯನ್ನು, ವಿವಿಧ ಇಲಾಖೆಗಳ ದಿನಗೂಲಿ ನೌಕರರನ್ನು, ಆರೋಗ್ಯ ಇಲಾಖೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಿದ ವೈದ್ಯರನ್ನು ರಾಜ್ಯ ಸರ್ಕಾರ ಕಾಯಂ ಮಾಡಿದೆ. ಅದೇ ರೀತಿ ನಮ್ಮ ಸಮಸ್ಯೆಗಳಿಗೆ ಶಾಶ್ವತ ಪರಿಹಾರಕ್ಕೆ ನಿಯಮ ರೂಪಿಸಬೇಕು’ ಎನ್ನುತ್ತಾರೆ ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ಪ್ರೊ. ಹನುಮಂತಗೌಡ ಆರ್. ಕಲ್ಮನಿ.

‘ಯಾವುದೇ ಸೌಲಭ್ಯ ನೀಡದಿದ್ದರೂ 15–20 ವರ್ಷಗಳಿಂದ ಕಡಿಮೆ ಸಂಬಳಕ್ಕೆ ದುಡಿಯುತ್ತಿರುವವರನ್ನು ಸೇವೆಯಲ್ಲಿ ವಿಲೀನಗೊಳಿಸುವ ಮಾನವೀಯ ನಡೆಗೆ ಯಾವುದೇ ಕಾನೂನು ಅಡ್ಡಿ ಬರುವುದಿಲ್ಲ. 2015ರಿಂದ ಈವರೆಗೆ ನಮಗೆ ಸಂಬಳದಲ್ಲಿ ಒಂದು ರೂಪಾಯಿ ಹೆಚ್ಚು ಮಾಡಿಲ್ಲ. 12 ತಿಂಗಳು ವೇತನ ನೀಡಬೇಕೆಂಬ ಆದೇಶವಿದ್ದರೂ ಸರ್ಕಾರ ಪಾಲಿಸುತ್ತಿಲ್ಲ’ ಎಂದರು.

ಬೇರೆ ಕಡೆ ಕರ್ತವ್ಯ ನಿರ್ವಹಿಸಲು ನಿರ್ಬಂಧ ಇಲ್ಲ: ಅತಿಥಿ ಉಪನ್ಯಾಸಕರಿಗೆ ಕಡಿಮೆ ವೇತನ ನೀಡಲಾಗುತ್ತಿದ್ದರೂ, ತರಗತಿ ಇಲ್ಲದ ಅವಧಿಯಲ್ಲಿ ಬೇರೆ ಖಾಸಗಿ ಕಾಲೇಜುಗಳಲ್ಲಿ ಅಥವಾ ಬೇರೆ ಕಡೆ ಕರ್ತವ್ಯ ನಿರ್ವಹಿಸುವುದಕ್ಕೆ ಯಾವುದೇ ನಿರ್ಬಂಧ ಇಲ್ಲ. ಹೀಗಾಗಿ, ಹಲವಾರು ಅತಿಥಿ ಉಪನ್ಯಾಸಕರು ಖಾಸಗಿ ಕಾಲೇಜುಗಳಲ್ಲಿ ಮತ್ತು ಪಿಯು ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎನ್ನುವುದು ಸರ್ಕಾರದ ವಾದ.

‘ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಪನ್ಯಾಸಕರಿಗೆ ಹಂಚಿಕೆ ಮಾಡಿದ ನಂತರ ಉಳಿಕೆಯಾಗುವ ‘ಕಾರ್ಯಭಾರ’ ನಿರ್ವಹಿಸಲು ಹಿಂದೆ ಅರೆಕಾಲಿಕ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗುತ್ತಿತ್ತು. 2003ರ ನಂತರ ಅರೆಕಾಲಿಕ ಉಪನ್ಯಾಸಕರ ಬದಲಿಗೆ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳುವಂತೆ ರಾಜ್ಯ ಸರ್ಕಾರ ಆದೇಶಿಸಿತ್ತು. ಅಂದಿನಿಂದ ಹೆಚ್ಚುವರಿ ಕಾರ್ಯಭಾರಕ್ಕೆ ನೇಮಿಸಿಕೊಳ್ಳುವ ಉಪನ್ಯಾಸಕರನ್ನು ‘ಅತಿಥಿ ಉಪನ್ಯಾಸಕರು’ ಎಂದು ಕರೆಯಲಾಗುತ್ತಿದೆ. ಈ ಅತಿಥಿ ಉಪನ್ಯಾಸಕರು ಅವರಿಗೆ ಹಂಚಿಕೆ ಮಾಡುವ ಕಾರ್ಯಭಾರವನ್ನು ಆಯಾ ಕಾಲೇಜುಗಳ ಶೈಕ್ಷಣಿಕ ವೇಳಾಪಟ್ಟಿಯ ಅನ್ವಯ ಅವರಿಗೆ ನಿಗದಿಪಡಿಸಿದ ಸಮಯದಲ್ಲಿ, ಗಂಟೆಗಳ ಅವಧಿಯಲ್ಲಿ ತರಗತಿಗಳನ್ನು ತೆಗೆದುಕೊಳ್ಳುತ್ತಾರೆ. ನಂತರ ಬೇರೆ ಕೆಲಸಕ್ಕೆ ಹೋಗುತ್ತಾರೆ’ ಎಂದು ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

ಸಮಿತಿಯ ವರದಿಯತ್ತ ಚಿತ್ತ

ಅತಿಥಿ ಉಪನ್ಯಾಸಕರು ಅನಿರ್ದಿಷ್ಟ ಅವಧಿಗೆ ಮುಷ್ಕರ ನಡೆಸುತ್ತಿದ್ದಂತೆ, ರಾಜ್ಯ ಸರ್ಕಾರ (ಡಿ. 15ರಂದು) ಅತಿಥಿ ಉಪನ್ಯಾಸಕರ ವೇತನ ಹೆಚ್ಚಳ ಮತ್ತು ಇತರ ಬೇಡಿಕೆಗಳಿಗೆ ಸಂಬಂಧಿಸಿದಂತೆ ಅಧ್ಯಯನ ನಡೆಸಿ ವಿಸ್ತೃತ ವರದಿ ನೀಡಲು ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ. ಕುಮಾರ ನಾಯಕ ಅಧ್ಯಕ್ಷತೆಯಲ್ಲಿ ನಾಲ್ಕು ಮಂದಿಯ ಸಮಿತಿ ರಚಿಸಿದೆ.

ಈ ಸಮಿತಿಯಲ್ಲಿ ಆರ್ಥಿಕ ಇಲಾಖೆಯ ಕಾರ್ಯದರ್ಶಿ ಪಿ.ಸಿ.ಜಾಫರ್, ಕಾನೂನು ಇಲಾಖೆ ಪ್ರಧಾನ ಕಾರ್ಯದರ್ಶಿ ವೆಂಕಟೇಶ ನಾಯಕ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತ ಪಿ. ಪ್ರದೀಪ್ ಇದ್ದಾರೆ.

ಸೇವಾ ಭದ್ರತೆ ನೀಡುವ ಕುರಿತು ಕಾನೂನಾತ್ಮಕ ಅಂಶಗಳು ಹಾಗೂ ಇತರ ರಾಜ್ಯಗಳಲ್ಲಿ ಕೈಗೊಂಡಿರುವ ಕ್ರಮಗಳನ್ನು ಪರಿಶೀಲಿಸಿ ಕೈಗೊಳ್ಳಬಹುದಾದ ಕ್ರಮಗಳ ಕುರಿತು ಈ ಸಮಿತಿ ತಿಂಗಳ ಒಳಗೆ ಸ್ಪಷ್ಟ ಅಭಿಪ್ರಾಯ ನೀಡಬೇಕಿದೆ. ಪ್ರತಿ ಶೈಕ್ಷಣಿಕ ವರ್ಷದಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಮತ್ತು ಲಭ್ಯವಾಗುವ ಬೋಧನಾ ಕಾರ್ಯಭಾರಕ್ಕೆ ಅನುಗುಣವಾಗಿ ಪ್ರತಿ ವರ್ಷ ಕಾಯಂ ಉಪನ್ಯಾಸಕರನ್ನು ನೇಮಿಸಿಕೊಳ್ಳುವ ಸಲುವಾಗಿ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆಯೂ ವರದಿ ನೀಡಬೇಕಿದೆ.

ಕಾರ್ಯಭಾರ; ಗೌರವಧನ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಲಾ ಮತ್ತು ವಾಣಿಜ್ಯ ವಿಭಾಗಗಳ ಕಾಯಂ ಉಪನ್ಯಾಸಕರಿಗೆ ವಾರಕ್ಕೆ 16 ಗಂಟೆಗಳ ಕಾರ್ಯಭಾರವನ್ನು ನಿಗದಿಪಡಿಸಲಾಗಿದೆ. ಅದರಲ್ಲಿ ಅತಿಥಿ ಉಪನ್ಯಾಸಕರಿಗೆ ಅರ್ಧದಷ್ಟು, ಅಂದರೆ 8 ಗಂಟೆಯ ಕಾರ್ಯಭಾರ ವಹಿಸಲಾಗಿದೆ.

ವಿಜ್ಞಾನ, ಪ್ರಾಯೋಗಿಕ ತರಗತಿ ನಿರ್ವಹಿಸುವ ಕಾಯಂ ಉಪನ್ಯಾಸಕರಿಗೆ ವಾರಕ್ಕೆ 20 ಗಂಟೆಗಳ ಕಾರ್ಯಭಾರ ನಿಗದಿಪಡಿಸಲಾಗಿದ್ದು, ಅದರಲ್ಲಿ ಅರ್ಧದಷ್ಟು, ಅಂದರೆ ಗರಿಷ್ಠ 10 ಗಂಟೆಗಳ ಕಾರ್ಯಭಾರವನ್ನು ಅತಿಥಿ ಉಪನ್ಯಾಸಕರಿಗೆ ಕೊಡಲಾಗಿದೆ. ಅತಿಥಿ ಉಪನ್ಯಾಸಕರಿಗೆ 2017ರ ಏಪ್ರಿಲ್‌ಗಿಂತಲೂ ಮೊದಲು ಯುಜಿಸಿ ಅರ್ಹತೆ ಹೊಂದಿದವರಿಗೆ ₹ 11,500, ಹೊಂದಿಲ್ಲದವರಿಗೆ ₹ 9,500 ಗೌರವಧನ ನೀಡಲಾಗುತ್ತಿತ್ತು. 2017ರ ಏಪ್ರಿಲ್ 4ರಂದು ಸರ್ಕಾರ ಪರಿಷ್ಕೃತ ಆದೇಶ ಹೊರಡಿಸಿದ್ದು, ಯುಜಿಸಿ ಅರ್ಹತೆ ಹೊಂದಿದವರಿಗೆ ₹ 13,000, ಹೊಂದಿಲ್ಲದವರಿಗೆ ₹ 11 ಸಾವಿರ ನಿಗದಿಗೊಳಿಸಲಾಗಿದೆ.

ಅತಿಥಿ ಉಪನ್ಯಾಸಕರ ದುಡಿಮೆಯಲ್ಲೂ ಬೇಕು ಪಾಲು

ಪ್ರತಿ ಸಂಬಳಕ್ಕೂ ಲಂಚ ಕಡ್ಡಾಯ!

● ಕೆ.ನರಸಿಂಹಮೂರ್ತಿ

ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ ಸದಸ್ಯರು ಮೈಸೂರಿನಲ್ಲಿ ಬಜ್ಜಿ, ಬೋಂಡಾ, ತರಕಾರಿ ಮಾರಾಟ ಮಾಡಿ ಪ್ರತಿಭಟಿಸಿದ್ದರು. –ಸಂಗ್ರಹ ಚಿತ್ರ

ಮೈಸೂರು: ‘ವರ್ಷಕ್ಕೆ ಒಂದೆರಡು ಬಾರಿಯಷ್ಟೇ ಸಂಬಳ. ಅದಕ್ಕೂ ಲಂಚ ಕೊಡಬೇಕು...’

–ಸೇವೆ ಕಾಯಂ ಮತ್ತು ಉದ್ಯೋಗ ಭದ್ರತೆಗೆ ಸರ್ಕಾರದ ಮೊರೆ ಹೋಗಿರುವ ಅತಿಥಿ ಉಪನ್ಯಾಸಕರ ಸಂಕಟದ ಮಾತಿದು.

‘ಪ್ರತಿ ಬಾರಿ ಸಂಬಳ ಬ್ಯಾಂಕ್ ಖಾತೆಗೆ ಜಮೆಯಾಗಬೇಕೆಂದರೆ, ಕಾಲೇಜು ಗುಮಾಸ್ತರಿಗೆ ‘ಇಂತಿಷ್ಟು’ ಲಂಚ ಕೊಡಲೇಬೇಕು. ಅದು ‘ಖಜಾನೆಯ ಪಾಲು’. ಕಾಲೇಜಿನ ಉಪನ್ಯಾಸಕರ ಸಂಖ್ಯೆ, ಒಟ್ಟಾರೆ ವೇತನದ ಪ್ರಮಾಣ ಆಧರಿಸಿ ಲಂಚ ನಿರ್ಧಾರವಾಗುತ್ತದೆ’.

‘ವೇತನದ ಅನುದಾನ ಬಿಡುಗಡೆಯಾಗಿದೆ ಎಂಬ ಮಾಹಿತಿ ಬರುತ್ತಿದ್ದಂತೆಯೇ, ಉಪನ್ಯಾಸಕರ ತಂಡ ಜಾಗೃತವಾಗುತ್ತದೆ. ತಂಡದ ಯಾರಾದರೊಬ್ಬರು ನೇತೃತ್ವ ವಹಿಸಿ ಎಲ್ಲರಿಂದಲೂ ಹಣ ಸಂಗ್ರಹಿಸಿ ಗುಮಾಸ್ತರಿಗೆ ಕಾಲೇಜಿನಲ್ಲೇ ಕೊಡಬೇಕು. ಹಾಗೆ ಮಾಡದಿದ್ದರೆ, ಬಿಡುಗಡೆಯಾದ ಸಂಬಳ ಖಾತೆಗೆ ಬರಲು ಅದೆಷ್ಟು ದಿನ ಬೇಕಾಗುತ್ತದೋ ಗುಮಾಸ್ತರಿಗಷ್ಟೇ ಗೊತ್ತಿರುತ್ತದೆ’ ಎಂದು ಮೈಸೂರು ಜಿಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಹಿತರಕ್ಷಣಾ ಸಮಿತಿ ಅಧ್ಯಕ್ಷ, ಅತಿಥಿ ಉಪನ್ಯಾಸಕ ಎಸ್.ಸ್ವಾಮಿ ವಿಷಾದದಿಂದ ಹೇಳಿದರು.

‘ಪ್ರತಿಯೊಬ್ಬರೂ ನೂರು, ಇನ್ನೂರು, ಮುನ್ನೂರು ರೂಪಾಯಿ ಹೀಗೆ ಒಂದು ಲೆಕ್ಕದಲ್ಲಿ ಸಂಗ್ರಹಿಸುತ್ತಾರೆ. ಕೆಲವು ಸಾವಿರ ರೂಪಾಯಿಗಳನ್ನು ಒಟ್ಟುಗೂಡಿಸಿ ಕೊಡುತ್ತಾರೆ. ಇದು ಇವತ್ತಿನದಲ್ಲ. ಹತ್ತಾರು ವರ್ಷಗಳಿಂದ ಪಾಲಿಸಿಕೊಂಡು ಬರುತ್ತಿರುವ ಅಘೋಷಿತ ಸಂಪ್ರದಾಯ. ಈ ಕುರಿತು ಪ್ರಾಂಶುಪಾಲರದ್ದು ಜಾಣಮೌನ’ ಎಂದರು.

ಹುದ್ದೆಗೆ ಆಯ್ಕೆಯಾದ ಬಳಿಕ ಪ್ರಾಂಶುಪಾಲರ ಮರ್ಜಿಯಲ್ಲಿರಬೇಕು. ಹೆಚ್ಚುವರಿ ಕೆಲಸ ಹೇಳಿದರೆ, ಇಲ್ಲವೆನ್ನುವಂತಿಲ್ಲ. ಮಾಡಿದಷ್ಟು ಕೆಲಸಕ್ಕೆ ಸಂಬಳದ ಅನುಮೋದನೆ ಆಗದಿದ್ದರೆ, ಕೇಳುವಂತೆಯೂ ಇಲ್ಲ. ಕೇಳಿದರೆ, ‘ಅನುಮೋದನೆ ಆಗಿದ್ದಿಷ್ಟೇ. ಬೇಕಾದರೆ ಕಾಲೇಜು ಶಿಕ್ಷಣ ಇಲಾಖೆಯನ್ನು ಸಂಪರ್ಕಿಸಿ’ ಎಂಬ ಸೂಚನೆ. ಅಲ್ಲಿಯೂ ಸಮರ್ಪಕ ಉತ್ತರ ಅಲಭ್ಯ. ನಂತರ, ಮುಂದಿನ ವರ್ಷ ಆ ಕಾಲೇಜಲ್ಲಿ ಕೆಲಸ ಸಿಗುವುದು ಖಚಿತವಿರುವುದಿಲ್ಲ!

ಹತ್ತಾರು ವರ್ಷದ ಅನುಭವವಿದ್ದರೂ ಪ್ರತಿ ವರ್ಷವೂ ಹೊಸದಾಗಿ ಅರ್ಜಿ ಹಾಕಲೇಬೇಕು. ಸಹಾಯಕ ಪ್ರಾಧ್ಯಾಪಕರ ಹುದ್ದೆ ಭರ್ತಿಗಾಗಿ ಅರ್ಜಿ ಕರೆದಿರುವ ಲೋಕಸೇವಾ ಆಯೋಗವು ಅನುಭವವನ್ನು ಪರಿಗಣಿಸದಿರುವುದರಿಂದ ಹೆಚ್ಚುವರಿ ಅಂಕವಿಲ್ಲ. ಬಹುತೇಕರಿಗೆ ವಯೋಮಿತಿ ಮೀರಿರುವುದರಿಂದ ಅರ್ಜಿ ಹಾಕಲೂ ಸಾಧ್ಯವಾಗದೆ ಉದ್ಯೋಗದ ಕನಸು ಚೂರುಚೂರು. ಹೀಗಾಗಿ, ‘ಯಾವುದೋ ಒಂದು ಕೆಲಸ ಕೊಡಿ’ ಎಂಬುದು ಸದ್ಯದ ಹೊಸ ಆಗ್ರಹ.

ಅತಿಥಿ ಉಪನ್ಯಾಸಕರು ಒಂದಕ್ಕಿಂತ ಹೆಚ್ಚು ಕಾಲೇಜಲ್ಲಿ ಪಾಠ ಮಾಡುವಂತಿಲ್ಲ. ಹೀಗಾಗಿ ಮೂರು ದಿನವಷ್ಟೇ ಕೆಲಸ. ಉಳಿದ ದಿನಗಳಲ್ಲಿ ಕೃಷಿ, ಗಾರೆ, ಚಿಲ್ಲರೆ ವ್ಯಾಪಾರವೇ ಗಟ್ಟಿ. ಆಸ್ತಿ ಇದ್ದರೆ, ದಂಪತಿ ಇಬ್ಬರೂ ದುಡಿಯುತ್ತಿದ್ದರಷ್ಟೇ ನಿರಾಳ. ಪತಿಗೂ ಕೆಲಸವಿಲ್ಲದೆ, ಅತಿಥಿ ಉಪನ್ಯಾಸಕರಾಗಿ ಮನೆ ಹೊಣೆ ಹೊತ್ತ ಮಹಿಳೆಯರ ಪರಿಸ್ಥಿತಿ ಇನ್ನೂ ಕಷ್ಟ.

ಸಿಗುವ ಹಿಡಿಯಷ್ಟು ಸಂಬಳದಲ್ಲಿ ಮನೆ ಬಾಡಿಗೆ, ಹೆಂಡತಿ, ಮಕ್ಕಳು, ಅಪ್ಪ–ಅಮ್ಮನ ಯೋಗಕ್ಷೇಮ ನೋಡುವುದಾದರೂ ಹೇಗೆ? ಸ್ವಂತ ಖರ್ಚಿಗೂ ಹಣವಿರುವುದಿಲ್ಲ. ಇಂಥ ಅತಂತ್ರ ಪರಿಸ್ಥಿತಿಯಲ್ಲಿರುವ ಉಪನ್ಯಾಸಕರ ಪೈಕಿ ಶೇ 56ರಷ್ಟು ಮಹಿಳೆಯರಿದ್ದಾರೆ.

ಇಎಸ್‌ಐ, ಪಿಎಫ್ ಸೌಲಭ್ಯವಿಲ್ಲ. ಸತ್ತರೆ ಕುಟುಂಬದವರಿಗೆ ಪರಿಹಾರವಿಲ್ಲ. ಕೋವಿಡ್ ಬಂದಾಗಿನಿಂದ 68 ಮಂದಿ ಸಾವಿಗೀಡಾಗಿದ್ದಾರೆ. ಅತಿಥಿ ಉಪನ್ಯಾಸಕರ ಆತ್ಮಹತ್ಯೆ ಸರಣಿಯೂ ನಿಂತಿಲ್ಲ.

24 ಸಾವಿರ ಶಿಕ್ಷಕರ ಪೈಕಿ ಈಗ 14ಸಾವಿರ ಶಿಕ್ಷಕರ ನೇಮಕಕ್ಕೆ ಸರ್ಕಾರ ಮುಂದಾಗಿದೆ. ಉಳಿದವರ ಪಾಡೇನು? ಹೇಳೋರೂ ಇಲ್ಲ. ಕೇಳೋರೂ ಇಲ್ಲ.

ಜೀತಕ್ಕಿಂತ ಕಡೆಯಾದ ಅತಿಥಿ ಉಪನ್ಯಾಸ ವೃತ್ತಿ

● ಮನೋಜಕುಮಾರ್ ಗುದ್ದಿ

ಕಲಬುರಗಿ: ಉನ್ನತ ಶಿಕ್ಷಣ ಪಡೆದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಧ್ಯಾಪಕಿ ಆಗುವ ಕನಸು ಕಂಡಿದ್ದ ವಿಜಯಪುರದ ದಾನಮ್ಮ ಅವರಿಗೆ ಕೊನೆಗೂ ಸಿಕ್ಕಿದ್ದು ಕಾಲೇಜಿನಲ್ಲಿ ‘ಅತಿಥಿ ಉಪನ್ಯಾಸಕಿ’ಯ ಹುದ್ದೆ. ಅವರಿಗೆ ಸಿಗುತ್ತಿರುವ ತಿಂಗಳ ವೇತನ ₹ 13 ಸಾವಿರ. ಮನೆಯ ಬಾಡಿಗೆ, ಮಕ್ಕಳ ಶಾಲೆ, ತಮ್ಮ ಓಡಾಟದ ಖರ್ಚು ಕಳೆದು ಕೈಯಲ್ಲಿ ಏನೂ ಉಳಿಯುವುದಿಲ್ಲ. ಬದಲಿಗೆ ಮತ್ತೆ ತಿಂಗಳ ಕೊನೆಯಲ್ಲಿ ಸಾಲ ಮಾಡಬೇಕಾದ ಅನಿವಾರ್ಯತೆ.

ರಾಜ್ಯದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ವಿಶ್ವವಿದ್ಯಾಲಯಗಳಲ್ಲಿ ‘ಅತಿಥಿ’ ಉಪನ್ಯಾಸಕರಾಗಿ ಕೆಲಸ ಮಾಡುತ್ತಿರುವ ಬೋಧಕರ ಪರಿಸ್ಥಿತಿ ದಾನಮ್ಮ ಅವರಿಗಿಂತ ಭಿನ್ನವೇನಿಲ್ಲ. ಕಾಲೇಜಿನಲ್ಲಿ ತಮ್ಮ ಕೈಕೆಳಗೆ ಕೆಲಸ ಮಾಡುವ ‘ಡಿ’ ಗ್ರೂಪ್ ನೌಕರರಿಗೆ ಇರುವಷ್ಟು ಸಂಬಳ, ಭತ್ಯೆಗಳೂ ಅವರಿಗೆ ಇಲ್ಲ!

‘ವಿಶ್ವವಿದ್ಯಾಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಿದೆ. ಪದವಿ ಕಾಲೇಜು ಅತಿಥಿ ಉಪನ್ಯಾಸಕರಿಗೆ ಉತ್ತರ ಪತ್ರಿಕೆ ಮೌಲ್ಯಮಾಪನ ಮಾಡಲು ಅವಕಾಶವಿದೆ. ಆದರೆ, ವಿಶ್ವವಿದ್ಯಾಲಯದಲ್ಲಿನ ಉಪನ್ಯಾಸಕರಿಗೆ ಈ ಅವಕಾಶವೂ ಇಲ್ಲ.

ಸೆಮಿಸ್ಟರ್ ಆರಂಭದಿಂದ ಮುಕ್ತಾಯದವರೆಗೆ ಮಾತ್ರ ವೇತನ ಕೊಡುತ್ತಾರೆ. ಅದರಲ್ಲೂ ಒಂದೆರಡು ದಿನ ಗೈರಾದರೆ ವಿಭಾಗದ ಮುಖ್ಯಸ್ಥರು ಅದನ್ನೂ ಕಡಿತ ಮಾಡುತ್ತಾರೆ. ವಾರಕ್ಕೆ ಎಂಟು ತರಗತಿ ಬೋಧಿಸುವವರಿಗೆ ₹ 20 ಸಾವಿರ, 16 ತರಗತಿ ಬೋಧಿಸುವವರಿಗೆ ₹ 24 ಸಾವಿರ ಕೊಡುತ್ತಾರೆ. ಈ ತಾರತಮ್ಯ ನಿವಾರಿಸಬೇಕು’ ಎನ್ನುತ್ತಾರೆ ಗುಲಬರ್ಗಾ ವಿಶ್ವವಿದ್ಯಾಲಯ ವಿಭಾಗವೊಂದರ ಅತಿಥಿ ಉಪನ್ಯಾಸಕ.

‘ವಿಭಾಗದ ಕಾಯಂ ಪ್ರಾಧ್ಯಾಪಕರು ನಮ್ಮನ್ನು ನೋಡುವ ದೃಷ್ಟಿಕೋನವೇ ವಿಚಿತ್ರವಾಗಿದೆ. ಪ್ರತಿ ತಿಂಗಳೂ ನಾವು ತರಗತಿ ಲೆಕ್ಕದ ಜೊತೆಗೆ ‘ನೆಟ್’ ಪಾಸಾದ ಪ್ರಮಾಣಪತ್ರ ಸಲ್ಲಿಸಬೇಕು. ನೇಮಕ ಮಾಡುವಾಗ ಇದೆಲ್ಲ ಪರಿಶೀಲಿಸಿರುವುದಿಲ್ಲವೇ’ ಎಂದು ಅವರು ಪ್ರಶ್ನಿಸುತ್ತಾರೆ.



ಪಿಎಚ್.ಡಿ ಪದವಿ ಪಡೆದು ಕಾಯಂ ಉಪನ್ಯಾಸಕರಷ್ಟೇ ಕೆಲಸ ಮಾಡಿದರೂ ನಮಗೆ ₹18 ಸಾವಿರ, ಅವರಿಗೆ ₹1.80 ಲಕ್ಷ ವೇತನವಿದೆ. ಇಷ್ಟೊಂದು ತಾರತಮ್ಯ ಮಾಡಿದರೆ ಹೇಗೆ?

ಡಾ.ವೆಂಕನಗೌಡ ಪಾಟೀಲ
ಅತಿಥಿ ಉಪನ್ಯಾಸಕ, ಕರ್ನಾಟಕ ವಿ.ವಿ. ಧಾರವಾಡ

ಡಿ.10ರಿಂದ ನಡೆಯುತ್ತಿದೆ ಹೋರಾಟ

ಸೇವಾ ಭದ್ರತೆಯೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಅತಿಥಿ ಉಪನ್ಯಾಸಕರು 2021ರ ಡಿಸೆಂಬರ್ 10ರಿಂದ ರಾಜ್ಯದಾದ್ಯಂತ ಕೆಲಸ ಬಹಿಷ್ಕರಿಸಿ ಹೋರಾಟ ನಡೆಸುತ್ತಿದ್ದಾರೆ. ಹೀಗಾಗಿ, ಸದ್ಯ ಕಾಲೇಜುಗಳಲ್ಲಿ ಕಾಯಂ ಉಪನ್ಯಾಸಕರಿಂದಷ್ಟೇ ಪಾಠ ನಡೆಯುತ್ತಿವೆ. ಪೂರ್ಣಪ್ರಮಾಣದ ಬೋಧನೆ ಇಲ್ಲದ ಕಾರಣ ಕಾಲೇಜು ವಿದ್ಯಾರ್ಥಿಗಳಿಗೂ ತೊಂದರೆಯಾಗಿದೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಅತಿಥಿ ಉಪನ್ಯಾಸಕ ಹರ್ಷ ಶಾನಭೋಗ ಅವರು ಈಚೆಗೆ ಆತ್ಮಹತ್ಯೆ ಮಾಡಿಕೊಂಡಿದ್ದು, ಆ ನಂತರ ಹೋರಾಟ ತೀವ್ರ ಸ್ವರೂಪ ಪಡೆದುಕೊಂಡಿದೆ. ಡಿ.29ರಿಂದ ಹಲವಾರು ಉಪನ್ಯಾಸಕರು ತೀರ್ಥಹಳ್ಳಿಯಿಂದ ಬೆಂಗಳೂರುವರೆಗೆ ಪಾದಯಾತ್ರೆ ಆರಂಭಿಸಿದ್ದರು. ಆದರೆ, ಕೋವಿಡ್ ನಿಯಮಾವಳಿ ಪಾಲನೆ ಕಾರಣ ನೀಡಿ ಪೊಲೀಸರು ಅವರನ್ನು ತಡೆದಿದ್ದು, ಸದ್ಯ ತೀರ್ಥಹಳ್ಳಿ ಪಟ್ಟಣದಲ್ಲೇ ಹಲವರು ಧರಣಿ ನಡೆಸುತ್ತಿದ್ದಾರೆ. ಉಳಿದೆಡೆಯೂ ಪ್ರತಿಭಟನೆ ನಡೆಯುತ್ತಿವೆ.

‘ಹಿಂದಿನ ನ್ಯಾಯ ವ್ಯವಸ್ಥೆಯನ್ನೇ ಪಾಲನೆ ಮಾಡಿ ಕಾಯಂಗೊಳಿಸಿ’

1990ರಲ್ಲಿ ನಾನೂ ತಾತ್ಕಾಲಿಕ ಉಪನ್ಯಾಸಕನಾಗಿ ಕೆಲಸ ಮಾಡುತ್ತಿದ್ದೆ. ಆಗ ‘ಸ್ಟಾಪ್ ಕಾರ್ಪ್’ ಎಂದು ಕರೆಯಲಾಗುತ್ತಿತ್ತು. 90 ದಿನ ಕೆಲಸ ಮಾಡಿದ ಕೂಡಲೇ ಒಂದು ದಿನ ಬ್ರೇಕ್ ಕೊಡುತ್ತಿದ್ದರು. ಈ ರೀತಿ ದುಡಿಯುತ್ತಿರುವವರನ್ನು ಕಾಯಂ ಮಾಡಬೇಕು ಎಂದು ಹೈಕೋರ್ಟ್ ಮೆಟ್ಟಿಲೇರಿದಾಗ ನಮ್ಮ ಅರ್ಜಿ ಬಿದ್ದುಹೋಗಿತ್ತು. ಆದರೆ, ವಿದ್ಯಾರ್ಹತೆ ಇರುವ ಎಲ್ಲರನ್ನೂ ನೇಮಕ ಮಾಡಿಕೊಳ್ಳಿ ಎಂದು ಸುಪ್ರೀಂಕೋರ್ಟ್ ನಮ್ಮ ಪರ ತೀರ್ಪು ನೀಡಿತ್ತು. 1992ರಲ್ಲಿ ನಾವು ಕಾಯಂ ಆದೆವು.

ನಂತರ ‘ಸ್ಟಾಪ್ ಕಾರ್ಪ್’ ಹೋಗಿ ‘ಅರೆಕಾಲಿಕ ಉಪನ್ಯಾಸಕರು’ ಎಂಬ ಹುದ್ದೆ ಬಂತು. 2004ರಲ್ಲಿ ಕಾನೂನು ಹೋರಾಟ ನಡೆದಾಗ ನ್ಯಾಯಾಲಯವು ಅರೆಕಾಲಿಕ ಉಪನ್ಯಾಸಕರ ಪರವಾಗಿ ತೀರ್ಪು ನೀಡಿತು. ವಿದ್ಯಾರ್ಹತೆ ಮತ್ತು ಕೆಲಸ ಮಾಡಿದ ಅವಧಿಯನ್ನು ಪರಿಗಣಿಸಿ ಅವರನ್ನೂ ಕಾಯಂ ಮಾಡಲಾಯಿತು. ಅದೇ ನ್ಯಾಯವ್ಯವಸ್ಥೆಯ ಆಧಾರದಲ್ಲಿ ಈಗ ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸಬೇಕು.

ಈಚೆಗೆ ನಿವೃತ್ತಿಯಾದಾಗ ನನಗೆ ತಿಂಗಳಿಗೆ ₹ 2.37 ಲಕ್ಷ ವೇತನ ಇತ್ತು. ನನ್ನಷ್ಟೇ ದುಡಿಯುವ ಅತಿಥಿ ಉಪನ್ಯಾಸಕರ ತಿಂಗಳ ವೇತನ ನನ್ನ ಎರಡು ದಿನಗಳ ವೇತನಕ್ಕಿಂತಲೂ ಕಡಿಮೆ. ಇದು ಯಾವ ನ್ಯಾಯ?

ದೆಹಲಿಯಲ್ಲಿ ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸಲಾಗಿದೆ. ಪಶ್ಚಿಮ ಬಂಗಾಳದಲ್ಲಿ 10 ವರ್ಷ ಸೇವೆ ಸಲ್ಲಿಸಿದವರಿಗೆ ₹ 35 ಸಾವಿರ, 10 ವರ್ಷದೊಳಗಿನವರಿಗೆ ₹ 30 ಸಾವಿರ ನಿಗದಿಗೊಳಿಸಿ, ಸೇವಾ ಭದ್ರತೆ ನೀಡಲಾಗಿದೆ. ನಮ್ಮಲ್ಲಿ ಈ ಹಿಂದೆ ಕಾಯಂ ಮಾಡುವಾಗ ಅರ್ಹತೆ ಇಲ್ಲದೇ ಇದ್ದರೆ, ಪರೀಕ್ಷೆ ಪಾಸ್ ಮಾಡಿದರೆ ಯುಜಿಸಿ ಸ್ಕೇಲ್, ಮಾಡದಿದ್ದರೆ ಸ್ಟೇಟ್ ಸ್ಕೇಲ್, ಇಲ್ಲವೇ ಪಿಯುಗೆ ಉಪನ್ಯಾಸಕರಾಗಿ ಹೋಗಲು ಅವಕಾಶ ನೀಡಲಾಗಿತ್ತು. ಇವೆಲ್ಲವನ್ನು ಸರ್ಕಾರ ಈಗ ಪರಿಗಣಿಸಬಹುದು.

ಪ್ರೊ.ಎ.ಬಿ. ರಾಮಚಂದ್ರಪ್ಪ, ಶಿಕ್ಷಣ ತಜ್ಞರು, ದಾವಣಗೆರೆ

‘ಸಕ್ರಮಾತಿಗೆ ಕಾನೂನು ತೊಡಕು’

ಒಂದನೇ ಪುಟದಿಂದ...

‘ಅಲ್ಲದೆ, ಅತಿಥಿ ಉಪನ್ಯಾಸಕರ ಸೇವೆಯನ್ನು ಸಕ್ರಮಗೊಳಿಸುವಂತೆ ಕೋರಿ ವೀರಣ್ಣ ಎಸ್. ಸಜ್ಜನರ್ ಮತ್ತು ಇತರರು (2012), ಕೆ.ಆರ್. ವಿಶ್ವಕುಮಾರ್ ಮತ್ತು ಇತರರು (2014), ಜಯಚಂದ್ರ ಕೆ.ಇ ಮತ್ತು ಇತರರು (2017), ಇತ್ತೀಚಿನ ಸಕಲೇಶ್ ಎಚ್.ಜಿ. ಮತ್ತು ಇತರರು (2020) ಸಲ್ಲಿಸಿದ್ದ ಅರ್ಜಿಯನ್ನು ಉಮಾದೇವಿ ಪ್ರಕರಣದ ತೀರ್ಪು ಹಾಗೂ ಸೇವಾ ಅವಧಿ ಆಧರಿಸಿ ತಾತ್ಕಾಲಿಕ ನೌಕರರನ್ನು ಸಕ್ರಮ ಮಾಡಲು ಪರಿಗಣಿಸಲು ಅರ್ಹರಾಗಿರುವುದಿಲ್ಲವೆಂಬ ನಿಲುವು ಆಧರಿಸಿ ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ವಜಾಗೊಳಿಸಿದೆ’

1,242 ಹುದ್ದೆಗಳ ಭರ್ತಿಗೆ ಕೆಇಎ ಮೂಲಕ ಪ್ರಕ್ರಿಯೆ ನಡೆಯುತ್ತಿದೆ. ಕಾರ್ಯಭಾರವನ್ನು ಕಾಯಂ ಉಪನ್ಯಾಸಕರಿಗೆ ಹಂಚಿದ ಬಳಿಕ ಉಳಿದ ಕಾರ್ಯಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರನ್ನು ನೇಮಿಸಲಾಗುತ್ತಿದೆ. ಅತಿಥಿ ಉಪನ್ಯಾಸಕರನ್ನು ನೇಮಕಾತಿ ನಿಯಮಗಳ ಅನ್ವಯ ಹಾಗೂ ಪೂರ್ಣಕಾಲಿಕ ಕಾರ್ಯಭಾರಕ್ಕೆ ನೇಮಿಸಿಕೊಳ್ಳುವುದಿಲ್ಲ. ತಾತ್ಕಾಲಿಕವಾಗಿ ಗರಿಷ್ಠ 8–10 ಗಂಟೆಯ ಕಾರ್ಯಭಾರಕ್ಕೆ ಮಾತ್ರ ನೇಮಿಸಿಕೊಳ್ಳುವುದರಿಂದ ಅವರಿಗೆ ಯುಜಿಸಿ ನಿಯಮಗಳ ಅನ್ವಯ ವೇತನ ಪಾವತಿಸಲು ಅವಕಾಶ ಇಲ್ಲ’ ಎಂದೂ ಸ್ಪಷ್ಟಪಡಿಸಿದ್ದಾರೆ.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 9-1-1997

● **ತಮಿಳುನಾಡಿಗೂ ನಿರ್ಬಂಧ ಹೇರಲು ಆಗ್ರಹ**

ನವದೆಹಲಿ, ಜ. 8– ನ್ಯಾಯಮಂಡಳಿಯ ಅಂತಿಮ ತೀರ್ಪು ಬರುವವರೆಗೆ ತಮಿಳುನಾಡಿಗೆ ಪ್ರತಿವರ್ಷ 205 ಟಿಎಂಸಿ ನೀರನ್ನು ಬಿಡಬೇಕೆಂಬ ಹಿಂದಿನ ಆದೇಶದ ಕ್ರಮಬದ್ಧತೆಯನ್ನು ಕರ್ನಾಟಕ ಇಂದು ಕಾವೇರಿ ಜಲ ವಿವಾದ ನ್ಯಾಯಮಂಡಳಿಯ ಮುಂದೆ ಬಲವಾಗಿ ಪ್ರಶ್ನಿಸಿತು.

‘ಕರ್ನಾಟಕದ ವಾಸ್ತವ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಿ; ಕರ್ನಾಟಕಕ್ಕೆ ವಿಧಿಸಿರುವಂತೆ ತಮಿಳುನಾಡಿಗೂ ಕೆಲವು ನಿರ್ಬಂಧಗಳನ್ನು ಹಾಕಬೇಕು’ ಎಂದು ಒತ್ತಾಯಿಸಿತು.

50 ವರ್ಷಗಳ ಹಿಂದೆ

ಭಾನುವಾರ, 9-1-1972

● **ಬಂಧಮುಕ್ತ ಷೇಖ್ ಮುಜೀಬರ್ ರೆಹಮಾನ್ ಲಂಡನ್ನಿನಲ್ಲಿ**

ಲಂಡನ್, ಜ. 8– ಪಾಕಿಸ್ತಾನ ಬಂಧನದಿಂದ ಬಿಡುಗಡೆ ಹೊಂದಿದ ಷೇಖ್ ಮುಜೀಬರ್ ರೆಹಮಾನ್ ಅವರು ಇಂದು ಬೆಳಿಗ್ಗೆ 12 ಗಂಟೆಗೆ ಅನಿರೀಕ್ಷಿತವಾಗಿ ಇಲ್ಲಿನ ಹೀಥ್ರೋ ವಿಮಾನ ನಿಲ್ದಾಣದಲ್ಲಿ ಬಂದಿಳಿದರು.

ಪಾಕಿಸ್ತಾನದ ವಿಮಾನದಲ್ಲೇ ರಾವಲ್ಪಿಂಡಿಯಿಂದ ಹೊರಟು ಇಲ್ಲಿಗೆ ಆಗಮಿಸಿದ್ದು ಬ್ರಿಟಿಷ್ ಸರ್ಕಾರದ ಅಧಿಕಾರಿಗಳನ್ನು ಚಕಿತಗೊಳಿಸಿತು. ಅವರ ಲಂಡನ್ ಕಾರ್ಯಕ್ರಮಗಳ ಬಗ್ಗೆ ಸೂಚನೆಗಳೇನೂ ಇಲ್ಲವಾದರೂ ಭಾನುವಾರ ಅಥವಾ ಸೋಮವಾರ ಢಾಕಾಕ್ಕೆ ಹೋಗಬಹುದೆಂದು ಭಾವಿಸಲಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಜನವರಿ 9, 2022

ಶ್ರೀಪ್ಲವನಾಮ ಸಂವತ್ಸರ ದಕ್ಷಿಣಾಯಣ –ಹೇಮಂತ ಋತು ಧನುರ್ಮಾಸದ 24ನೇ ದಿನ, ತಿಥಿ: (ಪೌಷ ಶುಕ್ಲ) ಸಪ್ತಮಿ ಗಂ. 11-09 ನಕ್ಷತ್ರ: ಉತ್ತರಾಭಾದ್ರಾ ಗಂ. 07-10 ಯೋಗ: ಪರಿಘ ಗಂ. 10-49, ಕರಣ: ವಣ ಜ ಗಂ. 11-09. ರಾಹುಕಾಲ : ಸಾಯಂಕಾಲ 04:30–06:00, ಸೂರ್ಯೋದಯ : 07-00 ಸೂರ್ಯಾಸ್ತ : 06-16, ಮುಸ್ಲಿಂ ದಿನಾಂಕ : 05 ಜುಮಾದುಸ್ಸಾನಿ, ದಿನ ವಿಶೇಷ : ಗುರುಗೋವಿಂದ ಸಿಂಗ್ ಅವರ ಜನ್ಮದಿನ, ಅದೃಷ್ಟ ಸಂಖ್ಯೆ: 7, 11

ಮೇಷ: ಸಗಟು ವ್ಯಾಪಾರಿಗಳಿಗೆ ಹೇರಳ ಲಾಭ ಇರಲಿದೆ. ನೀವು ಕೈಗೊಂಡ ಕಾರ್ಯಗಳು ನಿರಾಯಾಸವಾಗಿ ನೆರವೇರುವುದರಲ್ಲಿ ಸಂಶಯವಿಲ್ಲ. ಆರ್ಥಿಕ ಸೌಕರ್ಯ. ಪ್ರಗತಿಯ ಲಕ್ಷಣಗಳು ನಿಚ್ಚಳವಾಗಿ ತೋರಿಬರುವುದು.

ವೃಷಭ: ಸ್ನೇಹಿತರಲ್ಲಿ ಅನಗತ್ಯವಾಗಿ ಮಾತನಾಡುವುದಕ್ಕಿಂತ ಮೌನವಾಗಿ ಇರುವುದು ಲೇಸು. ನಿರುದ್ಯೋಗಿಗಳಿಗೆ ಉತ್ತಮ ಕೆಲಸ ದೊರೆಯಲಿದೆ. ತೀರ್ಥಯಾತ್ರೆ ಮತ್ತು ಪುಣ್ಯಕ್ಷೇತ್ರಗಳಿಗೆ ಹೋಗಿಬರುವ ಸಾಧ್ಯತೆಗಳಿವೆ.

ಮಿಥುನ: ಯುವ ಕಲಾವಿದದರಿಗೆ ಹೆಚ್ಚು ಪ್ರೋತ್ಸಾಹ ಅವಕಾಶಗಳು ಲಭಿಸುವುದು. ಎಂದಿನಂತೆ ಮನಸ್ಸು ಹೆಚ್ಚು ಉಲ್ಲಾಸದಿಂದ ಕೂಡಿರುವುದರಿಂದ ಕೆಲಸ ಕಾರ್ಯಗಳು ಸರಾಗವಾಗಿ ನಡೆಯುವುದು. ಆರೋಗ್ಯದಲ್ಲಿ ಚೇತರಿಕೆ.

ಕರ್ಕಾಟಕ: ಸಕ್ರಿಯ ಹಾಗೂ ಕಾರ್ಯಮಗ್ನತೆಯಿಂದ ಯೋಜನೆಗಳು ಮುಕ್ತಾಯ ಹಂತಕ್ಕೆ ತಲುಪುವುವು. ಬದುಕಿನಲ್ಲಿ ನೆಲೆ ನಿಂತ ಅನುಭವ. ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಗೆ ವಿಶೇಷ ಪ್ರಯತ್ನ ಅಗತ್ಯವೆನಿಸಲಿದೆ.

ಸಿಂಹ: ಪೂಜಾದಿ ಕಾರ್ಯ ನಡೆಸಿ ಧರ್ಮಕಾರ್ಯಗಳಿಗೆ ಹಣ ವಿನಿಯೋಗ. ಕಚೇರಿಯಲ್ಲಿ ಸಹವರ್ತಿಗಳೊಂದಿಗೆ ಸ್ನೇಹಭಾವದಿಂದ ವರ್ತಿಸಿ. ಲೇವಾದೇವಿ ವ್ಯವಹಾರಗಳಿಂದ ಗಳಿಸಿದ ಹಣ ಒಳ್ಳೆಯ ಕಾರ್ಯಗಳಿಗೆ ಸಹಾಯವಾಗುವುದು.

ಕನ್ಯಾ: ಮಕ್ಕಳ ವಿದ್ಯಾಭ್ಯಾಸ ಉತ್ತಮವಾಗಿರುವುದು. ನಿಮ್ಮ ಸಲಹೆ–ಸೂಚನೆಗಳನ್ನು ಹೆಚ್ಚು ಚರ್ಚಿಸದೆ ಮೇಲಧಿಕಾರಿಗಳು ಒಪ್ಪಿಕೊಳ್ಳುವರು. ಸದಾಕಾಲದಲ್ಲಿ ನಿಮ್ಮ ಸಕಾರಾತ್ಮಕ ನಡವಳಿಕೆಗಳಿಂದಾಗಿ ಲಾಭ ಕಂಡುಕೊಳ್ಳಲಿದ್ದೀರಿ.

ತುಲಾ: ಕುಟುಂಬದಲ್ಲಿ ಅಥವಾ ಅಕ್ಕಪಕ್ಕದ ವ್ಯಕ್ತಿಗಳಲ್ಲಿ ಬಾಂಧವ್ಯ ವೃದ್ಧಿಯಾಗಲಿದೆ. ಶಿಕ್ಷಣ ವೃತ್ತಿಯಲ್ಲಿರುವವರಿಗೆ ಒತ್ತಡ ವೃದ್ಧಿ ಹಾಗೂ ಶೈಕ್ಷಣಿಕ ರಂಗದಲ್ಲಿನ ನಿಮ್ಮ ಚಟುವಟಿಕೆಗಳಿಂದ ಉತ್ತಮ ಹೆಸರನ್ನು ಸಂಪಾದಿಸುವಿರಿ.

ವೃಶ್ಚಿಕ: ವ್ಯಕ್ತಿಯ ಮನಃ ಪರಿವರ್ತನೆ ಮಾಡುವ ವಿಚಾರದಲ್ಲಿ ಸಫಲರಾಗುತ್ತೀರಿ. ಮನೆಯಲ್ಲಿ ವಿವಾಹ, ಗೃಹಪ್ರವೇಶದಂತಹ ಶುಭಕಾರ್ಯಗಳು ನೆರವೇರುವುದು. ಹೊಸ ಸ್ಥಳದಲ್ಲಿ ಹೊಂದಿಕೊಳ್ಳಲು ಕೆಲ ಸಮಯ ಬೇಕೆನಿಸುವುದು.

ಧನು: ಈ ದಿನ ಎಲೆಕ್ಟ್ರಾನಿಕ್, ಎಲೆಕ್ಟ್ರಿಕಲ್ ಕ್ಷೇತ್ರದಲ್ಲಿರುವವರಿಗೆ ನಿರೀಕ್ಷೆಗೂ ಮೀರಿದ ಸಂಪಾದನೆ. ಹಲವು ದಿನಗಳಿಂದ ಜೀವನದಲ್ಲಿ ಬೇಸರಗೊಂಡಿರುವ ನೀವು ಈ ದಿನದ ಅಂತ್ಯದಲ್ಲಿ ಮಾನಸಿಕವಾಗಿ ಸದೃಢರಾಗುವಿರಿ.

ಮಕರ: ಮನೆಯವರ ಆರೋಗ್ಯದಲ್ಲಿ ಹೊಟ್ಟೆಗೆ ಸಂಬಂಧಿಸಿದಂತೆ ವ್ಯತ್ಯಾಸಗಳು ಕಂಡುಬಂದಲ್ಲಿ ವೈದ್ಯರನ್ನು ಭೇಟಿಮಾಡಿ ತಪಾಸಣೆಯನ್ನು ಮಾಡಿಸಿಕೊಳ್ಳಿ. ಆಸ್ತಿ ಖರೀದಿ, ಮನೆ ಕಟ್ಟುವ ವಿಚಾರದಲ್ಲಿ ಅದೃಷ್ಟ ನಿಮ್ಮ ಪಾಲಿಗಿರುವುದು.

ಕುಂಭ: ಇಂದಿನ ಎಲ್ಲಾ ಸನ್ನಿವೇಶಗಳು ನಿಮ್ಮ ವಿರೋಧವಾಗಿ ಇರುವುದರಿಂದ ಮನಸ್ಸಿಗೆ ನಕಾರಾತ್ಮಕ ಯೋಚನೆಗಳು ಬರಲಿದೆ. ಪಾಲುದಾರರೊಂದಿಗೆ ಕೇವಲ ಮಾತುಕತೆ ನಡೆಸಿ, ಯಾವುದೇ ಕಾಗದ ಪತ್ರಗಳಿಗೆ ಸಹಿ ಹಾಕದಿರಿ.

ಮೀನ: ಶುಭ ಕಾರ್ಯಗಳಿಗೆ ಓಡಾಟ ಇಂದಿನಿಂದ ಪ್ರಾರಂಭವಾಗಲಿದೆ. ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವ ಸಂದರ್ಭ ಒದಗಿಬರಲಿದೆ. ಆಸ್ತಿಯ ಸಮಸ್ಯೆಗಳು ಮಾತುಕತೆಯ ಮೂಲಕ ಇತ್ಯರ್ಥವಾಗುವುದು.

ಪದಬಂಧ 4833

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಭಾಗಿಸುವ ಸಂಖ್ಯೆಯಿದು (3)
3.ನೂರರ ಗುಂಪು (3)
5.ಹಾದಿಯನ್ನು ತೋರಿಸುವವನೀತ (5)
6.ಶರಧಿಯೊಳಗೆ ಬಿದ್ದಿರುವ ಬಾಣ! (2)
8.ಮಾತು ಬಾರದವನು (2)
9.ಶಂಕೆ ಯಾಕೆ? ಇಲ್ಲಿದೆ ಹತೋಟಿ! (2)
10.ಕಲಾವಿದನು ತೆರೆದ ಬಾಗಿಲು (2)
14.ಮಂದಿಗೆಲ್ಲಾ ಗೊತ್ತಾಗಿದ್ದುದು (5)
15.ಕನ್ನಡ ಭಾಷೆಗೆ ಲೇಪಿಸಿದ ಸುಗಂಧ ದ್ರವ್ಯ (3)
16.ದರ್ಶನವೂ ಆದ ಉಡುಗೊರೆ! (3)

ಮೇಲಿಂದ ಕೆಳಕ್ಕೆ

1.ಚಿತ್ತವೃತ್ತಿಯ ತೀವ್ರತೆ (4)
2.ಅರ್ಧಚಂದ್ರಾಕೃತಿಯ ರಚನೆ (3)
3.ಕಟ ಕಟ ಶಬ್ದ ಮಾಡುತ್ತಿರುವ ಬಂಡಿ (3)
4.ಈತ ಲೆಕ್ಕಬರೆಯುವವನು (4)
7.ಕುಪ್ಪಸವನ್ನು ಹೀಗೂ ಹೇಳಬಹುದು (3)
8.ಗಣಪತಿಯ ವಾಹನ (3)
9.ಮಂಗಳ ಗ್ರಹವಿದು (4)
11.ಬಲಾತ್ಕಾರದ ಆಡಳಿತ (4)
12.ಹಳೆ ಸಾಮಾನುಗಳನ್ನು ಮಾರುವ ಅಂಗಡಿ (3)
13.ಉತ್ಸುಕತೆಯಿಂದ ಉಲ್ಟಾ ಪಲ್ಟಾ ಆಗಿಬಿಟ್ಟದೆ (3)



4832ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. 3.ತಾರಾಪುಂಜ 5.ನಗದು
6.ಮಾವಟಿಗ 8.ಗಡಿಪಾರು
12.ಪ್ರಕರಣ 14.ಅನುವಾದ
15.ವರಾಹ 16.ವಿದ್ಯಮಾನ

ಮೇಲಿಂದ ಕೆಳಕ್ಕೆ:
1.ಸ್ಥಾನಬದ್ಧತೆ 2.ಮದುಮಗ
3.ತಾರುಮಾರು 4.ಕಡಗ
7.ಟಿಕೆ 9.ಪಾಚಕ 10.ಛಾಯಾಗ್ರಹಣ
11.ಜೇನು 12.ಪ್ರದರ್ಶನ
13.ಣಗುವಳ 14.ಅಡವಿ

ಸುಡೊಕು 5219

						5		7
	2		6		7		4	
		5		4			9	1
	4				1		7	
8				2			1	4
	9		7			6		
9				3		4		
			4		8		2	
2		4						3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5218 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಜೆಪಿಗೆ ಅಧಿಕಾರ ಉಳಿಸಿಕೊಳ್ಳುವ ತವಕ: ಕಾಂಗ್ರೆಸ್‌ಗೆ ಚುನಾವಣೆ ನಿರ್ಣಾಯಕ: ವ್ಯಾಪ್ತಿ ವಿಸ್ತರಿಸಲು ಟಿಎಂಸಿ, ಎಎಪಿ ಉತ್ಸುಕ

ಐದು ರಾಜ್ಯಗಳಲ್ಲಿ ಪಕ್ಷಗಳ ಬಲಾಬಲ

ಐದು ರಾಜ್ಯಗಳ ವಿಧಾನಸಭೆಯ ಚುನಾವಣಾ ದಿನಾಂಕವನ್ನು ಚುನಾವಣಾ ಆಯೋಗವು ಪ್ರಕಟಿಸಿದೆ. ರಾಷ್ಟ್ರ ರಾಜಕಾರಣದಲ್ಲಿ ಮಹತ್ವದ್ದಾದ ಉತ್ತರ ಪ್ರದೇಶದಲ್ಲಿಯೂ ಚುನಾವಣೆ ನಡೆಯಲಿದೆ. ಈ ಐದು ರಾಜ್ಯಗಳ ಪೈಕಿ ಉತ್ತರ ಪ್ರದೇಶ, ಉತ್ತರಾಖಂಡ, ಮಣಿಪುರ ಮತ್ತು ಗೋವಾದಲ್ಲಿ ಬಿಜೆಪಿ ಸರ್ಕಾರ ಇದೆ. ಪಂಜಾಬ್‌ನಲ್ಲಿ ಕಾಂಗ್ರೆಸ್ ಸರ್ಕಾರ ಇದೆ. ಚುನಾವಣೆಯ ಹೊಸ್ತಿಲಲ್ಲಿ ಈ ರಾಜ್ಯಗಳಲ್ಲಿ ಪಕ್ಷಗಳ ಸ್ಥಿತಿಗತಿ ಹೇಗಿದೆ ಎಂಬ ಚಿತ್ರಣ ಇಲ್ಲಿದೆ

ಬಿಜೆಪಿ | ಎಡಿಎಸ್ | ಎಸ್‌ಪಿ | ಕಾಂಗ್ರೆಸ್ | ಬಿಎಸ್‌ಪಿ | ಇತರೆ | ಖಾಲಿ | ಎಎಪಿ | ಎಸ್‌ಎಡಿ | ಎಲ್‌ಐಪಿ | ಜಿಎಫ್‌ಪಿ | ಜಿಎಫ್‌ಪಿ | ಎನ್‌ಪಿಪಿ

ಉತ್ತರ ಪ್ರದೇಶ ವಿಧಾನಸಭೆ: ಈಗಿನ ಬಲಾಬಲ
(ಒಟ್ಟು ಸ್ಥಾನ 403) (ಬಹುಮತ 202)



ಪಂಜಾಬ್ ವಿಧಾನಸಭೆ: ಈಗಿನ ಬಲಾಬಲ
(ಒಟ್ಟು ಸ್ಥಾನ 117) (ಬಹುಮತ 59)



ಗೋವಾ: ವಿಧಾನಸಭೆ: ಈಗಿನ ಬಲಾಬಲ
(ಒಟ್ಟು ಸ್ಥಾನ 40) (ಬಹುಮತ 21)



ಉತ್ತರಾಖಂಡ: ವಿಧಾನಸಭೆ: ಈಗಿನ ಬಲಾಬಲ
(ಒಟ್ಟು ಸ್ಥಾನ 70) (ಬಹುಮತ 63)



ಮಣಿಪುರ: ವಿಧಾನಸಭೆ: ಈಗಿನ ಬಲಾಬಲ
(ಒಟ್ಟು ಸ್ಥಾನ 60) (ಬಹುಮತ 31)



ಉತ್ತರ ಪ್ರದೇಶ: ಸುಲಭವಿಲ್ಲ ಬಿಜೆಪಿ ಗೆಲುವು

ದೇಶದ ಅತಿಹೆಚ್ಚು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಉತ್ತರ ಪ್ರದೇಶ ಚುನಾವಣೆಯು ರಾಷ್ಟ್ರ ರಾಜಕಾರಣದ ದೃಷ್ಟಿಯಿಂದ ಅತಿಮುಖ್ಯವಾದದ್ದು. ಹೀಗಾಗಿ ಉತ್ತರ ಪ್ರದೇಶ ಚುನಾವಣೆಯು ಎಲ್ಲ ರಾಜಕೀಯ ಪಕ್ಷಗಳಿಗೂ ಪ್ರತಿಷ್ಠೆಯ ಪ್ರಶ್ನೆ. 2017ರ ಚುನಾವಣೆಯಲ್ಲಿ ಭಾರಿ ಜಯ ಗಳಿಸಿದ್ದ ಬಿಜೆಪಿಯು ಯೋಗಿ ಆದಿತ್ಯನಾಥ ಅವರನ್ನು ಮುಖ್ಯಮಂತ್ರಿಯನ್ನಾಗಿ ಹೆಸರಿಸಿತು. ಪ್ರಧಾನಿ ನರೇಂದ್ರ ಮೋದಿ ಅವರ ಪ್ರಭಾವಳಿಯಿಂದ 20 ವರ್ಷಗಳ ಬಳಿಕ ಪಕ್ಷ ಅಧಿಕಾರ ಹಿಡಿಯಿತು. ಬಿಜೆಪಿಗೆ ಮುನ್ನ ಅಧಿಕಾರ ನಡೆಸಿದ್ದ ಮಾಯಾವತಿ ನೇತೃತ್ವದ ಬಿಎಸ್‌ಪಿ ಚುನಾವಣೆಯಲ್ಲಿ ಹೀನಾಯ ಸೋಲು ಕಂಡಿತು. ಮುಲಾಯಂ–ಅಖಿಲೇಶ್ ನೇತೃತ್ವದ ಸಮಾಜವಾದಿ ಪಕ್ಷದ ಸೈಕಲ್ ಸಹ ಓಡಲಿಲ್ಲ.

ಆದರೆ, ಈ ಬಾರಿ ಚಿತ್ರಣ ಬದಲಾಗಿದೆ ಎಂಬ ಭಾವನೆ ವಿಶ್ಲೇಷಕರಲ್ಲಿ ಇದೆ. ಗೆಲುವು ಬಿಜೆಪಿಗೆ ಸರಳವಾಗಿಲ್ಲ ಎಂದು ಚುನಾವಣಾ ಪೂರ್ವ ಸಮೀಕ್ಷೆಗಳು ಅಭಿಪ್ರಾಯಪಟ್ಟಿವೆ. ರೈತರ ಸುದೀರ್ಘ ಪ್ರತಿಭಟನೆ, ಲಖಿಂಪುರ–ಖೇರಿಯಲ್ಲಿ ರೈತರ ಮೇಲೆ ಎಸ್‌ಯುವಿ ಹರಿಸಿದ ಪ್ರಕರಣ ಪಕ್ಷದ ಗೆಲುವಿಗೆ ಅಡ್ಡಿಯಾಗುವ ಸಾಧ್ಯತೆಯಿದೆ. ಸಮಾಜವಾದಿ ಪಕ್ಷವು ತಳಮಟ್ಟದಿಂದ ಪಕ್ಷವನ್ನು ಸಂಘಟಿಸಿದ್ದು, ಅದು ಫಲಿತಾಂಶದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ವಿಶ್ಲೇಷಕರು ಹೇಳುತ್ತಾರೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಒಂದು ವರ್ಷದಿಂದ ರಾಜ್ಯದಲ್ಲಿ ಬೀಡುಬಿಟ್ಟಿದ್ದು, ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಮಹಿಳೆಯರನ್ನು ಸಂಘಟಿಸುತ್ತಿದ್ದಾರೆ. ಅಚ್ಚರಿಯೆಂದರೆ, ಚುನಾವಣೆ ಘೋಷಣೆಯಾದರೂ, ಮಾಯಾವತಿ ಅವರು ಇನ್ನೂ ಪ್ರಚಾರ ಕಣಕ್ಕೆ ಧುಮುಕಿಲ್ಲ. ಪಕ್ಷದ ಬಹುತೇಕ ನಾಯಕರು, ಶಾಸಕರು ಬಿಜೆಪಿ ಹಾಗೂ ಸಮಾಜವಾದಿ ಪಕ್ಷಗಳಿಗೆ ವಲಸೆ ಹೋಗಿರುವುದು ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಪಂಜಾಬ್‌ನಲ್ಲಿ ಚುಕ್ಕಾಣಿ ಹಿಡಿಯುತ್ತಾ ಎಎಪಿ?

2017ರ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಕ್ಯಾಪ್ಟನ್ ಅಮರಿಂದರ್ ಸಿಂಗ್ ನೇತೃತ್ವದಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತ ಗಳಿಸಿತ್ತು. ಆದರೆ ಈಗ ಅಲ್ಲಿನ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ನವಜೋತ್ ಸಿಂಗ್ ಸಿಧು ಅವರನ್ನು ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸಿದ ಬಳಿಕ ಅಮರಿಂದರ್ ಸಿಂಗ್ ಅವರು ಪಕ್ಷ ತೊರೆದು ಹೊರನಡೆದಿದ್ದಾರೆ. ಅವರ ಹೊಸ ಪಕ್ಷವು ಬಿಜೆಪಿ ಜೊತೆ ಚುನಾವಣಾ ಹೊಂದಾಣಿಕೆ ಮಾಡಿಕೊಂಡಿದೆ. ಮುಖ್ಯಮಂತ್ರಿಯಾಗಿ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ಆಯ್ಕೆ ಮಾಡಿದ್ದಕ್ಕೆ ಪಕ್ಷದಲ್ಲಿ ವಿರೋಧವಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಪಂಜಾಬ್ ಭೇಟಿ ವೇಳೆ ಉಂಟಾದ ಭದ್ರತಾಲೋಪದ ಕಾರಣ, ಸರ್ಕಾರವು ವ್ಯಾಪಕ ಟೀಕೆಗೆ ಗುರಿಯಾಗಿದೆ.

ದೆಹಲಿಯ ಆಚೆಗೆ ಅಧಿಕಾರ ಹಿಡಿಯುವ ಆಕಾಂಕ್ಷೆಯಲ್ಲಿದ್ದ ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) ಕಳೆದ ಚುನಾವಣೆಯಲ್ಲಿ 20 ಸೀಟುಗಳು ಸಿಕ್ಕಿದ್ದವು. ಎಎಪಿಯು ಪಂಜಾಬ್‌ನಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ ಎಂದು ಈ ಬಾರಿಯ ಚುನಾವಣಾ ಪೂರ್ವ ಸಮೀಕ್ಷೆಗಳು ಅಂದಾಜಿಸಿವೆ. ಕಾಂಗ್ರೆಸ್‌ನಲ್ಲಾಗಿರುವ ಬೆಳವಣಿಗೆಗಳು ಎಎಪಿಗೆ ಲಾಭವಾಗುವ ಸಾಧ್ಯತೆಯಿದೆ. ಜೊತೆಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ ಛಾಪು ಮೂಡಿಸಿದೆ. ಚಂಡೀಗಢ ಮಹಾನಗರ ಪಾಲಿಕೆಯಲ್ಲಿ ಸಿಕ್ಕ ಭಾರಿ ಗೆಲುವು, ವಿಧಾನಸಭಾ ಚುನಾವಣೆಗೆ ಪಕ್ಷದಲ್ಲಿ ಹುರುಪು ಹೆಚ್ಚಿಸಿದೆ.

ಬಿಜೆಪಿಗೆ ರಾಷ್ಟ್ರಮಟ್ಟದಲ್ಲಿ ಇರುವಷ್ಟು ಪ್ರಭಾವ ಪಂಜಾಬ್‌ನಲ್ಲಿ ಇಲ್ಲ. ಶಿರೋಮಣಿ ಅಕಾಲಿ ದಳವು (ಎಸ್‌ಎಡಿ) ಐದು ವರ್ಷಗಳ ಹಿಂದೆ ಹೀನಾಯ ಸೋಲುಂಡು ಕಾಂಗ್ರೆಸ್‌ಗೆ ಅಧಿಕಾರ ಬಿಟ್ಟುಕೊಟ್ಟಿತ್ತು. ಈ ಎರಡೂ ಪಕ್ಷಗಳು ಈ ಬಾರಿ ಕಾಂಗ್ರೆಸ್‌ನಿಂದ ಮತ್ತೆ ಅಧಿಕಾರವನ್ನು ಕಸಿದುಕೊಳ್ಳಲು ಹವಣಿಸುತ್ತಿವೆ.

ಗೋವಾ: ಪಕ್ಷಾಂತರಕ್ಕೆ ಪಾಠ ಕಲಿಸುತ್ತಾನಾ ಮತದಾರ?

40 ಕ್ಷೇತ್ರಗಳನ್ನು ಹೊಂದಿರುವ ಗೋವಾ ವಿಧಾನಸಭೆಗೆ 2017ರಲ್ಲಿ ಚುನಾವಣೆ ನಡೆದಾಗ 17 ಸ್ಥಾನಗಳನ್ನು ಗೆದ್ದಿದ್ದ ಕಾಂಗ್ರೆಸ್, ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆದರೆ ಸರ್ಕಾರ ರಚಿಸಲು ವಿಫಲವಾಗಿತ್ತು. 13 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿಯು ಪಕ್ಷೇತರರು ಹಾಗೂ ಗೋವಾ ಫಾರ್ವರ್ಡ್ ಪಕ್ಷದ (ಜಿಎಫ್‌ಪಿ) ಬೆಂಬಲದೊಂದಿಗೆ ಸರ್ಕಾರ ರಚಿಸಿತ್ತು. ಮುಖ್ಯಮಂತ್ರಿ ಮನೋಹರ ಪರಿಕ್ಕರ್ ಅವರು 2019ರಲ್ಲಿ ನಿಧನರಾದ ಬಳಿಕ, ಜಿಎಫ್‌ಪಿ ಬೆಂಬಲ ವಾಪಸ್ ಪಡೆಯಿತು. ಆದರೆ ಕಾಂಗ್ರೆಸ್ ಶಾಸಕರನ್ನು ಸೆಳೆದುಕೊಂಡ ಬಿಜೆಪಿ, ಸರ್ಕಾರವನ್ನು ಭದ್ರಪಡಿಸಿಕೊಂಡಿತು.

2017ರಿಂದ ಇಲ್ಲಿಯವರೆಗೆ ಶೇ 50ಕ್ಕಿಂತ ಹೆಚ್ಚು ಶಾಸಕರು ರಾಜ್ಯದಲ್ಲಿ ಪಕ್ಷಾಂತರ ಮಾಡಿದ್ದಾರೆ. ಕಾಂಗ್ರೆಸ್ ಅತಿಹೆಚ್ಚು ಶಾಸಕರನ್ನು ಕಳೆದುಕೊಂಡಿದ್ದು, ಈಗ ಪಕ್ಷದ ಜೊತೆ ಕೇವಲ ಇಬ್ಬರು ಶಾಸಕರಿದ್ದಾರೆ. ಬಿಜೆಪಿಗೆ ಒಬ್ಬ ಪಕ್ಷೇತರ ಬೆಂಬಲ ನೀಡಿದ್ದರೆ, ಮತ್ತೊಬ್ಬರು ಯುಪಿಎ ಜೊತೆ ಗುರುತಿಸಿಕೊಂಡಿದ್ದಾರೆ. ಶಾಸಕರ ರಾಜೀನಾಮೆಯಿಂದ ಒಟ್ಟು 7 ಸ್ಥಾನಗಳು ಈಗ ಖಾಲಿಯಿವೆ.

ಮುಖ್ಯಮಂತ್ರಿ ಪ್ರಮೋದ್ ಸಾವಂತ್ ನೇತೃತ್ವದ ಬಿಜೆಪಿಯು ಈ ಬಾರಿ ಅಧಿಕಾರ ಉಳಿಸಿಕೊಳ್ಳುವತ್ತ ದೃಷ್ಟಿ ನೆಟ್ಟಿದೆ. ಈ ಹಿಂದೆ ಬಿಜೆಪಿಯನ್ನು ಬೆಂಬಲಿಸಿದ್ದ ಜಿಎಫ್‌ಪಿ, ಈ ಬಾರಿ ಕಾಂಗ್ರೆಸ್ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡಿದೆ. ತೃಣಮೂಲ ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಕ್ಷಗಳೂ ಚುನಾವಣಾ ಸಿದ್ಧತೆಯಲ್ಲಿ ತೊಡಗಿದ್ದು, ಫಲಿತಾಂಶದ ಮೇಲೆ ಗಮನಾರ್ಹ ಪ್ರಭಾವ ಬೀರುವ ಸಾಧ್ಯತೆಯಿದೆ.

ಉತ್ತರಾಖಂಡ: ಆಡಳಿತ ವಿರೋಧಿ ಅಲೆ ನಿರೀಕ್ಷೆಯಲ್ಲಿ ‘ಕೈ’

70 ಸದಸ್ಯಬಲದ ಉತ್ತರಾಖಂಡ ವಿಧಾನಸಭೆಗೆ 2017ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ಸೋಲಿಸಿ ಬಿಜೆಪಿ ಅಧಿಕಾರಕ್ಕೆ ಬಂದಿತ್ತು. 2001ರಲ್ಲಿ ರಾಜ್ಯ ಉದಯವಾದ ಬಳಿಕ ಪಕ್ಷವೊಂದು 57 ಸೀಟುಗಳನ್ನು ಗೆದ್ದಿದ್ದು ಇದೇ ಮೊದಲು. 11 ಸ್ಥಾನಗಳೊಂದಿಗೆ ಕಾಂಗ್ರೆಸ್ ಹಿನ್ನಡೆ ಕಂಡಿತ್ತು. ಆದರೆ ಬಿಜೆಪಿ ತನ್ನ ಅಧಿಕಾರಾವಧಿಯಲ್ಲಿ ಮೂವರು ಮುಖ್ಯಮಂತ್ರಿಗಳನ್ನು ಬದಲಿಸಿ ಅಚ್ಚರಿ ಮೂಡಿಸಿತು. ತ್ರಿವೇಂದ್ರ ರಾವತ್ ಅವರನ್ನು ಬದಲಿಸಿ ತೀರಥ್ ರಾವತ್ ಅವರನ್ನು ನೇಮಿಸಲಾಯಿತು. ಅವರು ನೀಡಿದ ವಿವಾದಾತ್ಮಕ ಹೇಳಿಕೆಯಿಂದ ನಾಲ್ಕೇ ತಿಂಗಳಲ್ಲಿ ಮುಖ್ಯಮಂತ್ರಿ ಹುದ್ದೆಯಿಂದ ಇಳಿಯಬೇಕಾಯಿತು. ಅವರ ಜಾಗಕ್ಕೆ ಈಗ ಪುಷ್ಕರ್ ಧಾಮಿ ಬಂದಿದ್ದಾರೆ. ಪದೇ ಪದೇ ಮುಖ್ಯಮಂತ್ರಿಗಳನ್ನು ಬದಲಾವಣೆ ಮಾಡಿದ ವಿದ್ಯಮಾನವು ಪಕ್ಷಕ್ಕೆ ಮುಳುವಾಗಲೂಬಹುದು ಎನ್ನುತ್ತಾರೆ ವಿಶ್ಲೇಷಕರು. ಈ ವಿಚಾರವನ್ನೇ ಇಟ್ಟುಕೊಂಡು ಕಾಂಗ್ರೆಸ್ ಮತ ಕೇಳುವ ಸಾಧ್ಯತೆಯಿದೆ.

ಪಕ್ಷ ಸಂಘಟನೆಯಲ್ಲಿ ತೊಡಗಿರುವ ಮಾಜಿ ಮುಖ್ಯಮಂತ್ರಿ ಹರೀಶ್ ರಾವತ್, ಕಾಂಗ್ರೆಸ್‌ನಿಂದ ಬಿಜೆಪಿಗೆ ಹೋಗಿದ್ದವರನ್ನು ಕರೆತರುವಲ್ಲಿ ಯಶಸ್ವಿಯಾಗಿದ್ದಾರೆ. ಆಡಳಿತ ವಿರೋಧಿ ಅಲೆಯು ಪಕ್ಷಕ್ಕೆ ನೆರವಾಗಲಿದೆ ಎಂದು ಕಾಂಗ್ರೆಸ್ ನಿರೀಕ್ಷೆ ಇಟ್ಟುಕೊಂಡಿದೆ. ದಲಿತ ನಾಯಕ ಯಶ್‌ಪಾಲ್ ಆರ್ಯ ಅವರು ಮತ್ತೆ ಪಕ್ಷಕ್ಕೆ ಬಂದಿರುವುದು ಶಕ್ತಿ ವೃದ್ಧಿಸಿದೆ ಎನ್ನಲಾಗಿದೆ. ಒಮ್ಮೆ ಕಾಂಗ್ರೆಸ್, ಮತ್ತೊಮ್ಮೆ ಬಿಜೆಪಿ ಎಂಬ ಸೂತ್ರ ಪಾಲಿಸಿಕೊಂಡು ಬರುತ್ತಿದ್ದ ಉತ್ತರಾಖಂಡ ಚುನಾವಣೆಗೆ ಈ ಬಾರಿ ಆಮ್ ಆದ್ಮಿ ಪಕ್ಷದ ಪ್ರವೇಶವಾಗಿದ್ದು, ಲೆಕ್ಕಾಚಾರ ಬದಲಾದರೂ ಅಚ್ಚರಿಯಿಲ್ಲ ಎನ್ನುತ್ತಾರೆ ತಜ್ಞರು.

ಮಣಿಪುರದಲ್ಲಿ ಬಿಜೆಪಿಯ ಹಾದಿ ಸುಗಮವೇ?

60 ಸದಸ್ಯಬಲದ ಮಣಿಪುರ ವಿಧಾನಸಭೆಗೆ ಕಳೆದ ಬಾರಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ 28 ಸ್ಥಾನಗಳನ್ನು ಗಳಿಸಿ ಅತಿದೊಡ್ಡ ಪಕ್ಷವಾಗಿದ್ದರೂ ಅಧಿಕಾರ ಹಿಡಿಯುವಲ್ಲಿ ವಿಫಲವಾಗಿತ್ತು. ಆದರೆ 21 ಸ್ಥಾನ ಗೆದ್ದಿದ್ದ ಬಿಜೆಪಿಯು ನ್ಯಾಷನಲ್ ಪೀಪಲ್ಸ್ ಪಾರ್ಟಿ, ನಾಗಾ ಪೀಪಲ್ಸ್ ಫ್ರಂಟ್ ಮತ್ತು ಲೋಕಜನಶಕ್ತಿ ಪಕ್ಷದ ಶಾಸಕರ ಬೆಂಬಲದಿಂದ ಸರ್ಕಾರ ರಚಿಸಿತ್ತು. ಎನ್. ಬಿರೇನ್ ಸಿಂಗ್ ಅವರು ಮುಖ್ಯಮಂತ್ರಿಯಾಗಿದ್ದರು. 2020ರ ಜೂನ್‌ನಲ್ಲಿ 9 ಶಾಸಕರು ಬಂಡಾಯ ಎದ್ದಿದ್ದರಿಂದ ಸರ್ಕಾರವು ಪತನದ ಅಂಚಿಗೆ ಬಂದುಹೋಗಿತ್ತು.

ಎರಡನೇ ಬಾರಿ ಅಧಿಕಾರ ಹಿಡಿಯುವತ್ತ ಬಿಜೆಪಿ ದೃಷ್ಟಿ ನೆಟ್ಟಿದೆ. ಆದರೆ, ಈ ಬಾರಿ ನ್ಯಾಷನಲ್ ಪೀಪಲ್ಸ್ ಪಾರ್ಟಿಯು ಬಿಜೆಪಿಯೊಂದಿಗೆ ಮುನಿಸಿಕೊಂಡಿದೆ. ಸಂಖ್ಯಾಬಲದ ಸನಿಹವಿದ್ದರೂ ಅಧಿಕಾರ ಹಿಡಿಯುವ ದಾರಿಯಲ್ಲಿ ಎಡವಿದ್ದ ಕಾಂಗ್ರೆಸ್‌ಗೆ ಈ ಬಾರಿ ಪಕ್ಷಾಂತರದ ಬಿಸಿ ತಟ್ಟಿದೆ.

ಹಿರಿಯ ಕಾಂಗ್ರೆಸ್ಸಿಗ ಡಿ. ಕೊರುಂಗ್‌ತಾಂಗ್ ಅವರು ಕಳೆದ ನವೆಂಬರ್‌ನಲ್ಲಿ ಪಕ್ಷ ತೊರೆದಿದ್ದಾರೆ. ರಾಜ್ಯ ಘಟಕದ ಮಾಜಿ ಅಧ್ಯಕ್ಷ ಸೇರಿದಂತೆ ಇಬ್ಬರು ಶಾಸಕರು ಬಿಜೆಪಿಗೆ ಸೇರಿದ್ದಾರೆ. ಮಾಜಿ ಮುಖ್ಯಮಂತ್ರಿ ಐಬೊಬಿ ಸಿಂಗ್ ಅವರು ಅನಾರೋಗ್ಯದ ಕಾರಣ ಪಕ್ಷದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿಲ್ಲ. ಹೀಗಾಗಿ ಬಿಜೆಪಿ ಹಾದಿ ಕಷ್ಟವಾಗಲಾರದು ಎನ್ನಲಾಗಿದೆ.

ಚಂಡೀಗಢ: ಒಂದು ಮತದಿಂದ ಬಿಜೆಪಿಗೆ ಒಲಿದ ಮೇಯರ್ ಸ್ಥಾನ

ಚಂಡೀಗಢ (ಪಿಟಿಐ): ಬಿಜೆಪಿಯ ಸರಬ್‌ಜಿತ್ ಕೌರ್ ಚಂಡೀಗಢ ಮಹಾನಗರಪಾಲಿಕೆಯ ಮೇಯರ್ ಆಗಿ ಶನಿವಾರ ಆಯ್ಕೆಯಾದರು. ಆಮ್ ಆದ್ಮಿ ಪಕ್ಷದ ಅಂಜು ಕತ್ಯಾಲ್ ಅವರ ವಿರುದ್ಧ ಕೇವಲ ಒಂದು ಮತದ ಅಂತರದಲ್ಲಿ ಅವರು ಜಯಗಳಿಸಿದರು.

ಪಾಲಿಕೆಯ ಒಟ್ಟು ಸದಸ್ಯ ಬಲ 36 ಆಗಿದ್ದು, ಈ ಪೈಕಿ 28 ಸದಸ್ಯರು ಮತ ಚಲಾಯಿಸಿದರು. ಕೌರ್ ಅವರು 14 ಮತ್ತು ಕತ್ಯಾಲ್ ಅವರು 13 ಮತ ಪಡೆದರು. ಒಂದು ಮತ ಅಸಿಂಧುಗೊಂಡಿತು. ಕಾಂಗ್ರೆಸ್ ಮತ್ತು ಶಿರೋಮಣಿ ಅಕಾಲಿದಳದ ಸದಸ್ಯರು ಗೈರು ಹಾಜರಾಗಿದ್ದರು.

ಫಲಿತಾಂಶ ಘೋಷಣೆಯ ಹಿಂದೆಯೇ ಎಎಪಿ ಸದಸ್ಯರು ಗೊಂದಲಮಯ ವಾತಾವರಣ ಸೃಷ್ಟಿಸಿದ್ದು, ಅವರನ್ನು ಕೊಠಡಿ ಯಿಂದ ಹೊರಗೆ ಕಳುಹಿಸಲು ಪೊಲೀಸರನ್ನು ಕರೆಸಲಾಯಿತು.

ಚುನಾವಣೆಯಲ್ಲಿ ಬಹುಮತ ಬಾರದ ಕಾರಣ ಅತಂತ್ರ ಸ್ಥಿತಿ ಮೂಡಿತ್ತು. ಎಎಪಿ 14 ಮತ್ತು ಬಿಜೆಪಿ 12, ಕಾಂಗ್ರೆಸ್ 8 ಮತ್ತು ಶಿರೋಮಣಿ ಅಕಾಲಿ ದಳ ಒಂದು ಕಡೆ ಜಯಗಳಿಸಿದ್ದವು. ಫಲಿತಾಂಶ ಪ್ರಕಟಣೆಯ ಹಿಂದೆಯೇ ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದ ಹರ್‌ಪ್ರೀತ್ ಕೌರ್ ಬಾಬ್ಲಾ ಅವರು ಬಿಜೆಪಿಗೆ ಸೇರಿದ್ದರು.

ನುಡಿ–ಕಿಡಿ

ಬಿಜೆಪಿ ಸರ್ಕಾರಕ್ಕೆ ವಿದಾಯ ಹೇಳಲು ಉತ್ತರ ಪ್ರದೇಶದ ಜನರು ಮತ ಎಣಿಕೆ ನಡೆಯುವ ಮಾರ್ಚ್ 10 ಹತ್ತಿರ ಬರುವುದನ್ನೇ ಕಾಯುತ್ತಿದ್ದಾರೆ

ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ



ಜನರ ಆಶೀರ್ವಾದದಿಂದ ಮತ್ತು ಡಬಲ್ ಎಂಜಿನ್ ಸರ್ಕಾರದ ಸಾಧನೆಯಿಂದ ಬಿಜೆಪಿ ಮತ್ತೆ ಸರ್ಕಾರ ರಚಿಸಲಿದೆ. ಭಾರಿ ಬಹುಮತ ದೊರೆಯಲಿದೆ

ಯೋಗಿ ಆದಿತ್ಯನಾಥ, ಉತ್ತರಪ್ರದೇಶ ಮುಖ್ಯಮಂತ್ರಿ

ಒಂದು ಅಡುಗೆ ಅನಿಲ ಸಿಲಿಂಡರ್ ನೀಡುವುದಷ್ಟೇ ತಮ್ಮ ಜವಾಬ್ದಾರಿ ಎಂದು ರಾಜಕೀಯ ಪಕ್ಷಗಳು ಭಾವಿಸಿದ್ದರೆ ಅದು ತಪ್ಪು. ಮಹಿಳೆಯರ ಬಗ್ಗೆಯೂ ರಾಜಕೀಯ ಪಕ್ಷಗಳಿಗೆ ಹೊಣೆಗಾರಿಕೆ ಇದೆ. ನಾವೊಂದು ಚರ್ಚೆ ಹುಟ್ಟು ಹಾಕಿದ್ದೇವೆ. ಆ ಚರ್ಚೆಯ ಕೇಂದ್ರದಲ್ಲಿ ನಾವೇ ಇದ್ದೇವೆ. ಮಹಿಳೆಯರನ್ನು ನಿರ್ಲಕ್ಷಿಸಲು ನಾನು ಬಿಡುವುದಿಲ್ಲ

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆ

ಯೋಗಿ, ಪ್ರಿಯಾಂಕಾ, ಮಾಯಾ ಭವಿಷ್ಯ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಅವರ ಪಕ್ಷದೊಳಗೆ ಇರುವ ಸ್ಥಾನಮಾನವನ್ನು ರಾಜ್ಯದ ವಿಧಾನಸಭೆ ಚುನಾವಣೆಯು ನಿರ್ಧರಿಸಲಿದೆ. ಜೊತೆಗೆ, ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಮುಖ್ಯಸ್ಥೆ ಮಾಯಾವತಿ ಅವರ ಭವಿಷ್ಯವನ್ನು ಚುನಾವಣೆಯು ನಿರ್ಧರಿಸಲಿದೆ.

ಈ ಚುನಾವಣೆಯು ಆದಿತ್ಯನಾಥ ಅವರ ಪಾಲಿಗೆ ನಿರ್ಣಾಯಕವಾಗಿದೆ. ಅವರ ಆಡಳಿತ ವೈಖರಿ ಕುರಿತು ಅಸಮಾಧಾನವಿದ್ದ ರಾಜ್ಯ ಬಿಜೆಪಿ ಮುಖಂಡರು ಚುನಾವಣೆಗೂ ಮುನ್ನ ಮುಖ್ಯಮಂತ್ರಿ ಬದಲಾವಣೆಗಾಗಿ ಪಟ್ಟುಹಿಡಿದಿದ್ದರು. ಆದರೆ ಆದಿತ್ಯನಾಥ ಅವರು ತಮ್ಮನ್ನು ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿಸುವಂತೆ ಹೈಕಮಾಂಡ್ ಮೇಲೆ ಒತ್ತಡ ಹೇರಿದ್ದರು.

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಆಪ್ತ ಎಂದು ಹೇಳಲಾಗಿದ್ದ ಮಾಜಿ ಅಧಿಕಾರಿಯೊಬ್ಬರನ್ನು ಉತ್ತರ ಪ್ರದೇಶದ ಮಂತ್ರಿಯನ್ನಾಗಿ ನೇಮಕ ಮಾಡುವುದನ್ನೂ ತಡೆಯುವಲ್ಲಿ ಅವರು ಯಶಸ್ವಿ ಆದರು.

ಹಿಂದುತ್ವವಾದದ ಪರವಾಗಿರುವ ಮತ ಬ್ಯಾಂಕ್, ಯೋಗಿ ಆಡಳಿತದಲ್ಲಿ ನಡೆದಿದೆ ಎಂದು ಹೇಳಿಕೊಳ್ಳಲಾಗುತ್ತಿರುವ ಅಭಿವೃದ್ಧಿ ಕೆಲಸಗಳು ಬೆನ್ನಿಗಿದ್ದರೂ, ಕೋವಿಡ್ ಎರಡನೇ ಅಲೆಯ ಅಸಮರ್ಪಕ ನಿರ್ವಹಣೆ, ದಲಿತರ ವಿರುದ್ಧ ನಡೆಯುತ್ತಿರುವ ದಾಳಿ ಪ್ರಕರಣಗಳಲ್ಲಿ ಹೆಚ್ಚಳ, ಲಖಿಂಪುರ ಖೇರಿ ಪ್ರಕರಣ ನಿರ್ವಹಿಸಿದ ರೀತಿ ಮತ್ತಿತರ ವೈಫಲ್ಯಗಳಿಂದ ಅವರು ಕಟು ಟೀಕೆಗಳನ್ನು ಎದುರಿಸಬೇಕಾಗಿದೆ.

ಈ ಬಾರಿಯ ಚುನಾವಣೆ ಯೋಗಿ ಆದಿತ್ಯನಾಥ ಅವರಿಗೆ ಪರೀಕ್ಷೆ ಆಗಿರಲಿದೆ ಎಂದು ಬಿಜೆಪಿ ಮುಖಂಡರೇ ಅಭಿಪ್ರಾಯಪಟ್ಟಿದ್ದಾರೆ.

‘ಈ ಚುನಾವಣೆಲ್ಲಿ ಬಿಜೆಪಿ ಉತ್ತಮ ಪ್ರದರ್ಶನ ನೀಡಿದರೆ ಪಕ್ಷದ ಒಳಗೆ ಆದಿತ್ಯನಾಥ ಅವರ ಸ್ಥಾನ ಗಟ್ಟಿಯಾಗಲಿದೆ. ಮೋದಿ ಅವರಿಗೆ ಸ್ಪರ್ಧಿಯಾಗಿ ಯೋಗಿ ಹೊರಹೊಮ್ಮಬಹುದು’ ಎಂದು ಬಿಜೆಪಿ ಮುಖಂಡರೊಬ್ಬರು ‘ಪ್ರಜಾವಾಣಿ’ಗೆ ಹೇಳಿದ್ದಾರೆ.

ಅಖಿಲೇಶ್‌ಗೆ ಮಹತ್ವದ ಚುನಾವಣೆ: ಅಖಿಲೇಶ್ ಯಾದವ್ ಅವರಿಗೂ ಈ ಚುನಾವಣೆ ನಿರ್ಣಾಯಕವಾಗಿದೆ. ಅವರ ತಂದೆ, ಎಸ್‌ಪಿ ಸಂಸ್ಥಾಪಕ ಮುಲಾಯಂ ಸಿಂಗ್ ಯಾದವ್‌ರ ಪರಂಪರೆಯನ್ನು ಅಖಿಲೇಶ್ ಮುಂದುವರಿಸಲಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರ ದೊರಕಲಿದೆ. ‘2012ರಲ್ಲಿ ಅಖಿಲೇಶ್‌ಗೆ ಮುಖ್ಯಮಂತ್ರಿ ಸ್ಥಾನವನ್ನು ಅವರ ತಂದೆಯೇ ಅನಾಯಾಸವಾಗಿ ನೀಡಿದ್ದರು. ಆದರೆ, 2017ರ ವಿಧಾನಸಭೆ ಚುನಾವಣೆಯಲ್ಲಿ ಪಕ್ಷ ಅತ್ಯಂತ ಕಳಪೆ ಪ್ರದರ್ಶನ ನೀಡಿತ್ತು. ಎಸ್‌ಪಿಯ ಚುನಾವಣಾ ಭವಿಷ್ಯವನ್ನು ಪುನಶ್ಚೇತನ ಮಾಡಲು ಅಖಿಲೇಶ್‌ರಿಂದ ಸಾಧ್ಯವಿದೆಯೇ ಎಂಬುದನ್ನು ಈ ಚುನಾವಣೆ ನಿರ್ಧರಿಸಲಿದೆ. ಮತ್ತೊಂದು ವೈಫಲ್ಯವು ಅವರ ರಾಜಕೀಯ ಜೀವನದ ವಿನಾಶವಾಗಿ ಪರಿಣಮಿಸಬಹುದು’ ಎಂದು ಎಸ್‌ಪಿ ಮುಖಂಡರೊಬ್ಬರು ಹೇಳಿದ್ದಾರೆ.

ಪ್ರಿಯಾಂಕಾ ಶ್ರಮಕ್ಕೆ ಪ್ರತಿಫಲ?: ಕಾಂಗ್ರೆಸ್ ಕಾರ್ಯಕರ್ತರನ್ನು ಒಂದು ಮಟ್ಟಕ್ಕೆ ಹುರುಪುಗೊಳಿಸುವ ಶಕ್ತಿ ಪ್ರಿಯಾಂಕಾ ಗಾಂಧಿ ಅವರಿಗೆ ಇದೆ ಎಂದು ಬೇರೆ ಪಕ್ಷದ ನಾಯಕರೂ ಒಪ್ಪಿಕೊಳ್ಳುತ್ತಾರೆ. ಉತ್ತರ ಪ್ರದೇಶದಲ್ಲಿ ಪಕ್ಷಕ್ಕೆ ಪುನಶ್ಚೇತನ ನೀಡಲು ಪ್ರಿಯಾಂಕಾ ಶ್ರಮಿಸುತ್ತಿದ್ದಾರೆ. ಆದರೆ ರಾಜ್ಯದಲ್ಲಿ ಕಾಂಗ್ರೆಸ್ ಸಂಘಟನೆಯು ಬುಡಮಟ್ಟದಿಂದಲೇ ಗಟ್ಟಿಯಾಗಿಲ್ಲದ ಕಾರಣ ಪ್ರಿಯಾಂಕಾ ಅವರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು ಕಷ್ಟ. ಕಾಂಗ್ರೆಸ್ ಸಾಧಾರಣ ಪ್ರದರ್ಶನ ನೀಡಿದರೂ ಪಕ್ಷದಲ್ಲಿ ಪ್ರಿಯಾಂಕಾ ಅವರು ದೊಡ್ಡ ನಾಯಕಿಯಾಗಿ ಹೊರಹೊಮ್ಮುತ್ತಾರೆ ಎಂದು ಪಕ್ಷದ ಮುಖಂಡರು ಅಭಿಪ್ರಾಯ ಪಟ್ಟಿದ್ದಾರೆ.

ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಲಖನೌದಲ್ಲಿ ಮಾಧ್ಯಮಗೋಷ್ಠಿ ಉದ್ದೇಶಿಸಿ ಶನಿವಾರ ಮಾತನಾಡಿದರು ಪಿಟಿಐ ಚಿತ್ರ

ಬಿಎಸ್‌ಪಿಗೂ ನಿರ್ಣಾಯಕ

ಮಾಯಾವತಿ

ಕಳೆದ ಹಲವು ವರ್ಷಗಳಿಂದ ಬಿಎಸ್‌ಪಿಯು ದೊಡ್ಡ ಮಟ್ಟದಲ್ಲಿ ವೈಫಲ್ಯ ಅನುಭವಿಸುತ್ತಿದೆ. ಹೀಗಾಗಿ ಈ ಚುನಾವಣೆಯಲ್ಲಿಯ ಪ್ರದರ್ಶನ ಮಾಯಾವತಿ ಅವರಿಗೂ ಅತಿ ಮುಖ್ಯವಾಗಿದೆ. 2017ರ ಚುನಾವಣೆಯಲ್ಲಿ ಗೆದ್ದಿದ್ದ ಬಿಎಸ್‌ಪಿಯ 19 ಶಾಸಕರಲ್ಲಿ ಸುಮಾರು 16 ಶಾಸಕರು ಪಕ್ಷ ತೊರೆದು ಬೇರೆ ಪಕ್ಷಗಳನ್ನು ಸೇರಿದ್ದಾರೆ. ಅಥವಾ ಪಕ್ಷದಿಂದ ಉಚ್ಚಾಟನೆ ಆಗಿದ್ದಾರೆ. ಮತ್ತೊಂದು ಕಳಪೆ ಪ್ರದರ್ಶನವು ಅವರ ಪಕ್ಷವನ್ನು ಮತ್ತಷ್ಟು ಅಪ್ರಸ್ತುತ ಮಾಡಲಿದೆ.

ಉಚಿತ ಲ್ಯಾಪ್‌ಟಾಪ್: ಎಸ್‌ಪಿ ಭರವಸೆ

- ಉತ್ತರ ಪ್ರದೇಶದ ಯುವತಿಯರ ಜೊತೆ ಸಂವಾದ ನಡೆಸುವ ಮೂಲಕ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾರಿಂದ ವರ್ಚುವಲ್ ಚುನಾವಣಾ ಪ್ರಚಾರಕ್ಕೆ ಚಾಲನೆ
- ಎಸ್‌ಪಿ ಅಧಿಕಾರಕ್ಕೆ ಬಂದರೆ ಯುವಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಿಸುವ ಭರವಸೆ ನೀಡಿದ ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್. ಇತ್ತೀಚೆಗೆ ಐಟಿ ದಾಳಿ ನಡೆದಿದ್ದ ಕಾನ್ಪುರ ಸುಗಂಧದ್ರವ್ಯ ವ್ಯಾಪಾರಿ ಜೊತೆಗೆ ತಮ್ಮ ಭಾವಚಿತ್ರಗಳನ್ನು ಹರಿಬಿಡುತ್ತಿರುವ ಬಿಜೆಪಿ ಐಟಿ ಸೆಲ್ ವಿರುದ್ಧ ಕಾನೂನು ಕ್ರಮ ಜರುಗಿಸುವುದಾಗಿ ಹೇಳಿದರು
- ಚುನಾವಣೆ ನಿಗದಿ ಆಗಿರುವ ಐದು ರಾಜ್ಯಗಳಿಗೆ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಯ (ಸಿಎಪಿಎಫ್) ಸುಮಾರು 50,000 ಸಿಬ್ಬಂದಿಯನ್ನು ನಿಯೋಜಿಸಲಾಗುತ್ತಿದೆ. ಮೊದಲ ಹಂತದಲ್ಲಿ ಸುಮಾರು 500 ತುಕಡಿಗಳು ನಿಯೋಜನೆ ಆಗಲಿವೆ. ಅವುಗಳಲ್ಲಿ ಉತ್ತರ ಪ್ರದೇಶ ಒಂದೇ ರಾಜ್ಯಕ್ಕೆ ಸುಮಾರು 375 ತುಕಡಿಗಳನ್ನು ನಿಯೋಜಿಸಲಾಗುವುದು

ಹಣಾಹಣಿಗೆ ಮುಹೂರ್ತ ನಿಗದಿ

ಒಂದನೇ ಪುಟದಿಂದ

ಈ ವರ್ಷದ ಜುಲೈ–ಆಗಸ್ಟ್‌ನಲ್ಲಿ ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಚುನಾವಣೆಯ ಮೇಲೆಯೂ ಐದು ರಾಜ್ಯಗಳ ವಿಧಾನಸಭೆ ಚುನಾವಣೆ ಫಲಿತಾಂಶ ಪರಿಣಾಮ ಬೀರಲಿದೆ. ಶಾಸಕರ ಸಂಖ್ಯೆ ಕಡಿಮೆ ಆದರೆ ಆಡಳಿತಾರೂಢ ಬಿಜೆಪಿಗೆ ಕಷ್ಟ ಎದುರಾಗಬಹುದು. ರಾಜ್ಯಸಭೆಯ ಬಲಾಬಲದ ಮೇಲೆಯೂ ಈ ಬಾರಿಯ ಚುನಾವಣೆಯು ಪರಿಣಾಮ ಉಂಟು ಮಾಡಲಿದೆ. ಏಕೆಂದರೆ, ಉತ್ತರ ಪ್ರದೇಶ ಮತ್ತು ಪಂಜಾಬ್‌ನಿಂದ ಆಯ್ಕೆ ಆಗಿದ್ದ ರಾಜ್ಯಸಭೆಯ 15 ಸದಸ್ಯರು ಜುಲೈನಲ್ಲಿ ನಿವೃತ್ತರಾಗಲಿದ್ದಾರೆ.

ತಾನು ಅಧಿಕಾರದಲ್ಲಿ ಇರುವ ಎಲ್ಲ ನಾಲ್ಕು ರಾಜ್ಯಗಳನ್ನು ಉಳಿಸಿಕೊಳ್ಳಲು ಬಿಜೆಪಿ ಯತ್ನಿಸುತ್ತಿದೆ.

ಉತ್ತರ ಪ್ರದೇಶ ಮತ್ತು ಉತ್ತರಾಖಂಡದಲ್ಲಿ ಸ್ವಂತ ಬಲ ದಲ್ಲಿಯೇ ಬಿಜೆಪಿ ಅಧಿಕಾರ ಹಿಡಿದಿತ್ತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಗೋವಾ ಮತ್ತು ಮಣಿಪುರದಲ್ಲಿ ಕಾಂಗ್ರೆಸ್ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆದರೆ, ದೊಡ್ಡ ಪ್ರಮಾಣದ ಪಕ್ಷಾಂತರದ ಮೂಲಕ ಬಿಜೆಪಿ ಅಧಿಕಾರ ಹಿಡಿಯಿತು.

ಪಂಜಾಬ್‌ನಲ್ಲಿ ಅಧಿಕಾರ ಉಳಿಸಿಕೊಳ್ಳಲು ಕಾಂಗ್ರೆಸ್ ಹರ ಸಾಹಸ ಪಡುತ್ತಿದೆ. ಉತ್ತರಾಖಂಡ ದಲ್ಲಿ ಬಿಜೆಪಿಯಿಂದ ಅಧಿಕಾರ ಕಸಿದುಕೊಳ್ಳುವ ನಿರೀಕ್ಷೆಯಲ್ಲಿ ಕಾಂಗ್ರೆಸ್ ಇದೆ. ಮಣಿಪುರದಲ್ಲಿ ಗೆಲ್ಲುವ ಉತ್ಸಾಹದಲ್ಲಿ ಬಿಜೆಪಿ ಇದೆ.

ಅರವಿಂದ ಕೇಜ್ರಿವಾಲ್ ಅವರ ಎಎಪಿ ಮತ್ತು ಮಮತಾ ಬ್ಯಾನರ್ಜಿ ಅವರ ಟಿಎಂಸಿ, ಗೋವಾ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಘೋಷಿಸಿವೆ.

ಹಾಗಾಗಿ, ಅಲ್ಲಿನ ಚುನಾವಣಾ ಕಣ ಕುತೂಹಲ ಮೂಡಿಸಿದೆ.

15ರವರೆಗೆ ಪಾದಯಾತ್ರೆ, ರೋಡ್ ಶೋ, ರ‍್ಯಾಲಿ ಇಲ್ಲ

ಕೋವಿಡ್–19 ಸಾಂಕ್ರಾಮಿಕದ ನಡುವೆ ನಡೆಯುತ್ತಿರುವ ಮೂರನೇ ಚುನಾವಣೆ ಇದಾಗಿದೆ. ಕೋವಿಡ್ ಹರಡುವಿಕೆ ತಡೆಗಾಗಿ ಆಯೋಗವು ಹಲವು ನಿರ್ಬಂಧಗಳನ್ನು ಹೇರಿದೆ.

ಮನೆ ಮನೆ ಪ್ರಚಾರಕ್ಕೆ ಅಭ್ಯರ್ಥಿ ಸೇರಿ ಐದು ಮಂದಿಗೆ ಮಾತ್ರ ಅವಕಾಶ ಇದೆ. ಭೌತಿಕ ರ‍್ಯಾಲಿಗಳು, ಪಾದಯಾತ್ರೆಗಳು, ರೋಡ್ ಶೋಗಳನ್ನು ಜನವರಿ 15ರವರೆಗೆ ನಿಷೇಧಿಸಲಾಗಿದೆ. ರಾತ್ರಿ 8 ಗಂಟೆಯಿಂದ ಬೆಳಿಗ್ಗೆ 8 ಗಂಟೆಯ ನಡುವಣ ಅವಧಿಯಲ್ಲಿಯೂ ಪ್ರಚಾರಕ್ಕೆ ನಿಷೇಧ ಇದೆ. ವರ್ಚುವಲ್ ಪ್ರಚಾರಕ್ಕೆ ಆದ್ಯತೆ ನೀಡಿ ಎಂದು ಪಕ್ಷಗಳಿಗೆ ಆಯೋಗವು ಸಲಹೆ ಕೊಟ್ಟಿದೆ.

15ರಂದು ಸಭೆ ನಡೆಸಿ ಕೋವಿಡ್ ಪರಿಸ್ಥಿತಿಯ ಪರಾಮರ್ಶೆ ನಡೆಸಲಾಗುವುದು. ನಿರ್ಬಂಧಗಳನ್ನು ಕೈಬಿಡಬೇಕೇ ಅಥವಾ ಇನ್ನಷ್ಟು ನಿರ್ಬಂಧಗಳನ್ನು ಹೇರಬೇಕೇ ಎಂಬ ನಿರ್ಧಾರವನ್ನು ಈ ಸಭೆಯಲ್ಲಿ ತೆಗೆದುಕೊಳ್ಳಲಾಗುವುದು. ಪ್ರಚಾರದ ಅವಧಿಯಲ್ಲಿ ಬಹಿರಂಗ ಪ್ರಚಾರಕ್ಕೆ ಅನುಮತಿ ಇದ್ದಾಗ, ಕೋವಿಡ್ ತಡೆ ಮಾರ್ಗಸೂಚಿಯ ಪಾಲನೆ ಕಡ್ಡಾಯ ಎಂದು ಆಯೋಗ ಹೇಳಿದೆ.

ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಪಕ್ಷಗಳ ತಾರಾ ಪ್ರಚಾರಕರ ಸಂಖ್ಯೆಯನ್ನು ಕಡಿತಗೊಳಿಸಲಾಗಿದೆ. ರಾಷ್ಟ್ರ ಮಟ್ಟದ ಪಕ್ಷಗಳಿಗೆ 40ರ ಬದಲು 30 ಮತ್ತು ರಾಜ್ಯ ಮಟ್ಟದ ಪಕ್ಷಗಳಿಗೆ 20ರ ಬದಲು 15 ತಾರಾ ಪ್ರಚಾರಕರನ್ನು ಬಳಸಿಕೊಳ್ಳಲು ಅವಕಾಶ ಇದೆ.

ರ‍್ಯಾಲಿ ಅಥವಾ ಬಹಿರಂಗ ಸಮಾವೇಶಗಳನ್ನು ನಿಗದಿತ ಸ್ಥಳಗಳಲ್ಲಿಯೇ ನಡೆಸಬೇಕು ಮತ್ತು ಅದಕ್ಕೆ ಜಿಲ್ಲಾಡಳಿತದ ಅನುಮತಿ ಪಡೆದುಕೊಳ್ಳಬೇಕು. ಎಲ್ಲ ಮಾರ್ಗಸೂಚಿಗಳನ್ನು ಅನುಸರಿಸುವುದಾಗಿ ಪಕ್ಷ ಅಥವಾ ಅಭ್ಯರ್ಥಿಯು ಪ್ರಮಾಣಪತ್ರ ಸಲ್ಲಿಸಬೇಕು. ಮಾರ್ಗಸೂಚಿ ಉಲ್ಲಂಘಿಸಿದ ಪಕ್ಷ ಅಥವಾ ಅಭ್ಯರ್ಥಿಗೆ ರ‍್ಯಾಲಿ ನಡೆಸಲು ಮತ್ತೆ ಅನುಮತಿ ನೀಡಲಾಗುವುದಿಲ್ಲ.

ಮತ ಎಣಿಕೆ ನಂತರ ವಿಜಯೋತ್ಸವಕ್ಕೂ ಅವಕಾಶ ಇಲ್ಲ. ಅಭ್ಯರ್ಥಿ ಅಥವಾ ಅವರ ಅಧಿಕೃತ ಪ್ರತಿನಿಧಿಯ ಜತೆಗೆ ಇಬ್ಬರಿಗೆ ಮಾತ್ರ ಮತ ಎಣಿಕೆ ಕೇಂದ್ರಕ್ಕೆ ಹೋಗಲು ಅವಕಾಶ ಇದೆ.

‘ಬುಲ್ಲಿ ಬಾಯಿ’ ಆ್ಯಪ್ ಪ್ರಕರಣದ ಆರೋಪಿ ನೀರಜ್ ಹೇಳಿಕೆ

‘ವಿ.ವಿಗಳ ವೆಬ್‌ಸೈಟ್ ಹ್ಯಾಕ್ ಮಾಡುತ್ತಿದ್ದೆ’

ನವದೆಹಲಿ (ಪಿಟಿಐ): ‘ನನಗೆ ಭಾರತ ಹಾಗೂ ಪಾಕಿಸ್ತಾನದ ಶಾಲೆ–ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡಿ, ವಿರೂಪಗೊಳಿಸುವ ಅಭ್ಯಾಸವಿತ್ತು’ ಎಂದು ‘ಬುಲ್ಲಿ ಬಾಯಿ’ ಆ್ಯಪ್ ಪ್ರಕರಣದ ಮುಖ್ಯ ಆರೋಪಿ ನೀರಜ್ ಬಿಷ್ಣೋಯಿ ಹೇಳಿದ್ದಾನೆ’ ಎಂದು ಪೊಲೀಸ್ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.’

‘ವಿಚಾರಣೆ ವೇಳೆ ನೀರಜ್ ಈ ವಿಷಯ ತಿಳಿಸಿದ್ದಾನೆ. ಅಲ್ಲದೇ, ಸುಲ್ಲಿ ಡೀಲ್ಸ್ ಆ್ಯಪ್‌ನ ಟ್ವಿಟ್ಟರ್ ಹ್ಯಾಂಡಲ್ ನಿರ್ವಹಣೆ ಮಾಡುತ್ತಿದ್ದ ವ್ಯಕ್ತಿಯೊಂದಿಗೂ ಸಂಪರ್ಕ ಹೊಂದಿದ್ದೆ ಎಂಬುದಾಗಿ ಬಹಿರಂಗಪಡಿಸಿದ್ದಾನೆ’ ಎಂದೂ ಅಧಿಕಾರಿಗಳು ಹೇಳಿದ್ದಾರೆ.

‘ಸುಲ್ಲಿ ಡೀಲ್ಸ್ ಆ್ಯಪ್‌ಅನ್ನು ಅಭಿವೃದ್ಧಿಪಡಿಸಿರುವ ವ್ಯಕ್ತಿಯ ಪತ್ತೆ ಕಾರ್ಯ ನಡೆಯುತ್ತಿದೆ. ಈ ಸಂಬಂಧ ತಾಂತ್ರಿಕ ವಿಶ್ಲೇಷಣೆ, ವಿಧಿವಿಜ್ಞಾನ ಪರಿಶೀಲನೆಯನ್ನೂ ಕೈಗೊಳ್ಳಲಾಗಿದೆ’ ಎಂದೂ ಅಧಿಕಾರಿಗಳು ಹೇಳಿದ್ದಾರೆ.

ಅಲ್ಪಸಂಖ್ಯಾತರನ್ನು ಗುರುತಿಸಲು ಮಾರ್ಗಸೂಚಿ: ಪ್ರತಿಕ್ರಿಯೆ ಸಲ್ಲಿಕೆಗೆ ಅವಕಾಶ

ನವದೆಹಲಿ (ಪಿಟಿಐ): ರಾಜ್ಯಗಳ ಮಟ್ಟದಲ್ಲಿ ಅಲ್ಪಸಂಖ್ಯಾತರನ್ನು ಗುರುತಿಸಲು ಮಾರ್ಗಸೂಚಿಗಳನ್ನು ರೂಪಿಸಬೇಕು ಎಂದು ಕೋರಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿ ಪ್ರತಿಕ್ರಿಯೆ ಸಲ್ಲಿಸಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಶುಕ್ರವಾರ ‘ಕೊನೆಯ ಅವಕಾಶ’ ನೀಡಿತು.

ವಿದೇಶಿ ದೇಣಿಗೆ: ಮಿಷನರೀಸ್ ಆಫ್ ಚಾರಿಟಿ ಮೇಲಿನ ನಿರ್ಬಂಧ ರದ್ದು

ನವದೆಹಲಿ (ಪಿಟಿಐ): ಕೋಲ್ಕತ್ತ ಮೂಲದ ಮಿಷನರೀಸ್ ಆಫ್ ಚಾರಿಟಿ ಸಂಸ್ಥೆಗೆ ವಿದೇಶಿ ದೇಣಿಗೆ ಸ್ವೀಕಾರ ಸಂಬಂಧ ವಿಧಿಸಿದ್ದ ನಿರ್ಬಂಧವನ್ನು ಕೇಂದ್ರ ಗೃಹ ಸಚಿವಾಲಯವು ಕೈಬಿಟ್ಟಿದೆ.

ಈ ನಿರ್ಧಾರದ ಹಿನ್ನೆಲೆಯಲ್ಲಿ ಈ ಸೇವಾಸಂಸ್ಥೆಯು ವಿದೇಶಿ ದೇಣಿಗೆ ಪಡೆಯಬಹುದು. ಅಲ್ಲದೆ ಬ್ಯಾಂಕ್ ಖಾತೆಗಳಲ್ಲಿ ಇರುವ ಹಣವನ್ನು ವೆಚ್ಚಮಾಡಬಹುದಾಗಿದೆ ಎಂದು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದರು.

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯ (ಎಫ್‌ಸಿಆರ್‌ಎ) ಅನ್ವಯ ಈ ಸಂಸ್ಥೆಗೆ ನೀಡಿದ್ದ ಲೈಸೆನ್ಸ್ ಅನ್ನು ಈ ಮೊದಲು ಸಚಿವಾಲಯ ರದ್ದುಪಡಿಸಿತ್ತು.

ಕ್ಯಾಥೊಲಿಕ್ ಧಾರ್ಮಿಕ ಸಂಸ್ಥೆಯಾದ ‘ಮಿಷನರೀಸ್ ಆಫ್ ಚಾರಿಟಿ (ಎಂಒಸಿ)‘ 1950ರಲ್ಲಿ ಅಸ್ತಿತ್ವಕ್ಕೆ ಬಂದಿತ್ತು. ನೊಬೆಲ್ ಪ್ರಶಸ್ತಿ ಪುರಸ್ಕೃತ ಮದರ್ ತೆರೇಸಾ ಅವರು ಕಡುಬಡವರಿಗೆ ನೆರವಾಗಲು ಇದನ್ನು ಸ್ಥಾಪಿಸಿದ್ದರು.

ಧಾರ್ಮಿಕ ಸಂಸ್ಥೆಯು ಈ ಕುರಿತು ಪ್ರತಿಕ್ರಿಯಿಸಿಲ್ಲ. ಆದರೆ, ಅಧಿಕಾರಿಯೊಬ್ಬರು ಸಚಿವಾಲಯ ನಿರ್ಬಂಧ ಕೈಬಿಟ್ಟಿರುವುದನ್ನು ದೃಢಪಡಿಸಿದ್ದಾರೆ.

‘ಬಿಜೆಪಿ ಬಳಿ ದ್ವೇಷದ ಹಲವು ಕಾರ್ಖಾನೆಗಳಿವೆ’

ನವದೆಹಲಿ (ಪಿಟಿಐ): ‘ಬಿಜೆಪಿಯ ಬಳಿ ದ್ವೇಷದ ಹಲವು ಕಾರ್ಖಾನೆಗಳಿವೆ. ಅವುಗಳಲ್ಲಿ ‘ಟೆಕ್ ಫಾಗ್’ ಆ್ಯಪ್ ಕೂಡ ಒಂದು’ ಎಂದು ಕಾಂಗ್ರೆಸ್ ಮುಖಂಡ ರಾಹುಲ್‌ಗಾಂಧಿ ಆರೋಪಿಸಿದ್ದಾರೆ.

ನಿರ್ದಿಷ್ಟ ಸಮುದಾಯದ ಮಹಿಳೆಯರನ್ನೇ ಗುರಿಯಾಗಿಸಿದ್ದ ಬುಲ್ಲಿಬಾಯಿ ಆ್ಯಪ್ ಪ್ರಕರಣದ ಆರೋಪಿಗಳ ವಯಸ್ಸು ಉಲ್ಲೇಖಿಸಿ, ಇಷ್ಟೊಂದು ದ್ವೇಷ ಎಲ್ಲಿ ಉಗಮವಾಗುತ್ತಿದೆ ಎಂದು ಇಡೀ ದೇಶವೇ ಆಶ್ಚರ್ಯಪಟ್ಟಿತ್ತು ಎಂದರು. ಟೆಕ್ ಫಾಗ್ ಎಂಬುದು ಬಿಜೆಪಿಗೆ ನೆರವಾಗುವ ಆ್ಯಪ್ ಎಂದು ಉಲ್ಲೇಖಿಸಿರುವ ಅವರು ವರದಿಯನ್ನು ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

‘ಬೂಸ್ಟರ್ ಡೋಸ್: ಬ್ಯಾಂಕರ್‌ಗಳನ್ನು ಪರಿಗಣಿಸಿ’

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಬೂಸ್ಟರ್ ಡೋಸ್ ನೀಡಲು ಬ್ಯಾಂಕರ್‌ಗಳನ್ನು ಮುಂಚೂಣಿ ಕಾರ್ಯಕರ್ತರೆಂದು ಪರಿಗಣಿಸುವಂತೆ ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಸಂಘವು (ಎಐಬಿಒಸಿ) ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಮಾಡಿದೆ.

ಈ ಕುರಿತು ಸಂಘಟನೆಯು ಸಚಿವೆಗೆ ಪತ್ರ ಬರೆದಿದ್ದು, ಶೇ 50ರಷ್ಟು ಸಿಬ್ಬಂದಿ ಕಚೇರಿ ಅಥವಾ ಶಾಖೆಗಳಲ್ಲಿ ಕೆಲಸ ಮಾಡುವಂತೆ ಇನ್ನುಳಿದ ಶೇ 50ರಷ್ಟು ಸಿಬ್ಬಂದಿ ಮನೆಯಿಂದಲೇ ಕೆಲಸ ನಿರ್ವಹಿಸಲು ಅವಕಾಶ ನೀಡುವಂತೆ ಕೇಳಿದೆ. ಅಗತ್ಯ ಸೇವಾ ವರ್ಗದ ಅಡಿಯಲ್ಲಿ ಉಪನಗರ ರೈಲ್ವೆ ಸೇರಿದಂತೆ ಸಾರ್ವಜನಿಕ ಸಾರಿಗೆಯನ್ನು ಪಡೆಯಲು ಬ್ಯಾಂಕರ್‌ಗಳಿಗೆ ವಿಶೇಷ ಸ್ಥಾನಮಾನ ನೀಡುವಂತೆಯೂ ಬೇಡಿಕೆ ಸಲ್ಲಿಸಿದೆ.

ಜನವರಿ 10 ರಿಂದ ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕೆಲಸಗಾರರು ಹಾಗೂ 60 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರಿಗೆ ಕೋವಿಡ್-19 ಲಸಿಕೆಯ ಬೂಸ್ಟರ್ ಡೋಸ್ ನೀಡಲಾಗುವುದು ಎಂದು ಸರ್ಕಾರ ಹೇಳಿದೆ. ಇದನ್ನು ಆಧರಿಸಿ ಸಂಘವು ಪತ್ರ ಬರೆದಿದೆ.

ಬ್ಯಾಂಕ್ ಉದ್ಯೋಗಿಗಳನ್ನು ಕೋವಿಡ್‌ನ ಮುಂಚೂಣಿ ಕಾರ್ಯಕರ್ತರು ಎಂದು ಗುರುತಿಸುವಲ್ಲಿ ವಿಳಂಬ ಆಗಿದ್ದರಿಂದ ಕೆಲವರು ಜೀವ ಕಳೆದುಕೊಳ್ಳಬೇಕಾಯಿತು. ಕೋವಿಡ್‌ನ ಮೊದಲ ಎರಡು ಅಲೆಗಳಿಂದಾಗಿ 2 ಸಾವಿರ ಬ್ಯಾಂಕರ್‌ಗಳು ತಮ್ಮ ಜೀವ ಕಳೆದುಕೊಂಡಿದ್ದಾರೆ. ಹೀಗಾಗಿ ಬ್ಯಾಂಕರ್‌ಗಳಿಗೆ ರ್‍ಯಾಪಿಡ್ ಆ್ಯಂಟಿಜನ್ ಟೆಸ್ಟ್ ಕಡ್ಡಾಯ ಆಗಬೇಕು ಎಂದು ಸಂಘಟನೆಯ ಪ್ರಧಾನ ಕಾರ್ಯದರ್ಶಿ ಸೌಮ್ಯ ದತ್ತ ಅವರು ಒತ್ತಾಯಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

ಬೆಂಗಳೂರು	100 ಮೊಟ್ಟೆಗೆ	₹465
	12 ಮೊಟ್ಟೆಗೆ	₹62
ಮೈಸೂರು	100 ಮೊಟ್ಟೆಗೆ	₹460

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1310)
ಸೋಯಾ (ರಿಫೈನ್ಡ್)	₹1200 (1200)

ಷೇರುಪೇಟೆಯ ವಾರದ ವಹಿವಾಟು ಸಕಾರಾತ್ಮಕ ಅಂತ್ಯ

ಹೂಡಿಕೆದಾರರ ಸಂಪತ್ತು ₹6.34 ಲಕ್ಷ ಕೋಟಿ ವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈ ಷೇರುಪೇಟೆಯ ವಾರದ ವಹಿವಾಟು ಸಕಾರಾತ್ಮಕವಾಗಿ ಅಂತ್ಯವಾಗಿದೆ. ಇದರಿಂದಾಗಿ ಮುಂಬೈ ಷೇರುಪೇಟೆಯಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 6.34 ಲಕ್ಷ ಕೋಟಿಗಳಷ್ಟು ವೃದ್ಧಿಯಾಗಿದೆ. ಷೇರುಪೇಟೆಯಲ್ಲಿ ನೋಂದಾಯಿತ ಕಂಪನಿಗಳ ಒಟ್ಟಾರೆ ಬಂಡವಾಳ ಮೌಲ್ಯವು ₹ 272.34 ಲಕ್ಷ ಕೋಟಿಗಳಿಗೆ ಏರಿಕೆಯಾಗಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಒಂದು ವಾರದಲ್ಲಿ 1,490 ಅಂಶಗಳಷ್ಟು ಹೆಚ್ಚಾಗಿ, 59,744 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 458 ಅಂಶಗಳಷ್ಟು



ಹೆಚ್ಚಾಗಿ, 17,812 ಅಂಶಗಳಿಗೆ ತಲುಪಿದೆ.

ಬಂಡವಾಳ ಮಾರುಕಟ್ಟೆಯಲ್ಲಿ ಈ ವಾರ ವಿದೇಶಿ ಸಾಂಸ್ಥಿಕ ಹೂಡಿಕೆಯಲ್ಲಿ ಏರಿಳಿತ ಕಂಡುಬಂದಿದೆ.

ದೇಶದ ಆರ್ಥಿಕ ಬೆಳವಣಿಗೆಯನ್ನು ಸೂಚಿಸುವ ಚಿಲ್ಲರೆ ಮತ್ತು ಸಗಟು ಹಣದುಬ್ಬರದ ಅಂಕಿ-ಅಂಶಗಳು ಹಾಗೂ ಕೈಗಾರಿಕಾ ಉತ್ಪಾದನೆ ಸೂಚ್ಯಂಕವು ಮುಂದಿನ ದಿನಗಳಲ್ಲಿ ಷೇರುಪೇಟೆಯ ವಹಿವಾಟಿನ ಮೇಲೆ ಪ್ರಭಾವ ಬೀರಲಿವೆ ಎಂದು ತಜ್ಞರು ಹೇಳಿದ್ದಾರೆ.

ಜಾಗತಿಕ ಷೇರುಪೇಟೆಗಳ ವಹಿವಾಟಿನ ದಿಕ್ಕಿನ ಜೊತೆಗೆ ಕೋವಿಡ್ ಹರಡುವಿಕೆ ಮತ್ತು ಕೊರೊನಾದ ಹೊಸ ತಳಿ ಓಮೈಕ್ರಾನ್ ಉಂಟುಮಾಡಲಿರುವ ಪರಿಣಾಮಗಳು ಸಹ ಷೇರುಪೇಟೆಯ ವಹಿವಾಟಿನ ಚಲನೆಯನ್ನು ನಿರ್ಧರಿಸಲಿವೆ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ವಾರದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 5 ಪೈಸೆಗಳಷ್ಟು ಇಳಿಕೆ ಆಗಿದೆ.

ಎಂಎಸ್‌ಎಂಇ ವಹಿವಾಟು ವಿಸ್ತರಣೆ: ರೆಬೆಲ್‌ಕಾರ್ಪ್– ಎಫ್‌ಐಇಒ ಒಪ್ಪಂದ

ನವದೆಹಲಿ (ಪಿಟಿಐ): ಕಿರು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ (ಎಂಎಸ್‌ಎಂಇ) ಕಡಿಮೆ ಬೆಲೆಯಲ್ಲಿ ತಮ್ಮದೇ ಆದ ಜಾಲತಾಣ ರೂಪಿಸಿಕೊಳ್ಳಲು ಮತ್ತು ವಹಿವಾಟು ವಿಸ್ತರಣೆ ಮಾಡಿಕೊಳ್ಳಲು ಅನುಕೂಲ ಆಗುವಂತೆ ಡಿಜಿಟಲ್ ವೇದಿಕೆಯನ್ನು ಒದಗಿಸುವ ರೆಬೆಲ್‌ಕಾರ್ಪ್ ಕಂಪನಿಯೊಂದಿಗೆ ಭಾರತೀಯ ರಫ್ತುದಾರರ ಸಂಘಟನೆಗಳ ಒಕ್ಕೂಟ (ಎಫ್‌ಐಇಒ) ಒಪ್ಪಂದ ಮಾಡಿಕೊಂಡಿದೆ.

ರಫ್ತುದಾರರು ಸುಲಭವಾಗಿ ನಿರ್ವಹಿಸಬಹುದಾದ ಜಾಲತಾಣ ರೂಪಿಸಲು ಸಹಾಯ ಮಾಡಲಾಗುವುದು ಎಂದು ಮುಂಬೈನ ರೆಬೆಲ್‌ಕಾರ್ಪ್

ನವೋದ್ಯಮದ ಸ್ಥಾಪಕ ಸಾದ್ ಖಾನ್ ತಿಳಿಸಿದ್ದಾರೆ.

ಕೋವಿಡ್ ಸಾಂಕ್ರಾಮಿಕದಿಂದಾಗಿ ಜಗತ್ತು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿರುವ ಈ ಸಮಯದಲ್ಲಿ, ನಮ್ಮ ಉತ್ಪನ್ನವು ಎಂಎಸ್‌ಎಂಇ ವಲಯಕ್ಕೆ ತಮ್ಮದೇ ಆದ ಜಾಲತಾಣಗಳನ್ನು ರೂಪಿಸಲು ಮತ್ತು ಜಾಗತಿಕ ಮಾರುಕಟ್ಟೆಯನ್ನು ತಲುಪಲು ಸಹಾಯ ಮಾಡಲಿದೆ ಎಂದು ಅವರು ಹೇಳಿದ್ದಾರೆ. ಒಕ್ಕೂಟದಲ್ಲಿ ಇರುವ ಸದಸ್ಯರಿಗೆ ತಮ್ಮ ವೆಬ್‌ಸೈಟ್‌ಗಳನ್ನು ಸುಲಭವಾಗಿ ನಿರ್ವಹಿಸಲು ಆಗುವಂತೆ ಕಾರ್ಯಾಗಾರಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಿದೆ ಎಂದು ಅವರು ತಿಳಿಸಿದ್ದಾರೆ.

ಈ ಉಪಕ್ರಮವು ರಫ್ತುದಾರರಿಗೆ ವಿವಿಧ ದೇಶಗಳಲ್ಲಿ ತಮ್ಮ ವ್ಯವಹಾರಗಳನ್ನು ಪ್ರಸ್ತುತ ಪಡಿಸಲು ಸಹಾಯ ಮಾಡಲಿದೆ ಎಂದು ಒಕ್ಕೂಟದ ಪಶ್ಚಿಮ ವಲಯದ ಪ್ರಾದೇಶಿಕ ಮುಖ್ಯಸ್ಥೆ ಸುಜಾತಾ ಉಚ್ಚಿಲ್ ತಿಳಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ವೈಕುಂಠ ಸಮಾರಾಧನೆ

ಶ್ರೀ. ಜೆ. ಶ್ರೀನಿವಾಸ್ (ಬಾಬು)
(ಲೇಟ್. ಎಮ್. ಜಯರಾಮ ರೆಡ್ಡಿ ಮತ್ತು ಕೆ. ಪಾರ್ವತಮ್ಮ ಅವರ ಮಗ)
ಜನನ: 12–05–1963 – ಮರಣ: 29–12–2021
ದಿನಾಂಕ 29–12–2021 ನೇ ಬುಧವಾರ ಬೆಳಗ್ಗೆ 6.00 ಘಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರ ವೈಕುಂಠ ಸಮಾರಾಧನೆಯನ್ನು ದಿನಾಂಕ 9–1–2022 ನೇ ಭಾನುವಾರ 9.30 ಘಂಟೆಗೆ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಇದನ್ನು ಆಹ್ವಾನವೆಂದು ಭಾವಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ .
ಇಂತಿ ದುಃಖತಪ್ತರು ಪತ್ನಿ ಶ್ರೀಮತಿ ಗೀತ ಮತ್ತು ಮಕ್ಕಳು, ಕೋರಮಂಗಲ ಶ್ರೀಮತಿ ಜೆ. ಶೈಲಾ ಮತ್ತು ಶ್ರೀ ಎಸ್. ಕೆ. ಜಯರಾಮ್, ದೊಮ್ಮಲೂರು ಹಾಗೂ ಬಂಧು–ಮಿತ್ರರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Situation Required
MECHANICAL ENGINEERS or Diploma's 5 to 6 years experience in QC or Production for ISO precision engineering company in Peenya. Call 6360471436

Multiple Vacancy
ಬೆಂಗಳೂರಿನ ಹೊಸಕೋಟೆಯ ಹೋಟಲ್/ಮೊಬೈಲ್ ಕ್ಯಾಂಟೀನ್‌ಗೆ ಅನುಭವವಿರುವ ದೋಸಾ ಮಾಸ್ಟರ್ ಮತ್ತು ಡ್ರೈವರ್, ಹೆಲ್ಪರ್ ಬೇಕಾಗಿದ್ದಾರೆ. ಉತ್ತಮ ಸಂಬಳ. 7411444075

Wanted
ಜಯನಗರದಲ್ಲಿರುವ ಅಪಾರ್ಟಮೆಂಟಿಗೆ ವಾಚ್‌ಮೆನ್ ಹಾಗೂ ಕ್ಲೀನಿಂಗ್ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ. ಉಚಿತ ವಸತಿ ಕೊಡಲಾಗುವುದು. ಸಂಪರ್ಕಿಸಿ : 9900197108 .

General
ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-32000/- 9742260055, 9538133533

REQUIRED FOR ADDRESS VERIFICATION COMPANY
FIELD VERIFICATION EXECUTIVES REQUIRED FOR ALL OVER KARNATAKA
SALARY + ATTRACTIVE INCENTIVE
Full Time & Part Time Jobs available
ANDROID MOBILE MUST
DIGINITY ENTERPRISES PVT LTD
No.26, Oakland Apartment, Flat No.102, 1st Cross, Ulsoor Road, Near HDFC Bank, Bangalore - 42.
99410 12347
90879 55555

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600-62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800/- 68,000/- 17,800/-'>. 8884666597, 8884666594.

ಬಿಲ್ಡರ್ ಎಸೆನ್ಷಿಯಲ್

Water Proofing Materials
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್, ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್
Mysore
GOVIANU LUXURIA, High-end Luxury Flats in Mysore, Zoo Road, near Mysore Mall, Rera-003588, www.govianu.com. 8103990990

ವ್ಯಾಪಾರ
Business Offers
Franchise
Shakti
Outsourcing | Security Services | Facility Management
SHAKTI SECURITY AND MAINTENANCE SERVICES PVT. LTD.,
A premiere security & Manpower Services company with 30 years experience and good track record
Looking for FRANCHISEES for it's business expansion and new ventures.
LOW INVESTMENT -HIGH RETURNS
08105407476
93921 66456
www.shaktisecurity. com

Business For Sale
ಹಾಲಿ ಪ್ರಾವಿಷನ್ ಸ್ಟೋರ್ ಮಾರಾಟಕ್ಕಿದೆ. ಬೆಂಗಳೂರಿನ ಶ್ರೀ ರಾಮಾಂಜನೇಯ ಮುಖ್ಯರಸ್ತೆ, ಹನುಮಂತನಗರ, ಬೆಲೆ ರೂ. 3,20,000. ಸಂಪರ್ಕಿಸಿ : 9008151027

Machinery & Tools
Leading Gear Box Mfrs. Company
JOB ORDER REQUIRED
Steel casting foundry with 1kg to 200kg capacity WCB-MS-SSpre machining WMC turning HMC all conversion hardening grinding, with assembling facility is inviting job orders
Contact
97886 20747
94430 17339
SBAC-22

ಭವಿಷ್ಯ
Astrology
★||ಶ್ರೀಹುಲಿಗೆಮ್ಮ ಚೌಡೇಶ್ವರಿದೇವಿ||★ ಆರಾಧನೆಯಿಂದ ಸ್ತ್ರೀಪುರುಷ_ವಶೀಕರಣ, ಸಂಭೋಗ_ವಶೀಕರಣ, ಸಾಲದಬಾದೆ,ಶತ್ರುನಾಶ ಇನ್ನಯಾವುದೇ ಘೋರ,ನಿಗೂಢ ಗುಪ್ತ,ಕಠಿಣ ಸಮಸ್ಯೆಗಳಿದ್ದರೂ 24ಗಂಟೆಗಳಲ್ಲಿ ಶಾಶ್ವತಪರಿಹಾರ. ವಶಿಕರಣ_ಸ್ಪೆಷಲಿಸ್ಟ್ ಶ್ರೀದೇವಿಭಟ್ 9606735267

★ನಂ.1 ಸ್ತ್ರೀಪುರುಷ★ ವಶೀಕರಣ ಸ್ಪೆಷಲಿಸ್ಟ್.ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ.ಪಂಡಿತ್. ದೇವೇಂದ್ರಭಟ್ ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ,ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845919804

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಇತರೆ
Medical
MEDICAL REGISTRATION BAMS, BHMS, BUMS, BDS, BPT, ANM, GNM, DPharma, Dental Hygiene, DHMS, DAMS, DUMS, Only Sms/ Whatsapp 9893869473 (Only Practitioners)

ಸಮಾಜಸೇವೆ
Old Age Home
ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916551457, 9916544057, 9620761222

ಪ್ರವಾಸ
Travel
★ಶ್ರೇಯಸ್ ಟೂರ್ಸ್★ ದಿನಾಂಕ:28.01.2022 13ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ ಸರ್ದಾರ್ ಪ್ರತಿಮೆ,ಕಚ್‌ಬುಚ್ ಸಹಿತ.,22.01.2022 5ದಿನಗಳು ಶ್ರೀನಗರ,ಗುಲ್‌ಮಾರ್ಗ್,ಪೆಹಲ್ ಗಾಂ,ಸೋನುಮಾರ್ಗ್., 02.03.2022 11ದಿನಗಳು ಚಂಡೀಗಢ್,ಸಿಮ್ಲಾ, ಕುಲುಮನಾಲಿ,5ದೇವಿಯರು, ಡಾಲ್‌ಹೌಸಿ,ವೈಷ್ಣೋದೇವಿ, ಅಮೃತ್‌ಸರ್,ವಾಘಗಡಿ, ಕುರುಕ್ಷೇತ್ರ.,02.03.2022 10ದಿನಗಳು ಅಖಂಡ ನೇಪಾಳ ರಾಷ್ಟ್ರ ಪ್ರವಾಸ(ಮುಕ್ತಿನಾಥ ಸಹಿತ),(ಎಲ್ಲಾ ವಿಮಾನದಲ್ಲಿ). 9743351212, 9206979202, 9902050065, 7406112334

★ಶ್ರೇಯಸ್ ಟೂರ್ಸ್★ ದಿನಾಂಕ:08.02.2022 6ದಿನಗಳು ಮಾಘಮಾಸ ಪುಣ್ಯಸ್ನಾನ ಪ್ರವಾಸ ನೈಮಿಷ್ಯಾರಣ್ಯ,ತ್ರಿವೇಣಿಸಂಗಮ, ಸೀತಾಮಡು,ವಿಂದ್ಯಾವಾಸಿನಿ, ಕಾಶಿ.,ದಿನಾಂಕ:16.02.2022 11ದಿನಗಳು ಕಾಶಿ,ಗಯಾ ಅಯೋಧ್ಯ,ನೈಮಿಷ್ಯಾರಣ್ಯ, ಚಿತ್ರಕೂಟ,ಪ್ರಯಾಗರಾಜ್, ಗಯಾ,ರಾಜ್‌ಗಿರ್,ದೇವಘರ್. ಕಾಶಿ.9743351212, 9206979202, 9902050065, 7406112334

21-1-2022 ಕಾಶಿ, ಗಯಾ, ಅಯೋಧ್ಯ 8ದಿನ. 2-2-2022 ಕಾಶಿ, ಆಗ್ರ, ದೆಹಲಿ 13ದಿನ. 25-3-2022 ಗ್ಯಾಂಗ್ಟಾಕ್, ಡಾರ್ಜಿಲಿಂಗ್, ಕಲ್ಕತ್ತಾ, ಭುವನೇಶ್ವರ 12ದಿನ. ನಂದಿನಿ ಟೂರಿಸ್ಟ್ 9916574089.

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

‘ಕೋರ್ಟ್ ಸಿಬ್ಬಂದಿ ಹಣಕ್ಕೆ ಒತ್ತಾಯಿಸುವುದು ಸಹಿಸಲಾಗದು’

ನವದೆಹಲಿ (ಪಿಟಿಐ): ‘ಕೋರ್ಟ್‌ನಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯು ಹಣ ನೀಡುವಂತೆ ಒತ್ತಾಯಿಸುವುದು, ಕಾನೂನುಬಾಹಿರವಾಗಿ ಪಡೆಯುವುದನ್ನು ಸಹಿಸಲಾಗದು. ಗುಣಮಟ್ಟದ ಸೇವೆ ನ್ಯಾಯಮೂರ್ತಿಗಳಿಗಷ್ಟೇ ಅಲ್ಲ, ಅಲ್ಲಿ ಕೆಲಸ ಮಾಡುವ ಸಿಬ್ಬಂದಿಗೂ ಅನ್ವಯವಾಗಲಿದೆ’ ಎಂದು ಸುಪ್ರೀಂ ಕೋರ್ಟ್ ಶನಿವಾರ ಹೇಳಿದೆ.

ಆರೋಪಿಯೊಬ್ಬರನ್ನು ದೋಷಮುಕ್ತಗೊಳಿಸುವ ಕುರಿತಂತೆ ₹ 50 ಸಾವಿರ ನೀಡಲು ಒತ್ತಾಯಿಸಿದ್ದ ಪ್ರಕರಣದಲ್ಲಿ ಬಿಹಾರದ ಜಿಲ್ಲಾ ನ್ಯಾಯಾಲಯದ ಸಿಬ್ಬಂದಿಯೊಬ್ಬರನ್ನು ಸೇವೆಯಿಂದ ವಜಾ ಮಾಡಲಾಗಿತ್ತು. ಆ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆಯ ವೇಳೆ ಸುಪ್ರೀಂ ಕೋರ್ಟ್ ಮೌಖಿಕವಾಗಿ ಈ ಅಭಿಪ್ರಾಯ ವ್ಯಕ್ತಪಡಿಸಿತು.

ಅರ್ಜಿದಾರರನ್ನು ಪ್ರತಿನಿಧಿಸಿದ್ದ ವಕೀಲರು, ‘ಕಕ್ಷಿದಾರರು 24 ವರ್ಷ ಉತ್ತಮವಾಗಿ ಸೇವೆ ಸಲ್ಲಿಸಿದ್ದಾರೆ. ಇದು, ಅವರ ವಿರುದ್ಧದ ಮೊದಲ ಆರೋಪ’ ಎಂದು ಪೀಠದ ಗಮನಕ್ಕೆ ತಂದರು. ಇದಕ್ಕೆ ನ್ಯಾಯಮೂರ್ತಿಗಳಾದ ಎ.ಎಂ.ಖಾನ್‌ವಿಲ್ಕರ್ ಮತ್ತು ಸಿ.ಟಿ.ರವಿಕುಮಾರ್ ಅವರಿದ್ದ ಪೀಠವು, ‘ಕೋರ್ಟ್‌ನಲ್ಲಿ ಕೆಲಸ ಮಾಡುತ್ತಿದ್ದು, ಹಣಕ್ಕೆ ಒತ್ತಾಯಿಸುತ್ತೀರಾ? ತಪ್ಪನ್ನು ನಿಮ್ಮ ಕಕ್ಷಿದಾರರು ಒಪ್ಪಿಕೊಂಡಿದ್ದಾರೆ’ ಎಂದು ಪ್ರತಿಕ್ರಿಯಿಸಿತು.

ಸೇವೆಯಿಂದ ವಜಾ ಮಾಡುವ ಕುರಿತ ಪಟ್ನಾ ಹೈಕೋರ್ಟ್‌ನ ವಿಭಾಗೀಯ ಪೀಠದ ಆದೇಶ ಪ್ರಶ್ನಿಸಿ ಅರ್ಜಿದಾರರು ಮೇಲ್ಮನವಿ ಸಲ್ಲಿಸಿದ್ದರು. ಕಕ್ಷಿದಾರರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗಿದೆ ಎಂದು ವಕೀಲರು ಹೇಳಿದರು. ಕಠಿಣ ಕ್ರಮ ಜರುಗಿಸಲಾಗಿದೆ ಎಂದು ಏಕೆ ಹೇಳುತ್ತೀರಿ. ತನಿಖೆಯ ನಂತರವೇ ಕ್ರಮ ಜರುಗಿಸಲಾಗಿದೆಯಲ್ಲವೇ? ಅವರು ತಪ್ಪು ಒಪ್ಪಿಕೊಂಡಿದ್ದಾರೆ. ಅದರ ನಂತರ ಏನು ಮಾಡಲಾಗುತ್ತದೆ? ಎಂದು ಪೀಠ ಪ್ರಶ್ನಿಸಿತು.

2.5 ಲಕ್ಷಕ್ಕೂ ಅಧಿಕ ಎಸ್‌ಯುವಿ ಮಾರಾಟ: ಹುಂಡೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಂಡೈ ಮೋಟರ್ ಇಂಡಿಯಾ ಕಂಪನಿಯು 2021ನೇ ಕ್ಯಾಲೆಂಡರ್ ವರ್ಷದಲ್ಲಿ ಭಾರತದಲ್ಲಿ 2.52 ಲಕ್ಷಕ್ಕೂ ಅಧಿಕ ಎಸ್‌ಯುವಿಗಳನ್ನು ಮಾರಾಟ ಮಾಡಿದೆ. ಈ ಮೂಲಕ ಕಂಪನಿಯು ಭಾರತದ ಅತ್ಯಂತ ಆದ್ಯತೆಯ ಎಸ್‌ಯುವಿ ಬ್ರ್ಯಾಂಡ್ ಆಗಿ ಮುಂದುವರಿದಿದೆ ಎಂದು ಕಂಪನಿಯು ಹೇಳಿಕೊಂಡಿದೆ.

ಹೊಸ ಕ್ರೆಟಾ 1.25 ಲಕ್ಷ ಮಾರಾಟ ಆಗಿದ್ದು, ಭಾರತದಲ್ಲಿ ಅತಿ ಹೆಚ್ಚು ಮಾರಾಟ ಆಗಿರುವ ಎಸ್‌ಯುವಿ ಆಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಐದು ವರ್ಷಗಳ ಅವಧಿಯಲ್ಲಿ ಒಟ್ಟು 8.34 ಲಕ್ಷ ಎಸ್‌ಯುವಿಗಳನ್ನು ಮಾರಾಟ ಮಾಡುವ ಮೂಲಕ ಶೇ 135ರಷ್ಟು ಬೆಳವಣಿಗೆ ಸಾಧಿಸಲಾಗಿದೆ ಎಂದು ಹೇಳಿದೆ.

ಗ್ರಾಹಕರಿಗೆ ಅತ್ಯಂತ ವಿಶೇಷವಾದ ಉತ್ಪನ್ನಗಳನ್ನು ತಲುಪಿಸುವ ಉತ್ಸಾಹ ಮತ್ತು ಬದ್ಧತೆಯಿಂದಾಗಿ ಸತತವಾಗಿ ಎರಡು ವರ್ಷಗಳ ಕಾಲ ಭಾರತದ ಅತ್ಯಂತ ಆದ್ಯತೆಯ ಎಸ್‌ಯುವಿ ಬ್ರ್ಯಾಂಡ್ ಆಗಲು ಹುಂಡೈಗೆ ಸಾಧ್ಯವಾಗಿದೆ ಎಂದು ಕಂಪನಿಯ ಮಾರಾಟ ಮತ್ತು ಮಾರುಕಟ್ಟೆ ವಿಭಾಗದ ನಿರ್ದೇಶಕ ತರುಣ್ ಗರ್ಗ್ ತಿಳಿಸಿದ್ದಾರೆ.

ಅಗ್ನಿ ಅವಘಡ ‘ದೇವರ ಆಟ’ವಲ್ಲ

ನವದೆಹಲಿ (ಪಿಟಿಐ): ಚಂಡಮಾರುತ, ಪ್ರವಾಹ, ಭೂಕಂಪನ ಅಥವಾ ಸಿಡಿಲಿನಂತಹ ನೈಸರ್ಗಿಕ ಪ್ರಕೋಪಗಳಿಂದಾಗಿ ಸಂಭವಿಸದ ಹೊರತು ಅಗ್ನಿ ಅವಘಡವನ್ನು ‘ದೇವರ ಆಟ’ ಎಂದು ಕರೆಯಲಾಗದು ಎಂದು ಸುಪ್ರೀಂಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್, ದಿನೇಶ್ ಮಾಹೇಶ್ವರಿ ಹಾಗೂ ಕೃಷ್ಣ ಮುರಾರಿ ಅವರಿದ್ದ ನ್ಯಾಯಪೀಠ ಅರ್ಜಿಯೊಂದರ ವಿಚಾರಣೆ ವೇಳೆ ಈ ಅಭಿಪ್ರಾಯ ವ್ಯಕ್ತಪಡಿಸಿತು.

ಮದ್ಯ ತಯಾರಿಸುವ

ಕಂಪನಿಯೊಂದರ ಉಗ್ರಾಣದಲ್ಲಿ ಸಂಭವಿಸಿದ ಅಗ್ನಿ ಅವಘಡವನ್ನು ‘ದೇವರ ಆಟ’ ಎಂದು ಕರೆದಿದ್ದ ಅಲಹಾಬಾದ್ ಹೈಕೋರ್ಟ್, ತೆರಿಗೆ ಭರಿಸುವುದರಿಂದ ಕಂಪನಿಗೆ ವಿನಾಯಿತಿ ನೀಡಿ ಆದೇಶಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಉತ್ತರ ಪ್ರದೇಶದ ಅಬಕಾರಿ ಇಲಾಖೆ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ಹೈಕೋರ್ಟ್‌ನ ಈ ಆದೇಶವನ್ನು ರದ್ದು ಮಾಡಿದ ನ್ಯಾಯಪೀಠ, ಈ ಪ್ರಕರಣದಲ್ಲಿ ಚಂಡಮಾರುತ, ಪ್ರವಾಹ, ಸಿಡಿಲು ಅಥವಾ ಭೂಕಂಪನದಂತಹ ಪ್ರಕೃತಿ ವಿಕೋಪದಿಂದಾಗಿ ಅಗ್ನಿ ದುರಂತ ಸಂಭವಿಸಿಲ್ಲ ಎಂದು ಅಭಿಪ್ರಾಯಪಟ್ಟಿತು.

‘ಯಾವುದೇ ವ್ಯಕ್ತಿಯ ಕಿಡಿಗೇಡಿತನದಿಂದಾಗಿಯೂ ಉಗ್ರಾಣದಲ್ಲಿ ಅಗ್ನಿ ದುರಂತ ಸಂಭವಿಸಿಲ್ಲ’ ಎಂದೂ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಚೋದನಕಾರಿ, ನಕಲಿ ಮಾಹಿತಿ ಪ್ರಸಾರಕ್ಕೆ ತಡೆ

ನವದೆಹಲಿ (ಪಿಟಿಐ): ನಕಲಿ ಮತ್ತು ಪ್ರಚೋದನಕಾರಿ ಮಾಹಿತಿಗಳನ್ನು ಟ್ವಿಟರ್, ಯೂಟ್ಯೂಬ್ ಮತ್ತು ಫೇಸ್‌ಬುಕ್‌ನಲ್ಲಿ ಪ್ರಸರಣ ಮಾಡುತ್ತಿದ್ದ ಹಲವು ವೇದಿಕೆಗಳನ್ನು ಕೇಂದ್ರ ಸರ್ಕಾರ ತಡೆಹಿಡಿದಿದೆ.

ಮೂಲಗಳ ಪ್ರಕಾರ, 73 ಟ್ವಿಟರ್ ಖಾತೆಗಳು, ಯೂಟ್ಯೂಬ್‌ನಲ್ಲಿನ ನಾಲ್ಕು ಅಡಕಗಳು ಮತ್ತು ಇನ್‌ಸ್ಟಾಗ್ರಾಂನಲ್ಲಿನ ಒಂದು ಗೇಮ್ ಅನ್ನು ಗುರುತಿಸಲಾಗಿದೆ.

ಈ ವೇದಿಕೆಗಳ ನಿರ್ವಾಹಕರು, ಮಾಲೀಕರನ್ನು ಗುರುತಿಸಲಾಗುತ್ತಿದ್ದು, ಕಾಯ್ದೆ ಪ್ರಕಾರ ಶಿಕ್ಷೆಗೆ ಒಳಪಡಿಸಲು

ಕ್ರಮ ಕೈಗೊಳ್ಳಲಾಗುವುದು ಎಂದು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ತಿಳಿಸಿದರು.

ದ್ವೇಷಪೂರಿತ ಪೋಸ್ಟ್‌ಗಳ ವಿರುದ್ಧ ಹಲವು ಕಠಿಣ ಕ್ರಮಗಳ ನಂತರವೂ ಮೂಲಗಳ ಪ್ರಕಾರ, ಸಚಿವ ಸಂಪುಟ ಚರ್ಚೆ ಕುರಿತು ಆಕ್ಷೇಪಾರ್ಹ ಅಡಕಗಳು, ಪ್ರಧಾನಿ ಅವರನ್ನು ಅವಹೇಳನ ಮಾಡಿ ಅನಿಮೇಟ್ ಮಾಡಿದ ನಕಲಿ ವಿಡಿಯೊಗಳು, ಹಿಂದೂ ಮಹಿಳೆಯರಿಗೆ ಅಪಮಾನಿಸುವ ಪೋಸ್ಟ್‌ಗಳನ್ನು ಜಾಲತಾಣಗಳಲ್ಲಿ ಹರಿಯಬಿಡಲಾಗಿತ್ತು.

ವಿಶ್ವಾಸಾರ್ಹ ಮತ್ತು ಸುರಕ್ಷಿತ ಇಂಟರ್‌ನೆಟ್ ಕುರಿತ ಕೇಂದ್ರದ ಕಾರ್ಯಪಡೆಯು ಕಾರ್ಯನಿರ್ವಹಿಸುತ್ತಿದ್ದು, ಜಾಲತಾಣದ ಇಂತಹ ವೇದಿಕೆಗಳನ್ನು ಗುರುತಿಸಿ ತಡೆಹಿಡಿಯಲಾಗಿದೆ ಎಂದು ಚಂದ್ರಶೇಖರ್ ಟ್ವೀಟ್ ಮಾಡಿದ್ದಾರೆ.

ಇಂತಹ ಅಡಕಗಳ ವಿರುದ್ಧ ಕ್ರಮಜರುಗಿಸಬೇಕು ಎಂದು ಒತ್ತಾಯಿಸಿದ್ದ ಟ್ವೀಟ್‌ಗೆ ಪ್ರತಿಕ್ರಿಯಿಸಿದ್ದ ಸಚಿವ ರಾಜೀವ್ ಚಂದ್ರಶೇಖರ್ ಅವರು, ಈ ನಿಟ್ಟಿನಲ್ಲಿ ಕ್ರಮವಹಿಸಲಾಗುತ್ತಿದೆ ಎಂದು ಪ್ರತಿಕ್ರಿಯಿಸಿದ್ದರು.

ಸಿಖ್ ಸಮುದಾಯದ ವಿರುದ್ಧವಾಗಿ ಕೇಂದ್ರ ಸಚಿವ ಸಂಪುಟ ಸಭೆ ನಡೆದಿದೆ ಎಂಬಂತೆ ಬಿಂಬಿಸಿ ವಿಡಿಯೊ ಹರಿಬಿಟ್ಟಿದ್ದ ಪ್ರಕರಣ ಕುರಿತು ದೆಹಲಿ ಪೊಲೀಸರು ಶುಕ್ರವಾರ ಪ್ರಕರಣ ದಾಖಲಿಸಿಕೊಂಡಿದ್ದರು.

ಮುಂಬೈ ಧಾರಣೆ

ಶೇಂಗಾ

8-1-2022

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8950-9000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1320)
ಒಂದು ವಾರದ ಡೆಲಿವರಿ	1315 (1315)
ಸೋಯಾ ಕಚ್ಚಾ	1152 (1150)
ಪಾಮ್ ವಾರದ ಡೆಲಿವರಿ	1163 (1163)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂಗೆ	47,450 (47,300)
ಬೆಳ್ಳಿ ಕೆ.ಜಿ	60,200 (59,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಆಂಧ್ರ: ನೌಕರರ ವೇತನ ಹೆಚ್ಚಳ, ನಿವೃತ್ತಿ ವಯಸ್ಸು 62ಕ್ಕೆ ಏರಿಕೆ

ಅಮರಾವತಿ (ಪಿಟಿಐ): ಆಂಧ್ರಪ್ರದೇಶ ಸರ್ಕಾರವು ತನ್ನ ನೌಕರರ ವೇತನವನ್ನು ಪರಿಷ್ಕರಿಸಿದ್ದು, ಶೇ 23.29ರಷ್ಟು ಏರಿಕೆ ಮಾಡಿದೆ. ಅಲ್ಲದೆ, ನಿವೃತ್ತಿ ವಯಸ್ಸನ್ನು 60ರಿಂದ 62 ವರ್ಷಕ್ಕೆ ವಿಸ್ತರಿಸಿದೆ.

ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಅವರು, ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳ ಜೊತೆಗೆ ಚರ್ಚಿಸಿದ ಬಳಿಕ ವೇತನ ಪರಿಷ್ಕರಣೆಯನ್ನು ಪ್ರಕಟಿಸಿದರು. ಮುಖ್ಯ ಕಾರ್ಯದರ್ಶಿ ನೇತೃತ್ವದ ಸಮಿತಿ ಮಾಡಿದ್ದ ಶಿಫಾರಸುಗಳನ್ನು ಮೀರಿ ವೇತನ ಪರಿಷ್ಕರಿಸಲಾಗಿದೆ.

ಅಲ್ಲದೆ, ನೌಕರರ ಇತರೆ ಬೇಡಿಕೆಗಳನ್ನು ಈಡೇರಿಸುವ ಕುರಿತು ಜೂನ್ 30ರ ಗಡುವನ್ನು ಮುಖ್ಯಮಂತ್ರಿ ನಿಗದಿಪಡಿಸಿದ್ದಾರೆ.

ಪರಿಷ್ಕೃತ ವೇತನವು ಜುಲೈ 1,2018ರಿಂದ ಅನ್ವಯವಾಗುವಂತೆ ಜಾರಿಗೆ ಬರಲಿದೆ. ಆದರೆ, ಪರಿ ಷ್ಕರಣೆಯಂತೆ ಆರ್ಥಿಕ ಸೌಲಭ್ಯ ಏಪ್ರಿಲ್ 1, 2020ರಿಂದ ಜಾರಿಗೆ ಬರುವಂತೆ ಪಾವತಿಯಾಗಲಿದೆ ಎಂದು ಮುಖ್ಯಮಂತ್ರಿ ಅವರು ನೌಕರರ ಸಂಘದ ಪದಾಧಿಕಾರಿಗಳಿಗೆ ತಿಳಿಸಿದರು.

ವೇತನ ಪರಿಷ್ಕರಣೆಯಿಂದ ಬೊಕ್ಕಸಕ್ಕೆ ವಾರ್ಷಿಕ ₹10,247 ಕೋಟಿ ಹೊರೆಯಾಗಲಿದೆ. ಆಂಧ್ರಪ್ರದೇಶವು ಇನ್ನು ಮುಂದೆ ರಾಜ್ಯ ನೌಕರರ ವೇತನ ಪರಿಷ್ಕರಣೆಗೆ ಕೇಂದ್ರ ವೇತನ ಆಯೋಗದ ಶಿಫಾರಸುಗಳನ್ನೇ ಪರಿಗಣಿಸಲಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಪ್ರೊ ಕಬಡ್ಡಿ ಲೀಗ್: ದಬಂಗ್ ಡೆಲ್ಲಿಗೆ ಮತ್ತೆ ಅಗ್ರಸ್ಥಾನ; ಯು ಮುಂಬಾಗೆ ಭರ್ಜರಿ ಗೆಲುವು

ನವೀನ್ 'ಎಕ್ಸ್‌ಪ್ರೆಸ್'ಗೆ ಮಣಿದ ಯೋಧಾ

ಪ್ರಜಾವಾಣಿ ವಾರ್ತೆ


ಯು.ಪಿ.ಯೋಧಾ ಆವರಣದಿಂದ ಪಾರಾದ ದಬಂಗ್ ಡೆಲ್ಲಿಯ ನವೀನ್ ಕುಮಾರ್

ಬೆಂಗಳೂರು: ಮೊದಲಾರ್ಧದಲ್ಲಿ ಮಿಂಚಲು ವಿಫಲರಾದ 'ಎಕ್ಸ್‌ಪ್ರೆಸ್' ಖ್ಯಾತಿಯ ನವೀನ್ ದ್ವಿತೀಯಾರ್ಧದಲ್ಲಿ ಭರ್ಜರಿ ರೇಡಿಂಗ್ ಮೂಲಕ ಕಬಡ್ಡಿ ಪ್ರಿಯರನ್ನು ರಂಜಿಸಿದರು. ಆ ಮೂಲಕ ದಬಂಗ್ ಡೆಲ್ಲಿ ತಂಡದ ರೋಚಕ ಜಯಕ್ಕೆ ಕಾರಣರಾದರು. ವೈಟ್‌ಫೀಲ್ಡ್‌ನ ಹೋಟೆಲ್ ಶೆರಟಾನ್ ಗ್ರ್ಯಾಂಡ್‌ನ ಮ್ಯಾಟ್‌ನಲ್ಲಿ ಶನಿವಾರ ರಾತ್ರಿ ನಡೆದ ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ದಬಂಗ್ ಡೆಲ್ಲಿ 37–33ರಲ್ಲಿ ಯು.ಪಿ ಯೋಧಾವನ್ನು ಮಣಿಸಿತು. ಈ ಮೂಲಕ ಪಾಯಿಂಟ್ ಪಟ್ಟಿಯಲ್ಲಿ ಮತ್ತೆ ಅಗ್ರ ಸ್ಥಾನಕ್ಕೇರಿತು.

ಮೊದಲಾರ್ಧದಲ್ಲಿ 18–13ರಲ್ಲಿ ಮುನ್ನಡೆ ಸಾಧಿಸಿದ್ದ ಯು.ಪಿ. ಯೋಧಾಗೆ ದ್ವಿತೀಯಾರ್ಧದಲ್ಲಿ ನವೀನ್ ಆಘಾತ ನೀಡಿದರು. ದ್ವಿತೀಯಾರ್ಧದ ಆರಂಭದಲ್ಲೇ ಪ್ರದೀಪ್ ನರ್ವಾಲ್ ಅವರನ್ನು ಕ್ಯಾಚ್ ಮಾಡಿ ಟ್ಯಾಕ್ಲಿಂಗ್ ಪಾಯಿಂಟ್ ಕೂಡ ಗಳಿಸಿದ ನವೀನ್ ಒಟ್ಟು 5 ಬೋನಸ್ ಪಾಯಿಂಟ್‌ಗಳೊಂದಿಗೆ ಒಟ್ಟು 18 ಪಾಯಿಂಟ್ ಗಳಿಸಿ ಮತ್ತೊಮ್ಮೆ 'ಸೂಪರ್ 10' ಸಾಧನೆಗೆ ಪಾತ್ರರಾದರು.

ಆಲ್‌ರೌಂಡರ್ ವಿಜಯ್ 7 ಪಾಯಿಂಟ್ ಗಳಿಸಿದರೆ ಮಂಜಿತ್ ಚಿಲ್ಲಾರ್ 4 ಟ್ಯಾಕ್ಲಿಂಗ್ ಪಾಯಿಂಟ್‌ಗಳ ಮೂಲಕ ಮಿಂಚಿದರು. ಯು.ಪಿ. ಯೋಧಾದ ಪ್ರದೀಪ್ ನರ್ವಾಲ್ 9 ಪಾಯಿಂಟ್ ಗಳಿಸಿದರು. ಸುರೇಂದರ್ ಗಿಲ್ ಕೂಡ 9 ಪಾಯಿಂಟ್ ಗಳಿಸಿದರು. ರೇಡರ್ ಆಗಿರುವ ಅವರು ದ್ವಿತೀಯಾರ್ಧದಲ್ಲಿ ನವೀನ್ ಕುಮಾರ್ ಅವರನ್ನು ಕ್ಯಾಚ್ ಮಾಡಿದರು. ಆದರೆ ತಂಡದ ಕೊನೆಯ ರೇಡ್‌ನಲ್ಲಿ ಸಮಬಲ ಸಾಧಿಸಲು ಒದಗಿದ್ದ ಅತ್ಯಪೂರ್ವ ಅವಕಾಶವನ್ನು ಕೈಚೆಲ್ಲಿದರು. ಅಂಗಣದಿಂದ ಹೊರಗೆ ಹೋದ ಅವರು 'ಔಟ್' ಆಗಿ ಡೆಲ್ಲಿಯ ಜಯವನ್ನು ಸುಲಭಗೊಳಿಸಿದರು.

ಯು ಮುಂಬಾ ಜಯಭೇರಿ: ಎರಡನೇ ಪಂದ್ಯದಲ್ಲಿ ಯು ಮುಂಬಾ 48–38ರಲ್ಲಿ ತೆಲುಗು ಟೈಟನ್ಸ್ ವಿರುದ್ಧ ಜಯ ಸಾಧಿಸಿತು. ವಿ.ಅಜಿತ್ ಮತ್ತು ಅಭಿಷೇಕ್ ಸಿಂಗ್ ಅವರ ಅಮೋಘ ಆಟದ ಬಲದಿಂದ ಯು ಮುಂಬಾ ಮೊದಲಾರ್ಧದಲ್ಲಿ 28–13ರ ಮುನ್ನಡೆ ಗಳಿಸಿತ್ತು. ಅಭಿಷೇಕ್ ದ್ವಿತೀಯಾರ್ಧದಲ್ಲೂ ಮಿಂಚಿದರು. ಒಟ್ಟು 13 ಟಚ್ ಪಾಯಿಂಟ್‌ಗಳು ಅವರ ಖಾತೆಗೆ ಸೇರಿದವು. ಅಜಿತ್ 2 ಬೋನಸ್ ಸೇರಿದಂತೆ ಒಟ್ಟು 8 ಪಾಯಿಂಟ್ ಗಳಿಸಿದರು. ರಿಂಕು 7 ಟ್ಯಾಕ್ಲಿಂಗ್ ಪಾಯಿಂಟ್ ಕಲೆ ಹಾಕಿದರು.

ಪಟ್ನಾ ಜಯಭೇರಿ: ರೋಚಕ ಹೋರಾಟ ಕಂಡ ಇನ್ನೊಂದು ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡವು 27–26ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು.

ಇಂದಿನ ಪಂದ್ಯ (ರಾತ್ರಿ)
ಪುಣೇರಿ ಪಲ್ಟನ್ Vs ಬೆಂಗಾಲ್ ವಾರಿಯರ್ಸ್ 7.30
ಬೆಂಗಳೂರು ಬುಲ್ಸ್ – ಯುಪಿ ಯೋಧಾ 8.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	7	5	-	2	31
ಪಟ್ನಾ ಪೈರೇಟ್ಸ್	7	5	1	1	29
ಬೆಂಗಳೂರು ಬುಲ್ಸ್	7	5	1	1	28
ಯು ಮುಂಬಾ	7	3	1	3	25
ತಮಿಳ್ ತಲೈವಾಸ್	7	2	1	4	22
ಹರಿಯಾಣ ಸ್ಟೀಲರ್ಸ್	7	3	3	1	20
ಜೈಪುರ್ ಪಿಂಕ್ ಪ್ಯಾಂಥರ್ಸ್	7	3	4	-	18
ಬೆಂಗಾಲ್ ವಾರಿಯರ್ಸ್	7	3	4	-	17
ಗುಜರಾತ್ ಜೈಂಟ್ಸ್	7	1	4	2	15
ಯುಪಿ ಯೋಧಾ	7	1	4	2	15
ಪುಣೇರಿ ಪಲ್ಟನ್	7	2	5	-	11
ತೆಲುಗು ಟೈಟನ್ಸ್	7	-	5	2	10

(ಶನಿವಾರದ ಪಂದ್ಯಗಳ ಅಂತ್ಯಕ್ಕೆ)

ಸ್ಕೇಟಿಂಗ್ ಟೂರ್ನಿ: ಏಕಾಂಶ್‌ಗೆ ಬೆಳ್ಳಿ

ಬೆಂಗಳೂರು: ಕರ್ನಾಟಕದ ಎನ್. ಏಕಾಂಶ್ ಕುಮಾರ್ ಅವರು ಭಾರತ ರೋಲರ್ ಸ್ಕೇಟಿಂಗ್ ಫೆಡರೇಷನ್ ಇತ್ತೀಚೆಗೆ ದೆಹಲಿಯಲ್ಲಿ ಆಯೋಜಿಸಿದ್ದ ರಾಷ್ಟ್ರಮಟ್ಟದ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ಪದಕಗಳನ್ನು ಗೆದ್ದುಕೊಂಡಿದ್ದಾರೆ.

14ರಿಂದ 17ವರ್ಷದೊಳಗಿನವರ ವಿಭಾಗದ ಇನ್‌ಲೈನ್ ಸ್ಕೇಟಿಂಗ್‌ನ ಜೂನಿಯರ್ಸ್ ವಿಭಾಗದಲ್ಲಿ ಸ್ಪರ್ಧಿಸಿದ್ದ ಏಕಾಂಶ್, ಒಂದು ಸಾವಿರ ಮೀಟರ್ಸ್ ರಿಂಕ್ ರೇಸ್‌ನಲ್ಲಿ ಬೆಳ್ಳಿ ಹಾಗೂ ರಿಂಕ್ ರಿಲೇ ರೇಸ್‌ನಲ್ಲಿ ಕಂಚಿನ ಪದಕ ಗಳಿಸಿದ್ದಾರೆ.

ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಚಾಂಪಿಯನ್‌ಷಿಪ್‌ನಲ್ಲಿ ಏಕಾಂಶ್, ಮೂರು ಚಿನ್ನ ಹಾಗೂ ಒಂದು ಬೆಳ್ಳಿ ಪಡೆದಿದ್ದರು. ಏಕಾಂಶ್ ಬೆಂಗಳೂರಿನ ಅಪೋಲೋ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನಲ್ಲಿ 8ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿದ್ದು, ಹೊಸಕೆರೆ ಹಳ್ಳಿ ನವೀನ್ ಕುಮಾರ್ ಹಾಗೂ ಸೌಮ್ಯ ಟಿ.ಆರ್ ದಂಪತಿಯ ಪುತ್ರ. ಬೆಂಗಳೂರಿನ ಫೋರ್ಸ್ ಒನ್ ಸ್ಕೇಟಿಂಗ್ ಕ್ಲಬ್‌ನ ಪ್ರತೀಕ್ ರಾಜ ಹಾಗೂ ಕುಮಾರ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ.

ಏಕಾಂಶ್ ಕುಮಾರ್

ರಾಮ್‌ಕುಮಾರ್ ರಾಮನಾಥನ್


ರೋಹನ್ ಬೋಪಣ್ಣ– ಪಿಟಿಐ ಚಿತ್ರ

ಅಡಿಲೇಡ್ ಎಟಿಪಿ ಟೆನಿಸ್ ಟೂರ್ನಿ

ಪ್ರಶಸ್ತಿ ಸುತ್ತಿಗೆ ಬೋಪಣ್ಣ ರಾಮ್‌ಕುಮಾರ್ ಜೋಡಿ

ಅಡಿಲೇಡ್ (ಪಿಟಿಐ): ಉತ್ತಮ ಸಾಮರ್ಥ್ಯ ಮುಂದುವರಿಸಿದ ಭಾರತದ ರೋಹನ್ ಬೋಪಣ್ಣ ಮತ್ತು ರಾಮ್‌ಕುಮಾರ್ ರಾಮನಾಥನ್ ಅವರು ಅಡಿಲೇಡ್ ಇಂಟರ್‌ನ್ಯಾಷನಲ್ ಎಟಿಪಿ 250 ಟೆನಿಸ್ ಟೂರ್ನಿಯ ಫೈನಲ್ ತಲುಪಿದ್ದಾರೆ.

ಶನಿವಾರ ನಡೆದ ಡಬಲ್ಸ್ ವಿಭಾಗದ ನಾಲ್ಕರಘಟ್ಟದ ಹಣಾಹಣಿಯಲ್ಲಿ, ಶ್ರೇಯಾಂಕರಹಿತ ಭಾರತದ ಜೋಡಿ 6-2, 6-4ರಿಂದ ಬೋಸ್ನಿಯಾದ ತೊಮಿಸ್ಲಾವ್ ಬ್ರಿಕಿಕ್ ಮತ್ತು ಮ್ಯಾಕ್ಸಿಕೊದ ಸ್ಯಾಂಟಿಯಾಗೊ ಗೊಂಜಾಲೆಜ್ ಅವರನ್ನು ಸೋಲಿಸಿದರು.

ತೊಮಿಸ್ಲಾವ್ ಬ್ರಿಕಿಕ್ ಮತ್ತು ಸ್ಯಾಂಟಿಯಾಗೊ ಇಲ್ಲಿ ನಾಲ್ಕನೇ ಶ್ರೇಯಾಂಕ ಪಡೆದಿದ್ದರು.

ಪ್ರಶಸ್ತಿ ಸುತ್ತಿನಲ್ಲಿ ಬೋಪಣ್ಣ–ರಾಮ್‌ಕುಮಾರ್ ಅವರಿಗೆ ಅಗ್ರಶ್ರೇಯಾಂಕದ ಜೋಡಿ ಕ್ರೊವೇಷ್ಯಾದ ಇವಾನ್ ದೊಡಿಗ್ ಮತ್ತು ಬ್ರೆಜಿಲ್‌ನ ಮಾರ್ಸೆಲೊ ಮೆಲೊ ಸವಾಲು ಎದುರಾಗಲಿದೆ.

41 ವರ್ಷದ ಬೋಪಣ್ಣ ಮತ್ತು ದೊಡಿಗ್ ಹಲವು ಬಾರಿ ಜೊತೆಯಾಗಿ ಆಡಿರುವುದರಿಂದ ಫೈನಲ್ ಪಂದ್ಯ ಕುತೂಹಲ ಕೆರಳಿಸಿದೆ. ಸೆಪ್ಟೆಂಬರ್‌ನಲ್ಲಿ ನಡೆದ ಅಮೆರಿಕ ಓಪನ್‌ನಲ್ಲಿ ಇವರಿಬ್ಬರು ಮೂರನೇ ಸುತ್ತಿನಲ್ಲಿ ಸೋಲನುಭವಿಸಿದ್ದರು.

ಎಟಿಪಿ ಟೂರ್‌ನಲ್ಲಿ ಬೋಪಣ್ಣ ಮತ್ತು ರಾಮಕುಮಾರ್ ಅವರು ಮೊದಲ ಬಾರಿ ಜೊತೆಯಾಗಿ ಕಣಕ್ಕಿಳಿದಿದ್ದು, ಉತ್ತಮ ಫಲಿತಾಂಶವನ್ನೇ ಪಡೆದಿದ್ದಾರೆ.

ಇದೇ 17ರಿಂದ ಮೆಲ್ಬರ್ನ್‌ನಲ್ಲಿ ನಡೆಯಲಿರುವ ಆಸ್ಟ್ರೇಲಿಯಾ ಓಪನ್‌ಗೆ ಇದು ಅಭ್ಯಾಸ ಟೂರ್ನಿಯಾಗಿದೆ.

ಐಸಿಸಿ ತಿಂಗಳ ಆಟಗಾರ: ಮಯಂಕ್ ನಾಮನಿರ್ದೇಶನ

ದುಬೈ (ಪಿಟಿಐ): ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ಎದುರಿನ ಸರಣಿಯಲ್ಲಿ ಅಮೋಘ ಸಾಮರ್ಥ್ಯ ತೋರಿರುವ ಭಾರತ ಟೆಸ್ಟ್ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಮಯಂಕ್ ಅಗರವಾಲ್ ಅವರನ್ನು ಐಸಿಸಿ ತಿಂಗಳ ಆಟಗಾರನಾಗಿ ನಾಮನಿರ್ದೇಶನ ಮಾಡಲಾಗಿದೆ.

ನ್ಯೂಜಿಲೆಂಡ್ ಸ್ಪಿನ್ನರ್ ಎಜಾಜ್ ಪಟೇಲ್ ಮತ್ತು ಆಸ್ಟ್ರೇಲಿಯಾದ ವೇಗಿ ಮಿಚೆಲ್ ಸ್ಟಾರ್ಕ್ ಕೂಡ ಈ ಪಟ್ಟಿಯಲ್ಲಿದ್ದಾರೆ.

ರೋಹಿತ್ ಶರ್ಮಾ, ಶುಭಮನ್ ಗಿಲ್ ಅವರ ಅನುಪಸ್ಥಿತಿಯ ಸಂಪೂರ್ಣ ಲಾಭ ಪಡೆದುಕೊಂಡ ಮಯಂಕ್ ಮಿಂಚು ಹರಿಸಿದ್ದರು. ಎರಡು ಪಂದ್ಯಗಳಲ್ಲಿ 69ರ ಸರಾಸರಿಯಲ್ಲಿ 276 ರನ್ ಕಲೆಹಾಕಿದ್ದರು. ಇದರಲ್ಲಿ ಒಂದು ಶತಕ ಮತ್ತು ಎರಡು ಅರ್ಧಶತಕಗಳು ಸೇರಿದ್ದವು.

ಭಾರತ ಮೂಲದ ಎಡಗೈ ಸ್ಪಿನ್ನರ್ ಎಜಾಜ್ ಪಟೇಲ್ ಕಳೆದ ವರ್ಷದ ಡಿಸೆಂಬರ್‌ನಲ್ಲಿ ಇತಿಹಾಸ ಬರೆದಿದ್ದರು. ಭಾರತದ ಎದುರಿನ ಪಂದ್ಯದ ಇನಿಂಗ್ಸ್‌ನಲ್ಲಿ 10 ವಿಕೆಟ್‌ಗಳನ್ನು ಕಬಳಿಸಿ ಈ ಸಾಧನೆ ಮಾಡಿದ ವಿಶ್ವದ ಮೂರನೇ ಬೌಲರ್ ಎನಿಸಿಕೊಂಡಿದ್ದರು. ಇದಕ್ಕೂ ಮೊದಲು ಭಾರತದ ಅನಿಲ್ ಕುಂಬ್ಳೆ ಮತ್ತು ಇಂಗ್ಲೆಂಡ್‌ನ ಜಿಮ್ ಲೇಕರ್ ಈ ಸಾಧನೆ ಮಾಡಿದ್ದರು.

ಆ್ಯಷಸ್ ಟ್ರೋಫಿಯನ್ನು ಇನ್ನೂ ಎರಡು ಪಂದ್ಯಗಳು ಬಾಕಿ ಇರುವಂತೆ ಆಸ್ಟ್ರೇಲಿಯಾ ಗೆದ್ದುಕೊಳ್ಳುವಲ್ಲಿ ಮಿಚೆಲ್ ಸ್ಟಾರ್ಕ್ ಪ್ರಮುಖ ಪಾತ್ರ ವಹಿಸಿದ್ದಾರೆ. ಬೌಲಿಂಗ್ ಮತ್ತು ಬ್ಯಾಟಿಂಗ್ ಎರಡರಲ್ಲೂ ಭರ್ಜರಿ ಸಾಮರ್ಥ್ಯ ತೋರಿದ್ದಾರೆ. ಮೂರು ಪಂದ್ಯಗಳಿಂದ 14 ವಿಕೆಟ್ ಗಳಿಸಿರುವ ಅವರು, 117 ರನ್‌ಗಳನ್ನೂ ಗಳಿಸಿದ್ದಾರೆ.

ಮಯಂಕ್ ಅಗರವಾಲ್– ಪಿಟಿಐ ಚಿತ್ರ

ಟೇಲರ್‌ಗೆ ಗೆಲುವಿನ ವಿದಾಯ ನೀಡುವ ತವಕ

ಕ್ರೈಸ್ಟ್‌ಚರ್ಚ್, ನ್ಯೂಜಿಲೆಂಡ್ (ಎಎಫ್‌ಪಿ): ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಲಿರುವ ಬ್ಯಾಟರ್ ರಾಸ್ ಟೇಲರ್ ಅವರಿಗೆ ಗೆಲುವಿನ ಕಾಣಿಕೆ ನೀಡಲು ಸಜ್ಜಾಗಿರುವ ನ್ಯೂಜಿಲೆಂಡ್ ಭಾನುವಾರ ಆರಂಭವಾಗಲಿರುವ ಎರಡನೇ ಟೆಸ್ಟ್‌ನಲ್ಲಿ ಬಾಂಗ್ಲಾದೇಶಕ್ಕೆ ತಿರುಗೇಟು ನೀಡುವ ಸಿದ್ಧತೆಯಲ್ಲಿದೆ. ಮೊದಲ ಪಂದ್ಯದಲ್ಲಿ ಅಮೋಘ ಜಯ ಗಳಿಸಿರುವ ಬಾಂಗ್ಲಾದೇಶ ಈ ಪಂದ್ಯವನ್ನು ಕೂಡ ಗೆದ್ದು ಸರಣಿ ತನ್ನದಾಗಿಸಿಕೊಳ್ಳುವ ಹುಮ್ಮಸ್ಸಿನಲ್ಲಿದೆ.

ಹ್ಯಾಗ್ಲಿ ಓವಲ್‌ನಲ್ಲಿ ಈ ಪಂದ್ಯ ನಡೆಯಲಿದೆ. ಇದು ಪ್ರವಾಸಿ ತಂಡಕ್ಕೆ ಅತ್ಯಂತ ಕಠಿಣ ಅಂಗಣ ಎಂಬುದರಿಂದ ಬಾಂಗ್ಲಾದೇಶ ಯಾವ ತಂತ್ರಗಳಿಗೆ ಮೊರೆ ಹೋಗುತ್ತದೆ ಎಂಬುದು ಕುತೂಹಲದ ವಿಷಯ. ಆದರೆ ಹ್ಯಾಗ್ಲಿ ಓವಲ್‌ನಲ್ಲಿ ಪ್ರವಾಸಿ ತಂಡ ಗೆಲುವು ಸಾಧಿಸುವುದು ದುಷ್ಕರ ಎಂಬುದನ್ನು ಒಪ್ಪುವುದಿಲ್ಲ ಎಂದು ಬಾಂಗ್ಲಾದ ಯುವ ಆಟಗಾರರು ಹೇಳಿದ್ದಾರೆ. ಕೋಚ್ ರಸೆಲ್ ಡೊಮಿಂಗೊ ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೌಂಟ್ ಮಾಂಗನೂಯಿಯಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ 8 ವಿಕೆಟ್‌ಗಳಿಂದ ಜಯ ಗಳಿಸಿತ್ತು. ಎರಡನೇ ಪಂದ್ಯದಲ್ಲಿ ಗೆದ್ದು ಸರಣಿಯಲ್ಲಿ ಸಮಬಲ ಸಾಧಿಸಲು ನ್ಯೂಜಿಲೆಂಡ್ ಪ್ರಯತ್ನಿಸಲಿದೆ. ಈ ಮೂಲಕ ರಾಸ್ ಟೇಲರ್ ಅವರಿಗೆ ಶುಭ ವಿದಾಯ ಕೋರಲು ತಂಡ ಯೋಜನೆ ಹಾಕಿಕೊಂಡಿದೆ ಎಂದು ನಾಯಕ ಟಾಮ್ ಲಥಾಮ್ ಹೇಳಿದ್ದಾರೆ.

ರಾಸ್ ಟೇಲರ್ –ಎಎಫ್‌ಪಿ ಚಿತ್ರ

'ಜೊಕೊವಿಚ್‌ಗೆ ಸೋಂಕು ಇತ್ತು'

ಮೆಲ್ಬರ್ನ್ (ಎಪಿ/ರಾಯಿಟರ್ಸ್): ಸರ್ಬಿಯಾದ ಟೆನಿಸ್ ಆಟಗಾರ ನೊವಾಕ್ ಜೊಕೊವಿಚ್ ಅವರಿಗೆ ತಿಂಗಳ ಹಿಂದೆ ಕೊರೊನಾ ಸೋಂಕು ತಗುಲಿತ್ತು ಎಂದು ವಕೀಲರು ಸಲ್ಲಿಸಿರುವ ದಾಖಲೆಗಳಿಂದ ಸಾಬೀತಾಗಿದೆ ಎಂದು ಶನಿವಾರ ವರದಿಯಾಗಿದೆ.

ಲಸಿಕೆ ಹಾಕಿಸಿಕೊಳ್ಳದೇ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಆಡಲು ಬಂದ ಜೊಕೊವಿಚ್ ಅವರನ್ನು ಅಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದರು. ಈ ಕ್ರಮದ ವಿರುದ್ಧ ಅವರು ನ್ಯಾಯಾಲಯದ ಮೊರೆ ಹೋಗಿದ್ದರು. ಇದಕ್ಕೆ ಸಂಬಂಧಿಸಿ ಸಲ್ಲಿಸಿರುವ ದಾಖಲೆಗಳಲ್ಲಿ ಕೋವಿಡ್‌ಗೆ ಸಂಬಂಧಿಸಿದ ಮಾಹಿತಿ ಇದೆ ಎಂದು ಆಸ್ಟ್ರೇಲಿಯನ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ ವರದಿ ಮಾಡಿದೆ.

'ಜೊಕೊವಿಚ್ ಈಚೆಗೆ ಕೋವಿಡ್‌ನಿಂದ ಗುಣಮುಖರಾಗಿದ್ದ ಹಿನ್ನೆಲೆಯಲ್ಲಿ ಟೆನಿಸ್ ಆಸ್ಟ್ರೇಲಿಯಾವು ಆಸ್ಟ್ರೇಲಿಯನ್ ಓಪನ್‌ನಲ್ಲಿ ಆಡಲು ಅವಕಾಶ ನೀಡಿತ್ತು. ಕೋವಿಡ್ ಲಸಿಕೆ ಪಡೆಯುವುದರಿಂದ ಅವರಿಗೆ ವೈದ್ಯಕೀಯ ವಿನಾಯಿತಿ ನೀಡಲಾಗಿತ್ತು' ಎಂದು ವಕೀಲರು ಸಲ್ಲಿಸಿರುವ ದಾಖಲೆಯಲ್ಲಿದೆ ಎಂದು ಎಬಿಸಿ ತಿಳಿಸಿದೆ.

ಜೊಕೊವಿಚ್ ಅವರ ವೀಸಾವನ್ನು ರದ್ದು ಮಾಡಲಾಗಿದೆ. ಆಸ್ಟ್ರೇಲಿಯಾದ ಅಧಿಕಾರಿಗಳು ಇದನ್ನು ಪುನರ್‌ಪರಿಶೀಲಿಸದೇ ಇದ್ದರೆ ಅಥವಾ ಜೊಕೊವಿಚ್ ಪೂರಕ ದಾಖಲೆ ಸಲ್ಲಿಸದೇ ಇದ್ದರೆ ಆಸ್ಟ್ರೇಲಿಯನ್ ಓಪನ್ ಟೂರ್ನಿಯ 3 ಆವೃತ್ತಿಗಳಲ್ಲಿ ಆಡುವ ಅವಕಾಶ ಕಳೆದುಕೊಳ್ಳಲಿದ್ದಾರೆ.

ಜೊಕೊವಿಚ್ ಸವಾಲು: ಆಸ್ಟ್ರೇಲಿಯಾ ಅಧಿಕಾರಿಗಳ ಕ್ರಮದ ವಿರುದ್ಧ ಸವಾಲು ಹಾಕಿರುವ ಜೊಕೊವಿಚ್ ಅವರು ಟೂರ್ನಿಯ ಆಯೋಜಕರು ತಮಗೆ ಡಿಸೆಂಬರ್ 30ರಂದು ಹಸಿರು ನಿಶಾನೆ ನೀಡಿರುವ ಹಿನ್ನೆಲೆಯಲ್ಲಿ ಇಲ್ಲಿಗೆ ಬಂದಿರುವುದಾಗಿ ತಿಳಿಸಿದ್ದಾರೆ. ಇದರ ವಿಚಾರಣೆಯನ್ನು ನ್ಯಾಯಾಲಯ ಸೋಮವಾರ ಕೈಗೆತ್ತಿಕೊಳ್ಳಲಿದೆ.

ತವರಿಗೆ ವಾಪಸಾದ ಒರಕೋವ: ಲಸಿಕೆ ಹಾಕಿಸಿಕೊಳ್ಳದೆ ಆಸ್ಟ್ರೇಲಿಯಾಗೆ ಪ್ರವೇಶಿಸಿದ್ದ ಜೆಕ್ ಗಣರಾಜ್ಯದ ಆಟಗಾರ್ತಿ ರೆನಟಾ ಒರಕೋವ ತವರಿಗೆ ವಾಪಸಾಗಿರುವುದಾಗಿ ಜೆಕ್ ವಿದೇಶಾಂಗ ಸಚಿವಾಲಯ ತಿಳಿಸಿದೆ. ಆಸ್ಟ್ರೇಲಿಯಾದ ಅಧಿಕಾರಿಗಳು ರೆನಟಾ ಅವರನ್ನು ವಶಕ್ಕೆ ಪಡೆದುಕೊಂಡು ನೊವಾಕ್ ಜೊಕೊವಿಚ್ ಇದ್ದ ಹೋಟೆಲ್‌ನಲ್ಲಿ ಇರಿಸಿದ್ದರು.

ಜೊಕೊವಿಚ್ ಅವರನ್ನು ಇರಿಸಿರುವ ಮೆಲ್ಬರ್ನ್‌ನ ಹೋಟೆಲ್ ಮುಂದೆ ಬೆಂಬಲಿಗರು ಶನಿವಾರ ಪ್ರತಿಭಟನೆ ನಡೆಸಿದರು –ರಾಯಿಟರ್ಸ್ ಚಿತ್ರ

ನಿಯಮ ಉಲ್ಲಂಘಿಸಿ ಕಾರ್ಯಕ್ರಮದಲ್ಲಿ ಭಾಗಿ?

ಜೊಕೊವಿಚ್ ಅವರು ಕೋವಿಡ್ ಸೋಂಕು ಪತ್ತೆಯಾಗಿ ಎರಡೇ ದಿನಗಳಲ್ಲಿ ಬೆಲ್‌ಗ್ರೇಡ್‌ನಲ್ಲಿ ನಡೆದಿದ್ದ ನೊವಾಕ್ ಟೆನಿಸ್ ಸೆಂಟರ್‌ನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಯುವ ಆಟಗಾರರಿಗೆ ಪ್ರಶಸ್ತಿಗಳನ್ನು ವಿತರಿಸಿದ್ದ ಅವರು ಆ ವೇಳೆ ಮಾಸ್ಕ್ ಧರಿಸಿರಲಿಲ್ಲ. ಈ ಕಾರ್ಯಕ್ರಮದ ಬಗ್ಗೆ ಬೆಲ್‌ಗ್ರೇಡ್ ಟೆನಿಸ್ ಫೆಡರೇಷನ್ ತನ್ನ ಫೇಸ್‌ಬುಕ್ ಖಾತೆಯಲ್ಲಿ ವಿವರಗಳನ್ನು ಪೋಸ್ಟ್ ಮಾಡಿತ್ತು.

ಮಾದಕ ವಸ್ತು ಪ್ರಕರಣ: ಪೊಲೀಸರ ಕ್ರಮ ಎತ್ತಿಹಿಡಿದ ಹೈಕೋರ್ಟ್

ಬೆಂಗಳೂರು: ಮಾದಕ ವಸ್ತು ಸಾಗಣೆ ಆರೋಪದಡಿ ಬಂಧಿಸಿ ಸ್ಥಾನಬದ್ಧತೆಯಲ್ಲಿ ಇಟ್ಟಿರುವ ಆರೋಪಿಯನ್ನು ಬಿಡುಗಡೆ ಮಾಡಲು ನಿರಾಕರಿಸಿರುವ ಹೈಕೋರ್ಟ್, ರಾಜ್ಯ ಪೊಲೀಸರ ಕ್ರಮವನ್ನು ಎತ್ತಿಹಿಡಿದಿದೆ.

'ಪೊಲೀಸರು ನನ್ನ ಪತಿಯನ್ನು ಅಕ್ರಮ ಬಂಧನದಲ್ಲಿರಿಸಿದ್ದು ಕೂಡಲೇ ಬಿಡುಗಡೆ ಮಾಡುವಂತೆ ನಿರ್ದೇಶಿಸಬೇಕು' ಎಂದು ಕೋರಿ ನಗರದ ಅನ್ನಸಂದ್ರಪಾಳ್ಯದ ಮುಸ್ಲಿಂ ಕಾಲೋನಿ ನಿವಾಸಿ ಖತೀಜುತಲ್ ನಜ್ಮಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಅಲೋಕ್ ಅರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

ಹೆಚ್ಚುವರಿ ಅಡ್ವೊಕೇಟ್ ಜನರಲ್ ವೈ.ಎಚ್. ವಿಜಯಕುಮಾರ್ ಮತ್ತು ರಾಜ್ಯ ಪ್ರಾಸಿಕ್ಯೂಷನ್ ವಕೀಲ ಪಿ. ತೇಜಸ್, 'ಪ್ರಕರಣದಲ್ಲಿ ಪ್ರಾಧಿಕಾರ, ಸರ್ಕಾರ, ಸಲಹಾ ಮಂಡಳಿಗೆ ಮನವಿ ನೀಡುವ ಹಕ್ಕಿನ ಕುರಿತು ಬಂಧಿತನಿಗೆ ತಿಳಿಸಲಾಗಿದ್ದು, ಬಂಧನದ ಆದೇಶ, ಬಂಧಿಸಿರುವ ಕ್ರಮಗಳಲ್ಲಿ ಲೋಪವಿಲ್ಲ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಜಮ್ಮು ಮತ್ತು ಕಾಶ್ಮೀರ: 86 ಪ್ರಯಾಣಿಕರ ರಕ್ಷಣೆ

ಹಿಮಪಾತ: ರಾಷ್ಟ್ರೀಯ ಹೆದ್ದಾರಿ ಬಂದ್

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಾದ್ಯಂತ ಶನಿವಾರ ಅತಿಯಾದ ಹಿಮ ಹಾಗೂ ಭಾರಿ ಮಳೆ ಆಗುತ್ತಿರುವ ಪರಿಣಾಮ ಜನಜೀವನ ಅಸ್ತವ್ಯಸ್ತಗೊಂಡಿದ್ದು, ಕಾಶ್ಮೀರ ಕಣಿವೆಯು ದೇಶದ ಸಂಪರ್ಕವನ್ನು ಕಡಿದುಕೊಂಡಿದೆ.

ಹೆಚ್ಚಿನ ಪ್ರಮಾಣದ ಹಿಮ ಸುರಿಯುತ್ತಿರುವುದರಿಂದ ಹಾಗೂ ಹೆದ್ದಾರಿಯ ಅಲ್ಲಲ್ಲಿ ಭೂ ಕುಸಿತ ಉಂಟಾಗಿ ಕಣಿವೆ ಸಂಪರ್ಕ ಕಲ್ಪಿಸುವ ಏಕೈಕ ರಸ್ತೆ 264 ಕಿ.ಮೀ ಉದ್ದದ ಶ್ರೀನಗರ–ಜಮ್ಮು ರಾಷ್ಟ್ರೀಯ ಹೆದ್ದಾರಿಯ ಸಂಚಾರ ಬಂದ್ ಆಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಕಾಶ್ಮೀರದ ಅನೇಕ ಭಾಗಗಳಲ್ಲಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆ. ಬನಿಯಾಲ್–ಬಾರಾಮುಲ್ಲ ವಿಭಾಗದಲ್ಲಿ 136 ಕಿ.ಮೀ ಉದ್ದದ ರೈಲು ಮಾರ್ಗವನ್ನು ಬಂದ್ ಮಾಡಲಾಗಿದೆ.

'ಅತಿಯಾದ ಹಿಮ ಹಾಗೂ ದಟ್ಟ ಮಂಜು ಕವಿದಿದ್ದರಿಂದ ಶನಿವಾರ ಮಧ್ಯಾಹ್ನ ದವರೆಗೆ ಎಲ್ಲ ವಿಮಾನಗಳ ಹಾರಾಟವನ್ನು ರದ್ದುಗೊಳಿಸಲಾಯಿತು' ಎಂದು ಶ್ರೀನಗರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಅಧಿಕಾರಿಯೊಬ್ಬರು ತಿಳಿಸಿದರು.

ಜಮ್ಮು– ಶ್ರೀನಗರ ರಾಷ್ಟ್ರೀಯ ಹೆದ್ದಾರಿಯ ಸೀತಾ ರಾಮ್ ಪಾಸ್ಸಿ ಬಳಿ ಸಿಲುಕಿಕೊಂಡಿದ್ದ ಗುಜರಾತ್‌ನ 26 ಮಂದಿ ಸೇರಿ 86 ಪ್ರಯಾಣಿಕರನ್ನು ಶುಕ್ರವಾರ ಮಧ್ಯರಾತ್ರಿ ಪೊಲೀಸರು ರಕ್ಷಿಸಿದ್ದು, ರಾಂಬಾನ್ ಜಿಲ್ಲೆಯ ವಿವಿಧ ಸಮುದಾಯ ಕೇಂದ್ರಗಳಲ್ಲಿ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಿದ್ದಾರೆ.

'ಹೆದ್ದಾರಿ ಮುಚ್ಚಿರುವುದರಿಂದ ಹಲವು ಟ್ರಕ್‌ಗಳು ಸಿಲುಕಿಕೊಂಡಿವೆ. ಇಂಧನ ಮತ್ತು ತರಕಾರಿಗಳು ಸೇರಿದಂತೆ ಅಗತ್ಯ ವಸ್ತುಗಳ ಸಾಗಣೆಯ 300 ಟ್ರಕ್‌ಗಳಿಗೆ ಅವಕಾಶ ಕಲ್ಪಿಸಿ ಸಾಗಣೆಗೆ ಅನುಕೂಲ ಮಾಡಿಕೊಡಲಾಯಿತು' ಎಂದು ರಾಂಬಾನ್ ಎಸ್‌ಎಸ್‌ಪಿ ಶಬಿರ್ ಅಹ್ಮದ್ ಮಲಿಕ್ ತಿಳಿಸಿದರು.

ಪಾಕ್: ಕನಿಷ್ಠ 21 ಮಂದಿ ಸಾವು

ಇಸ್ಲಾಮಾಬಾದ್ (ಎಪಿ): ಈಶಾನ್ಯ ಪಾಕಿಸ್ತಾನದಲ್ಲಿ ಸಂಭವಿಸಿದ ಭಾರಿ ಹಿಮಪಾತವನ್ನು ನೋಡಲು ಪರ್ವತ ಪ್ರದೇಶದ ಪಟ್ಟಣಕ್ಕೆ ಸಾವಿರಾರು ಜನರು ತೆರಳಿದ್ದರಿಂದ ಉಂಟಾದ ದಟ್ಟಣೆ ವೇಳೆ, ವಾಹನಗಳಲ್ಲಿಯೇ ಸಿಲುಕಿದ ಪರಿಣಾಮ ಕನಿಷ್ಠ 21 ಮಂದಿ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಶನಿವಾರ ಹೇಳಿದ್ದಾರೆ.

ದೇಶ ವಿರೋಧಿ ಚಟುವಟಿಕೆ ಆರೋಪ ಪತ್ರಕರ್ತನ ಬಂಧನ

ಶ್ರೀನಗರ: ದೇಶದ ಭದ್ರತೆ ಮತ್ತು ಏಕತೆಗೆ ಧಕ್ಕೆ ತರುವ ಚಟುವಟಿಕೆ ನಡೆಸುತ್ತಿದ್ದ ಆರೋಪದ ಮೇಲೆ ಪತ್ರಕರ್ತನೊಬ್ಬನನ್ನು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಬಂಧಿಸಿದ್ದಾರೆ.

ಸಜಾದ್ ಅಹ್ಮದ್ ದಾರ್ ಬಂಧಿತ ಆರೋಪಿ. ಆನ್‌ಲೈನ್ ಪೋರ್ಟಲ್ ವೊಂದರಲ್ಲಿ ಕೆಲಸ ಮಾಡುತ್ತಿದ್ದ ಈತನನ್ನು ಎರಡು ದಿನಗಳ ಹಿಂದೆ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ನವೀಕೃತ ರೈಲು ನಿಲ್ದಾಣಗಳಲ್ಲಿ 'ನಿಲ್ದಾಣ ಅಭಿವೃದ್ಧಿ ಶುಲ್ಕ' ಜಾರಿ

ನವದೆಹಲಿ (ಪಿಟಿಐ): ನವೀಕೃತ ರೈಲು ನಿಲ್ದಾಣಗಳಿಂದ ದೂರದ ಪ್ರಯಾಣ ಮಾಡುವ ಮತ್ತು ಈ ನಿಲ್ದಾಣಗಳಿಗೆ ಬರುವ ಪ್ರಯಾಣಿಕರಿಗೆ ಅನ್ವಯಿಸಿ ನಿಲ್ದಾಣ ಅಭಿವೃದ್ಧಿ ಶುಲ್ಕ ವಿಧಿಸಲು ರೈಲ್ವೆ ಇಲಾಖೆಯು ತೀರ್ಮಾನಿಸಿದೆ.

ಈ ಶುಲ್ಕವು ₹ 10 ರಿಂದ ₹ 50ರವರೆಗೂ ಇರಲಿದೆ. ಈ ಶುಲ್ಕದಿಂದ ಗ್ರಾಮೀಣ ಭಾಗದ ಪ್ರಯಾಣಿಕರಿಗೆ ವಿನಾಯಿತಿ ಇರಲಿದೆ. ನವೀಕೃತ ನಿಲ್ದಾಣ ಕಾರ್ಯಾರಂಭ ಮಾಡಿದ ನಂತರದಿಂದ ಇದು ಜಾರಿಗೆ ಬರಲಿದೆ.

ಬಳಕೆದಾರ ಶುಲ್ಕವು ಮೂರು ರೀತಿಯದ್ದಾಗಿರುತ್ತದೆ. ಎ.ಸಿ ದರ್ಜೆಗೆ ₹50, ಸ್ಲೀಪರ್ ದರ್ಜೆಗೆ ₹ 25 ಮತ್ತು ಕಾಯ್ದಿರಿಸದ ವರ್ಗಕ್ಕೆ ₹ 10 ಶುಲ್ಕ ವಿಧಿಸಲಾಗುತ್ತದೆ ಎಂದು ರೈಲ್ವೆ ಮಂಡಳಿಯ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಅಲ್ಲದೆ, ನವೀಕೃತ ನಿಲ್ದಾಣಗಳಿಗೆ ಅನ್ವಯಿಸಿ ಪ್ಲಾಟ್‌ಫಾರ್ಮ್ ಟಿಕೆಟ್ ದರ ₹10 ಏರಿಕೆಯಾಗಲಿದೆ ಎಂದು ತಿಳಿಸಿದೆ. ರೈಲ್ವೆ ಇಲಾಖೆ ವಿವಿಧ ನಿಲ್ದಾಣಗಳನ್ನು ನವೀಕರಿಸುತ್ತಿದ್ದು, ಆಧುನಿಕ ಸೌಲಭ್ಯ ಒದಗಿಸುತ್ತಿದೆ.

ಪಿಡಿಪಿ ನಾಯಕರ ವಿರುದ್ಧ ಪ್ರಕರಣ ದಾಖಲಿಸಲು ಆದೇಶ

ಶ್ರೀನಗರ: ಕೋವಿಡ್ ನಿಯಮಾವಳಿ ಉಲ್ಲಂಘಿಸಿದ ಆರೋಪದ ಮೇಲೆ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿಯ (ಪಿಡಿಪಿ) 10 ಮಂದಿ ನಾಯಕರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಶನಿವಾರ ಅನಂತನಾಗ್ ಜಿಲ್ಲೆಯ ಬಿಜ್‌ಬೆಹರಾ ತಹಶೀಲ್ದಾರ್ ಆದೇಶಿಸಿದ್ದಾರೆ.

ಶುಕ್ರವಾರ (ಜ.7) ಜಮ್ಮು ಮತ್ತು ಕಾಶ್ಮೀರದ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ(ಪಿಡಿಪಿ) ಸಂಸ್ಥಾಪಕ ಮುಫ್ತಿ ಮೊಹಮ್ಮದ್ ಸಯ್ಯದ್ ಅವರ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಕೋವಿಡ್ ನಿಯಮಾವಳಿ ಉಲ್ಲಂಘಿಸಲಾಗಿದೆ ಎಂಬ ಆರೋಪದ ಮೇಲೆ ಮಾಜಿ ಸ್ಪೀಕರ್ ಹಾಗೂ ಮುಫ್ತಿ ಮೊಹಮ್ಮದ್ ಸಯ್ಯದ್ ಅವರ ಅಳಿಯ ಸರ್ಜಿತ್ ಮದ್ನಿ, ಮಾಜಿ ಸಚಿವ ಅಬ್ದುಲ್ ರೆಹಮಾನ್ ವೀರಿ ಸೇರಿ 10 ಮಂದಿ ವಿರುದ್ಧ ಪ್ರಕರಣ ದಾಖಲಿಸಲು ಸೂಚಿಸಲಾಗಿದೆ.

ಈ ಕುರಿತು ಟ್ವೀಟ್ ಮಾಡಿರುವ ಪಿಡಿಪಿಯ ಮುಖ್ಯಸ್ಥೆ ಮೆಹಬೂಬಾ ಮುಫ್ತಿ, ಕೋವಿಡ್ ನಿಯಮಾವಳಿಗಳು ಕೇವಲ ಪಿಡಿಪಿಯ ಕಾರ್ಯಕರ್ತರಿಗೆ ಮಾತ್ರ ಅನ್ವಯವಾಗುವುದೇ? ಕಾಶ್ಮೀರದಲ್ಲಿ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರಿಗೆ ಹಾಗೂ ಪ್ರಧಾನಿ ಮೋದಿ ಅವರ ಸುರಕ್ಷತೆಗಾಗಿ ಪ್ರಾರ್ಥಿಸಿ ಪಂಜಾಬ್‌ನಲ್ಲಿ ಬೃಹತ್ ರ‍್ಯಾಲಿ ನಡೆಸಿದ ಬಿಜೆಪಿ ಕಾರ್ಯಕರ್ತರಿಗೆ ಇದು ಅನ್ವಯವಾಗುವುದಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಚಂದ್ರನ ಮೇಲ್ಮೈಯಲ್ಲಿ 1 ಕಿ.ಮೀ ಕ್ರಮಿಸಿದ 'ಚಾಂಗಿ–4'ನ ರೋವರ್

ಬೀಜಿಂಗ್ (ಪಿಟಿಐ): ಚಂದ್ರನ ಮತ್ತೊಂದು ಭಾಗದ ಮೇಲ್ಮೈಯಲ್ಲಿ ಇಳಿದಿರುವ ಚೀನಾದ ಗಗನನೌಕೆ 'ಚಾಂಗಿ–4'ನ ಲ್ಯಾಂಡರ್ ಮತ್ತು ರೋವರ್ 'ಯುಟು–2', ಮೇಲ್ಮೈಯಲ್ಲಿ 1 ಕಿ.ಮೀ ದೂರ ಕ್ರಮಿಸುವ ಮೂಲಕ ಇತಿಹಾಸ ನಿರ್ಮಿಸಿದೆ.

'ಯುಟು–2' ಕೆಲ ವಸ್ತುಗಳ ಚಿತ್ರಗಳನ್ನು ಸೆರೆ ಹಿಡಿದಿದೆ. ಈ ಚಿತ್ರಗಳು ಅಸ್ಪಷ್ಟವಾಗಿದ್ದು, ಕುತೂಹಲ ಕೆರಳಿಸಿವೆ ಎಂದು ಚೀನಾ ನ್ಯಾಷನಲ್ ಸ್ಪೇಸ್ ಅಡ್ಮಿನಿಸ್ಟ್ರೇಷನ್‌ನ (ಸಿಎನ್‌ಎಸ್‌ಎ) ಹೇಳಿಕೆಯನ್ನು ಉಲ್ಲೇಖಿಸಿ ಕ್ಸಿನ್‌ಹುವಾ ಸುದ್ದಿಸಂಸ್ಥೆ ವರದಿ ಮಾಡಿದೆ.

ಈ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹಂಚಿಕೊಳ್ಳಲಾಗಿದ್ದು, ಇವು ಕಾವೇರಿದ ಚರ್ಚೆಗೂ ಕಾರಣವಾಗಿವೆ ಎಂದು ವರದಿ ಹೇಳಿದೆ. ಚೀನಾ 'ಚಾಂಗಿ–4' ಹೆಸರಿನ ಗಗನನೌಕೆಯನ್ನು 2018ರ ಡಿಸೆಂಬರ್ 8ರಂದು ಉಡ್ಡಯನ ಮಾಡಿತ್ತು.

ಮಾಹಿಮ್ ಕೇಳ್ವ ಅಣೆಕಟ್ಟೆಯಲ್ಲಿ ಭಾರಿ ಸೋರಿಕೆ

ಮುಂಬೈ: ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯಲ್ಲಿರುವ ಮಾಹಿಮ್ ಕೇಳ್ವ ಅಣೆಕಟ್ಟೆಯಲ್ಲಿ ಭಾರಿ ಪ್ರಮಾಣದ ಸೋರಿಕೆ ಕಂಡು ಬಂದಿದೆ.

ಅಣೆಕಟ್ಟೆಯ ಕೆಳಪ್ರದೇಶದಲ್ಲಿರುವ ಗ್ರಾಮಗಳ ಜನರನ್ನು ಸ್ಥಳಾಂತರಿಸುವ ಕಾರ್ಯಕ್ಕೆ ಜಿಲ್ಲಾಡಳಿತ ಚಾಲನೆ ನೀಡಿದ್ದು, ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ತಂಡಗಳನ್ನು ನಿಯೋಜಿಸಲಾಗಿದೆ. ಜಿಲ್ಲಾಧಿಕಾರಿ ಡಾ.ಮಾಣಿಕ್ ಗುರ್ಸಾಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದತ್ತಾತ್ರೇಯ ಶಿಂಧೆ ಅವರು ಸ್ಥಳಕ್ಕೆ ಭೇಟಿ ನೀಡಿ, ಜನರ ಸ್ಥಳಾಂತರ ಹಾಗೂ ಇತರ ಮುಂಜಾಗ್ರತಾ ಕ್ರಮಗಳ ಪರಿಶೀಲನೆ ನಡೆಸಿದ್ದಾರೆ.

ಈ ಅಣೆಕಟ್ಟು ಝೂಂಜರೋಳಿ ಗ್ರಾಮದ ಬಳಿ ಇದ್ದು, ಮುಂಬೈನಿಂದ 110 ಕಿ.ಮೀ. ದೂರದಲ್ಲಿದೆ.

ಟೆಂಡರ್ ಆಹ್ವಾನಿಸಿಯೇ ಕಾಮಗಾರಿ ನಡೆಸಲು ಆದೇಶ

ವರದಿ ಪರಿಣಾಮ

ಬೆಂಗಳೂರು: 110 ಹಳ್ಳಿಗಳ ಅಭಿವೃದ್ಧಿ ಯೋಜನೆಯಡಿ ಮಹದೇವಪುರ ವಲಯದಲ್ಲಿ ₹78.32 ಕೋಟಿ ಮೊತ್ತದ ಕಾಮಗಾರಿಯನ್ನು ಟೆಂಡರ್ ಕರೆಯದೆಯೇ ಜಾರಿಗೊಳಿಸುವುದಕ್ಕೆ ಅವಕಾಶ ನೀಡಬೇಕೆಂಬ ಬಿಬಿಎಂಪಿಯ ಕೋರಿಕೆಯನ್ನು ಸರ್ಕಾರ ಪುರಸ್ಕರಿಸಿಲ್ಲ. ಟೆಂಡರ್ ಪ್ರಕ್ರಿಯೆ ನಡೆಸಿಯೇ ಕಾಮಗಾರಿ ನಿರ್ವಹಿಸುವಂತೆ ಸರ್ಕಾರ ಆದೇಶ ಮಾಡಿದೆ.

ಬಿಬಿಎಂಪಿಗೆ ಸೇರ್ಪಡೆಯಾದ 110 ಹಳ್ಳಿಗಳಲ್ಲಿ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಅತಿ ಹೆಚ್ಚು (31) ಹಳ್ಳಿಗಳಿವೆ. 110 ಹಳ್ಳಿಗಳ ರಸ್ತೆ ಅಭಿವೃದ್ಧಿಗೆ ಸರ್ಕಾರ ₹1 ಸಾವಿರ ಕೋಟಿ ಮಂಜೂರು ಮಾಡಿತ್ತು. ಇದರಲ್ಲಿ ಈ ಕ್ಷೇತ್ರಕ್ಕೆ ₹210 ಕೋಟಿ ಹಂಚಿಕೆ ಮಾಡಿತ್ತು. ಈ ಅನುದಾನದಲ್ಲಿ 114 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಿಯಾಯೋಜನೆ ರೂಪಿಸಲಾಗಿತ್ತು. ಈ ಪೈಕಿ ₹131.68 ಕೋಟಿ ಮೊತ್ತದಲ್ಲಿ 58 ಕಾಮಗಾರಿಗಳನ್ನು ಮಹದೇವಪುರ ವಲಯ ವ್ಯಾಪ್ತಿಯಿಂದ ನಿರ್ವಹಿಸಲು ಸರ್ಕಾರ ಅನುಮತಿ ನೀಡಿತ್ತು. ಬಾಕಿ 73 ಕಾಮಗಾರಿಗಳನ್ನು ನಿರ್ವಹಿಸಲು ₹78.32 ಕೋಟಿ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದ ಬಿಬಿಎಂಪಿ, ಟೆಂಡರ್ ಆಹ್ವಾನಿಸದೆಯೇ ಕಾಮಗಾರಿ ನಿರ್ವಹಿಸಲು 'ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ'ಯ 4(ಜಿ) ಸೆಕ್ಷನ್ ಅಡಿ ವಿನಾಯಿತಿ ಕೋರಿತ್ತು. ಈ ಕುರಿತು 'ಪ್ರಜಾವಾಣಿ' ವರದಿ ಪ್ರಕಟಿಸಿತ್ತು. ಈಗ ₹78.32 ಕೋಟಿ ಬಿಡುಗಡೆ ಮಾಡಿರುವ ಸರ್ಕಾರ, ಟೆಂಡರ್ ಆಹ್ವಾನಿಸಿಯೇ ಕಾಮಗಾರಿ ನಿರ್ವಹಿಸಬೇಕು ಎಂಬ ಷರತ್ತು ವಿಧಿಸಿದೆ.

ಪಡಿತರದಲ್ಲಿ ಸಿಗಲಿದೆ ಕುಚಲಕ್ಕಿ

ಬೆಂಗಳೂರು: ರಾಜ್ಯದ ಜನರಿಗೆ ವಿತರಿಸುವ ಆಹಾರ ಧಾನ್ಯದಲ್ಲಿ ಕುಚಲಕ್ಕಿ ವಿತರಿಸುವ ರಾಜ್ಯ ಸರ್ಕಾರದ ಪ್ರಸ್ತಾಪಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ.

'ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬೆಳೆದ ಕುಚಲಕ್ಕಿಯನ್ನು ಪಡಿತರದಲ್ಲಿ ವಿತರಿಸಲು ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಇದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಧನ್ಯವಾದಗಳು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ಟ್ವೀಟ್ ಮಾಡಿದ್ದಾರೆ.

'ಸ್ಥಳೀಯ ಉತ್ಪನ್ನಗಳಿಗೆ ಬೆಂಬಲ ನೀಡುವ ಜೊತೆಗೆ ಫಲಾನುಭವಿಗಳಿಗೆ ಅವರ ಆಯ್ಕೆಯ ಆಹಾರ ನೀಡುವ ನಿಟ್ಟಿನಲ್ಲಿ ಇದು ಮಹತ್ವದ ಹೆಜ್ಜೆ' ಎಂದು ಅವರು ತಿಳಿಸಿದ್ದಾರೆ.

ಈ ಸಂಬಂಧ ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಪ್ರಸ್ತಾವನೆ ಸಲ್ಲಿಸಿತ್ತು. ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕೂಡ ಈ ಬಗ್ಗೆ ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಪೀಯೂಷ್ ಗೋಯೆಲ್ ಅವರಿಗೆ ಮನವಿ ಮಾಡಿದ್ದರು.

ಗೃಹಸಚಿವರ ಕ್ಷೇತ್ರದಲ್ಲೇ ನಿಯಮ ಉಲ್ಲಂಘಿಸಿ ಜಾತ್ರೆ

ತೀರ್ಥಹಳ್ಳಿ: ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಸ್ವಕ್ಷೇತ್ರವಾದ ತಾಲ್ಲೂಕಿನ ಅರಳಸುರುಳಿ ಗ್ರಾಮದಲ್ಲಿ ಕೋವಿಡ್ ಲಾಕ್‌ಡೌನ್ ನಿಯಮ ಉಲ್ಲಂಘಿಸಿ ಸುಬ್ರಮಣ್ಯ ಷಷ್ಠಿ ಅಂಗವಾಗಿ ಶನಿವಾರ ಜಾತ್ರೆ ನಡೆಯಿತು.

ಬೆಳಗ್ಗೆಯಿಂದ ನಡೆದ ಜಾತ್ರೆಯಲ್ಲಿ ನೂರಾರು ಭಕ್ತಾದಿಗಳು ಕೋವಿಡ್ ಮುಂಜಾಗೃತ ಕ್ರಮ, ಅಂತರ ಕಾಯ್ದುಕೊಳ್ಳದೇ ಭಾಗವಹಿಸಿದ್ದರು. ವಿಷಯ ತಿಳಿದ ಪೊಲೀಸರು ಮಧ್ಯಾಹ್ನ ಮೂರೂವರೆ ಸುಮಾರಿಗೆ ಜಾತ್ರೆಯನ್ನು ಬಂದ್ ಮಾಡಿಸಿದರು.

ಬ್ಯಾಸ್ಕೆಟ್‌ಬಾಲ್: ಸೆಮಿಗೆ ಕರ್ನಾಟಕ

ಬೆಂಗಳೂರು: ಕರ್ನಾಟಕ ಪುರುಷರ ತಂಡದವರು ರಾಷ್ಟ್ರೀಯ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ತಲುಪಿದ್ದಾರೆ.

ಮಧ್ಯಪ್ರದೇಶದ ಇಂದೋರ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಕ್ವಾರ್ಟರ್‌ಫೈನಲ್‌ನಲ್ಲಿ ಕರ್ನಾಟಕ 77–68ರಿಂದ ದೆಹಲಿ ತಂಡದ ಸವಾಲು ಮೀರಿತು. ವಿಜೇತ ತಂಡದ ಪರ ಬಿ.ಎಂ. ಮನೋಜ್ 31 ಪಾಯಿಂಟ್ಸ್ ಕಲೆಹಾಕಿದರೆ, ಅಚಿಂತ್ಯ ಕೃಷ್ಣ 16 ಪಾಯಿಂಟ್ಸ್ ಗಳಿಸಿದರು.

ಎಂಟರಘಟ್ಟದ ಇನ್ನೊಂದು ರೋಚಕ ಹಣಾಹಣಿಯಲ್ಲಿ ಉತ್ತರಪ್ರದೇಶ ತಂಡವು 68–65ರಿಂದ ಕೇರಳ ತಂಡವನ್ನು ಸೋಲಿಸಿತು.

ಕರ್ನಾಟಕದ ಮಹಿಳಾ ತಂಡವು ಕ್ವಾರ್ಟರ್‌ಫೈನಲ್‌ನಲ್ಲಿ 41–42ರಿಂದ ರಾಜಸ್ಥಾನ ಎದುರು ಎಡವಿತು. ಈ ವಿಭಾಗದಲ್ಲಿ ಪಂಜಾಬ್, ಛತ್ತೀಸಗಡ ಮತ್ತು ಕೇರಳ ತಂಡಗಳೂ ನಾಲ್ಕರ ಘಟ್ಟ ತಲುಪಿದವು.

ಚೀನಾದಲ್ಲಿ ಪ್ರಬಲ ಭೂಕಂಪನ

ಬೀಜಿಂಗ್ (ಎಪಿ): ಚೀನಾದ ಪಶ್ಚಿಮದಲ್ಲಿರುವ ಕ್ವಿಂಘೈ ಪ್ರಾಂತ್ಯದ ಮೆನ್‌ಯುವಾನ್ ಹುಯಿ ಸ್ವಾಯತ್ತ ಪ್ರದೇಶದಲ್ಲಿ ಶನಿವಾರ ನಸುಕಿನಲ್ಲಿ ಪ್ರಬಲ ಭೂಕಂಪನ ಸಂಭವಿಸಿದೆ.

ರಿಕ್ಟರ್ ಮಾಪಕದಲ್ಲಿ 6.9ರಷ್ಟು ತೀವ್ರತೆ ದಾಖಲಾಗಿದೆ. ಭೀತಿಗೆ ಒಳಗಾದ ಜನರು ಮನೆಗಳಿಂದ ಹೊರಗೆ ಓಡಿಬಂದಿದ್ದಾರೆ.

ಕೆಲವರಿಗೆ ಗಾಯಗಳಾಗಿದ್ದು, ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೈಲು ಮಾರ್ಗ ಹಾಯ್ದು ಹೋಗಿರುವ ಸುರಂಗಕ್ಕೆ ಹಾನಿಯಾಗಿದೆ. ಹೀಗಾಗಿ ರೈಲು ಸಂಚಾರವನ್ನು ಕೆಲ ಕಾಲ ಸ್ಥಗಿತಗೊಳಿಸಲಾಗಿತ್ತು ಎಂದೂ ತಿಳಿಸಿದ್ದಾರೆ.

ಲೋಕ ಹೃದಯದ ಕವಿ

13

ಲತಾ ಮಂಗೇಶ್ಕರ್

ಕಂಬನಿ ಹಾಡಿನ ಜಾದು ಹಿಡಿದು...

ಮಲ್ಲಿಕಾರ್ಜುನ ಹೆಗ್ಗಳಗಿ

ಖ್ಯಾತ ಗಾಯಕಿ ಲತಾ ಮಂಗೇಶಕರ್ ಅವರಿಗೆ 'ಏ ಮೇರೆ ವತನ್ ಕೇ ಲೋಗೋ' ಗೀತೆ ಬಹುದೊಡ್ಡ ಗೌರವ ತಂದುಕೊಟ್ಟಿದೆ. 60 ವರ್ಷಗಳ ಹಿಂದೆ ಈ ಗೀತೆಯನ್ನು ಪ್ರಥಮ ಬಾರಿಗೆ ಹಾಡಿದ ಹೃದಯಸ್ಪರ್ಶಿ ಅನುಭವವನ್ನು ಅವರು ಇತ್ತೀಚೆಗೆ ಹಂಚಿಕೊಂಡಿದ್ದಾರೆ. ಅವರ ಮಾತುಗಳು ಅವರ ಸಂಗೀತದಷ್ಟೇ ತುಂಬಾ ಮಧುರವಾಗಿವೆ. ಅವರ ಆ ಮಧುರ ನೆನಪುಗಳನ್ನು ಅವರ ಮಾತಿನಲ್ಲೇ ಕೇಳಿ.

ದಿಲ್ಲಿಯಲ್ಲಿ ನಡೆದ 1962ರ ಗಣರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ದೇಶಭಕ್ತಿ ಗೀತೆ ಹಾಗೂ ಭಜನೆ ಹಾಡುವುದಕ್ಕೆ ಸುಮಾರು ಎರಡು ತಿಂಗಳ ಮೊದಲೇ ನನಗೆ ಆಮಂತ್ರಣ ಬಂದಿತ್ತು. ಒಪ್ಪಿಕೊಂಡಿರುವುದಾಗಿ ತಿಳಿಸಿದ್ದೆ. ಅದೇ ಆಗ ಭಾರತ-ಚೀನಾ ಯುದ್ಧ ಕೊನೆಗೊಂಡಿತ್ತು. ಯಾವ ಹಾಡುಗಳನ್ನು ಹಾಡಬೇಕು ಎಂದು ನಾನು ಆಯ್ಕೆ ಮಾಡಿಕೊಳ್ಳುತ್ತಿದ್ದೆ. ಆಗ ನನಗೆ ಕವಿ ಪ್ರದೀಪ ಅವರಿಂದ ಟೆಲಿಫೋನ್ ಕಾಲ್ ಬಂತು. ಅವರು ಬರೆದ 'ಏ ಮೇರೆ ವತನ್ ಕೇ ಲೋಗೋ' ಗೀತೆಯನ್ನು ಹಾಡಬೇಕು ಎಂದು ಅವರು ಸೂಚಿಸಿದರು. ಹೆಚ್ಚು ಸಮಯ ಇಲ್ಲ, ಹೊಸ ಹಾಡುಗಳಿಗೆ ಧ್ವನಿ ಸಂಯೋಜನೆ ಮಾಡಿಕೊಳ್ಳಲು ಆಗುವುದಿಲ್ಲ ಎಂದು ನಾನು ನಿರಾಕರಿಸಿದೆ.

ಪ್ರದೀಪ ಅವರು 'ಈ ಹಾಡನ್ನು ಹಾಡಲೇಬೇಕು. ನೀನು ಹಾಡದಿದ್ದರೆ ಈ ಹಾಡು ಪೂರ್ಣವಾಗುವುದಿಲ್ಲ' ಎಂದು ಆಗ್ರಹಿಸಿದರು. ಗುಜರಾತಿ ಮೂಲದ ಪ್ರಸಿದ್ಧ ಕವಿ ಪ್ರದೀಪ, ಕಟ್ಟಾ ಗಾಂಧೀಜಿ ಅನುಯಾಯಿ. ಅವರ ಮಾತು ಮೀರುವುದು ಆಗದೇ ಹಾಡುವುದಕ್ಕೆ ಒಪ್ಪಿಕೊಂಡೆ.

> ಏ ಮೇರೆ ವತನ್ ಕೇ ಲೋಗೋ ಗೀತೆಯ ಸಾಲುಗಳು ಕಿವಿಮೇಲೆ ಬಿದ್ದರೆ ಸಾಕು, ಪ್ರತಿ ಭಾರತೀಯನ ಕಣ್ಣುಗಳು ತುಂಬಿಕೊಳ್ಳುತ್ತವೆ. ಲತಾ ದೀದಿ ಈ ಹಾಡು ಹಾಡಿದ್ದರ ಹಿಂದೆ ದೊಡ್ಡ ಕಥೆಯಿದೆ

ಸರ್ಕಾರ ವ್ಯವಸ್ಥೆ ಮಾಡಿದ್ದ ವಿಶೇಷ ವಿಮಾನದಲ್ಲಿ ನಾನು ಹಾಗೂ ಚಿತ್ರ ಜಗತ್ತಿನ ಗಣ್ಯರಾದ ದಿಲೀಪ್ ಕುಮಾರ್, ಮೆಹಬೂಬ್ ಖಾನ್, ಸಿ. ರಾಮಚಂದ್ರ ರಾವ್ ಮುಂತಾದವರೊಂದಿಗೆ ಮುಂಬೈಯಿಂದ ದಿಲ್ಲಿಗೆ ಹೋದೆ. 'ಏ ಮೇರೆ ವತನ್ ಕೇ ಲೋಗೋ' ಹಾಡಿನ ರಿಹರ್ಸಲ್ ಅನ್ನು ವಿಮಾನದಲ್ಲಿಯೇ ಮಾಡಿಕೊಂಡೆ. ಸಿ. ರಾಮಚಂದ್ರ ರಾವ್ ಧ್ವನಿ ಸಂಯೋಜನೆಗೆ ಮಾರ್ಗದರ್ಶನ ಮಾಡಿದರು.

ಜನವರಿ 26ರಂದು ಸಂಜೆ ಭಜನೆ ಹಾಗೂ ರಾಷ್ಟ್ರಭಕ್ತಿಗೀತೆಗಳ ಕಾರ್ಯಕ್ರಮವನ್ನು ದಿಲ್ಲಿಯ ವಿಶಾಲ ಮೈದಾನದಲ್ಲಿ ಆಯೋಜನೆ ಮಾಡಲಾಗಿತ್ತು. ಪ್ರಧಾನಿ ಜವಾಹರಲಾಲ್ ನೆಹರೂ ಹಾಗೂ ಅವರ ಸಚಿವ ಸಂಪುಟದ ಸದಸ್ಯರು ಭಾಗವಹಿಸಿದ್ದರು. ನಾನು ಮೊದಲು ಒಂದು ಭಜನೆ ಹಾಡಿದೆ. ನಂತರ 'ಏ ಮೇರೆ ವತನ್ ಕೇ ಲೋಗೋ' ಹಾಡು ಹಾಡಿದೆ. ಈ ಹಾಡು ಅಲ್ಲಿದ್ದ ಪ್ರೇಕ್ಷಕರ ಮನಸ್ಸನ್ನು ಹಿಡಿದು ಅಲ್ಲಾಡಿಸಿದ್ದು ನನಗೆ ಕಾಣುತ್ತಿತ್ತು. ಹಾಡು ಮುಗಿದ ಮೇಲೆ ವೇದಿಕೆಯ ಹಿಂದುಗಡೆ ಕಲಾವಿದರಿಗಾಗಿ ವ್ಯವಸ್ಥೆ ಮಾಡಲಾಗಿದ್ದ ರೂಮ್‌ನಲ್ಲಿ ಬಂದು ಕುಳಿತುಕೊಂಡೆ. ಕರವಸ್ತ್ರದಿಂದ ಮುಖದ ಮೇಲಿನ ಬೆವರು ಒರೆಸಿಕೊಳ್ಳುತ್ತಿದ್ದೆ. ಮೆಹಬೂಬ್ ಖಾನ್ ಅವಸರದಿಂದ ನನ್ನ ಬಳಿಗೆ ಬಂದು ನೆಹರೂಜಿ ಕರೆಯುತ್ತಿದ್ದಾರೆ, ತಕ್ಷಣ ಬನ್ನಿ ಎಂದು ಕರೆದುಕೊಂಡು ಹೋದರು.

ನೆಹರೂಜಿ ಬಳಿ ನಿಲ್ಲುವುದು ಒಂದು ಬಹುದೊಡ್ಡ ರೋಮಾಂಚನದ ಸಂಗತಿ. ಅವರು ನನ್ನ ಕೈ ಹಿಡಿದು 'ಹುಡುಗಿ, ನೀನು ಹಾಡಿ ನಾನು ದುಃಖಿಸಿ ಅಳುವಂತೆ ಮಾಡಿದಿ' (ಯೂ ಗರ್ಲ್ ಮೇಡ್ ಟು ಕ್ರೈ) ಎಂದು ಹೇಳಿದರು. ಅವರ ಕಣ್ಣಂಚಿನಲ್ಲಿ ಕಂಬನಿ ತುಂಬಿಕೊಂಡಿತ್ತು. ಗಂಟಲೂ ಕೂಡ ಬಿಗಿದುಕೊಂಡಿತ್ತು. ನಾನು ಸ್ತಂಭೀಭೂತಳಾಗಿ ನಿಂತುಕೊಂಡು ಬಿಟ್ಟೆ. ನೆಹರೂಜಿ ವೇದಿಕೆಯಿಂದ ನಿರ್ಗಮಿಸಿ ಕಾರು ಹತ್ತಿ ಹೊರಟು ಹೋದರು. ಮರುದಿನ ನಮ್ಮನ್ನೆಲ್ಲ ನೆಹರೂಜಿ ಉಪಾಹಾರಕ್ಕೆ ಆಮಂತ್ರಿಸಿದ್ದರು. ಹಿರಿಯ ಗಾಯಕರೆಲ್ಲ ನೆಹರೂಜಿಯೊಂದಿಗೆ ಮಾತಿನಲ್ಲಿ ತೊಡಗಿದ್ದರು. ನಾನು ಬದಿಯ ಕೋಣೆಯಲ್ಲಿ ಒಬ್ಬಳೇ ಕುಳಿತಿದ್ದೆ. ಆಗ ಇಂದಿರಾ ಗಾಂಧಿ ಬಂದರು. 'ನೀವು ಇಲ್ಲಿ ಏಕೆ ಕುಳಿತಿದ್ದೀರಿ? ಒಳಗೆ ಬನ್ನಿ' ಎಂದು ಹೇಳಿದರು. 'ಇಲ್ಲ ನಾನು ಇಲ್ಲಿಯೇ ಕಂಫರ್ಟ್ ಆಗಿ ಇದ್ದೇನೆ' ಎಂದು ಹೇಳಿದೆ. 'ನಿಮ್ಮ ಇಬ್ಬರು ಫ್ಯಾನ್‌ಗಳು ಒಳಗೆ ಇದ್ದಾರೆ. ಕರೆತರುತ್ತೇನೆ' ಎಂದು ಇಂದಿರಾ ಗಾಂಧಿ ಹೇಳಿ ಒಳಗೆ ನಡೆದರು. ಅವರು ಒಂದು ನಿಮಿಷದ ನಂತರ ತಮ್ಮ ಮಕ್ಕಳಾದ ರಾಜೀವ್ ಹಾಗೂ ಸಂಜಯ್ ಗಾಂಧಿಯವರನ್ನು ಕರೆತಂದರು. ಈ ಹುಡುಗರಿಬ್ಬರು ಮಂದಹಾಸ ಬೀರುತ್ತ ನನ್ನ ಬಳಿ ಬಂದು ಕುಳಿತರು. ನೆಹರೂಜಿ ಒಳಗೆ ಕರೆದಿದ್ದರಿಂದ ಎದ್ದು ಅವರ ಬಳಿಗೆ ಹೋಗಿ ನಮಸ್ಕರಿಸಿದೆ. ಈ ಬಾರಿ ನೆಹರೂಜಿ ಅದೇಕೋ ಹೆಚ್ಚು ಮಾತನಾಡಲಿಲ್ಲ.

ಮುಂದೆ 1964ರಲ್ಲಿ ಮುಂಬೈನಲ್ಲಿ ಒಂದು ಧಾರ್ಮಿಕ ಸಂಸ್ಥೆ ಸಹಾಯಾರ್ಥ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿತ್ತು. ಪ್ರಧಾನಿ ನೆಹರೂಜಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಂದೂ ಅವರು 'ಏ ಮೇರೆ ವತನ್ ಕೇ ಲೋಗೋ' ಹಾಡು ಹಾಡಲು ನನಗೆ ಸೂಚಿಸಿದರು. ನನ್ನ ಹಾಡು ಮುಗಿಯುತ್ತಿದ್ದಂತೆ ನೆಹರೂ ಎದ್ದು ಹೊರ ನಡೆದರು. ಕಾರಿನಲ್ಲಿ ಕುಳಿತ ನೆಹರೂಜಿ ನನ್ನನ್ನು ಕರೆಸಿಕೊಂಡರು. ನಾನು ಬಂದ ತಕ್ಷಣ ಕಾರಿನ ಗ್ಲಾಸ್ ಇಳಿಸಿ ನನ್ನ ಪ್ರತಿ ಕಾರ್ಯಕ್ರಮದಲ್ಲಿ 'ಏ ಮೇರೆ ವತನ್ ಕೇ ಲೋಗೋ' ಹಾಡು ಹಾಡಲೇಬೇಕು ಎಂದು ಕಟ್ಟಪ್ಪಣೆ ರೀತಿಯಲ್ಲಿ ನನಗೆ ಹೇಳಿದರು.

'ಏ ಮೇರೆ ವತನ್ ಕೇ ಲೋಗೋ
ಜರಾ ಆಂಖ್ ಮೇ ಭರ್ ಲೋ ಪಾನಿ
ಜೋ ಶಹೀದ್ ಹುಯೇ ಉನಕಿ
ಜರಾ ಯಾದ್ ಕರೋ ಕುರಬಾನಿ'

ಈ ಹಾಡನ್ನು ನಾನು ಕಳೆದ 60 ವರ್ಷಗಳಿಂದ ಹಾಡುತ್ತಿದ್ದೇನೆ. ದೇಶ ವಿದೇಶಗಳ ಸಂಗೀತ ಕಾರ್ಯಕ್ರಮಗಳಲ್ಲಿ ಈ ಹಾಡು ಇಲ್ಲದೇ ನನ್ನ ಕಛೇರಿ ಕೊನೆಗೊಳ್ಳುವುದಿಲ್ಲ. 2012ರಲ್ಲಿ ಈ ಹಾಡಿನ ಸುವರ್ಣ ಮಹೋತ್ಸವ ದೇಶದ ತುಂಬ ನಡೆಯಿತು. ಪ್ರದೀಪಜಿ ಬರೆದ ಈ ಹಾಡು ಒಂದು ಅಮರ ಗೀತೆ. ಕಾವ್ಯಕ್ಕೆ ಬಹುದೊಡ್ಡ ಶಕ್ತಿ ಇದೆ ಎನ್ನುವುದಕ್ಕೆ ಇದು ಉತ್ತಮ ಉದಾಹರಣೆ. ನೆಹರೂಜಿ ಈಗಲೂ ಈ ಹಾಡನ್ನು ಕೇಳುತ್ತಿರುವಂತೆ ನನಗೆ ಭಾಸವಾಗುತ್ತದೆ.

ಪ್ರಜಾವಾಣಿ ಚಿತ್ರ: ಬಿ.ಆರ್. ಸವಿತಾ

ಸುಗ್ಗಿ ಸಂಭ್ರಮ ಮತ್ತೆ ಯಾವಾಗ?

ಜಿ.ಕೃಷ್ಣಪ್ರಸಾದ್

ಮುಕ್ತವಾಯಿತು ಮಾಘಮಾಸದ ಕೊರೆವ ಶೀತದ ಶಾಪವು
ತೀವ್ರ ತಪದಲಿ ಕೊಚ್ಚಿ ಹೋಯಿತು ಹಳೆಯ
ಜಡತೆಯ ಪಾಪವು
ಯೌವನೋದಯವಾಯಿತಿದಿಗೋ
ಕಣ್ಣ ತುಂಬುವ ರೂಪವು
ನೂರು ತರುವಿನ ತಳಿರ ಕೈಯಲಿ
ನೂರು ಹೂವಿನ ದೀಪವು

ಈ ವರ್ಷದ ಮೈ ಕೊರೆವ ಚಳಿಗೆ ವಿದಾಯ ಹೇಳಿ, ಬೇಸಿಗೆಯ ಬರಮಾಡಿಕೊಳ್ಳುವ ಹೊತ್ತಲ್ಲಿ ಜಿ.ಎಸ್. ಶಿವರುದ್ರಪ್ಪನವರ ಕವಿತೆಯ ಸಾಲುಗಳು ನೆನಪಾಗುತ್ತವೆ. ಸಂಕ್ರಾಂತಿ ಮುಖ್ಯವಾಗಿ ಸುಗ್ಗಿ ಸಂಭ್ರಮದ ಆಚರಣೆ. ವರ್ಷಪೂರ ಕಾಳುಕೊಟ್ಟ ನಿಸರ್ಗಕ್ಕೆ ಕೃತಜ್ಞತೆ ಹೇಳುವ ಸಂದರ್ಭ. ಇತ್ತೀಚಿನ ವರ್ಷಗಳಲ್ಲಿ ಸಂಕ್ರಾಂತಿ ಆಚರಣೆ ಕೊನೆಯಾಗಿ, ಹಬ್ಬವಾಗಿ ಮಾರ್ಪಡುತ್ತಿದೆ. ಹಳ್ಳಿಗಳಲ್ಲೂ ಸಂಕ್ರಾಂತಿ ಎಳ್ಳು ಬೆಲ್ಲಕ್ಕಷ್ಟೇ ಸೀಮಿತವಾಗುತ್ತಿದೆ.

ಸಂಕ್ರಾಂತಿ ಸುಗ್ಗಿ ಸಂಭ್ರಮದ ಹಬ್ಬ ಅರ್ಥಾತ್ ಕೃಷಿ ಆಚರಣೆ. ನಾಡಿನಾದ್ಯಂತ ಹತ್ತು ಹಲವು ತೆರನಾದ ಸುಗ್ಗಿ ಆಚರಣೆಗಳನ್ನು ಕಾಣಬಹುದು. ರಾಗಿ ಕಣದಲ್ಲಿ ನಡೆಯುವ ಸುಗ್ಗಿ ಸಂಭ್ರಮ ಒಂದು ಬಗೆಯಾದರೆ, ಉತ್ತರ ಕರ್ನಾಟಕದ ಜೋಳದ ಹೊಲದ ಸುಗ್ಗಿಯ ಸಿರಿಯೇ ಮತ್ತೊಂದು ತೆರನಾದದ್ದು. ಮಲೆನಾಡಿಗರ ಭತ್ತದ ಸುಗ್ಗಿ ಸೊಗಸೇ ಬೇರೆ.

> ಕಳೆದ ಎರಡು ವರ್ಷಗಳಿಂದ ಕೋವಿಡ್ ಸಂಕ್ರಾಂತಿಯ ಸಂಭ್ರಮವನ್ನೇ ಕಸಿದಿದೆಯಲ್ಲ? ಗ್ರಾಮೀಣ ಭಾಗದ ಸಂಕ್ರಾಂತಿಯ ನೋಟಗಳನ್ನು ಒಂದು ಟ್ರೇಲರ್‌ನಂತೆ ತೋರಿಸುವ ಈ ಬರಹ, ಮತ್ತೆ ಎಂದಿಗೆ ಬಂದಾವು ಅಂತಹ ದಿನಗಳು ಎಂಬ ಪ್ರಶ್ನೆಯನ್ನೂ ಒಡಲೊಳಗೆ ಇರಿಸಿಕೊಂಡಿದೆ...

ಮಳೆಗಾಲದಲ್ಲಿ ಹಸಿರಿನಿಂದ ಕಂಗೊಳಿಸುವ ಹೊಲಗದ್ದೆಗಳು ಸಂಕ್ರಾಂತಿಯ ಹೊತ್ತಿಗೆ ಬಟಾ ಬಯಲಾಗಿರುತ್ತವೆ. ಕುಯಿಲಾದ ಬೆಳೆ ಮೆದೆಯ ರೂಪ ತಾಳಿ ಸುಗ್ಗಿಗೆ ಸಿದ್ಧವಾಗಿರುತ್ತದೆ. ರೈತರು ನಿರಾಳವಾಗಿ ಸಂತೋಷಿಸುವ ಕಾಲವಿದು. ಅದಕ್ಕೆ ಕಾರಣವಾದ ಬಸವಣ್ಣನಿಗೆ ಕೃತಜ್ಞತೆ ಅರ್ಪಿಸಲು ರೈತ ಸಮುದಾಯ ಕಾತರದಿಂದ ಸಂಕ್ರಾಂತಿಗಾಗಿ ಕಾಯುತ್ತದೆ.

ಸಂಕ್ರಾಂತಿ ಪ್ರಕೃತಿಯ ಮನ್ವಂತರ ಪ್ರತಿನಿಧಿಸುವ ಹಬ್ಬ ಕೂಡ. ಸೂರ್ಯ ಕರ್ಕಾಟಕ ರಾಶಿಯಿಂದ ಉತ್ತರಾಯಣದ ಮಕರ ರಾಶಿಯತ್ತ ತನ್ನ ದಿಕ್ಕು ಬದಲಿಸುವ ಪರಿವರ್ತನಾ ಕಾಲ. ಸಂಕ್ರಾಂತಿಯ ನಂತರ ಹಗಲಿನ ಕಾಲಾವಧಿ ಹೆಚ್ಚುತ್ತದೆ. ಶೂನ್ಯ ಮಾಸದಲ್ಲಿ, ಕೊರೆವ ಚಳಿಯಲ್ಲಿ ಜಡವಾಗಿದ್ದ ಮರಗಿಡಗಳಲ್ಲಿ ಎಲೆ ಉದುರಿ, ಹೊಸ ಚಿಗುರು ಬರಲಾರಂಭಿಸುತ್ತದೆ. ಶಿಶಿರ ಋತುವಿನ ಆರಂಭ ಕೂಡ.

ಸಂಕ್ರಾಂತಿ ಅಪ್ಪಟ ಹಳ್ಳಿಗರ ಹಬ್ಬ. ಪ್ರದೇಶದಿಂದ ಪ್ರದೇಶಕ್ಕೆ ಸಂಕ್ರಾಂತಿಯ ಆಚರಣೆಯ ವಿಧಾನಗಳು ಬದಲಾಗುತ್ತಾ ಹೋಗುತ್ತವೆ. ಸಂಕ್ರಾಂತಿಗಿಂತ ಮುನ್ನವೇ ಕೊಡಗಿನ ಹುತ್ತರಿ ಹಬ್ಬ ಬರುತ್ತದೆ. ಹೊಸ ಭತ್ತವನ್ನು ಗದ್ದೆಯಿಂದ ತಂದು ಮನೆ ತುಂಬಿಸಿಕೊಳ್ಳುವ, ಮಳೆದೇವ ಇಗ್ಗುತಪ್ಪನಿಗೆ ಭಕ್ತಿಯಿಂದ ನಮಸ್ಕರಿಸುವ ಆಚರಣೆ.

ದಕ್ಷಿಣ ಕರ್ನಾಟಕದಲ್ಲಿ ಸಂಕ್ರಾಂತಿ ಸಂದರ್ಭದಲ್ಲಿ ದನಕರುಗಳ ಮೈ ತೊಳೆದು, ಮೈ ಮೇಲೆ ಅರಿಷಿಣ, ಕುಂಕುಮದಿಂದ ಚಿತ್ರ ಬರೆದು, ಕೊಂಬಿಗೆ ಬಣ್ಣ ಹಚ್ಚಿ, ರಂಗು ರಂಗಿನ ಬಲೂನು, ನವಿಲುಗರಿ ಕಟ್ಟಿ ಶೃಂಗರಿಸುತ್ತಾರೆ. ದೇವಲೋಕದ ಕಾಮಧೇನು ಭೂಮಿಗೆ ಇಳಿದಂತೆ ಭಾಸವಾಗುತ್ತದೆ.

ಇಳಿಸಂಜೆಗೆ ಊರ ಹೊರಗಿನ ರಸ್ತೆಯಲ್ಲಿ ಹುಲ್ಲು ಹರಡಿ, ಬೆಂಕಿ ಹಾಕಿ ದನಗಳನ್ನು 'ಕಿಚ್ಚು' ಹಾಯಿಸುತ್ತಾರೆ. ಹಳ್ಳಿಕಾರ್ ಹೋರಿಗಳು ಮೊದಲು ಬೆಂಕಿ ಹಾಯುತ್ತವೆ. ಬೆಂಕಿಯ ಕೆನ್ನಾಲಿಗೆಯ ನಡುವೆ ಜಿಗಿದು ಹೋಗುವ ಹೋರಿ ಮತ್ತು ಅದರ ಮಾಲೀಕರಿಗೆ ಚಪ್ಪಾಳೆ, ಕೇಕೆಗಳ ಪುರಸ್ಕಾರ.

ನಂತರದ ಸರದಿ ಎತ್ತು ಮತ್ತು ಹಸುಗಳದು. ಕೊನೆಗೆ ಬರುವುದು ಕುರಿಗಳು! ಬೆಂಕಿ ನಂದಿದ ಕಿಚ್ಚನ್ನು ಹಾದು ದೂಳೆಬ್ಬಿಸುವ ಕುರಿಗಳು ನೆರೆದವರಲ್ಲಿ ನಗು ಉಕ್ಕಿಸುತ್ತವೆ. ದನ ಹಾಯ್ದ ಕಿಚ್ಚಿನ ಬೂದಿಯನ್ನು ಸಂಗ್ರಹಿಸಿಕೊಂಡು ಹೋಗಿ ಕೊಟ್ಟಿಗೆಯಲ್ಲಿ ಚೆಲ್ಲಲಾಗುತ್ತದೆ.

ಮನೆಗೆ ಹಿಂತಿರುಗುವ ದನಕರುಗಳಿಗೆ ಮಂಗಳಾರತಿ ಮಾಡಿ, ಅವುಗಳ ಕಾಲು ಮುಟ್ಟಿ ನಮಸ್ಕರಿಸಿ 'ಈ ವರ್ಷವೂ ನಮಗೆ ಹೆಗಲು ಕೊಡು ಬಸವಣ್ಣ' ಎಂದು ಪ್ರಾರ್ಥಿಸುತ್ತಾರೆ. ಹಬ್ಬದ ತಿಂಡಿ ತಿನ್ನಿಸುತ್ತಾರೆ.

ಬೆಂಗಳೂರಿನ ಜಾಲಹಳ್ಳಿ, ಮೈಸೂರಿನ ಪಡುವಾರಹಳ್ಳಿಯಂಥ ನಗರದ ನಡುವೆ ಸಿಕ್ಕಿ ಬಿದ್ದ ಮೆಟ್ರೊ ಹಳ್ಳಿಗಳಲ್ಲಿ ಸಂಕ್ರಾಂತಿ ಆಚರಣೆ ಇವತ್ತಿಗೂ ಉಳಿದು ಬಂದಿದೆ. ಸಿಟಿಯ ಹೈಬ್ರಿಡ್ ಹಸುಗಳು, ತಮ್ಮ ಗುಡಾಣದಂಥ ಹೊಟ್ಟೆ ಹೊತ್ತು ಬೆಂಕಿ ಹಾಯುವ ದೃಶ್ಯ ಕಾಮಿಡಿ ಟೈಮ್ಸ್‌ನ ನೆನಪು ತರಿಸುತ್ತದೆ.

ರಾಮನಗರ ಮತ್ತು ಮಂಡ್ಯದ ಕೆಲವು ಪ್ರದೇಶಗಳಲ್ಲಿ ಕಾಟುಮರಾಯನ ಪೂಜಿಸುವ ಸಂಪ್ರದಾಯವಿದೆ. ಊರಿನ ಕೆರೆ, ಕುಂಟೆಯ ಬಳಿ ಹಸಿ ಜೇಡಿಮಣ್ಣಿನಿಂದ ಗೋಪುರದ ಆಕಾರದಲ್ಲಿ ಕಾಟುಮರಾಯನ ಮೂರ್ತಿ ಮಾಡುತ್ತಾರೆ. ಇದಕ್ಕೆ ಅರಿಷಿಣ- ಕುಂಕುಮ ಬಳಿದು ಕಾರೆಗಿಡದ ಮುಳ್ಳಿನ ಕೊಂಬೆ ನೆಟ್ಟು, ಮುಳ್ಳಿನ ತುದಿಗೆ ಉಗುನಿ ಹೂ ಸಿಕ್ಕಿಸುತ್ತಾರೆ. ಮಣ್ಣಿನ ಮೂರ್ತಿಯ ತಳಭಾಗದಲ್ಲಿ ಗೂಡು ಮಾಡಿ ದೀಪ ಹಚ್ಚಿಡುತ್ತಾರೆ. ಕಾಟುಮರಾಯನಿಗೆ ಪೂಜೆ ಮಾಡಿದ ನಂತರ ದನಗಳ ಮೆರವಣಿಗೆ ಆರಂಭವಾಗುತ್ತದೆ.

ಸಂಕ್ರಾಂತಿ ದಿನ ಸಗಣಿಯಿಂದ ಮಾಡಿದ ಪಿಳ್ಳೇರಾಯನಿಗೆ ತುಂಬೆ, ಉಗುನಿ, ಅಣ್ಣೆ ಹೂಗಳನ್ನು ಚುಚ್ಚಿ ಬಾಗಿಲಿನ ಎರಡೂ ಬದಿ ಅಂಟಿಸುವುದು ವಿಶೇಷ. ಜನಪದರ ದೃಷ್ಟಿಯಲ್ಲಿ ಬೆಳೆ-ಕಳೆ ಎಂಬುದರಲ್ಲಿ ಭೇದ ಭಾವ ಇಲ್ಲ. ಇವರ ದೃಷ್ಟಿಯಲ್ಲಿ ಬೆಳೆಯಷ್ಟೇ ಕಳೆಗಳೂ ಪವಿತ್ರ. ನೆಲದ ಫಲವತ್ತತೆಯನ್ನು ಕಳೆಗಳು ಪ್ರತಿನಿಧಿಸುವುದರಿಂದ ಸಂಕ್ರಾಂತಿಯ ಆಚರಣೆಯಲ್ಲಿ ಅಣ್ಣೆ ಹೂವು ಮತ್ತು ಉಗುನಿ ಹೂವಿಗೆ ವಿಶೇಷ ಪ್ರಾಶಸ್ತ್ಯ. ರೌಂಡ್ ಅಪ್ ಸುರಿದು ಕಳೆಗಳನ್ನು ನಾಮಾವಶೇಷ ಮಾಡುತ್ತಿರುವ ಹೊಸ ಪೀಳಿಗೆಯ ಕೃಷಿಕರಿಗೆ ಅಣ್ಣೆ ಹೂವು ಸಿಗುವುದು ದುರ್ಲಭವೇ!

ಸಂಕ್ರಾಂತಿಯ ದಿನದ ಅಡುಗೆ ಕೂಡ ವಿಶೇಷವೇ. ಅವರೆಕಾಯಿ, ಹಸಿ ಕಡಲೆಕಾಯಿ ಮತ್ತು ಗೆಣಸನ್ನು ಜೊತೆ ಸೇರಿಸಿ ಬೇಯಿಸಲಾಗುತ್ತದೆ. ದನಕರುಗಳಿಗೆ ಮೊದಲು ತಿನ್ನಿಸಿದ ನಂತರವೇ ಮನೆಯವರಿಗೆ ತಿನ್ನಲು ಸಿಗುತ್ತದೆ.

12ನೇ ಪುಟಕ್ಕೆ...

ಕಮಾನು ಸೇತುವೆಯ ಕಮಾಲ್

ಚೆನಾಬ್ ನದಿಪಾತ್ರದಿಂದ 359 ಮೀಟರ್ ಎತ್ತರದಲ್ಲಿ ನಿರ್ಮಾಣವಾಗುತ್ತಿರುವ ಈ ಕಮಾನು ರೈಲು ಸೇತುವೆ ಭಾರತದ ಎಂಜಿನಿಯರಿಂಗ್ ತಾಕತ್ತಿಗೆ ದ್ಯೋತಕವಾಗಿದೆ

ನಾಗೇಶ ಶೆಣೈ ಪಿ.

ಸುತ್ತಲೂ ಹಬ್ಬಿರುವ ವಿಶಾಲ ಪರ್ವತ ಶ್ರೇಣಿ. ಎರಡು ಪರ್ವತಗಳ ನಡುವೆ, 359 ಮೀಟರ್ ಆಳದ ಪ್ರಪಾತದಲ್ಲಿ ಹರಿಯುತ್ತಿರುವ ಚೆನಾಬ್ ನದಿ. ಹಠಾತ್ತನೇ ಕುಸಿಯುವ ತಾಪಮಾನ, ಕಣಿವೆಯಿಂದ ಮೈಕೊರೆಯುವಂತೆ ಬೀಸುವ ಗಾಳಿ...

ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಯ ಹಳ್ಳಿ ಕೌರಿಯಲ್ಲಿ ನಿರ್ಮಾಣವಾಗುತ್ತಿರುವ ಜಗತ್ತಿನ ಅತಿ ಎತ್ತರದ ಉಕ್ಕಿನ ಕಮಾನು ರೈಲು ಸೇತುವೆ ತಾಣದಿಂದ ಕಾಣುವ ಚಿತ್ರಣ ಇದು. ಈ ದುರ್ಗಮ ಪ್ರದೇಶದಲ್ಲಿ ಪ್ರತಿಕೂಲ ಪರಿಸ್ಥಿತಿ, ಹಲವು ಸವಾಲುಗಳ ನಡುವೆಯೂ ಸೇತುವೆ ನಿರ್ಮಾಣಕ್ಕೆ ಬಳಸಿರುವ ಎಂಜಿನಿಯರಿಂಗ್ ಕೌಶಲ ಎಂಥವರಿಗೂ ಬೆರಗು ಮೂಡಿಸುತ್ತದೆ. ಮಹತ್ವಾಕಾಂಕ್ಷೆಯ ಜಮ್ಮು- ಶ್ರೀನಗರ ರೈಲು ಮಾರ್ಗದಲ್ಲಿ ಈ ಸೇತುವೆ ನಿರ್ಮಾಣ ಕಾಮಗಾರಿಯನ್ನು ಅತ್ಯಂತ ಸವಾಲಿನದ್ದು ಎಂದೇ ಪರಿಗಣಿಸಲಾಗಿತ್ತು. ಇಲ್ಲಿಗೆ ಭೇಟಿ ನೀಡಿದಾಗ ಸೇತುವೆ ನಿರ್ಮಾಣದ ಸವಾಲುಗಳನ್ನು ಹತ್ತಿರದಿಂದ ಕಾಣುವ ಅವಕಾಶ ದೊರೆಯಿತು.

ಕಮಾನು ಸೇತುವೆ ಕಾಮಗಾರಿಯು ಉಧಂಪುರ- ಶ್ರೀನಗರ- ಬಾರಾಮುಲ್ಲಾ ರೈಲು ಸಂಪರ್ಕ (USBRL) ಯೋಜನೆಯ ಭಾಗ. ಜಮ್ಮುವಿನಿಂದ ಕಟ್ರಾವರೆಗೆ 53 ಕಿ.ಮೀ. (ವೈಷ್ಣೋದೇವಿ ಮಂದಿರ ಇರುವ ನಗರ) ರೈಲು ಸಂಪರ್ಕ ಈಗಾಗಲೇ ಇದೆ. ಬನಿಹಾಲ್- ಶ್ರೀನಗರ ನಡುವಣ (78 ಕಿ.ಮೀ.) ಮಾರ್ಗವೂ ಪೂರ್ಣಗೊಂಡಿದೆ. ಇವೆರಡರ ನಡುವೆ, ಅಂದರೆ ಕಟ್ರಾದಿಂದ ಬನಿಹಾಲ್‌ವರೆಗಿನ (111 ಕಿ.ಮೀ. ದೂರ) ರೈಲ್ವೆ ಹಳಿ ನಿರ್ಮಾಣ ಕೆಲಸ ಈಗ ಪ್ರಗತಿಯಲ್ಲಿದೆ. ಈ ಮಾರ್ಗದಲ್ಲೇ 467 ಮೀ. ಉದ್ದದ ಈ ಕಮಾನು ಸೇತುವೆ ನಿರ್ಮಾಣಗೊಂಡಿದೆ.

ಚೆನಾಬ್ ನದಿ ಪಾತ್ರದಿಂದ 359 ಮೀ. ಎತ್ತರದಲ್ಲಿ (1,117 ಅಡಿ) ನಿರ್ಮಾಣವಾಗಿರುವ ಈ ಸೇತುವೆ ಪ್ಯಾರಿಸ್‌ನ ಹೆಗ್ಗುರುತು ಐಫೆಲ್ ಟವರ್‌ಗಿಂತಲೂ 35 ಮೀ. ಎತ್ತರದಲ್ಲಿದೆ. ಕಮಾನು ಸೇತುವೆಯ ಮೇಲ್ಭಾಗದಲ್ಲಿ ಉಕ್ಕಿನ ಜೋಡಣೆಯ ಕೊನೆಯ ಹಂತದ ಕೆಲಸ 2021ರ ಏಪ್ರಿಲ್ 5ರಂದು ಪೂರ್ಣವಾದಾಗ ಇಲ್ಲಿ ಸಂಭ್ರಮವೋ ಸಂಭ್ರಮ. ಈಗ ಇಕ್ಕೆಲಗಳಿಂದ ಕಮಾನು ಸೇತುವೆ ಮೇಲೆ ರೈಲು ಹಳಿ ಹಾದುಹೋಗುವ ಮಾರ್ಗದ ಕೆಲಸ ಭರದಿಂದ ನಡೆಯುತ್ತಿದೆ. ವಯಾಡಕ್ಟ್ ನಿರ್ಮಾಣ, ಹಳಿ ಜೋಡಣೆಗೆ ಅನುಕೂಲವಾಗುವಂತೆ ಸೇತುವೆ ಮೇಲೆ ಕಂಬಗಳ ನಿರ್ಮಾಣ, ಗರ್ಡರ್‌ಗಳ ಅಳವಡಿಕೆ, ವೆಲ್ಡಿಂಗ್ ಕೆಲಸಗಳಲ್ಲಿ ಕಾರ್ಮಿಕರು, ತಂತ್ರಜ್ಞರು ತಲ್ಲೀನರಾಗಿರುವ ದೃಶ್ಯ ಕಾಣುತ್ತದೆ.

ಉತ್ತರ ರೈಲ್ವೆ ವ್ಯಾಪ್ತಿಯ ಈ ಯೋಜನೆಯನ್ನು ಕೊಂಕಣ ರೈಲ್ವೆ ನಿಗಮ (ಕೆಆರ್‌ಸಿಎಲ್) ಕೈಗೆತ್ತಿಕೊಂಡಿದೆ. ಈ ಮಾರ್ಗದ (ಕೌರಿ- ಬಕ್ಕಲ್ ಹಳ್ಳಿಗಳನ್ನು ಸಂಪರ್ಕಿಸುವ) ಸುಮಾರು 1.31 ಕಿ.ಮೀ. ಮಾರ್ಗದ ಕಾಮಗಾರಿಯನ್ನು ಅಫ್ಕಾನ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಕಂಪನಿ ನಿರ್ವಹಿಸುತ್ತಿದೆ. ಒಟ್ಟು ಯೋಜನಾ ವೆಚ್ಚ ₹1,400 ಕೋಟಿ.

11ನೇ ಪುಟಕ್ಕೆ..


ಪರ್ವತ ಶ್ರೇಣಿಗಳ ನಡುವೆ ಹರಿಯುವ ಚೆನಾಬ್ ನದಿ

ಕಣ್ಣಿಗೆ ಕಾಣುವಷ್ಟು ದೂರದವರೆಗೂ ಸಮಾಧಿಗಳ ಸಾಲು

ಸಮಾಧಿಗೆ ಪುಷ್ಪನಮನ ಸಲ್ಲಿಸಿ, ಮಡಿದ ಯೋಧರಿಗೆ ಗೌರವ ಸಲ್ಲಿಸಿದ ಸೇನಾ ಯೋಧ

ಮಹಿಳೆಯೊಬ್ಬರಿಂದ ಸಮಾಧಿಗೆ ಪುಷ್ಪನಮನ

ಅರ್ಲಿಂಗ್‌ಟನ್ ಸಮಾಧಿಗಳ ಸುತ್ತ

ಎಸ್.ಎಂ. ಜಂಬುಕೇಶ್ವರ

> ಸ್ಮಾರಕಗಳ ನಗರವೆಂದೇ ಪ್ರಸಿದ್ಧವಾದ ವಾಷಿಂಗ್ಟನ್ ಡಿ.ಸಿ. ಪ್ರವಾಸಿಗರನ್ನು ಕೈಬೀಸಿ ಕರೆಯುವ ನಗರಿ. ಆದರೆ, ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರು ವೀಕ್ಷಿಸದ ಸ್ಮಾರಕದ ಬಗ್ಗೆ ಇಲ್ಲಿದೆ ಕುತೂಹಲಕಾರಿ ಮಾಹಿತಿ...

ಪ್ರವಾಸ

ಸ್ಮಾರಕಗಳ ನಗರವೆಂದೇ ಪ್ರಸಿದ್ಧಿ ಪಡೆದ ವಾಷಿಂಗ್ಟನ್ ಡಿ.ಸಿ.ಗೆ ಭೇಟಿ ನೀಡುವ ಪ್ರವಾಸಿಗರು ರಾಷ್ಟ್ರೀಯ ಸ್ಮಾರಕಗಳು, ರಾಷ್ಟ್ರೀಯ ಕಲಾಗ್ಯಾಲರಿಗಳು, ರಾಷ್ಟ್ರೀಯ ಏರ್‌ಸ್ಪೇಸ್ ಸಂಗ್ರಹಾಲಯಗಳನ್ನು ಸಂದರ್ಶಿಸುತ್ತಾರೆ. ಆದರೆ ಇವುಗಳಷ್ಟೇ ಮುಖ್ಯವಾದ ರಾಷ್ಟ್ರೀಯ ಸಮಾಧಿ ಸ್ಥಳವೊಂದನ್ನು ಸಾಕಷ್ಟು ಪ್ರವಾಸಿಗರು ನೋಡಿರುವುದಿಲ್ಲ. ನನ್ನ ಮಗ ಅಮರೇಶ್ ನಮಗೆ ಅರ್ಲಿಂಗ್‌ಟನ್ ರಾಷ್ಟ್ರೀಯ ಸಮಾಧಿ ಸ್ಥಳವನ್ನು ತೋರಿಸಲು ಕರೆದುಕೊಂಡು ಹೋದ.

ಸಮಾಧಿ ಸ್ಥಳವು ವಿಶಾಲವಾಗಿದ್ದು ಒಳಗಡೆ ಸುತ್ತಾಡಿಕೊಂಡು ಬರಲು ನಡೆದು ಹೋಗಬಹುದು, ಬಸ್ಸಿನಲ್ಲಿಯೂ ಹೋಗಿ ಬರುವ ವ್ಯವಸ್ಥೆಯನ್ನು ಮಾಡಿದ್ದಾರೆ. ಸಮಯದ ಅಭಾವದಿಂದಾಗಿ ನಾವು ಬಸ್ಸಿನಲ್ಲಿಯೇ ಹೋಗಿಬರಲು ನಿರ್ಧರಿಸಿ ಟಿಕೆಟ್ ಪಡೆದು ಒಳಗಡೆ ಪ್ರವೇಶಿಸಿದೆವು. ಒಳಗೆ ಹೋದ ನಮಗೆ ಅಲ್ಲಿಯ ಸ್ಥಳ ಸುಂದರವಾದ ಉದ್ಯಾನದಂತೆ ಗೋಚರಿಸಿತು. ವ್ಯವಸ್ಥಿತವಾಗಿ ಬೆಳೆಸಿದ ಹೂಗಿಡಗಳು, ಹಚ್ಚಹಸಿರಿನಿಂದ ಕೂಡಿದ ಗಿಡಮರಗಳು, ಕಣ್ಣಿಗೆ ಕಾಣುವಷ್ಟು ದೂರದವರೆಗೆ ಕಲ್ಲುಗಳಿಂದ ಜೋಡಿಸಿದ ಸಮಾಧಿಗಳ ಸಾಲು. ಆ ಸುಂದರ ದೃಶ್ಯವನ್ನು ನೋಡುತ್ತ ಹೋಗಿ ಬಸ್ಸಿನಲ್ಲಿ ಕುಳಿತುಕೊಂಡೆವು. ಬಸ್ಸು ನಿಧಾನವಾಗಿ ಸಮಾಧಿಗಳ ರಸ್ತೆಯ ಮಧ್ಯದಲ್ಲಿ ಹೊರಟಿತು.

ಅರ್ಲಿಂಗ್‌ಟನ್ ರಾಷ್ಟ್ರೀಯ ಸಮಾಧಿ ಸ್ಥಳವನ್ನು 1864ರಲ್ಲಿ ಅಮೆರಿಕ ಸರ್ಕಾರ ರಾಷ್ಟ್ರೀಯ ಮಿಲಿಟರಿ ವ್ಯಾಪ್ತಿಗೆ ವರ್ಗಾಯಿಸಿದೆ. ಈ ಸಮಾಧಿಯು ಸುಮಾರು 1200 ಎಕರೆ ಪ್ರದೇಶದಲ್ಲಿ ವಿಸ್ತರಿಸಿದ್ದನ್ನು ಕೇಳಿ ನಮಗೆ ಆಶ್ಚರ್ಯವಾಯಿತು. ಈ ಸಮಾಧಿ ಸ್ಥಳವು ರಾಷ್ಟ್ರಾಧ್ಯಕ್ಷರು, ಯುದ್ಧದಲ್ಲಿ ಮಡಿದ ವೀರಯೋಧರು ಮತ್ತು ಅವರ ಕುಟುಂಬವರ್ಗದವರಿಗಾಗಿ ಮೀಸಲಿಟ್ಟಿರುವ ಸ್ಥಳವಾಗಿದೆ. ನಾವು ಬಸ್ಸಿನಲ್ಲಿ ಕುಳಿತು ಹೋಗುವ ಸಂದರ್ಭದಲ್ಲಿ ಅಲ್ಲಲ್ಲಿ ರಾಷ್ಟ್ರಧ್ವಜಗಳು ಕಾಣುತ್ತಿದ್ದವು. ಕೆಲವು ಕಡೆ, ಸಾವಿಗೀಡಾದವರ ವಂಶಸ್ಥರು ಸಮಾಧಿಗಳ ಮುಂದೆ ನಿಂತು ಪ್ರಾರ್ಥನೆ ಸಲ್ಲಿಸುತ್ತಿದ್ದ ದೃಶ್ಯಗಳನ್ನು ಕಂಡೆವು. ಯಾವುದೋ ಒಂದು ಮೂಲೆಯಲ್ಲಿ ಗುಂಡು ಹಾರಿಸುವ ಶಬ್ದವೂ ಕೇಳಿಬರುತ್ತಿತ್ತು. ಈ ಶಬ್ದವು ದೇಶಕ್ಕಾಗಿ ಹೋರಾಡಿ ಜೀವತೆತ್ತ ವೀರಯೋಧರನ್ನು ನೆನಪಿಸಿಕೊಳ್ಳುವ ಕಾರ್ಯವಾಗಿರುತ್ತದೆ ಎಂದು ನಮ್ಮ ಜೊತೆಯಲ್ಲಿದ್ದವರು ಹೇಳಿದರು.

ಈ ವಿಸ್ತಾರವಾದ ಜಾಗ ಮಾರ್ಥಾ ವಾಷಿಂಗ್ಟನ್ ಅವರ ಮೊಮ್ಮಗ ಜಾರ್ಜ್ ವಾಷಿಂಗ್ಟನ್ ಪಾರ್ಕೆ ಕಸ್ಟಿಸ್‌ಗೆ ಸೇರಿತ್ತಂತೆ. ಈತ ಜಾರ್ಜ್ ವಾಷಿಂಗ್ಟನ್ ಅವರ ಮಲಮೊಮ್ಮಗ. 1857ರಲ್ಲಿ ಈ ಜಾಗವನ್ನೆಲ್ಲ ಕಸ್ಟಿಸ್ ತನ್ನ ಮಗಳು ಮೇರಿ ಲೀಗೆ ಉಯಿಲು ಬರೆದಿದ್ದ. 1861ರಲ್ಲಿ ಅಂತರ್‌ಯುದ್ಧ ಆರಂಭವಾಗಿ ಈ ಎಸ್ಟೇಟ್ ಅನ್ನು ತೆರವುಗೊಳಿಸಲಾಯಿತು. ಆನಂತರ ಫೆಡರಲ್ ಪಡೆಗಳು ಈ ಪ್ರದೇಶವನ್ನು ಆಕ್ರಮಿಸಿಕೊಂಡು ತಮ್ಮ ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡವು.

1863ರಲ್ಲಿ ಈ ಎಸ್ಟೇಟಿನ ಒಂದು ಭಾಗದಲ್ಲಿ ಫ್ರೀಡ್‌ಮ್ಯಾನ್ ಎನ್ನುವ ವ್ಯಕ್ತಿ ಹಳ್ಳಿಯನ್ನು ಸ್ಥಾಪಿಸಿ ಅಲ್ಲಿಯ ಗುಲಾಮರನ್ನು ಸ್ವತಂತ್ರಗೊಳಿಸುವತ್ತ ಗಮನಹರಿಸಿದ್ದ. ಗುಲಾಮರಿಗೆ ಆ ಸ್ಥಳದಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟು ಅವರಿಗೆ ಶಿಕ್ಷಣ, ತರಬೇತಿ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದ. ಮತ್ತೆ ಕೆಲ ವರ್ಷಗಳ ನಂತರ ಮತ್ತೊಂದು ಅಂತರ್‌ಯುದ್ಧ ಪ್ರಾರಂಭವಾಗಿ ಅಲ್ಲಿ ಸಾವು-ನೋವುಗಳು ಜಾಸ್ತಿಯಾದವು. ಆಗ ಈ ಪ್ರದೇಶವನ್ನು ರುದ್ರಭೂಮಿಯನ್ನಾಗಿ ಪರಿವರ್ತಿಸಲಾಯಿತು. ಯುದ್ಧ ಕೊನೆಗೊಂಡಾಗ ಎಸ್ಟೇಟಿನ ಸುಮಾರು 200 ಎಕರೆ ಪ್ರದೇಶದಲ್ಲಿ ಸಾವಿರಾರು ಸೈನಿಕರು ಮತ್ತು ಈ ಹಿಂದೆ ಗುಲಾಮರಾಗಿದ್ದವರನ್ನು ಸಹ ಈ ಸ್ಥಳದಲ್ಲಿ ಸಮಾಧಿ ಮಾಡಿದರು. ಹೀಗೆ 13 ಕಡೆ ಬೇರೆ ಬೇರೆ ರೀತಿಯಲ್ಲಿ ಜಾಗ ಗುರುತಿಸಿ ಅವರ ಅಧಿಕಾರ ಶ್ರೇಣಿಗಳಿಗೆ ಅನುಸಾರ ಸಮಾಧಿ ಮಾಡಿರುವುದನ್ನು ಕಾಣಬಹುದಾಗಿದೆ.

ಮುಂದಿನ ಹಂತದಲ್ಲಿ ಪ್ರಥಮ ಹಾಗೂ ದ್ವಿತೀಯ ವಿಶ್ವ ಮಹಾಯುದ್ಧದಲ್ಲಿ ಮಡಿದ ಸಾವಿರಾರು ಅಧಿಕಾರಿಗಳು, ವಿಯೆಟ್ನಾಂ ಹಾಗೂ ಕೊರಿಯಾ ಯುದ್ಧದಲ್ಲಿ ಮಡಿದ ಸೈನಿಕರೂ ಸೇರಿದಂತೆ ಮಿಲಿಟರಿಯಲ್ಲಿ ಸೇವೆ ಸಲ್ಲಿಸಿದ ಪ್ರಮುಖರ ಸಮಾಧಿಗಳು ಇಲ್ಲಿವೆ. ಯುದ್ಧದಲ್ಲಿ ಸೇವೆ ಸಲ್ಲಿಸಿದ ಸ್ಪ್ಯಾನಿಷ್ ಅಮೆರಿಕನ್ ದಾದಿಯರಿಗೆ ಹಾಗೂ ಜ್ಯೂಯಿಷ್ ಪ್ರೊಟೆಸ್ಟೆಂಟ್ ಮತ್ತು ರೋಮನ್ ಕ್ಯಾಥೊಲಿಕ್ ಮಿಲಿಟರಿಯವರಿಗೆ ಮತ್ತು ಸುಮಾರು 3800 ಗುಲಾಮರ ಕುಟುಂಬಗಳಿಗೆ ಜಾಗ ಮೀಸಲಿಟ್ಟಿರುವುದು ವಿಶೇಷ. ಜೊತೆಗೆ ಬಹುಸ್ಮರಣೀಯವಾದ, ದೇಶಕ್ಕಾಗಿ ಪ್ರಾಣತೆತ್ತ ಅನಾಮಿಕ ಸೈನಿಕರ ಸಮಾಧಿಗಳೂ ಅಲ್ಲಿವೆ.

ಬಸ್ಸಿನಲ್ಲಿ ಪ್ರಯಾಣಿಸುವ ಸಂದರ್ಭದಲ್ಲಿ ಸಮಾಧಿಗಳು ದೂರದೂರದವರೆಗೂ ಒಂದೇ ಸಾಲಿನಲ್ಲಿದ್ದಂತೆ ಕಾಣುತ್ತಿದ್ದವು. ಸೈನಿಕರ ಸಮಾಧಿ ಸ್ಥಳಗಳಲ್ಲಿ ನೆಟ್ಟ ಬಿಳಿಬಣ್ಣದ ಕಲ್ಲುಗಳಲ್ಲಿ ಅವರ ಹೆಸರುಗಳನ್ನು ಕೆತ್ತಿದ್ದಾರೆ. ಸಮಾಧಿ ಸ್ಥಳದ ಮಧ್ಯದಲ್ಲಿ ಬೆಳೆದ ಹಸಿರುಹುಲ್ಲು ಹಾಗೂ ಹೂವಿನ ಗಿಡಗಳು ನೋಡುಗರ ಮನಸ್ಸಿಗೆ ಮುದ ನೀಡುತ್ತಿದ್ದವು. ಮತ್ತೊಂದು ಭಾಗದಲ್ಲಿ ದೇಶಕ್ಕಾಗಿ ದುಡಿದ ಕೆಲವು ಪ್ರಮುಖರ ಹೆಸರುಗಳನ್ನು ಕೆತ್ತಿದ, ಮೂರರಿಂದ ಎಂಟು ಅಡಿ ಎತ್ತರದವರೆಗಿನ ನೂರಾರು ಸುಂದರ ಕಲಾತ್ಮಕ ಸ್ಮಾರಕಗಳು ಅದ್ಭುತವಾಗಿವೆ. ಈ ಸ್ಥಳದಲ್ಲಿ ಅಂದಿನಿಂದ ಇಂದಿನವರೆಗೆ ಒಟ್ಟು ಸುಮಾರು 4 ಲಕ್ಷಕ್ಕಿಂತಲೂ ಹೆಚ್ಚು ಸಮಾಧಿಗಳಿವೆ ಎಂದು ತಿಳಿಯಿತು.

ಈ ಸ್ಥಳದಲ್ಲಿಯೇ ರಾಷ್ಟ್ರೀಯ ಸಮಾಧಿಗೆ ಹೆಸರಿಸಿರುವ ಅರ್ಲಿಂಗ್‌ಟನ್, ಉತ್ತರಧ್ರುವವನ್ನು ಕಂಡುಹಿಡಿದವರಲ್ಲಿ ಒಬ್ಬರಾದ ಮ್ಯಾಥ್ಯೂ ಅಲೆಕ್ಸಾಂಡರ್ ಹೆನ್‌ಸನ್, ರಾಷ್ಟ್ರಾಧ್ಯಕ್ಷರಾಗಿದ್ದ ವಿಲಿಯಂ ಹೋವರ್ಡ್ ಟಫ್ಟ್, ಜಾನ್ ಎಫ್. ಕೆನಡಿ, ಅವರ ಪತ್ನಿ ಜಾಕ್ವಿಲಿನ್ ಕೆನಡಿ ಹಾಗೂ ಮಕ್ಕಳು, ಜನರಲ್ ಜಾನ್ ಪರ್ಷಿಂಗ್, ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಥರ್‌ಗೋಡ್ ಮಾರ್ಷಲ್, ಜನರಲ್‌ಗಳಾದ ಜಾರ್ಜ್ ಸಿ. ಮಾರ್ಷಲ್, ಮೇಜರ್ ಪಿರ್ರಿ ಚಾರ್ಲ್ಸ್ ಮುಂತಾದ ಪ್ರಮುಖರ ಸ್ಮಾರಕಗಳಿವೆ. 1984ರಿಂದ ಈಚೆಗೆ ಯುದ್ಧದಲ್ಲಿ ಮಡಿದವರ ನೆನಪಿಗಾಗಿಯೇ ಆ ದೇಶದಲ್ಲಿ ಮೇ ತಿಂಗಳ ಕೊನೇ ಸೋಮವಾರದಂದು ರಾಷ್ಟ್ರೀಯ ಮೆಮೋರಿಯಲ್ ದಿನವನ್ನಾಗಿ ಆಚರಿಸಿಕೊಂಡು ಬರುತ್ತಿದ್ದಾರೆ.

ಈ ಪ್ರದೇಶದಲ್ಲಿ ಭಾನುವಾರ ಹೊರತುಪಡಿಸಿ ಮಿಕ್ಕ ಎಲ್ಲಾ ದಿನಗಳಂದು, ಮಡಿದ ಯೋಧರಿಗಾಗಿ ಪ್ರಾರ್ಥನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅಗಲಿದ ಹಿರಿಯರನ್ನು ನೆನೆಯುತ್ತಾರಂತೆ. ನಾವು ಸುಮಾರು 80 ನಿಮಿಷಗಳ ಕಾಲ ಬಸ್ಸಿನಲ್ಲಿ ಸುತ್ತಿದ ರುದ್ರಭೂಮಿಯ ದರ್ಶನ ನಿಜಕ್ಕೂ ಮರೆಯಲಾರದ್ದು. ವಾಷಿಂಗ್ಟನ್ ಡಿ.ಸಿ.ಗೆ ಭೇಟಿ ನೀಡುವವರು ವಿಶಾಲವಾದ, ಸುಂದರವಾದ ಈ ರಾಷ್ಟ್ರೀಯ ಸಮಾಧಿ ಸ್ಥಳವನ್ನು ಸಂದರ್ಶಿಸಲು ಮರೆಯಬೇಡಿ.

ಜಾನ್ ಎಫ್. ಕೆನಡಿ ಅವರ ಸಮಾಧಿ ಸ್ಥಳ

ಸೇತುವೆಯ ಕಮಾಲ್

10ನೇ ಪುಟದಿಂದ...

ಎಂಜಿನಿಯರಿಂಗ್ ಕೌಶಲ: ಮೂರು ವರ್ಷಗಳಿಂದ ಸುಮಾರು 700 ಮಂದಿ ಕಾರ್ಮಿಕರು ಮತ್ತು ಸಿಬ್ಬಂದಿ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಿವಿಲ್ ಕಾಮಗಾರಿಗಳು, ಫ್ಯಾಬ್ರಿಕೇಷನ್ ಕೆಲಸಗಳು ನಡೆಯುವ ಸಂದರ್ಭದಲ್ಲಿ 2,000 ಮಂದಿ ಏಕಕಾಲದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಈಗ ಮುಖ್ಯವಾಗಿ ಬಾಕಿಯಿರುವುದು ಜೋಡಣೆ ಕೆಲಸವಷ್ಟೇ. ಕಮಾನಿನ ಮೇಲೆ ಕಬ್ಬಿಣ ಆಧಾರಸ್ತಂಭ ಬರಲಿದ್ದು, ಇವುಗಳ ಮೇಲೆ ರೈಲು ಮಾರ್ಗ ನಿರ್ಮಿಸಲಾಗುತ್ತಿದೆ.

‘ಚೆನಾಬ್ ನದಿಯ ಮೇಲೆ ರೈಲ್ವೆ ಸೇತುವೆ ನಿರ್ಮಾಣಕ್ಕೆ ಭೌಗೋಳಿಕವಾಗಿ ಈ ಜಾಗವೇ ಪ್ರಶಸ್ತವೆಂದು ಮನವರಿಕೆಯಾಯಿತು. ಆದರೆ ಇಷ್ಟೊಂದು ಎತ್ತರದಲ್ಲಿ ಕಮಾನು ಸೇತುವೆ ನಿರ್ಮಾಣ ಆಗಬೇಕಿತ್ತು. ಇದಕ್ಕೆ ವಿಶೇಷ ವಿನ್ಯಾಸವೂ ಬೇಕಿತ್ತು. ಜೊತೆಗೆ ನುರಿತ ಕೆಲಸಗಾರರನ್ನು ಹೊಂದಿಸುವುದು ಸವಾಲಾಗಿತ್ತು. ಅವರನ್ನು ಬೇರೆ ಬೇರೆ ಕಡೆಯಿಂದ ಆಯ್ಕೆ ಮಾಡಿ ವೈದ್ಯಕೀಯ ತಪಾಸಣೆ ನಡೆಸಿದೆವು. ಸ್ಥಳೀಯರಿಗೂ ಅವಕಾಶ ನೀಡಿದೆವು. ಎತ್ತರದ ಪ್ರದೇಶದ ಕ್ಲಿಷ್ಟ ವಾತಾವರಣಕ್ಕೆ ಹೊಂದಿಕೊಂಡು ಹೇಗೆ ಕೆಲಸ ಮಾಡಬೇಕು ಎಂಬ ಬಗ್ಗೆ ತರಬೇತಿ ಶಿಬಿರ ಹಮ್ಮಿಕೊಂಡೆವು. ನಂತರವಷ್ಟೇ ಅವರನ್ನು ಕೆಲಸದಲ್ಲಿ ತೊಡಗಿಸಲಾಯಿತು. ಇಂಥ ಹವಾಮಾನದಲ್ಲಿ ಆಧುನಿಕ ತಂತ್ರಜ್ಞಾನದ ಜೊತೆ ಅವರು ಕೆಲಸ ಮಾಡುವುದಕ್ಕೆ ಇದು ಅಗತ್ಯವಾಗಿತ್ತು’ ಎನ್ನುತ್ತಾರೆ ಪ್ರಾಜೆಕ್ಟ್ ಮ್ಯಾನೇಜರ್ ಆಗಿರುವ ಎಸ್.ಎಂ.ವಿಶ್ವಮೂರ್ತಿ. ಅಫ್ಕಾನ್ಸ್ ಕಂಪನಿ ಉಪಾಧ್ಯಕ್ಷರೂ ಆಗಿರುವ ಅವರು ಕರ್ನಾಟಕದ ಬಳ್ಳಾರಿಯವರು.

‘ಕಾಮಗಾರಿಗೆ ಬಳಸಲಾಗಿರುವ ಕೇಬಲ್ ಕ್ರೇನ್ ಕೂಡ ವಿಶೇಷವಾದುದು. ಇದು ವಿಶ್ವದ ಅತಿ ಎತ್ತರದ ಕೇಬಲ್ ಕ್ರೇನ್. ಇದರ ಎತ್ತರ 130 ಮೀಟರ್. 40 ಟನ್ ಭಾರ ಎತ್ತುವ ಸಾಮರ್ಥ್ಯ ಈ ಕ್ರೇನ್‌ನದ್ದು. ಇಟಲಿ ನಿರ್ಮಿತ ಈ ದೈತ್ಯ ಕ್ರೇನ್ ನಮ್ಮ ದೇಶದಲ್ಲಿ ಬಳಕೆಯಾಗುತ್ತಿರುವುದು ಇದೇ ಮೊದಲು’ ಎನ್ನುತ್ತಾರೆ ಅವರು.

ಈ ಕ್ರೇನ್‌ನಿಂದ ಸದ್ಯ 36 ಟನ್‌ನಷ್ಟು ಭಾರ ಎತ್ತಲಾಗುತ್ತಿದೆ. ಬೆಳಿಗ್ಗೆ ಕ್ರೇನ್‌ನ ಅಟ್ಟಣಿಗೆಯನ್ನು ಹತ್ತುವ ಕಾರ್ಮಿಕರು ಇಳಿಯುವುದು ಸಂಜೆಯ ನಂತರವಷ್ಟೇ. ಎಲ್ಲ ಸಾಮಗ್ರಿಗಳನ್ನು ಕೇಬಲ್ ಮೂಲಕ ಅವರಿರುವ ಕಡೆಗೇ ತಲುಪಿಸುವ ವ್ಯವಸ್ಥೆಯಿದೆ. ಇಂಥ ಭೌಗೋಳಿಕ, ಅಪಾಯಕಾರಿ ಸನ್ನಿವೇಶದಲ್ಲಿ ಅಷ್ಟೊಂದು ಎತ್ತರದ ಕ್ರೇನ್ ಹತ್ತಿಳಿಯುವುದು ಕಷ್ಟ. ಹೀಗಾಗಿ ಜಲಬಾಧೆ ತೀರಿಸಲು ಕೆಳಗೆ ಇಳಿಯುವುದು ತ್ರಾಸದಾಯಕ. ಅದಕ್ಕಾಗಿ ವಿಶೇಷ ಪೊಟ್ಟಣವನ್ನೇ ನೀಡಲಾಗುತ್ತದೆ.

‘ಕಮಾನು ಸೇತುವೆಗೆ ಶ್ರೇಷ್ಠ ಗುಣಮಟ್ಟದ ಇ 410 ಮತ್ತು ಇ 250 ಸಿ ಗ್ರೇಡ್ ದರ್ಜೆಯ ಉಕ್ಕನ್ನು ಬಳಸಲಾಗಿದೆ. ಸೇತುವೆಗೆ ಬಳಸಿದ ಉಕ್ಕಿನ ಪ್ರಮಾಣ 10,600 ಟನ್. ಉಕ್ಕಿನ ಫ್ಯಾಬ್ರಿಕೇಷನ್ ಕೆಲಸವೂ ಶ್ರೇಷ್ಠ ಮಟ್ಟದಲ್ಲಿರುವುದನ್ನು ಖಾತರಿಪಡಿಸಿಕೊಳ್ಳಲಾಗಿದೆ. ಪ್ರತಿಯೊಂದು ಕೆಲಸದ ಪರೀಕ್ಷೆಗೂ ಪ್ರಮಾಣೀಕರಣಕ್ಕೆ ಪ್ರಯೋಗಾಲಯವಿದೆ’ ಎಂದು ವಿವರಿಸುತ್ತಾರೆ ವಿಶ್ವಮೂರ್ತಿ.

‘ಗುಡ್ಡಗಾಡು ಪ್ರದೇಶವಾಗಿರುವ ಕಾರಣ ಇಲ್ಲಿನ ಸಂಪರ್ಕ ರಸ್ತೆಯೂ ಬಹಳ ಇಕ್ಕಟ್ಟಿನದ್ದು. ಕೆಲವು ಕಡೆ ವಾಹನ ಸಂಚಾರ ದುಸ್ತರವೆನಿಸುವಷ್ಟು ಕಿರಿದಾಗಿದೆ. ಇಂಥ ರಸ್ತೆಯಲ್ಲಿ ಕಾಮಗಾರಿಗೆ ಬೇಕಾಗಿದ್ದ ಸರಕು-ಸಾಮಗ್ರಿಗಳನ್ನು ಒಯ್ಯುವುದೇ ದೊಡ್ಡ ಸವಾಲಾಗಿತ್ತು. ಮಳೆಗಾಲದಲ್ಲಂತೂ ಮಣ್ಣಿನ ಗುಡ್ಡಗಳು ಜರಿದು ಸಂಚಾರ ಸ್ಥಗಿತಗೊಳ್ಳುವುದು ಇಲ್ಲಿ ಸಾಮಾನ್ಯ’ ಎಂದು ವಿವರಿಸುತ್ತಾರೆ.

ಈ ಯೋಜನೆ ಆರಂಭಿಸುವಾಗ, ಕಾಮಗಾರಿ ಸ್ಥಳಕ್ಕೆ ಸರಿಯಾದ ರಸ್ತೆ ಸಂಪರ್ಕವೂ ಇರಲಿಲ್ಲ. 15 ಕಿ.ಮೀ. ರಸ್ತೆಯನ್ನು ಗುತ್ತಿಗೆ ಪಡೆದುಕೊಂಡ ಸಂಸ್ಥೆಯೇ ನಿರ್ಮಿಸಬೇಕಾಯಿತು.

ಒಂದೂ ಅವಘಡವಿಲ್ಲ: ‘ಕಣಿವೆಯಿಂದ ಬೀಸುವ ಜೋರಾದ ಗಾಳಿಯ ಒತ್ತಡ ತಡೆದುಕೊಳ್ಳಲು ಸೇತುವೆಯ ಎರಡೂ ಕಡೆ ವಿಂಡ್ ಪ್ಯಾನೆಲ್‌ಗಳನ್ನು ಜೋಡಿಸಲಾಗಿದೆ. ಇವು ಗಾಳಿಯ ಒತ್ತಡದ ದಿಕ್ಕು ಬದಲಾಗುವಂತೆ ಮಾಡುತ್ತವೆ’ ಎಂದು ಕೆಲಸದ ನಡುವೆಯೇ ಮಾತಿಗೆ ಸಿಕ್ಕಿದ ಸೇಲಂ ಜಿಲ್ಲೆಯ ಹಿರಿಯ ಎಂಜಿನಿಯರ್ ಗೋವಿಂದರಾಜು ಹೇಳಿದರು.

‘ಈ ಪ್ರದೇಶ ಭೌಗೋಳಿಕವಾಗಿ ಆಯಕಟ್ಟಿನಿಂದ ಕೂಡಿದ್ದರೂ, ಇದುವರೆಗೆ ಕಾಮಗಾರಿಯಲ್ಲಿ ಒಂದೂ ಅವಘಡ ನಡೆದಿಲ್ಲ. ಕಾರ್ಮಿಕರು ಒಂದೇ ಕುಟುಂಬದವರಂತೆ ಕೆಲಸ ಮಾಡುತ್ತಿದ್ದಾರೆ’ ಎನ್ನುತ್ತಾರೆ 12 ವರ್ಷಗಳಿಂದ ಉಗ್ರಾಣ ಮತ್ತು ಖರೀದಿ ವಿಭಾಗದ ಮುಖ್ಯಸ್ಥರಾಗಿರುವ ಮಂಗಳೂರಿನ ಕೆ.ಶಿವಾನಂದ ಭಟ್.

2004ರಲ್ಲಿ ಕೆಲಸ ಆರಂಭವಾದರೂ 2014ರಿಂದ ವೇಗ ಪಡೆಯಿತು. ನಿರ್ಮಾಣ ಸ್ಥಳದಲ್ಲಿ ವಿವಿಧ ಕಡೆ ಸಿಸಿಟಿವಿ ಕ್ಯಾಮೆರಾ ಕಣ್ಗಾವಲು ಇದೆ. ಕಾಮಗಾರಿ ಪ್ರಗತಿಯ ಬಗ್ಗೆ ದೆಹಲಿಯಿಂದಲೇ ನಿಗಾ ವಹಿಸಲಾಗುತ್ತಿದೆ. ಗಣ್ಯರ ಭೇಟಿಗೆ ಅನುಕೂಲ ಕಲ್ಪಿಸಲು ಹೆಲಿಪ್ಯಾಡ್ ಕೂಡ ನಿರ್ಮಾಣವಾಗಿದೆ.

ಎಲ್ಲವೂ ಅಂದುಕೊಂಡಂತೆ ನಡೆದರೆ ಕೌರಿ ಮತ್ತು ಬಕ್ಕಲ್ ಕಡೆಯಿಂದ ಕಮಾನು ಸೇತುವೆಯ ಮೇಲೆ ರೈಲು ಹಳಿ ಜೋಡಿಸುವ ಕೆಲಸ ಈ ವರ್ಷದ ಆಗಸ್ಟ್‌ನಲ್ಲಿ ಪೂರ್ಣಗೊಳ್ಳಬೇಕಿದೆ. 2023ರ ಮಾರ್ಚ್ ವೇಳೆಗೆ ರೈಲು ಹಳಿಯು ಸಂಚಾರಕ್ಕೆ ಸಜ್ಜುಗೊಳ್ಳುತ್ತದೆ ಎಂಬ ಆಶಾವಾದ ರೈಲ್ವೆ ಅಧಿಕಾರಿಗಳದ್ದು.

ಈ ಯೋಜನೆ ಪೂರ್ಣಗೊಂಡಲ್ಲಿ ದೇಶದ ಯಾವುದೇ ಭಾಗದಿಂದ ಜಮ್ಮು-ಕಾಶ್ಮೀರದ ರಾಜಧಾನಿ ಶ್ರೀನಗರಕ್ಕೆ ರೈಲು ಸಂಪರ್ಕ ಸಾಧ್ಯವಾಗಲಿದೆ.

ಇಲ್ಲಿನ ಜನರ ಜೊತೆ, ಪ್ರವಾಸಿಗರಿಗೂ ಈ ರೈಲು ಮಾರ್ಗದಿಂದ ಅನುಕೂಲವಾಗಲಿದೆ. ಜಮ್ಮು ಭಾಗದಲ್ಲಿ ಜರಿಯುವ ಗುಡ್ಡ, ಕಾಶ್ಮೀರ ಕಣಿವೆಯಲ್ಲಿ ಸುರಿಯುವ ಹಿಮದಿಂದ ರಸ್ತೆ ಮೂಲಕ ಸಂಚಾರ ವ್ಯತ್ಯಯಗೊಳ್ಳುವುದು ಸಾಮಾನ್ಯ. ಜಮ್ಮುವಿನಿಂದ ಶ್ರೀನಗರಕ್ಕೆ ರಸ್ತೆ ಮಾರ್ಗದ ದೂರ 268 ಕಿಲೊ ಮೀಟರ್. ಆದರೆ ಈ ದೂರ ಕ್ರಮಿಸಲು ಕೆಲವೊಮ್ಮೆ ಹವಾಮಾನ ವೈಪರೀತ್ಯದಿಂದಾಗಿ ಎರಡು-ಮೂರು ದಿನಗಳು ಹಿಡಿಯುವುದೂ ಇದೆ. ಈ ಮಾರ್ಗದಲ್ಲಿ ರೈಲು ಸಂಚಾರ ಆರಂಭವಾಗುವ ಕ್ಷಣ ಭಾರತೀಯ ರೈಲ್ವೆ ಇತಿಹಾಸದಲ್ಲಿ ಸುವರ್ಣ ಗಳಿಗೆ ಆಗುವುದರಲ್ಲಿ ಅನುಮಾನವಿಲ್ಲ.



ಕಾಮನಬಿಲ್ಲಿನಾಕಾರದ ಸೇತುವೆಯ ಬಳಿಯಿಂದ ಕಣಿವೆಗಳಲ್ಲಿ ಹರಿಯುವ ಚೆನಾಬ್ ನದಿ ನೋಡುವುದೇ ಸುಂದರ...



ಸೇತುವೆ ಮೇಲೆ ಹಳಿ ನಿರ್ಮಾಣಕ್ಕೆ ಸಾಗಿದ ಸಿದ್ಧತೆ



ಎಸ್.ಎಂ.ವಿಶ್ವಮೂರ್ತಿ

ಮುನ್ನೋಟ 09-01-2022 ರಿಂದ 15-01-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಹಿರಿಯರೊಂದಿಗೆ ಶಾಂತಿಯಿಂದ ವ್ಯವಹರಿಸುವುದು ಉತ್ತಮ. ಅನಿರೀಕ್ಷಿತ ಖರ್ಚು ಹೆಚ್ಚಾಗುವ ಸಾಧ್ಯತೆ ಇದೆ. ಸಾಮಾಜಿಕ ಕಾರ್ಯಕ್ರಮಗಳನ್ನು ಮಾಡುವವರು ಜನರೊಂದಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದ್ದೇ ಇರುತ್ತದೆ. ನಿಮ್ಮ ಪ್ರತಿಭೆಗೆ ತಕ್ಕ ಅವಕಾಶ ಒದಗಿ ಬರುತ್ತದೆ. ಕೃಷಿಕಾರ್ಯಗಳಲ್ಲಿ ಪ್ರಗತಿ ಇರುತ್ತದೆ. ಫ್ಯಾಶನ್ ಡಿಸೈನ್ ಮಾಡುವವರಿಗೆ ಬೇಡಿಕೆ ಹೆಚ್ಚಾಗುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ವಿದೇಶಿ ವ್ಯವಹಾರಗಳಿಂದ ಉತ್ತಮ ಲಾಭವನ್ನು ನಿರೀಕ್ಷಿಸಬಹುದು. ಮುಂದಾಲೋಚನೆಯಿಂದ ಹೂಡಿದ ಹಣದಲ್ಲಿ ನಿರೀಕ್ಷಿತ ಲಾಭವನ್ನು ಕಾಣಬಹುದು. ಸ್ವಂತ ಉದ್ದಿಮೆಯನ್ನು ನಡೆಸುತ್ತಿರುವವರಿಗೆ ಉತ್ತಮ ಬೆಳವಣಿಗೆ ಇರುತ್ತದೆ. ರಕ್ಷಣಾ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವವರಿಗೆ ಬಿಡುವಿಲ್ಲದ ಕೆಲಸಗಳು ಬರಬಹುದು. ಹಣದ ಒಳಹರಿವು ಸಾಮಾನ್ಯಗತಿಯಲ್ಲಿ ಇದ್ದರೂ ತೊಂದರೆಯೇನಿಲ್ಲ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಮಾನಸಿಕ ಉದ್ವೇಗದಿಂದ ಯಾವುದೇ ಕೆಲಸಗಳಲ್ಲಿ ತೊಡಗಿಕೊಳ್ಳುವುದು ಬೇಡ. ಬಂಧುಗಳ ನಡುವೆ ಕೆಲವು ಜಿಜ್ಞಾಸೆಗಳು ಮೂಡಬಹುದು. ಹೊಸ ವಸ್ತ್ರಗಳ ಸಗಟು ದಾಸ್ತಾನುಗಾರರು ಎಚ್ಚರಿಕೆಯನ್ನು ವಹಿಸಬೇಕಾದ ಸಂದರ್ಭವಿದೆ. ಉದ್ಯೋಗಸ್ಥರಿಗೆ ಯಾವುದೋ ರೀತಿಯ ಶುಭಫಲವಿರುತ್ತದೆ. ಲಲಿತ ಕಲಾವಿದರುಗಳಿಗೆ ಹೆಚ್ಚಿನ ಕೆಲಸ ಒದಗಿಬರುತ್ತದೆ. ಧನ ಆದಾಯ ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಆರ್ಥಿಕ ಸಂಕಷ್ಟಗಳು ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತವೆ. ಉದ್ಯೋಗದಲ್ಲಿರುವವರಿಗೆ ಅಧಿಕಾರ ವರ್ಗದವರಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ಕೃಷಿಕರು ತಾವು ಬೆಳೆಯುವ ಬೆಳೆಯ ಆಯ್ಕೆಯನ್ನು ಸರಿಯಾಗಿ ಮಾಡಿಕೊಳ್ಳುವುದು ಉತ್ತಮ. ನಿಮ್ಮ ವ್ಯವಹಾರ ವಿಸ್ತರಣೆಗೆ ಅನುಕೂಲಕರವಾದ ವಾತಾವರಣ ದೊರೆಯುವ ಸಾಧ್ಯತೆ ಇದೆ. ಹೆಚ್ಚು ಹಣ ಖರ್ಚಾಗುವ ಸಾಧ್ಯತೆಗಳಿವೆ.

ಸಿಂಹ — ಮಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ನೌಕರರಿಗೆ ಉದ್ಯೋಗದ ಸ್ಥಳ ಬದಲಾವಣೆ ಆಗುವ ಸಾಧ್ಯತೆಗಳಿವೆ. ಮನೆಯಲ್ಲಿನ ಸಮಸ್ಯೆಗಳಿಗೆ ಸುಲಭವಾಗಿ ಪರಿಹಾರವನ್ನು ಕಂಡುಕೊಳ್ಳುವಿರಿ. ಮಹಿಳಾ ಉದ್ಯೋಗಿಗಳಿಗೆ ಉದ್ಯೋಗದಲ್ಲಿ ಒಳ್ಳೆಯ ಸ್ಥಾನ ಸಿಗುವ ಸಾಧ್ಯತೆಗಳಿವೆ. ನಿಮ್ಮ ಬೇಜವಾಬ್ದಾರಿತನದಿಂದ ಖರ್ಚುಗಳು ಹೆಚ್ಚಾಗುವ ಸಾಧ್ಯತೆಗಳಿವೆ. ಸಮೂಹದಲ್ಲಿ ಮಾತನಾಡುವಾಗ ಸಾಧಕ-ಬಾಧಕಗಳನ್ನು ತೂಗಿ ನೋಡಿ ಮಾತನಾಡಿರಿ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿ ಇದ್ದು ಹೆಚ್ಚಿನ ಲಾಭಾಂಶವನ್ನು ಕಾಣಬಹುದು. ನ್ಯಾಯಾಲಯದ ತೀರ್ಪು ಮುಂದೂಡಿಕೆಯಾಗುವ ಸಾಧ್ಯತೆ ಇದೆ. ಉದ್ಯೋಗ ಸ್ಥಳದಲ್ಲಿ ಅನುಕೂಲಕರ ವಾತಾವರಣವಿದ್ದರೂ ಒಳಗೊಳಗೆ ನಿಮಗೆ ಅತೃಪ್ತಿ ಇರುತ್ತದೆ. ಕಾಡುತ್ತಿದ್ದ ಒಂದೆರಡು ಸಮಸ್ಯೆಗಳು ಪರಿಹಾರವಾಗಿ ಮನಸ್ಸಿಗೆ ಸಂತೋಷವಾಗುವುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖ 1,2,3

ಕೃಷಿಕರ ಆರ್ಥಿಕ ಸ್ಥಿತಿಯಲ್ಲಿ ಪ್ರಗತಿಯನ್ನು ಕಾಣಬಹುದು. ನಿಮ್ಮ ಶತ್ರುಗಳನ್ನು ಈಗ ನೀವು ಎದುರಿಸಬಹುದು. ಪ್ರಿಯವ್ಯಕ್ತಿಗಳ ಆಗಮನದಿಂದ ಮನಸ್ಸಿಗೆ ಉಲ್ಲಾಸವಾಗುವುದು. ಕೆಲವು ಶತ್ರುಗಳು ತಾವಾಗಿಯೇ ಬಯಸಿ ಮಿತ್ರರಾಗುವರು. ಬಂಧುಗಳ ಆಸ್ತಿಯನ್ನು ಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ವಿದ್ಯಾರ್ಥಿಗಳಿಗೆ ಉತ್ತಮ ಸಾಧನೆಯ ಅವಕಾಶ ಒದಗಿಬರುತ್ತದೆ.

ವೃಶ್ಚಿಕ — ವಿಶಾಖ 4 ಅನೂರಾಧ, ಜ್ಯೇಷ್ಠ

ಕೆಲವು ಹಿರಿಯ ಉದ್ಯಮಿಗಳು ತಮ್ಮ ನಡೆನುಡಿಯ ಬಗ್ಗೆ ಎಚ್ಚರದಿಂದ ಇರುವುದು ಬಹಳ ಒಳ್ಳೆಯದು. ಆರ್ಥಿಕ ಮುಗ್ಗಟ್ಟು ದೂರವಾಗಿ ಆರ್ಥಿಕ ಸಬಲತೆ ಬರುವ ಸಾಧ್ಯತೆಗಳಿವೆ. ಆಸ್ತಿ ವಿವಾದಗಳಿಂದ ಮುಕ್ತಿ ದೊರೆಯಬಹುದು. ಹಿರಿಯರ ಆರೋಗ್ಯದಲ್ಲಿ ಏರುಪೇರಾದರೂ ಭಯವಿಲ್ಲ. ಸಹವರ್ತಿಗಳಿಗೆ ಉತ್ಸಾಹ ತುಂಬಿ ಕೆಲಸ ಮಾಡಿಸುವಿರಿ. ಹೊಸ ವಾಹನ ಮಾರಾಟಗಾರರಿಗೆ ವ್ಯವಹಾರ ಹೆಚ್ಚುತ್ತದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ಮಂದಗತಿಯಲ್ಲಿ ಇದ್ದ ನಿಮ್ಮ ಕೆಲಸ ಕಾರ್ಯಗಳು ವೇಗವನ್ನು ಪಡೆಯುವವು. ಹಿರಿಯರು ತಮ್ಮ ಸ್ವಯಂಕೃತ ಅಪರಾಧಗಳಿಂದ ಸಮಸ್ಯೆಗಳನ್ನು ಸೃಷ್ಟಿಸಿಕೊಳ್ಳುವ ಸಾಧ್ಯತೆಗಳಿವೆ, ಎಚ್ಚರ. ಆಯುಧ ವ್ಯಾಪಾರಿಗಳು ಅವರ ಗಿರಾಕಿಗಳ ಬಗ್ಗೆ ಹೆಚ್ಚಿನ ಎಚ್ಚರ ಹಾಗೂ ಮಾಹಿತಿ ಸಂಗ್ರಹಣೆ ಮಾಡುವುದು ಬಹಳ ಮುಖ್ಯ. ಅಧ್ಯಯನದಲ್ಲಿ ಆಸಕ್ತಿ ಮೂಡಿ ಹೊಸ ವಿಚಾರಗಳನ್ನು ಕಲಿಯಲು ಯತ್ನಿಸುವಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಆದಾಯ ಮತ್ತು ಉಳಿತಾಯದಲ್ಲಿ ಪ್ರಗತಿಯನ್ನು ಕಾಣಬಹುದು. ಹಿರಿಯರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ಮಂಗಳ ಕಾರ್ಯಗಳ ಬಗ್ಗೆ ಮನೆಯಲ್ಲಿ ಮಾತಾಗಬಹುದು. ಕಾರ್ಯಕ್ಷೇತ್ರದಲ್ಲಿ ಸಹೋದ್ಯೋಗಿಗಳಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ಲೇವಾದೇವಿ ವ್ಯವಹಾರಗಳು ಸದ್ಯ ಬೇಡವೇ ಬೇಡ. ಕೃಷಿಭೂಮಿಯ ವ್ಯವಹಾರಗಳಲ್ಲಿ ನಿಮಗೆ ಹೆಚ್ಚಿನ ಲಾಭ ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಆರ್ಥಿಕ ಸ್ಥಿತಿಯಲ್ಲಿ ಸ್ವಲ್ಪ ಸುಧಾರಣೆಯನ್ನು ಕಾಣಬಹುದು. ಸಾಮಾಜಿಕ ಕಾರ್ಯಗಳಲ್ಲಿ ಯಶಸ್ಸನ್ನು ಕಂಡು ಅದರಲ್ಲಿ ಬರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ನಿರ್ಮಾಣ ಕಾರ್ಯದಲ್ಲಿ ತೊಡಗಿರುವವರಿಗೆ ಹೆಚ್ಚಿನ ಪ್ರಗತಿ ಇರುತ್ತದೆ. ಭಾಷಾಂತರ ಮಾಡುವವರಿಗೆ ಹೆಚ್ಚಿನ ಅವಕಾಶಗಳು ದೊರೆತು ಸಂಪಾದನೆ ಹೆಚ್ಚುವ ಸಾಧ್ಯತೆ ಇದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ವಾರದ ಆರಂಭದಲ್ಲಿ ಅತ್ಯಂತ ಉಲ್ಲಾಸ ಇರುತ್ತದೆ. ಆಸಕ್ತಿ ಹೊಂದಿದ್ದ ಕೃಷಿಭೂಮಿಯನ್ನು ಕೊಂಡು ಸಂತೋಷ ಪಡುವಿರಿ. ಮಕ್ಕಳ ಅಭಿವೃದ್ಧಿಗಾಗಿ ಹೆಚ್ಚು ಹಣ ಖರ್ಚು ಮಾಡುವಿರಿ. ಅಪರೂಪದ ವಸ್ತುಗಳ ಖರೀದಿ ಬಗ್ಗೆ ಆಸಕ್ತಿ ಬೆಳೆಯುತ್ತದೆ. ವೃತ್ತಿಯಲ್ಲಿನ ಸಮಸ್ಯೆಗಳನ್ನು ಪರಿಹರಿಸಿಕೊಂಡು ಪುನಃ ವೃತ್ತಿಗೆ ಹೋಗುವಿರಿ. ವಿದ್ಯಾರ್ಥಿಗಳಿಗೆ ಅವರ ಅಭ್ಯಾಸದಲ್ಲಿ ಪ್ರಗತಿ ಇರುತ್ತದೆ.

ಪದಬಂಧ 2721



ಮೇಲಿನಿಂದ ಕೆಳಕ್ಕೆ

1. ಆತುರದ ಜೊತೆ ಕಳವಳದ ಆತಂಕ 3
2. ಜ್ಯೋತಿಷ್ಯದಲ್ಲಿ ಮನಸ್ಸನ್ನು ಉಂಟುಮಾಡುವವ 5
3. ಶಿವನ ಕೈಲಿರುವ ತಲೆಬುರುಡೆ 3
4. ಕೃಷ್ಣ ರಾಧಿಕೆಯರ ಜೇನಿನ ತೋಟ 4
5. ರಾಜಕೀಯದಲ್ಲಿ ಇಂದು ಬೇಕಾಗುವ ಕುಲದ ಶಕ್ತಿ 4
6. ನಾಡ ಮಂದಿಯಿಂದ ಬಂದ ರಂಗ ಪ್ರದರ್ಶನ 7
8. ಬಿಸಿಯೇರಿದ ನದಿಯ ನೀರಿನ ಭರವಸೆ 7
13. ವಾಯು ಪುತ್ರನ ಗಾಳಿ ಕೆಳಗಿನಿಂದ ಮೇಲಕ್ಕೆ ಬೀಸಿದೆ 3
14. ರಾಷ್ಟ್ರಗೀತೆಯಲ್ಲಿ ಮಂದಿಯ ಅಂತರಂಗ 4
16. ಮತ್ತೊಬ್ಬರನ್ನು ಹತ್ತಿಕ್ಕುವ ಪ್ರವೃತ್ತಿ 5
18. ಮಾರ್ಗವನ್ನು ತೋರಿದ ಕಾವ್ಯದ ದೊರೆ 4
21. ರೋಗದ ಜೊತೆ ಅಂಟಿದ ಜಡ್ಡು 3
23. ವಸಂತದಲ್ಲಿ ಅರಳಿದ ಹೂವು 3

ಎಡದಿಂದ ಬಲಕ್ಕೆ

1. ರೀತಿಬದ್ಧ ಕೆಲಸ ಯೋಜಿತ ರೀತಿಯ ಆಚರಣೆ 4
3. ಈ ಯುಗದ ಶಕ್ತಿಶಾಲಿ ಪಾಂಡವ 4
5. ಜಾರತನದಲ್ಲಿ ಹುಟ್ಟಿದವ 3
7. ಕವನಗಳನ್ನು ಹಾರದಂತೆ ಪೋಣಿಸಲಾಗಿದೆ 5
9. ಗರ ಬಡಿದಿರುವ ಪಟ್ಟಣ ಪ್ರದೇಶ 3
10. ನೀತಿ ನುಡಿ ನೀಡಿದ ಆಂಧ್ರ ಕವಿ 3
11. ಕರಿ ಹಲಗೆಗೆ ಸೂಕ್ತ ಬರಹ ಸಾಧನ 3
12. ಬಂಗಾರದ ಬಟ್ಟೆ ಉಟ್ಟ ಚಲುವೆ 5
15. ಶಬ್ಧ ಮೋಡಿಯ ಸಿರಿತನ ತಲೆದೂಗುವಂತೆ ಮಾಡಬಹುದು 5
17. ಪಾಲಕರು ಪೋಷಿಸಿ ಮುದ್ದಾಗಿ ಬೆಳಸುವುದು 3
18. ಮೋಸ ವಂಚನೆ ಪಟವಾಗಿ ಹಾರಿದೆ 3
19. ಶ್ರೇಷ್ಠನಾದ ಈಶ್ವರ 3
20. ಬಹಳ ದಯೆಯುಳ್ಳ ತಾಯಂತಹ ಆಂತರ್ಯ 5
22. ಭಾರತಕ್ಕೆ ಬಂದು ಆಕ್ರಮಿಸಿದ ಗ್ರೀಕ 3
24. ಗೆಲುವಿನ ಹಾಡು 4
25. ದರದಲ್ಲಿ ಸಿಗುವ ಕಡಿತ 4

ಪದಬಂಧ ಉತ್ತರ -2720

ಮೇಲಿಂದ ಕೆಳಕ್ಕೆ

1. ಸವಿನೆನಪು 2.ಮದ್ದಾನೆ 3.ತರಗೆಲೆ 4.ಸುಮಾತ್ರ 6.ಮಹಾಪುರಾಣ 8.ಪಲುಕು 9.ಅನಧಿಕೃತ 10.ಇಂಧನ 11.ನಿಜಸಂಗತಿ 12.ಶಮನ 15.ವರ್ತುಲ 17.ಹರಸಮಯ 18.ಸಂಚಯನ 19.ಬಾಲಿಶ 20.ಅಣಕು

ಎಡದಿಂದ ಬಲಕ್ಕೆ

1.ಸಮಕ್ಷಮ 3.ತಲೆಕಾಯಿಸು 5.ನೆಲಮನೆ 7.ಗೆಳತಿಪತ್ರ 9.ಅಲೆ 10.ಇಂಪುಕಂಪು 11.ನಿರಂಕುಶ 13.ರಾಜಾಧಿರಾಜ 14.ನವಗಣ 16.ಸಂವಹನ 18.ಸಂತ 19.ಬಾಲಪ್ರಪಂಚ 20.ಅತಿರಸ 21.ಶತವಂದನ 22.ಕುವಲಯ

'ಅಪರಿಚಿತ' ಜಗತ್ತಿನ ಭಾವಲೋಕ

ಎಸ್. ದಿವಾಕರ್

'ಸ್ಟ್ರೇಂಜರ್', 'ಔಟ್‌ಸೈಡರ್' ಎಂಬ ಎರಡು ಹೆಸರುಗಳಲ್ಲಿ ಇಂಗ್ಲಿಷಿಗೆ ಅನುವಾದಗೊಂಡಿರುವ ಫ್ರೆಂಚ್ ಲೇಖಕ ಆಲ್ಬರ್ಟ್ ಕಮೂನ ಕಾದಂಬರಿ ಈಗ 'ಅಪರಿಚಿತ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಬಂದಿದೆ. ಪ್ರಕಾಶ್ ನಾಯಕ್ ಅನುವಾದಿಸಿರುವ ಈ ಕೃತಿ ಒಂದು ಬೀಚಿನಲ್ಲಿ ಆತ್ಮರಕ್ಷಣೆಗಾಗಿ ಅರಬನೊಬ್ಬನನ್ನು ಕೊಲ್ಲುವ ಪ್ಯಾಟ್ರಿಸ್ ಮರ್ಸೋನ ಕತೆ ಹೇಳುತ್ತದೆ.

ಮರ್ಸೋಗೆ ವಾಸ್ತವ ಜಗತ್ತಿನಲ್ಲಿ 'ಅಸ್ತಿತ್ವ'ವಿಲ್ಲ; ಅವನು ಸುಮ್ಮನೆ ತನ್ನ ಮನಸ್ಸಿನ ಆವೇಗಕ್ಕೆ ತಕ್ಕಂತೆ ಪ್ರತಿಕ್ರಿಯಿಸುತ್ತಾನಷ್ಟೆ. ಅವನು ಕೊಲೆಮಾಡುವುದು ಒಂದು ಬೀಚು, ಒಬ್ಬ ಅರಬ, ಬಿಸಿಲು, ಕಿಸೆಯಲ್ಲಿರುವ ಒಂದು ರಿವಾಲ್ವರ್ - ಇಂಥ ಸನ್ನಿವೇಶಗಳ ಮೊತ್ತದಿಂದ. ಕೋರ್ಟಿನಲ್ಲಿ ಪಾಟೀ ಸವಾಲಿನ ಬಗೆಗಾಗಲೀ, ತನ್ನನ್ನು ಕುರಿತು ರೂಪಿಸಲಾಗಿರುವ ಚಿತ್ರದ ಬಗೆಗಾಗಲೀ, ಅಷ್ಟೇಕೆ, ತೀರ್ಪಿನ ಬಗೆಗಾಗಲೀ ಕಿಂಚಿತ್ತೂ ತಲೆಕೆಡಿಸಿಕೊಳ್ಳದೆ ತನ್ನದೇ ಹಿರಂಗಿನಲ್ಲಿ ಭಾಗವಹಿಸುವ ಅವನು ಅಪರಾಧಿ ತಾನಲ್ಲವೇ ಅಲ್ಲ ಎನ್ನುವಂತೆ ಒಂದೇ ಒಂದು ಮಾತಿಲ್ಲದೆ ಗಲ್ಲಿಗೇರುವವನು.

ಅರ್ಥರಹಿತ ಸಾಮಾಜಿಕ ವಿಧಿಗಳಿಗೆ ಸೊಪ್ಪುಹಾಕದೆ, ತನ್ನ ತಾಯಿಯ ಸಾವಿಗೆ ಶೋಕಿಸದೆ, ಅಪರಾಧವೊಂದಕ್ಕೆ ಸಂಬಂಧಪಟ್ಟವನಾಗಿದ್ದೂ ತಾನೊಬ್ಬ ಮುಗ್ಧ ಅಥವಾ ಅಪರಾಧಿ ಎಂದು ಒಪ್ಪಿಕೊಳ್ಳದೆ ಸಾವು ಬದುಕುಗಳ ನಡುವಣ ತೂಗಾಡುವ ಸ್ಥಿತಿಯಲ್ಲಿ ತನ್ನದೇ ಮೌಲ್ಯಗಳನ್ನು ಕಂಡುಕೊಳ್ಳುವ ಮರ್ಸೋ ಕೊಲೆಪಾತಕಿಯೆ? ಕೊಲೆಯೆಂದರೇನು? ಅಪರಾಧಪ್ರಜ್ಞೆಯ ಅರ್ಥವಾದರೂ ಏನು? ಸಮಾಜವೂ ನ್ಯಾಯ ವ್ಯವಸ್ಥೆಯೂ ಬಲಿಪಶುವಾಗಿರುವ ಅವನನ್ನೇ ಅಪರಾಧಿ ಎಂದು ತೀರ್ಮಾನಿಸುತ್ತವೆ; ಅವ್ಯಕ್ತ ಶಕ್ತಿಗಳು ಒಟ್ಟುಗೂಡಿ ಅವನ ಪತನವನ್ನು ಸನ್ನಿಹಿತಗೊಳಿಸುತ್ತವೆ. ಉಪೇಕ್ಷಿಸುವ ಜಗತ್ತಿನಲ್ಲಿ ಹುಟ್ಟಿದ ಅವನನ್ನು ಜಗತ್ತು ಅಷ್ಟೇ ಉಪೇಕ್ಷೆಯಿಂದ ತಿರಸ್ಕರಿಸುತ್ತದೆ.

ಮರ್ಸೋನನ್ನು ಮನೋವೈಜ್ಞಾನಿಕ ನೆಲೆಯಲ್ಲಿ ಪರಿಶೀಲಿಸುವ, ಅಲ್ಜಿಯರ್ಸ್‌ನ ವಾತಾವರಣವನ್ನು ಅದ್ಭುತವಾಗಿ ಹಿಡಿದುಕೊಡುವ ಈ ಕೃತಿ ಅವನ ಹಿರಂಗಿಗೂ ಅವನ ಅಪರಾಧಕ್ಕೂ ನಡುವೆ ಎಷ್ಟು ದೊಡ್ಡ ಕಂದರವಿದೆ ಎನ್ನುವುದನ್ನು ಅತ್ಯಂತ ನಿರ್ದಯವಾಗಿ ಚಿತ್ರಿಸುತ್ತದೆ. ಜೊತೆಗೆ ಸೂಕ್ಷ್ಮ ವಿಡಂಬನೆಯ ಮೂಲಕ ಖಾಸಗಿ ಘಟನೆಗಳು ಪಡೆದುಕೊಳ್ಳುವ ಸಾರ್ವತ್ರಿಕ ಆಯಾಮಗಳನ್ನೂ ಬಹಿರಂಗಗೊಳಿಸುತ್ತದೆ.

'ಅಪರಿಚಿತ' ಅನ್ಯೋಕ್ತಿಯೇನಲ್ಲ; ಅದು ಯಾವುದರ ಸಂಕೇತವೂ ಅಲ್ಲ. ಓದುಗನಾದವನು ನೀರಸ ಎನ್ನಿಸಬಹುದಾದ ಇಲ್ಲಿನ ನಿರೂಪಣೆಯಿಂದ ಹೇಗೆ ತಾನೆ ತೃಪ್ತನಾಗಬಲ್ಲ? ಲೇಖಕನ ಉದ್ದೇಶವೇನೆಂದು ಹುಡುಕಾಡದೆ ಅವನು ಇರುವುದಾದರೂ ಹೇಗೆ? ಅಥವಾ ಮರ್ಸೋನಲ್ಲಿ ತನ್ನನ್ನೇ ನೋಡಿಕೊಳ್ಳದೆ ಉಳಿಯುವುದುಂಟೆ? ಅರೆ ಅನಾಮಧೇಯನಂತಿರುವ ಈ ಅಸಾಮಾನ್ಯ ಹೀರೊನಿಂದಾಗಿಯೇ ಓದುಗ ಈ ಪಾತ್ರದ ಅಂತರಂಗಕ್ಕಿಳಿಯದೆ, ಅವನ ವಿಧಿಯನ್ನು ತನ್ನದೇ ವಿಧಿಯ ಜೊತೆ, ತನ್ನದೇ ಕತೆಯ ಜೊತೆ ಹೋಲಿಸಿಕೊಳ್ಳದೆ ಇರಲಾರ.

ಕಮೂ ಇಲ್ಲಿ ತೀರ ಸಾಮಾನ್ಯವಾದ ಸಾಮಾಜಿಕ ಸನ್ನಿವೇಶವನ್ನು ಚಿತ್ರಿಸುವುದಕ್ಕಾಗಿ ತನ್ನದೇ ಬಣ್ಣಗಳನ್ನು ಉಪಯೋಗಿಸುತ್ತಾನೆ. ಆ ಬಣ್ಣಗಳಲ್ಲಿ ಒಡಮೂಡುವ ಬೆಳಕು ಪ್ರತಿಯೊಬ್ಬ ವ್ಯಕ್ತಿಗೂ ಸಮ್ಮತವಾದದ್ದು. ಕತೆಯಲ್ಲಿ ಸೂಚ್ಯವಾಗಿರುವ ನೈತಿಕತೆ ಕಮೂವೇ ಬರೆದ 'ಮಿಥ್ ಆಫ್ ಸಿಸಿಫಸ್' ಎಂಬ ಪ್ರಬಂಧದ ದಾರ್ಶನಿಕತೆಯನ್ನು ಸಮರ್ಥಿಸುವಂತಿದೆ. ಆ ದಾರ್ಶನಿಕ ತತ್ವ ಜಗತ್ತನ್ನು 'ಅಸಂಗತ' ಎಂದು ನೋಡುವ, ಜೀವನವನ್ನು ನಿರಾಶೆಯಂತೆ ಪರಿಭಾವಿಸುವ ತತ್ವ. ಕಮೂ ದೃಷ್ಟಿಯಲ್ಲಿ 'ಅಪರಿಚಿತ'ವಾದದ್ದೆಂದರೆ ಇದೇ ಅರ್ಥ.

ಈ ಕಾದಂಬರಿಯ ಪ್ರಾರಂಭದಲ್ಲಿರುವ ಪೀಠಿಕೆಯಂಥ ಬರಹದಲ್ಲಿ ಪ್ರಕಾಶ್ ನಾಯಕರೇ ಬರೆದಿರುವಂತೆ, 'ಎಲ್ಲ ಘಟನೆಗಳಿಗೂ ಕಾರ್ಯ-ಕಾರಣ ಸಂಬಂಧ ಹುಡುಕುವ ಅವಸರದಲ್ಲಿ ಹತಾಶ ಮನಸ್ಸು ಅಲೌಕಿಕ ಪೂರ್ವಯೋಜಿತ ವ್ಯವಸ್ಥೆಯೊಂದನ್ನು ಕಲ್ಪಿಸಿಕೊಂಡು, ಅದನ್ನೇ ಸತ್ಯವೆಂದು ಒಪ್ಪಿಕೊಂಡುಬಿಡುತ್ತದೆ. ಆ ಅಸಂಬದ್ಧ ತರ್ಕವನ್ನು ಅಥವಾ ಹತಾಶೆಯನ್ನೇ ಆಧರಿಸಿದ ಆ ವ್ಯವಸ್ಥೆಯನ್ನು ಒಪ್ಪದ ಮನಸ್ಸುಗಳು ಅತಂತ್ರವಾಗುತ್ತವೆ, ಸುತ್ತಲಿನ ಸಮಾಜಕ್ಕೆ ಅಪರಿಚಿತವಾಗುತ್ತವೆ, ಅನ್ಯವಾಗುತ್ತವೆ. ಇದು 'ದ ಸ್ಟ್ರೇಂಜರ್' ಕಾದಂಬರಿಯ ಕಥಾವಸ್ತು.'

ಪ್ರಕಾಶ್ ನಾಯಕ್ ನಮ್ಮ ಉತ್ತಮ ಕತೆಗಾರರು, ಕಾದಂಬರಿಕಾರರು. ಆದ್ದರಿಂದಲೇ ಅವರ ಈ ಅನುವಾದದಲ್ಲಿ ಕಥಾಸಾಹಿತ್ಯದಲ್ಲಿ ಇರಬೇಕಾದ ಲಾಲಿತ್ಯವಿದೆ. ಅವರಿಗೆ ಅನುವಾದವೊಂದು ಅನುವಾದವಾಗಿಯೇ ಓದಿಸಿಕೊಳ್ಳಬೇಕಲ್ಲದೆ ಅದೊಂದು ಸ್ವತಂತ್ರ ಕೃತಿಯಂತೆ ಓದಿಸಿಕೊಳ್ಳಬೇಕೆಂಬ ಹಟವಿಲ್ಲ. ಅವರು ಕಮೂನ ಗದ್ಯವನ್ನು ಸೊಗಸುಗೊಳಿಸುವುದಕ್ಕೋ ಅವನ ನಿರ್ದಿಷ್ಟ ಕ್ರಿಯಾಕ್ಷೇತ್ರವನ್ನು ಸಾರ್ವತ್ರಿಕಗೊಳಿಸುವುದಕ್ಕೋ ಹೋಗುವುದಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ಕೆಲವು ವಿಮರ್ಶಕ-ಅನುವಾದಕರಂತೆ ಮೂಲ ಕೃತಿಯನ್ನು 'ಕನ್ನಡ ಜಾಯಮಾನಕ್ಕೆ ಒಗ್ಗಿಸುವ' ಮೂಲಕ ಕನ್ನಡ ಓದುಗರಿಗೆ ಅರ್ಥಮಾಡಿಸುವ ಹೊಣೆಗಾರಿಕೆಯನ್ನು ಹೊತ್ತುಕೊಳ್ಳುವುದಿಲ್ಲ. ಅವರ ಅನುವಾದದಲ್ಲಿ ಸಹಜ ಓಘವಿದೆ, ಓಜಸ್ಸೂ ಇದೆ. ಮುಖ್ಯವಾಗಿ ಓದುಗರಿಗಿಲ್ಲಿ ಕೇಳಿಸುತ್ತಿರುವುದು ಕಮೂವಿನ ಧ್ವನಿಯೇ ಹೊರತು ಅನುವಾದಕರ ಧ್ವನಿಯಲ್ಲ. ಕಾದಂಬರಿಯಲ್ಲಿ ಮರ್ಸೋ ತನ್ನಿಂದಾದ ಕೊಲೆಯನ್ನು ಅದರ ಹಿನ್ನೆಲೆಯ ಜೊತೆ ನೆನಪುಮಾಡಿಕೊಳ್ಳುವ ಈ ಭಾಗವನ್ನು ನೋಡಿ:

'ಆಗಲೇ ಎಲ್ಲವೂ ಆಗಲಾರಂಭಿಸಿದ್ದು: ಸಮುದ್ರ ಉರಿಯುತ್ತಿತ್ತು ಮತ್ತು ದಟ್ಟ ಉಬ್ಬುಸಿರು ಬಿಡುತ್ತಿತ್ತು. ಮುಗಿಲು ಒಂದೆಡೆಯಿಂದ ಇನ್ನೊಂದೆಡೆಗೆ ಬಾಯಿ ತೆರೆದು, ಬೆಂಕಿಯ ಮಳೆಗರೆಯುತ್ತಿರುವಂತೆ ಅನ್ನಿಸಿತು. ನಾನು ಉದ್ವಿಗ್ನನಾಗಿದ್ದೆ; ರಿವೊಲ್ವರ್ ಹಿಡಿದುಕೊಂಡಿದ್ದ ನನ್ನ ಕೈ ಟ್ರಿಗರನ್ನು ಎಳೆಯಿತು. ರಿವೊಲ್ವರಿನ ತಳದ ನುಣುಪು ನನ್ನ ಅರಿವಿಗೆ ಬಂತು. ಏಕಕಾಲದಲ್ಲಿ ಮೊನಚು ಮತ್ತು ಕಿವಿಗೆ ಗಡಚಿಕ್ಕುವ ಆ ಗದ್ದಲದಲ್ಲಿ, ಎಲ್ಲವೂ ಆರಂಭವಾಯಿತು. ನಾನು ಬೆವರು ಮತ್ತು ಸೂರ್ಯ ಎರಡನ್ನೂ ಅಲುಗಾಡಿಸಿದ್ದೆ. ಆ ದಿನದ ಸಾಂಗತ್ಯವನ್ನು, ನೆಮ್ಮದಿಯಿಂದಿದ್ದ ಆ ಸಮುದ್ರ ದಂಡೆಯ ಅಪೂರ್ವ ಮೌನವನ್ನು ನಾನು ಧ್ವಂಸಮಾಡಿದ್ದೆ ಎಂದು ಅರಿವಾಯಿತು. ನಂತರ ನಿಶ್ಚಲವಾಗಿದ್ದ ಆ ದೇಹದ ಮೇಲೆ ಇನ್ನೂ ನಾಲ್ಕು ಬಾರಿ ಗುಂಡು ಹಾರಿಸಿದೆ; ಯಾವ ಕುರುಹನ್ನೂ ಬಿಡದೆ ಅವು ದೇಹದೊಳಕ್ಕೆ ನಾಟಿದವು. ಅದು ವಿಷಾದದ ಬಾಗಿಲನ್ನು ಅವಸರದಿಂದ ನಾಲ್ಕು ಬಾರಿ ತಟ್ಟಿದಂತಿತ್ತು.' (ಪುಟ 50)

ಹಿಂದೆ ನಡೆಯಿತೆನ್ನುವುದರ ನಿಷ್ಠುರ ಚಿತ್ರವಾಗಿರುವ ಈ ಭಾಗ ಧ್ವನಿಪೂರ್ಣವಾಗಿದೆ, ನಿಜ. ಆದರೆ 'ಮೊನಚು ಮತ್ತು ಕಿವಿಗೆ ಗಡಚಿಕ್ಕುವ', 'ಬೆವರು ಮತ್ತು ಸೂರ್ಯ' ಇತ್ಯಾದಿ ಪ್ರಯೋಗಗಳು ಗದ್ಯದ ಸಹಜ ಧಾಟಿಗೆ ಅಡ್ಡಿಯಾಗುತ್ತವೆ. ಇಂಗ್ಲಿಷಿನ 'ಆಂಡ್' ಎರಡು ನಾಮಪದಗಳನ್ನೋ ಎರಡು ಸಂಗತಿಗಳನ್ನೋ ಎರಡು ವಾಕ್ಯಗಳನ್ನೋ ಕೂಡಿಸುವುದಕ್ಕಾಗಿ ಬಳಕೆಯಾಗುವ ಶಬ್ದ. ಅದು ಆ ಭಾಷೆಯಲ್ಲಿ ಸಹಜವಾಗಿಯೇ ಕೇಳಿಸುತ್ತದೆ. ಆದರೆ ಅದಕ್ಕೆ ಕನ್ನಡ ಪರ್ಯಾಯ ಪದವಾಗಿರುವ 'ಮತ್ತು' ಮಾತ್ರ ಕನ್ನಡ ಕತೆ, ಕಾದಂಬರಿಗಳಲ್ಲಿ ಹೊಂದುವುದೇ ಇಲ್ಲ.

ಈ ಪುಸ್ತಕದ ಕಾಗದ, ಅಕ್ಷರ (ಫಾಂಟ್), ಮುದ್ರಣ ಎಲ್ಲವೂ ಸೊಗಸಾಗಿವೆ. ಈ ಸೊಗಸುಗಳಿಗೆ ಹೋಲಿಸಿದರೆ ಪುಸ್ತಕದ ಹೊದಿಕೆಯನ್ನು ಮಾತ್ರ ಸೊಗಸೆನ್ನಲಾಗದು.



ಪು: 112 ₹170

ಅಪರಿಚಿತ
ಮೂಲ: ಆಲ್ಬರ್ಟ್ ಕಮೂ
ಕನ್ನಡಕ್ಕೆ: ಪ್ರಕಾಶ್ ನಾಯಕ್
ಪ್ರ: ಮಣಿಪಾಲ್ ಯೂನಿವರ್ಸಲ್ ಪ್ರೆಸ್
ಸಂ: 820-2922954

ವಿಮರ್ಶೆ

ತಾತ್ವಿಕ ಚಿಂತನೆಗೆ ಉತ್ತಮ ಆಕರ ಗ್ರಂಥ

ಎಸ್.ಆರ್.ವಿಜಯಶಂಕರ

ನವ್ಯೋತ್ತರ ಸಾಹಿತ್ಯದ ಪ್ರಮುಖ ಚಿಂತನೆಗಳಲ್ಲಿ ಒಂದಾದ ಸ್ತ್ರೀವಾದದ ಅಧ್ಯಯನಕ್ಕೆ ಬೇಕಾದ ಮುಖ್ಯ ಆಕರ ಗ್ರಂಥಗಳನ್ನು ಕನ್ನಡ ಓದುಗರಿಗೆ ನೀಡಲು ಇತ್ತೀಚಿನ ವರ್ಷಗಳಲ್ಲಿ ವಿದ್ವತ್‌ಪೂರ್ಣವಾದ ಕೆಲಸಗಳನ್ನು ಮಾಡುತ್ತಿರುವವರು ವಿಮರ್ಶಕಿ ಡಾ.ಎಚ್.ಎಸ್. ಶ್ರೀಮತಿ. ಸ್ತ್ರೀವಾದವು ಕನ್ನಡ ಸಾಹಿತ್ಯ ಮತ್ತು ಪಿತೃ ಪ್ರಧಾನ ಚಿಂತನಾಕ್ರಮವನ್ನು ವಿಮರ್ಶಾತ್ಮಕವಾಗಿ ಹೊಸ ವ್ಯಾಖ್ಯಾನಗಳಿಗೆ ಒಳಪಡಿಸಿರುವಂತೆ ಆ ನಿಟ್ಟಿನಲ್ಲಿ ಜಾಗತಿಕ ಚಿಂತನಾಕ್ರಮಗಳನ್ನೂ ಸ್ತ್ರೀವಾದಿ ಬರಹಗಾರ್ತಿಯರನ್ನೂ ಕನ್ನಡಕ್ಕೆ ಪರಿಚಯಿಸಿದೆ. ಹಲವರು ಕೆಲಸ ಮಾಡುತ್ತಿರುವ ಕನ್ನಡದ ಈ ಚಳವಳಿಗೆ ಶ್ರೀಮತಿಯವರು ಅನುವಾದ ಹಾಗೂ ಸ್ವತಂತ್ರ ಸಂಗ್ರಹಗಳಿಂದ ಈಗಾಗಲೇ ಮಹತ್ತರ ಕೊಡುಗೆ ನೀಡಿದ್ದಾರೆ. ಸೆಕೆಂಡ್ ಸೆಕ್ಸ್ (ಸಿಮೊನ್ ದ ಬುವಾ), ಫೆಮಿನೈನ್ ಮಿಸ್ಟಿಕ್ (ಬೆಟ್ಟಿ ಫ್ರಿಡನ್) ಮುಂತಾದ ಅನುವಾದಗಳು; 'ಸ್ತ್ರೀವಾದ: ಪಾರಿಭಾಷಿಕ ಕೋಶ' ಅವುಗಳಲ್ಲಿ ಹೆಸರಿಸಲೇಬೇಕಾದ ಕೃತಿಗಳು.

ಅಮೆರಿಕದ ಬರಹಗಾರ್ತಿ ಸ್ತ್ರೀವಾದಿ ಕಾರ್ಯಕರ್ತೆ 'ಬೆಲ್ ಹುಕ್ಸ್' ಅವರ 'ಸ್ತ್ರೀವಾದ–ಅಂಚಿನಿಂದ ಕೇಂದ್ರದೆಡೆಗೆ'(Feminist Theory from Margin to Centre) ಎಂಬ ಕೃತಿಯನ್ನೂ ಶ್ರೀಮತಿಯವರು ಕನ್ನಡಕ್ಕೆ ತಂದಿದ್ದಾರೆ.

ಅಮೆರಿಕದ ಕಪ್ಪು ಜನಾಂಗದವರಾದ ಗ್ಲೋರಿಯಾ ಜೀನ್ ವಾಟ್ಕಿನ್ಸ್ ತಮ್ಮ ಕಾವ್ಯನಾಮವಾಗಿ, ತಮ್ಮ ಅಜ್ಜಿಯ ಹೆಸರನ್ನು ಬಳಸಿದರು. ಅಮೆರಿಕದ ಬಿಳಿ ಜನಾಂಗದ ಸ್ತ್ರೀವಾದಕ್ಕಿಂತ ಕಪ್ಪು ಜನಾಂಗದ ಸ್ತ್ರೀವಾದ ಯಾಕೆ ಮತ್ತು ಹೇಗೆ ಭಿನ್ನ ಎಂಬುದನ್ನು ಕಾರಣ, ಉದಾಹರಣೆಗಳ ಸಹಿತ ತಾತ್ವಿಕವಾಗಿ ಪ್ರತಿಪಾದಿಸಿದರು. ಕನ್ನಡದಲ್ಲೂ ದಲಿತ ಸ್ತ್ರೀವಾದಿ ಚಿಂತನೆ ಬಗ್ಗೆ ಅರವಿಂದ ಮಾಲಗತ್ತಿ ಮೊದಲಾದವರು ಈಗಾಗಲೇ ಬರೆದಿದ್ದಾರೆ. ಈ ದೃಷ್ಟಿಯಿಂದಲೂ ಬೆಲ್ ಹುಕ್ಸ್ ಅವರ ಈ ಕೃತಿ ಕನ್ನಡ ತಾತ್ವಿಕ ಚಿಂತನೆಗೆ ಉತ್ತಮ ಆಕರ ಗ್ರಂಥವೊಂದನ್ನು ಒದಗಿಸಿದೆ.

ಅಂಚು ಇಲ್ಲದೆ ಸಮಗ್ರವಾಗುವುದಿಲ್ಲ. ಹಾಗೆ ಸಮಗ್ರದ ಭಾಗವಾಗಿದ್ದರೂ ಚೌಕಟ್ಟಿಗೆ ತಾಗಿಕೊಂಡು ಹೊರಗೆ ನಿಲ್ಲಬೇಕಾದ ಸ್ಥಿತಿ ಅಂಚಿನಲ್ಲಿರುವವರದು ಎಂಬುದನ್ನು ಹಲವು ತಾತ್ವಿಕ, ಸಾಮಾಜಿಕ ಹಾಗೂ ನೇರವಾಗಿ ಕಂಡು ಅನುಭವಿಸಿದ ಬದುಕಿನ ಉದಾಹರಣೆಗಳಿಂದ ನೀಡುವ ಮೂಲಕ ಬೆಲ್ ಹುಕ್ಸ್ ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸುತ್ತಾರೆ. ಅಕಡೆಮಿಕ್ ಅಧ್ಯಯನ ರೀತಿಯಲ್ಲಿ ಹಲವು ಆಕರಗಳ ಉಲ್ಲೇಖ, ತಾರ್ಕಿಕ ವಿರೋಧಗಳ ಮೂಲಕ ಅವರು ತಮ್ಮ ವಿಚಾರಗಳನ್ನು ಮಂಡಿಸುತ್ತಾರೆ.

ಸ್ತ್ರೀವಾದವನ್ನು ಈ ಕೃತಿ ಕಪ್ಪು ಜನಾಂಗದ ದೃಷ್ಟಿಯಿಂದ ವ್ಯಾಖ್ಯಾನಿಸುತ್ತದೆ. 1984ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ ಆತನಕದ ಸ್ತ್ರೀವಾದಿ ಸಿದ್ಧಾಂತಗಳಲ್ಲಿ ಇದ್ದ ಮಿತಿಗಳನ್ನು ಅರಿತು ಹೊಸದಿಕ್ಕುಗಳನ್ನು ಗುರುತಿಸುವ ಪ್ರಯತ್ನವಿದೆ. ಜನಾಂಗೀಯ ಹೋರಾಟಗಳ ಉಪಯುಕ್ತ ಮಾದರಿಗಳನ್ನು ಈ ಕೃತಿ ಕನ್ನಡಕ್ಕೂ ಪರಿಚಯಿಸುತ್ತದೆ. ಸ್ತ್ರೀವಾದದ ತಾತ್ವಿಕತೆಯಂತೆ, ಸ್ತ್ರೀ ಸಮಾನತೆಯ ಹೋರಾಟದ ಕಾರ್ಯಕ್ರಮಗಳಿಗೂ ಬೇಕಾದ ಹಲವು ಪ್ರಾಯೋಗಿಕ ಸೂಚನೆಗಳು ಹಾಗೂ ವಿಶ್ಲೇಷಣೆಗಳು ಈ ಕೃತಿಯ ಮಹತ್ವದ ಅಂಶಗಳಾಗಿವೆ.

ಲೈಂಗಿಕತಾವಾದಿ ದಮನಗಳಿಗೆ ಕಾರಣವಾಗುವ ಮೂರು ಮುಖ್ಯ ಸಂಗತಿಗಳೆಂದರೆ (1) ಸಾಂಸ್ಥಿಕ ಮತ್ತು ಸಾಮಾಜಿಕ ರಚನೆಗಳು, (2) ದಬ್ಬಾಳಿಕೆ, ಶೋಷಣೆ ಮತ್ತು ದಮನಗಳನ್ನು ನಡೆಸುವ ವ್ಯಕ್ತಿಗಳು (3) ಸ್ವತಃ ದಮನಗಳಿಗೆ ಒಳಗಾಗುವವರು. ಅಂತಹ ದಮನಗಳನ್ನು ಎದುರಿಸುವವರ ಮನೋಭಾವ ಮತ್ತು ಸ್ವಭಾವ ಮಹಿಳೆಯರ ರಾಜಕೀಯ ಒಗ್ಗಟ್ಟಿನ ಮಹತ್ವವನ್ನು ಚರ್ಚಿಸುತ್ತಾ, ಈ ಮೂರರಿಂದ ಬಿಡಿಸಿಕೊಳ್ಳಲು ಬೇಕಾದ ತಾತ್ವಿಕ ಸಿದ್ಧಾಂತದೊಡನೆ ಅದಕ್ಕೆ ಬೇಕಾದ ಹೋರಾಟ ಕಾರ್ಯಕ್ರಮಗಳ ಅಗತ್ಯಗಳನ್ನೂ ಚರ್ಚಿಸುತ್ತದೆ.

ಈ ಕೃತಿಯನ್ನು ಶ್ರೀಮತಿಯವರು 'ಅನುವಾದ' ಎಂದು ಹೆಸರಿಸದೆ 'ಕನ್ನಡ ಓದು' ಎಂದಿದ್ದಾರೆ. ಅನುವಾದದ ಸಾಂಪ್ರದಾಯಿಕ ವ್ಯಾಖ್ಯಾನಗಳಿಗೆ ಹೊಂದುವಂತಹ ಅನುವಾದ ಇದಲ್ಲ. ಕನ್ನಡ ಸ್ತ್ರೀವಾದದ ಅಗತ್ಯಗಳಿಗೆ ಹೊಂದುವಂತೆ ವಿಚಾರಗಳ ವಿವರಗಳೂ ಸಂಕ್ಷಿಪ್ತ ಸಂಗ್ರಹ ಗುಣವೂ ಇಲ್ಲಿದೆ. ಅನುವಾದದಲ್ಲಿ ತನಗೆ ತಾನೇ ಅನುವಾದಕ ಸ್ಪಷ್ಟಪಡಿಸಿಕೊಳ್ಳುವ ಕ್ರಮವೂ ಅಂತರ್ಗತವಾಗಿರುತ್ತದೆ. ಶ್ರೀಮತಿಯವರು ಅನುವಾದದ ಈ ಗುಣವನ್ನು ವಿಸ್ತರಿಸಿಕೊಂಡು ಕನ್ನಡದ ಅಗತ್ಯಕ್ಕೆ ತಕ್ಕಂತೆ ಮೂಲಕೃತಿಯನ್ನು ವಿವರಿಸಿದ್ದಾರೆ. ಮೂಲದ ಅನುಕರಣೆಗಿಂತಲೂ ಹೆಚ್ಚು ಕನ್ನಡ ಓದಿನಲ್ಲಿ ಸಿಗಬೇಕಾದ ವೈಚಾರಿಕ ಸ್ಪಷ್ಟನೆಗೆ ಅನುವಾದಕಿ ಒತ್ತುಕೊಟ್ಟಿದ್ದಾರೆ. ಆದ್ದರಿಂದ ಇದು ಓದಿ ಅರ್ಥೈಸಿಕೊಂಡ ರೀತಿಯ ವಿಶಿಷ್ಟ ಅನುವಾದ. ಹಾಗಾಗಿ ಇದು ಅಮೆರಿಕದ ಜನಾಂಗೀಯ ಸ್ತ್ರೀವಾದವನ್ನು ವಿವರಿಸುವ ಕನ್ನಡ ಕೃತಿಯೊಂದನ್ನು ಓದಿದ ಅನುಭವ ನೀಡುತ್ತದೆ.

ಅಮೆರಿಕದ ಬರಹಗಾರ್ತಿ ಸ್ತ್ರೀವಾದಿ ಕಾರ್ಯಕರ್ತೆ 'ಬೆಲ್ ಹುಕ್ಸ್' ಮೂರು ವಾರಗಳ ಹಿಂದಷ್ಟೇ (ಡಿಸೆಂಬರ್ 15) ಅಗಲಿದರು. ಸ್ತ್ರೀ ಚಳವಳಿಗೆ ಮಹತ್ವದ ಕೊಡುಗೆ ಕೊಟ್ಟ ಖ್ಯಾತಿ ಅವರದು. ಅವರ ಸಾಹಿತ್ಯವನ್ನು ಕನ್ನಡದಲ್ಲೂ ಓದಲು ದಕ್ಕಿಸಿಕೊಂಡ ಹೆಮ್ಮೆ ಕನ್ನಡಿಗರದ್ದು



ಪು: 332 ₹290

ಸ್ತ್ರೀವಾದ–ಅಂಚಿನಿಂದ ಕೇಂದ್ರದೆಡೆಗೆ
ಮೂಲ: ಬೆಲ್ ಹುಕ್ಸ್
ಕನ್ನಡಕ್ಕೆ: ಶ್ರೀಮತಿ ಎಚ್.ಎಸ್
ಪ್ರ: ಸಂಗಾತ ಪುಸ್ತಕ
ಸಂ: 9341757653

ಅವಲೋಕನ

ಸಾಮಾನ್ಯ ಗೃಹಿಣಿಯ ಅಸಾಮಾನ್ಯ ಕಥೆ

'ಪುರುಷರ ಆತ್ಮಕಥೆಗಳು ಸ್ವ-ಕೇಂದ್ರಿತವಾದರೆ ಮಹಿಳಾ ಆತ್ಮಕಥೆಗಳು ಕುಟುಂಬಕೇಂದ್ರಿತ. ಅನುಭವದಿಂದ ಕಥನ ಕಟ್ಟುವುದು ಮಹಿಳೆಯರ ವಿಶೇಷ ಗುಣ. ಅದು ಅವರ ವಿಶೇಷ ಶಕ್ತಿಯೂ ಹೌದು' ಎಂದೊಮ್ಮೆ ಲೇಖಕಿ ಸಬಿಹಾ ಭೂಮಿಗೌಡ ಹೇಳಿದ್ದನ್ನು ಓದಿದ ನೆನಪು. ಮೊನ್ನೆ ಬಿಡುಗಡೆಯಾದ ಮೀನಾಕ್ಷಿ ಭಟ್ಟ ಅವರ ಆತ್ಮಕಥನ 'ಹರಿವ ನದಿ', ಅವರ ಮಾತನ್ನು ಅಕ್ಷರಶಃ ಸಮರ್ಥಿಸುತ್ತದೆ. ಹೆಸರಿಗೆ ಇದು ಮೀನಾಕ್ಷಿ ಅವರ ಆತ್ಮಕಥೆಯಾದರೂ ಅದು ಕುಟುಂಬಕೇಂದ್ರಿತವಾಗಿದೆ. ಅದೇ ಕುಟುಂಬದ ಕಣ್ಣಿನಿಂದ ಸುತ್ತಲಿನ ಸಮಾಜದ ಒಡಲಾಳವನ್ನೂ ತೆರೆದಿಡುತ್ತದೆ. ಹೀಗಾಗಿ ಇದು ಕೇವಲ ಲೇಖಕಿಯ ಕಥೆಯಾಗಿ ಉಳಿಯದೆ, ಅವರು ಹುಟ್ಟಿ ಬೆಳೆದ ಶರಾವತಿ ಮತ್ತು ಅಘನಾಶಿನಿ ಕೊಳ್ಳಗಳ ಜನಜೀವನದ ಕಥೆಯಾಗಿಯೂ ಬೆಳೆಯುತ್ತದೆ.

ಸಾಮಾನ್ಯ ಗೃಹಿಣಿಯೊಬ್ಬಳಿಗೆ ಹೇಳಿಕೊಳ್ಳಲು ಏನಿರುತ್ತದೆ? ಅಂಥವರಿಂದ ಏಕೆ ಆತ್ಮಕಥೆ ಎಂಬ ಪ್ರಶ್ನೆ ಹಲವರಲ್ಲಿ ಮೂಡಿರಲಿಕ್ಕೂ ಸಾಕು. ಸಾಮಾನ್ಯ ಮಹಿಳೆಯೊಬ್ಬಳ ಅಸಾಮಾನ್ಯವಾದ ದರ್ಶನಕ್ಕೆ ಇಂತಹ ಆತ್ಮಕಥೆಗಳು ಅತ್ಯಗತ್ಯ. ನದಿಯ ಹರಿವಿನಂತೆಯೇ ಬದುಕು ಬಂದಂತೆ ಸ್ವೀಕರಿಸುತ್ತಾ ಹೋಗುವ ಲೇಖಕಿ, ಎದುರಿಸಿದ ಕಷ್ಟ–ನಷ್ಟಗಳ ಕುರಿತು ಬಡಬಡಿಸುತ್ತಾ ಕೂರುವುದಿಲ್ಲ. ಎಲೆ ಬಳ್ಳಿಯನ್ನು ಎಷ್ಟು ಬಾರಿ ಕಿತ್ತು ನೆಟ್ಟರೂ ಮತ್ತೆ ಚಿಗುರುವಂತೆ ಬಾರಿ ಬಾರಿ ನೆಲೆ ಕಳೆದುಕೊಂಡರೂ ಸಿಕ್ಕ ಜಾಗದಲ್ಲಿ ಮತ್ತೆ ಬದುಕು ಕಟ್ಟಿಕೊಳ್ಳುವ ಅವರ ಜೀವನೋತ್ಸಾಹ ಇತರರಿಗೂ ಮಾದರಿಯಾದುದು. ಅದರಲ್ಲೂ ಸಾಮಾನ್ಯ ಮಹಿಳೆಯರಿಗಂತೂ ಪ್ರೇರಣೆದಾಯಕವಾದುದು.

ಮೀನಾಕ್ಷಿ ಅವರ ಬದುಕಿನುದ್ದಕ್ಕೂ ಹಲವು ವಿಷಣ್ಣ ಭಾವದ ಕಥೆಗಳು ಹರಳುಗಟ್ಟಿವೆ. ಕೃತಿಯ ಪುಟಗಳನ್ನು ತಿರುವಿ ಹಾಕಿದಂತೆ ಓದುಗರಿಗೆ ಅದರ ಅನುಭವವಾಗುತ್ತದೆ. ಆದರೆ, ಅಂತಹ ಬದುಕಿನ ಕುರಿತು ಲೇಖಕಿಗೆ ಯಾವುದೇ ತಕರಾರಿಲ್ಲ. ಗೋದೂಳಿ ಸಮಯದಲ್ಲಿ ಮನೆಯ ಹಿತ್ತಲಿನಲ್ಲಿ ಮಹಿಳೆಯರು ಸುಖ–ದುಃಖದ ವಿಚಾರಗಳನ್ನು ಮಾತನಾಡಿಕೊಂಡಷ್ಟೇ ಸಲೀಸಾಗಿ ತಮ್ಮ ನೋವು–ಸಂಕಟವನ್ನು ತೇಲಿಸಿಬಿಡುತ್ತಾರೆ. 'ಇದೇ ಬದುಕು' ಎಂಬ ಸಂದೇಶದ ಮಂದಹಾಸ ಬೀರಿ ವಿರಮಿಸುತ್ತಾರೆ.

ಮೀನಾಕ್ಷಿ ಅವರ ಕಥೆಯನ್ನು ಮುನ್ನಡಿಯ ಒಂದು ವಾಕ್ಯದಲ್ಲಿ ನಾಗೇಶ ಹೆಗಡೆ ಅವರು ತುಂಬಾ ಸೊಗಸಾಗಿ ಹಿಡಿದಿಟ್ಟಿದ್ದಾರೆ. ಅವರು ಬರೆಯುತ್ತಾರೆ: 'ತವರು ಎಂದುಹೇಳಿಕೊಳ್ಳಲು ತವರೇ ಇಲ್ಲದ, ಗಂಡನ ಮನೆ ಎಂಬ ಮನೆಯೇ ಇಲ್ಲದ ಇವರ ಬದುಕಿನ ವಿವರಣೆಗಳನ್ನು ಓದುವಾಗ ಕಾಂಬೋಡಿಯಾದ ತೇಲುಗ್ರಾಮಗಳ ಚಿತ್ರಣ ಮನಸ್ಸಿನಲ್ಲಿ ಮೂಡುತ್ತದೆ'. ಕೇಂದ್ರ ಸ್ಥಾನದಲ್ಲಿರಬೇಕಿದ್ದ ಲೇಖಕಿ ತಮ್ಮ ಬಾಳಿನ ಪುಟಗಳಲ್ಲಿ ಪತಿ, ಪ್ರಖರ ಪಾಂಡಿತ್ಯದ ಗಜಾನನ ಶಾಸ್ತ್ರಿಯವರಿಗೆ ಹೆಚ್ಚಿನ ಜಾಗ ಕೊಟ್ಟಿದ್ದಾರೆ. ಹೀಗಿದ್ದೂ ಅವರ ಚಿತ್ರಣ ತುಂಬಾ ಢಾಳಾಗಿ ಮೂಡುವುದಿಲ್ಲ.

ನಾಡಿಗೆ ಬೆಳಕು ನೀಡಲು ಕೊಳ್ಳದ ಹಳ್ಳಿಗಳ ಜನ ಮನೆಯ ದೀಪವನ್ನೇ ನಂದಿಸಿಕೊಂಡವರು. ಆತ್ಮಕಥೆಯೊಂದಿಗೆ ಪೋಣಿಸಿಕೊಂಡು ಬಂದ ಆ ಕತ್ತಲಿನ ಉಪಕಥೆಗಳು ಹೃದಯ ತಟ್ಟುತ್ತವೆ. ಸುಂದರವಾಗಿದ್ದ, ಮೇಲ್ವರ್ಗದ ಯುವತಿ ಕೂಲಿ ಕೆಲಸಕ್ಕೆ ಹೋಗಬೇಕಾದುದು, ಯಾರ ನಾಲಿಗೆಗೂ ತುತ್ತಾಗದಂತೆ ಮಾನ ಕಾಪಾಡಿಕೊಂಡು, ಸ್ವಾಭಿಮಾನದಿಂದ ಬದುಕು ಸಾಗಿಸಿದುದು, ಪತಿಯ ಸಾವಿನ ನಡುವೆಯೂ ಬದುಕಿನ ಬಂಡಿಯನ್ನು ಒಬ್ಬಂಟಿಯಾಗಿ ಎಳೆದುದು ಅವರ ಜೀವಪರ, ಜೀವನಪರ ಧೋರಣೆಗೆ ಸಾಕ್ಷಿಯಾಗಿ ನಿಲ್ಲುತ್ತವೆ. 'ಕತ್ತಲು ಇರಬಹುದು, ಸುರಂಗದ ಅಂಚಿಗೆ ಬೆಳಕಿನ ಕಿರಣಗಳು ಗೋಚರಿಸಿಯೇ ಗೋಚರಿಸುತ್ತವೆ' ಎನ್ನುವುದು ಮೀನಾಕ್ಷಿ ಅವರ ಮನೋಧರ್ಮ. ಅವರ ಬದುಕಿನ ಈ ಫಿಲಾಸಫಿ ನೋವುಂಡ ಮಹಿಳೆಯರ ಕಣ್ಣೀರು ಒರೆಸುವಷ್ಟು ಸಶಕ್ತವಾಗಿದೆ.

ತಮ್ಮ ಅಮ್ಮನ ಕಥೆಯನ್ನು ಪತ್ರಕರ್ತೆ ಭಾರತಿ ಹೆಗಡೆ ಸೊಗಸಾಗಿ ನಿರೂಪಿಸಿದ್ದಾರೆ. ಬಾಲ್ಯದಿಂದಲೂ ಅಮ್ಮನನ್ನು ನೋಡುತ್ತಾ, ಎಲ್ಲ ಬೆಳವಣಿಗೆಗಳಿಗೆ ಸಾಕ್ಷಿಯಾಗುತ್ತಾ ಬೆಳೆದ ಭಾರತಿ ಅವರಿಗೆ ಆತ್ಮಕಥೆಯ ವಿವರಗಳನ್ನು ಸಮರ್ಥವಾಗಿ 'ಪ್ರಸೆಂಟ್' ಮಾಡಲು ಯಾವುದೇ ಕಷ್ಟ ಎದುರಾಗಿಲ್ಲ.



ಪು: 236 ₹200

ಹರಿವ ನದಿ
ಲೇ:ಮೀನಾಕ್ಷಿ ಭಟ್ಟ
ನಿರೂಪಣೆ: ಭಾರತಿ ಹೆಗಡೆ
ಪ್ರ: ವಿಕಾಸ ಪ್ರಕಾಶನ
ಸಂ: 9900095204

ಒಳನೋಟ

ಕಥೆ
ಸೋಮು ಅವರ
'ಅಪರಾಧಿ, ನಾನಲ್ಲ...'
ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವನ
ಮಹಾಂತೇಶ್ ಬಿ.ನಿಟ್ಟೂರ್ ಅವರ
ನನ್ನ ಕವನ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ಮೊದಲ ಓದು

ದಲಿತ ಚಳವಳಿಯ ಹೆಜ್ಜೆ ಗುರುತುಗಳು

'ದಲಿತ ವರ್ಗದಿಂದ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆದ್ದ ಬಹುತೇಕರು ಹೇಡಿಗಳಂತೆ ಬದುಕಿದರು. ಇಂಥವರನ್ನು ಸಮಾಜವಾಗಲಿ ದಲಿತರಾಗಲಿ ನೆನಪಿಸಿಕೊಳ್ಳುವುದಿಲ್ಲ. ಏಕೆಂದರೆ ಇತಿಹಾಸದಲ್ಲಿ ಅವರ ಹೆಜ್ಜೆ ಗುರುತುಗಳೇ ಕಾಣಿಸುತ್ತಿಲ್ಲ...' ಸಮುದಾಯವೊಂದನ್ನು ಮೆಟ್ಟಿಲಾಗಿಸಿಕೊಂಡು ಮೇಲೇರಿದವರ ಗುಣಧರ್ಮ ವಿವರಿಸುವಾಗ ಲೇಖಕ ಶಿವಾಜಿ ಗಣೇಶನ್ 'ದಲಿತ ಚಳವಳಿಯ ಹೆಜ್ಜೆಗಳು' ಕೃತಿಯಲ್ಲಿ ಹೀಗೆ ಚಾಟಿ ಬೀಸಿದ್ದಾರೆ. ಹಾಗೆಯೇ ಮುಂಚೂಣಿ ನಾಯಕರ ಗುಣಾವಗುಣಗಳನ್ನೂ ನಿರ್ದಾಕ್ಷಿಣ್ಯವಾಗಿ ತೆರೆದಿಟ್ಟಿದ್ದಾರೆ.

ಬಸವಲಿಂಗಪ್ಪ ಅವರ 'ಕನ್ನಡ ಸಾಹಿತ್ಯದಲ್ಲಿರುವುದೆಲ್ಲಾ ಬೂಸಾ ಸಾಹಿತ್ಯ' ಎಂಬ ಹೇಳಿಕೆ ಮುಂದೆ ಸವರ್ಣೀಯ ಮತ್ತು ದಲಿತ ವಿದ್ಯಾರ್ಥಿಗಳ ನಡುವೆ ಕಿಚ್ಚು ಹಬ್ಬಿಸಿ ದಲಿತ ಚಳವಳಿಗೆ ಮುನ್ನುಡಿ ಬರೆದದ್ದು ಕಥನ ರೂಪದಲ್ಲಿದೆ.

ಬಸವಲಿಂಗಪ್ಪ ಅವರು 'ಬೂಸಾ ಸಾಹಿತ್ಯ' ಎಂದು ಜರೆದದ್ದು ಮಾತ್ರ ಹೆಚ್ಚು ಪ್ರಚಾರ ಪಡೆದಿದೆ. ಕನ್ನಡ ಸಾಹಿತ್ಯದಲ್ಲಿ ನಿಮ್ಮ ದುಃಖ ದುಮ್ಮಾನ, ನಿಮ್ಮ ಬದುಕಿನ ಚಿತ್ರಣ ಇದೆಯಾ ಎಂದು ಬಸವಲಿಂಗಪ್ಪನವರು ಪ್ರಶ್ನಿಸಿದ ಸಂಗತಿ ದಾಖಲಾಗಿರುವುದು ಬಹುಶಃ ಈ ಕೃತಿಯಲ್ಲೇ ಮೊದಲು ಇರಬೇಕು. ಆ ಘಟನೆಗೆ ಲೇಖಕರು ಪ್ರತ್ಯಕ್ಷದರ್ಶಿ ಆಗಿರುವುದೂ ಲೇಖನಕ್ಕೊಂದು ನಿಖರತೆ ಒದಗಿಸಿದೆ.

ಚಳವಳಿಗೆ ದನಿಯಾದ 'ಪಂಚಮ', 'ಶೋಷಿತ', 'ಆಂದೋಲನ' ಪತ್ರಿಕೆಗಳು, ಅವುಗಳ ಪ್ರಕಾಶಕರು ಎದುರಿಸಿದ ಸಂಕಷ್ಟಗಳು, ಹಸಿವು ನಿರೂಪಣೆಗೊಂಡಿವೆ. ಅಂದಿನ ನಾಯಕರು, ಘಟನೆಗಳ ಪ್ರತ್ಯಕ್ಷದರ್ಶಿತ್ವ, ನೆನಪುಗಳ ಭಂಡಾರದಿಂದ ಆಯ್ದು ಸಂಗತಿಗಳಿಂದಾಗಿ ಈ ಕೃತಿ ಒಂದು ಅಧ್ಯಯನಯೋಗ್ಯ ದಾಖಲೆಯಾಗಿ ಮೂಡಿಬಂದಿದೆ. ದಲಿತ ಚಳವಳಿಯು ಹೇಗೆ ಒಂದು ಸ್ವರೂಪ ಪಡೆಯುತ್ತಾ ಬಂತು ಎಂಬುದನ್ನು ಈ ಕೃತಿ ಸೊಗಸಾಗಿ ಕಟ್ಟಿಕೊಟ್ಟಿದೆ. ಆ ನಿಟ್ಟಿನಲ್ಲಿ ಇದೊಂದು ಆಕರ ಗ್ರಂಥವೂ ಆಗಿದೆ.



ಪು: 128 ₹130

ದಲಿತ ಚಳುವಳಿಯ ಹೆಜ್ಜೆಗಳು
ಲೇ: ಶಿವಾಜಿ ಗಣೇಶನ್
ಪ್ರ: ಬೆವರಹನಿ ಪ್ರಕಾಶನ
ಸಂ: 9845606952

ಗದ್ದುಗೆ ಗುದ್ದಾಟದ ಕಥನ

ಮಹಾಭಾರತದ ದಾಯಾದಿ ಕಲಹಕ್ಕೆ ಹತ್ತಿರವೆನಿಸಬಹುದಾದ ಘಟನೆಯೇ ಮೊಗಲ್ ಸಾಮ್ರಾಜ್ಯದಲ್ಲೂ ನಡೆದಿರುವುದು ಚರಿತ್ರೆ. ಮೊಗಲರ ರಾಜ ಶಹಜಹಾನನ ನಾಲ್ವರು ಪುತ್ರರು ಮತ್ತು ಮೂವರು ಪುತ್ರಿಯರ ಮಧ್ಯೆ ನಡೆದ ಕಲಹದ ಚಿತ್ರಣವೇ 'ವಾರಸುದಾರಾ' ನಾಟಕ.

ಶಹಜಹಾನನ ಮೊದಲ ಮಗ ದಾರಾ ಶಿಕೋಹ್‌ಗೆ ಗದ್ದುಗೆ ದೊರಕಬೇಕೋ ಅಥವಾ ಕುಟುಂಬದ ಬೇರೆ ವೀರ, ಚತುರನೊಬ್ಬನಿಗೆ ಸಿಗಬೇಕೋ ಅನ್ನುವ ಜಿಜ್ಞಾಸೆ ಇಲ್ಲಿ ಚರ್ಚೆಗೊಳಗಾಗುತ್ತಲೇ ಇರುತ್ತದೆ. ಕೊನೆಗೂ ಬುದ್ಧಿವಂತ ನಾಯಕತ್ವಕ್ಕೆ ಜಯವಾಗುತ್ತದೆ. ಈ ಜಯ ನಿರ್ಣಾಯಕವಾಗಬೇಕಾದರೆ ಅರಸೊತ್ತಿಗೆಗೆ ಅಧೀನರಾಗಿರುವವರು ಈ ಸಹೋದರರಿಗೆ ಸೇರಿದ ಒಂದೊಂದು ಬಣದಲ್ಲಿ ಗುರುತಿಸಿಕೊಂಡು ಕಾದಾಡುತ್ತಾರೆ. ಆ ಪ್ರಸಂಗಗಳನ್ನು ದೃಶ್ಯರೂಪದಲ್ಲಿ ಕಟ್ಟಿಕೊಡುವ ಪ್ರಯತ್ನವಾಗಿದೆ ಈ ನಾಟಕ.

ಧರ್ಮ ಜಿಜ್ಞಾಸೆಯನ್ನೂ ಸರ್ವಧರ್ಮಗಳ ಚಿಂತನೆಯನ್ನೂ ರಾಜನೀತಿಯ ವ್ಯಾವಹಾರಿಕತೆಯನ್ನೂ ಚರ್ಚಿಸುತ್ತಾ ಸಾಗಿದೆ 'ವಾರಸುದಾರಾ'. ಈ ಚರ್ಚೆಯ ಹೊತ್ತಿನಲ್ಲಿ ನಡೆಯುವ ಸನ್ನಿವೇಶಗಳು ದಾರಾ ಶಿಕೋಹ್ ಅತಿ ಉದಾರಿ ಮಾತ್ರವಲ್ಲ, ಹುಂಬನನ್ನಾಗಿಯೂ ಕಾಣಿಸುತ್ತವೆ. ಮುಸ್ಲಿಂ ಅರಸರ ರಾಜನೀತಿ, ಧರ್ಮಸೂಕ್ಷ್ಮತೆ ಹಾಗೂ ಇತರ ಧರ್ಮಗಳ ಸಾರವನ್ನು ದಾರಾ ಶಿಕೋಹ್ ಮತ್ತು ಸೈಯದ್ ಸರ್ಮದ್ ಪಾತ್ರಗಳು ಇಲ್ಲಿ ವಿವರವಾಗಿ ಚರ್ಚಿಸಿವೆ.

ಪು: 122 ₹100

ವಾರಸುದಾರಾ (ನಾಟಕ)
ಲೇ: ಜಯರಾಮ್ ರಾಯಪುರ
ಪ್ರ: ಸಮಾಜಮುಖಿ ಪ್ರಕಾಶನ, ಬೆಂಗಳೂರು

ಬಾಯಿ ಬೀಗ ತೆರೆಸುವ ಯತ್ನ

'ದುಷ್ಟರ ಗೆಲುವಿಗೆ ಸಜ್ಜನರ ಮೌನವೇ ಕಾರಣ... ಇನ್ನಾದರೂ ನಮ್ಮ ಬಾಯಿಗೆ ಹಾಕಿರುವ ಬೀಗವನ್ನು ತೆರೆಯಬೇಕು. ಅನ್ಯಾಯದ ವಿರುದ್ಧ ಧ್ವನಿಯೆತ್ತಬೇಕು' ಎಂಬ ಪ್ರಬಲ ಆಶಯವನ್ನು ಕೃತಿಯ ಮೊದಲ ಅಧ್ಯಾಯದಲ್ಲೇ ಮಂಡಿಸಿದ್ದಾರೆ ಲೇಖಕ ನ್ಯಾ ಎಚ್. ಎನ್. ನಾಗಮೋಹನದಾಸ್.

ಲೇಖಕರು ನ್ಯಾಯಮೂರ್ತಿಯಾಗಿದ್ದಾಗಲೂ, ನಿವೃತ್ತರಾದ ಮೇಲೂ ಸಾಮಾಜಿಕ ನ್ಯಾಯ, ನೀತಿ ನಿಯಮಗಳ ಬಗ್ಗೆ ಸ್ಪಷ್ಟ ನಿಲುವನ್ನು ಪ್ರತಿಪಾದಿಸಿದವರು. ಅವರ ವೃತ್ತಿಬದುಕಿನ ಅನುಭವ, ಅಧ್ಯಯನ ಮತ್ತು ಪ್ರಚಲಿತ ಸನ್ನಿವೇಶಗಳಿಗೆ ಪ್ರತಿಸ್ಪಂದನದ ರೂಪವಾಗಿ ಕೃತಿ ಮೈದಾಳಿದೆ. 22 ಚಿಕ್ಕಚಿಕ್ಕ ಅಧ್ಯಾಯಗಳಲ್ಲಿ ವಿಸ್ತಾರವಾದ ವಿಷಯ ವಿವರಣೆ ಇದೆ. ಸಂವಿಧಾನ, ರಾಜ್ಯಶಾಸ್ತ್ರ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ, ಸಾಮಾಜಿಕ ಹೋರಾಟಗಾರರಿಗೆ ಮಾರ್ಗದರ್ಶಿ ಆಗಬಲ್ಲ ಕೃತಿಯಿದು.

ಕೃತಿಯಲ್ಲಿ ಬಸವಾದಿ ಶರಣರ ಚಿಂತನೆಗಳ ಉಲ್ಲೇಖ ಇದೆ. ಮೌಢ್ಯಾಚರಣೆಗಳ ವಿರುದ್ಧ ವೈಜ್ಞಾನಿಕ ಅಧ್ಯಯನ ಸಹಿತ ಆಧಾರ ಒಳಗೊಂಡ ಅಧ್ಯಾಯವಿದೆ. ಮೌಢ್ಯ ನಿವಾರಣೆಗೆ ಕಾನೂನೊಂದೇ ಅಸ್ತ್ರ ಅಲ್ಲ. ಜನರ ಮನೋಭಾವ ಬದಲಾವಣೆ ಆಗಬೇಕಾದದ್ದೂ ಮುಖ್ಯ ಎಂದು ಪ್ರತಿಪಾದಿಸಿದ್ದಾರೆ.

ಶಿಕ್ಷಣ ಮಾಧ್ಯಮದ ಗೊಂದಲವನ್ನು ಚರ್ಚಿಸಿರುವ ಲೇಖಕರು ಇಂಗ್ಲಿಷ್ ಭಾಷೆಗೆ ಪ್ರಾಮುಖ್ಯತೆ ಕೊಡಲೇಬೇಕು. ಆದರೆ, ಕನ್ನಡಕ್ಕೆ ಬದಲಾಗಿ ಇಂಗ್ಲಿಷ್ ಆಗಬಾರದು. ಸಮಾನ ಶಿಕ್ಷಣ ಸಾಧಿಸಲು ಹೊಸ ಶಿಕ್ಷಣ ನೀತಿ ಬೇಕು ಎಂದು 'ತೀರ್ಪು' ಕೊಟ್ಟಿದ್ದಾರೆ. 'ಭಕ್ತಿಪಂಥ' ಶರಣರು, ಸಂತರ ಬಗ್ಗೆ ಕೃತಿ ಮಾತನಾಡಿದೆ. ಕ್ರಾಂತಿ ಮತ್ತು ಕಾನೂನು ಕ್ರಾಂತಿಯಿಂದಾಗಿ ನಡೆದ ಜಾಗತಿಕ ವಿದ್ಯಮಾನಗಳನ್ನೂ ಉಲ್ಲೇಖಿಸಲಾಗಿದೆ.



ಪು: 136 ₹100

ಮಾನವ ಹಕ್ಕುಗಳು
ಲೇ: ಎಚ್.ಎನ್. ನಾಗಮೋಹನದಾಸ್
ಪ್ರ: ಜನ ಪ್ರಕಾಶನ ಬೆಂಗಳೂರು
ಮೊ: 9448324727

ಸಂಭ್ರಮ ಮತ್ತೆ ಯಾವಾಗ?

10ನೇ ಪುಟದಿಂದ...

ಸಂಕ್ರಾಂತಿಯ ಸಂಭ್ರಮ ಒಂದೇ ದಿನಕ್ಕೆ ಮುಗಿಯುವುದಿಲ್ಲ. ಹಬ್ಬದ ನಂತರ ಹದಿನೈದು ದಿನಗಳ ಕಾಲ ಒಂದಲ್ಲ ಒಂದು ಊರಿನಲ್ಲಿ 'ದನ ಓಡಿಸುವ' ಆಚರಣೆ ಇರುತ್ತದೆ. ಊರಿನ ಪ್ರಮುಖ ಬೀದಿಯಲ್ಲಿ ದನಗಳನ್ನು ಓಡಿಸಲಾಗುತ್ತದೆ. ಬೀದಿಯ ಎರಡೂ ಬದಿ, ಸುತ್ತಲಿನ ಹತ್ತಾರು ಹಳ್ಳಿಗಳ ಜನಸ್ತೋಮ ನೆರೆದಿರುತ್ತದೆ. ಮರಗಳ ಮೇಲೆ, ಮನೆಗಳ ಮಾಳಿಗೆಯ ಮೇಲೆ ಯುವಕರು ದಂಡು ನೆರೆಯುತ್ತದೆ.

ಸರದಿಯ ಪ್ರಕಾರ ದನಗಳನ್ನು ಬಿಡಲಾಗುತ್ತದೆ. ಇಕ್ಕಟ್ಟಾದ, ಅಂಕುಡೊಂಕಿನ ಬೀದಿಯ ಕೊನೆಗೆ ನುಗ್ಗಿಬರುವ ದನವನ್ನು ಹಿಡಿಯಲು ಕಟ್ಟು ಮಸ್ತಾದ ಯುವಕರು ಕಾದು ನಿಂತಿರುತ್ತಾರೆ. ತಮಟೆ ಸದ್ದಿಗೆ, ಜನರ ಕೇಕೆ, ಗದ್ದಲಕ್ಕೆ ಬೆದರಿ ದಿಕ್ಕಾಪಾಲಾಗಿ ಓಡಿ ಬರುವ ದನದ ಕೊರಳಿಗೆ ಜೋತು ಬಿದ್ದು, ಮೂಗುದಾರ ಹಿಡಿದು ನಿಲ್ಲಿಸುವ ಕ್ಷಣಗಳನ್ನು ನೋಡುವುದೇ ಒಂದು ರೋಮಾಂಚನ. ಪ್ರತಿಷ್ಠೆ, ಹಣ ಕಟ್ಟುವ ಬಾಜಿ ಈ ಆಚರಣೆಯ ಭಾಗವಾಗಿರುವುದರಿಂದ ಹೊಡೆದಾಟಗಳೂ ಸಾಮಾನ್ಯ.

ಉತ್ತರ ಕರ್ನಾಟಕದ ಸಂಕ್ರಾಂತಿಯ ಸಂಭ್ರಮ ವಿಶಿಷ್ಟವಾದದ್ದು. ಹಬ್ಬದ ದಿನ ಮನೆ ಸ್ವಚ್ಛ ಮಾಡಿ, ಬಾಗಿಲಿಗೆ ಜೋಳದ ದಂಟು ಮತ್ತು ಮಾವಿನ ಎಲೆಗಳ ತೋರಣ ಕಟ್ಟಲಾಗುತ್ತದೆ. ಮನೆ ಮುಂದೆ ರಂಗೋಲಿ ಹಾಕಿ, ಅದರ ನಡುವೆ ಸಗಣಿಯ ಉಂಡೆ ಇಟ್ಟು ಹೂವಿನಿಂದ ಸಿಂಗರಿಸುತ್ತಾರೆ. ಸಿಹಿ ಅಡುಗೆ, ಎಳ್ಳು ರೊಟ್ಟಿ, ಪುಂಡಿಪಲ್ಲೆ ಅಡುಗೆ ಮಾಡುತ್ತಾರೆ. ದನಕರುಗಳಿಗೆ ಮೈತೊಳೆದು ಸಿಂಗರಿಸುತ್ತಾರೆ. ಅವುಗಳೊಟ್ಟಿಗೆ ಹೊಲಕ್ಕೆ ಹೋಗಿ, ಹಿಂಗಾರಿನ ಫಸಲಿಗೆ ಪೂಜೆ ಮಾಡುತ್ತಾರೆ. ಹೊಲದಲ್ಲೇ ಊಟ ಮಾಡುತ್ತಾರೆ. ಸಂಜೆ ಮನೆಗೆ ಬರುವಾಗ ಹೊಲದಿಂದ ಎಳ್ಳಿನ ಕಡ್ಡಿಗಳ ತರುತ್ತಾರೆ. ಅವನ್ನು ಮನೆಯ ಮುಂದೆ ಹರಡಿ, ಬೆಂಕಿ ಹಾಕುತ್ತಾರೆ. ದನಕರುಗಳನ್ನು ಬೆಂಕಿಯಲ್ಲಿ ಹಾಯಿಸಿ ಮನೆಗೆ ಬರಮಾಡಿಕೊಳ್ಳುತ್ತಾರೆ.

ದನಕರು ಇಲ್ಲದವರು ಹೊಳೆಗೆ ಹೋಗಿ, ಜಳಕ ಮಾಡಿ, ಮನೆಯಿಂದ ತಂದ ಬುತ್ತಿ ತಿಂದು, ದೇವಸ್ಥಾನದಲ್ಲಿ ಪೂಜೆ ಮುಗಿಸಿ ಮನೆಗೆ ಬರುತ್ತಾರೆ.

ಮರೆಯಾಗುತ್ತಿರುವ ಸೊಬಗು

ಸಂಕ್ರಾಂತಿಯ ಸೊಬಗು ಮೆಲ್ಲಗೆ ಕರಗುತ್ತಿದೆ. ಅಂಗಡಿಯ ಕೊಂಡು ತರುವ ಬಣ್ಣದ ಸಕ್ಕರೆ ಅಚ್ಚು, ಎಳ್ಳು ಬೆಲ್ಲದ ಪ್ಯಾಕೆಟ್, ಕಬ್ಬಿನ ತುಂಡು ನೆರೆಹೊರೆಯವರಿಗೆ ನೀಡುವುದೇ ಸಂಕ್ರಾಂತಿ ಎಂಬಂತಾಗಿದೆ. ವೈಭೋಗದ ಪ್ರದರ್ಶನವೇ ಸಂಕ್ರಾಂತಿಯ ಆಚರಣೆಯಾಗುತ್ತಿದೆ. 'ಎಳ್ಳು ಬೆಲ್ಲ ತಿಂದು ಒಳ್ಳೆಯವರಾಗೋಣ' ಎಂಬ ಸೂತ್ರಕ್ಕೆ ಮಾಧ್ಯಮಗಳು ಜೋತು ಬಿದ್ದಿರುವುದರಿಂದ, ಇಡೀ ದಿನ ಕಿರುತೆರೆಯಲ್ಲಿ ಹೊಸ ಸೀರೆ ಉಟ್ಟು ಸಂಭ್ರಮಿಸುವ ಸೀರಿಯಲ್ ನಾಯಕಿಯರು, ಪಂಚೆ, ಬಿಳಿ ಷರಟು ತೊಟ್ಟ ನಟರು ಕಾಣಸಿಗುತ್ತಾರೆ. ಪೊಂಗಲ್, ಎಳ್ಳು, ಬೆಲ್ಲದ ಅಚ್ಚು, ಕಬ್ಬು ಮಾತ್ರ ಇವರಿಗೆ ಸಂಕ್ರಾಂತಿಯ ಸಂಕೇತಗಳು. ಪ್ರಕೃತಿಯನ್ನು ಪ್ರತಿನಿಧಿಸುವ ಕಾಟುಮರಾಯ, ಪಿಳ್ಳೇರಾಯ, ಅಣ್ಣೆ ಸೊಪ್ಪು, ಪುಂಡಿಪಲ್ಲೆ ಇವರ ಕಣ್ಣಿಗೆ ಬೀಳುವುದಿಲ್ಲ.

ಸಂಕ್ರಾಂತಿ ಗ್ರಾಮೀಣರ ಹಬ್ಬ. ನಿಸರ್ಗ ಮತ್ತು ಜಾನುವಾರುಗಳ ಆರಾಧಿಸುವ ಹಲವಾರು ಬಗೆಯ ಆಚರಣೆಗಳು ಕನ್ನಡ ನಾಡಿನ ಉದ್ದಕ್ಕೂ ಚಾಲ್ತಿಯಲ್ಲಿವೆ. ಇವುಗಳ ಬದಲು ನಗರ ಸಂಸ್ಕೃತಿಯ ಎಳ್ಳು ಬೆಲ್ಲ ಸಂಕ್ರಾಂತಿಯ ಸಂಕೇತವಾಗುತ್ತಿರುವುದು ವಿಷಾದಕರ. ಈ ವರ್ಷ ವಾರಗಟ್ಟಲೆ ಬಿಡದೆ ಸುರಿದ ಮಳೆ ಕೃಷಿಕರನ್ನು ಕಂಗೆಡಿಸಿದೆ. ಹತ್ತಿ, ಶೇಂಗಾ, ಸೂರ್ಯಕಾಂತಿಯಂಥ ವಾಣಿಜ್ಯ ಬೆಳೆಗಳು ಸಂಪೂರ್ಣ ನೆಲಕಚ್ಚಿವೆ. ರಾಗಿ, ಸಾವೆ, ಭತ್ತ ಮನೆ ಬಳಕೆಗೆ ಆದರೆ ಹೆಚ್ಚು ಎಂಬಂತಹ ಸ್ಥಿತಿ ಇದೆ. ಸುಗ್ಗಿಯ ಸಂಭ್ರಮವೇ ಕಾಣುತ್ತಿಲ್ಲ. ಈ ನಡುವೆ ಓಮೈಕ್ರಾನ್ ಅವಾಂತರ ಶುರುವಾಗಿದೆ.

ಸಂಕ್ರಾಂತಿ ಸಂಭ್ರಮವೂ ಇಲ್ಲ; ಬದುಕು ಕಟ್ಟಿಕೊಳ್ಳುವ ಭರವಸೆಯೂ ಇಲ್ಲ.

ಲೋಕ ಹೃದಯದ ಕವಿ

ಮಲ್ಲಿಕಾರ್ಜುನ ಕಡಕೋಳ

'ಕುರುಕ್ಷೇತ್ರ'ದಲ್ಲೊಂದು ಒಡ್ಡೋಲಗ

ವೃತ್ತಿರಂಗಭೂಮಿಯ ಪೂರ್ವಸೂರಿ ನಾಟಕಕಾರರೆಂದರೆ ಕವಿಗಳೇ.

ಬಾ ಶುಭ ಪ್ರತಿಮಾ/ ಶಾಮಾ ಬೆಳಗಲಿ ಭಾರತ

ಎಂಬುದು ಕುರುಕ್ಷೇತ್ರ ನಾಟಕದ ಕಂದಪದ್ಯ. ಇದನ್ನು ರಚಿಸಿದ ಕವಿ, ಕನ್ನಡ ರಂಗಭೂಮಿಯ ಶೇಕ್ಸ್‌ಪಿಯರ್ ಎಂದೇ ಖ್ಯಾತರಾದ ಕಂದಗಲ್ಲ ಹಣಮಂತರಾಯರು. ಕೃಶಕಾಯದ ರಾಯರ ತೋರು ಚಹರೆಯೇ ಸೀದಾ ಮತ್ತು ಸಾದಾ. ಗಾಂಧೀ ಚಾಳೀಸು, ನಾಸೀ ಬಣ್ಣದ ಕೋಟು, ರಟ್ಟಿನ ಕರಿಟೊಪ್ಪಿಗೆ, ಕೋಟಿನ ಕಿಸೆಯಲ್ಲೊಂದು ಕಡ್ಡಿ ಬೀಡಿಕಟ್ಟು. ಇದು ಹೊರಗಣ್ಣಿಗೆ ಕಾಣುವ ಕಂದಗಲ್ಲ ರಾಯರು. ಆದರೆ ರಾಯರ ಅಂತರಂಗದ ಕಟ್ಟುಮಸ್ತಾದ ರಂಗತಾಕತ್ತು ಅಮೋಘ. ತಮ್ಮ ರಂಗಕೃತಿಗಳ ಮೂಲಕ ಕನ್ನಡ ರಂಗಭೂಮಿಯ ಭೂಮತ್ವ ಬಲಾಢ್ಯಗೊಳಿಸಿದವರು ರಾಯರು. ಅವರು ಕಾಲವಾಗಿ (ಜನನ: 11.01.1896, ಮರಣ: 13.09.1966) ಅರ್ಧ ಶತಮಾನಕ್ಕೂ ಹೆಚ್ಚು ಕಾಲವಾಯಿತು.

ರಾಮಾಯಣ ಮಹಾಭಾರತಗಳು ಈ ನೆಲದಲ್ಲಿ ಇರುವವರೆಗೂ ರಾಯರು ಜನಸಾಮಾನ್ಯರ ಹೃದಯದಲ್ಲಿ ನೆಲೆಸಿರುತ್ತಾರೆ. ಪುರಾಣದ ಕಥನಗಳಿಗೆ ರಂಗಕಾವ್ಯದ ಮೆರಗು ತುಂಬಿದವರು ಅವರು. ಹೌದು ಅವರ ನಾಟಕಗಳಿಗೆ ಪದ್ಯಗಂಧೀ ಪರಿಮಳದ ಘಮಲು. ಧ್ಯಾನಸ್ಥತೆ ಮತ್ತು ಧನ್ಯತೆಗಳೆರಡೂ ಅವರ ಪೌರಾಣಿಕ ನಾಟಕಗಳ ಧಾತುಪ್ರಜ್ಞೆ.

ಅಂತೆಯೇ ಕುವೆಂಪು ಅವರು ಕಂದಗಲ್ಲ ರಾಯರನ್ನು ಕುರಿತು ಹೀಗೆ ಹೇಳುತ್ತಾರೆ: 'ರಗಳೆಗಳನ್ನು ಸರಳೀಕರಿಸಿ ರಂಗಭಾಷೆಯ ಬೆಸುಗೆ ಹಾಕುವ ಯಶಸ್ವಿ ರಂಗಸಾಹಿತ್ಯದ ರಸಋಷಿ ಕಂದಗಲ್ ಹನುಮಂತರಾಯರು'. ಇನ್ನು ಬೇಂದ್ರೆಯವರು ಹೀಂಗ ಹೇಳ್ತಾರ: 'ಔನ್ನತ್ಯದ ರಂಗನಾಟಕಗಳ ಅರಿವು, ಹರಿವು, ಇರುವನ್ನು ಸಾಹಿತ್ಯದ ವಿದ್ವಾಂಸರಂತೆ ಮುಗ್ಧನೊಬ್ಬನಲ್ಲಿ ಖುಷಿ ಉಕ್ಕಿಸುವ ಕವಿ ನಮ್ಮ ಕಂದಗಲ್ಲ ಹಣಮಂತ್ರಾಯ'. ನಲವಡಿ ಶ್ರೀಕಂಠ ಶಾಸ್ತ್ರಿಗಳು ರಾಯರನ್ನು ಬೆಳ್ಳಿಚುಕ್ಕಿ ಎಂದು ಕರೆದಿದ್ದಾರೆ. ಹಾಗೆ ಕರೆಯಲು ಮಹತ್ವದ ಸಾಹಿತ್ಯಿಕ ಕಾರಣವಿತ್ತು. ರಾಯರು 'ಬೆಳ್ಳಿಚುಕ್ಕಿ' ಎಂಬ ನಾಟಕ ಬರೆದು ಮುಗಿಸಿ ಮಹಾಂತೇಶ ಶಾಸ್ತ್ರಿ ಮತ್ತು ನಲವಡಿಯವರಿಗೆ ಅದನ್ನು ಓದಿ ಹೇಳುವ ಕಾರ್ಯಕ್ರಮ. ಹಾಗೆ ಓದಿಹೇಳಿ ಸಂವಾದಿಸುವುದು ಆ ಕಾಲದ ರಂಗಸಂಸ್ಕೃತಿಯೇ ಆಗಿತ್ತು.

> ಕನ್ನಡ ರಂಗಭೂಮಿಯ ಶೇಕ್ಸ್‌ಪಿಯರ್ ಎಂದೇ ಖ್ಯಾತರಾದವರು ಕಂದಗಲ್ಲ ಹಣಮಂತರಾಯರು. ರಾಮಾಯಣ ಮಹಾಭಾರತಗಳು ಈ ನೆಲದಲ್ಲಿರುವಷ್ಟು ಕಾಲವೂ ಪುರಾಣದ ಕಥನಗಳಿಗೆ ರಂಗಕಾವ್ಯದ ಮೆರುಗು ತುಂಬಿದ ರಾಯರು ಜನಸಾಮಾನ್ಯರ ಹೃದಯದಲ್ಲಿ ನೆಲೆಸಿರುತ್ತಾರೆ.

ಇಂತಹ ಸಹೃದಯ ಓದು ಆಲಿಕೆಯ ರಂಗಾನುಸಂಧಾನದ ಸಂತಸ, ಸಡಗರದಲ್ಲಿ ಪಾಲ್ಗೊಂಡ ನಲವಡಿ ಅವರಿಂದ ತಮ್ಮ ರಂಗಕೃತಿಗೆ ಶುಭ ಹಾರೈಕೆಯ ಹಾಡು ಬರೆಸುವ ಸದಪೇಕ್ಷೆ ರಾಯರದು. ನಲವಡಿಯವರು ದುಸರಾ ಮಾತಾಡದೇ ಶ್ರೀಕಾರ ಹಾಕಿ ಹಾಡು ಬರೆದೇಬಿಟ್ಟರು.

ಮೂಡಿಬಾರ ಬೆಳ್ಳಿಚುಕ್ಕಿ/ಹಾಡತೈತಿ ಬೆಳಗಿನ ಹಕ್ಕಿ...

ಪುಣೆಯ ಸೇನಾಪಡೆಯಲ್ಲಿದ್ದ ಕಾರಕೂನ ನೌಕರಿ ಬಿಟ್ಟುಬಂದ ಹಣಮಂತರಾಯರು ಮಿಲ್ಟ್ರಿಯ ಶಿಸ್ತನ್ನು ಅಲ್ಲೇ ಬಿಟ್ಟು ಬರಲಿಲ್ಲ. ತಾವು ಬರೆಯುವ ನಾಟಕಗಳಿಗೆ ಅದನ್ನು ಹಾಳತವಾಗಿ ಬಳಸಿಕೊಂಡರು. ರಾಮಾಯಣ ಮಹಾಭಾರತ ಕಾವ್ಯಗಳನ್ನು ಕಲಾತ್ಮಕವಾಗಿ ಲೋಕಮಾನಸಕ್ಕೆ ಮುಟ್ಟಿಸುವ ಅವರಷ್ಟು ಸಮರ್ಥ ಇನ್ನೊಬ್ಬರು ಸಾರಸ್ವತ ಜಗದಲ್ಲಿ ಸಿಗಲಾರರು.

'ರಕ್ತ ರಾತ್ರಿ' ನಾಟಕದ ದೃಶ್ಯ

ಸಾಮಾನ್ಯ ಕಲಾವಿದನು ಬಾಯಿಪಾಠ ಮಾಡಿದ ರಾಯರ ನಾಟಕಗಳ ಸಂಭಾಷಣೆಗಳನ್ನು ರಂಗಮಂಟಪದಲ್ಲಿ ಧ್ವನಿಪೂರ್ಣವಾಗಿ ಹೇಳಿದರೆ ಸಾಕು. ಅವಕ್ಕೆ ಚಪ್ಪಾಳೆಗಳ ಸುರಿಮಳೆ. ಯಾಕೆಂದರೆ ಅವು ಬರೀ ಮಾತುಗಳಲ್ಲ, ವಜ್ರದ ನುಡಿಗಡಲು. ತಲಸ್ಪರ್ಶಿ ಡೈಲಾಗುಗಳು ವರ್ತಮಾನದ ಸಮಾಜಮುಖಿ ರಂಗಸಂಸ್ಕೃತಿಯ ಬೆರಗು ಮತ್ತು ಬೆಡಗಿನ ರೂಪಕ ಸಂಕೇತಗಳಾಗಿವೆ.

ಶ್ರೀ ಅರವಿಂದ ಸಂಗೀತ ನಾಟ್ಯ ಮಂಡಳಿ (1940) ಎಂಬ ನಾಟಕ ಕಂಪನಿಯೊಂದನ್ನು ಕಟ್ಟಿದ ರಾಯರು ಅದಕ್ಕೆ ಪೂರ್ವದಲ್ಲಿ (1937) ಲಲಿತ ನಾಟ್ಯ ಸಂಗೀತ ಮಂಡಳಿ ಕಟ್ಟಿ ಮೈ, ಕೈಗಳನ್ನೆಲ್ಲ ಸುಟ್ಟುಕೊಂಡರು. ಅದಕ್ಕಾಗಿ ಸಾಲ ಮಾಡಿದರು. ಮಾಡಿದ ಸಾಲ ತೀರಿಸಲು ಮತ್ತೆ ಸಾಲ ಮಾಡಿದರು. ಸಾಲ ಕೊಟ್ಟ ಧನಾಢ್ಯರು ಸುಮ್ಮನಾಗಲಿಲ್ಲ. ಇವರನ್ನು ಕೋರ್ಟು ಕಟಕಟೆ ಹತ್ತಿಸಿದರು. ಕಡೆಗೆ ಸಾಲ ತೀರಿಸಲಾಗದೇ ರಾಯರು ಜೈಲು ವನವಾಸ ಅನುಭವಿಸಬೇಕಾಯ್ತು.

ಹಾಗೆ ಸೆರೆಮನೆವಾಸದಲ್ಲಿದ್ದಾಗಲೇ ಹುಟ್ಟಿಕೊಂಡ ನಾಟಕವೇ 'ಬಡತನದ ಭೂತ' ಎಂಬ ಅನನ್ಯ ರಂಗಕೃತಿ. ತಾವೇ ಅನುಭವಿಸಿದ ಕ್ರೂರ ಬಡತನದ ಬುತ್ತಿ ಅದಾಗಿತ್ತು. ಅವರಿಗೆ ಉಂಡುಡಲು ಯಥೇಚ್ಛವಾಗಿದ್ದುದೇ ಬಡತನ. ರಾಯರ 'ಬಡತನದ ಭೂತ' ನಾಟಕ ಪ್ರದರ್ಶನಗಳಿಂದ ಕೆಲವರು ಶ್ರೀಮಂತರಾದರು. ಆದರೆ ಕಂದಗಲ್ಲರ ಕಡುಬಡತನ ಮಾತ್ರ ಸಾವಿನ ಕಡೇ ಗಳಿಗೆವರೆಗೂ ಇಡಿಗಂಟಿನ ಒಡನಾಡಿಯಾಗಿತ್ತು.

ಜೆ.ಎಚ್.ಪಟೇಲರು ಈ ನಾಟಕ ಓದಿ ಪ್ರಭಾವಿತರಾಗಿ ತಮ್ಮೂರಲ್ಲಿ ಪ್ರದರ್ಶನ ಮಾಡಿಸಿದರು. ಈ ನಾಟಕದಲ್ಲಿ ಖುದ್ದು ಪಟೇಲರು ಇಂದ್ರಚರಣ್ ಎಂಬ ಪ್ರಮುಖ ಪಾತ್ರ ಮಾಡಿದರು. ಅವರ ತಮ್ಮ ಎಸ್.ಎಚ್.ಪಟೇಲರು 'ನೀಲಾ' ಎಂಬ ಇಂದ್ರಚರಣನ ತಂಗಿಯ ಪಾತ್ರ ಮಾಡಿದರು. ಆ ಕಾಲದ ಅವರ ಹಳ್ಳಿಯ ಅದು ಯಶಸ್ವೀ ಪ್ರದರ್ಶನ. ಅಂದಿನ ಶಿವಮೊಗ್ಗ ಜಿಲ್ಲೆಯ ಕಾರಿಗನೂರೆಂಬ ಹಳ್ಳಿಯ ಶ್ರೀಮಂತ ಸುಶಿಕ್ಷಿತರು, ಪ್ರಖರ ವಾಗ್ಮಿಗಳು, ಕಾನೂನು ತಜ್ಞರು ಆಗಿದ್ದ ಪಟೇಲ ಸಹೋದರರನ್ನು 'ಬಡತನದ ಭೂತ' ಪ್ರಭಾವಿಸಿದ್ದು ಅಕ್ಷರಶಃ ಉಲ್ಲೇಖನೀಯ.


ಕಂದಗಲ್ಲ ಹಣಮಂತರಾಯ

ಹಿಂದೂಸ್ತಾನ ಮತ್ತು ಪಾಕಿಸ್ತಾನ ಅವಳಿ ಸಂಬಂಧಗಳ ಅಗಾಧ ಐತಿಹ್ಯ ಪ್ರಜ್ಞೆಗಳು ಅವರಲ್ಲಿ ಅಚ್ಚೊತ್ತಿದ್ದವು. ಅಂತೆಯೇ ಕಂದಗಲ್ಲರ ಮನೋವಾಂಛೆಯ ಪ್ರಗಲ್ಭ ಪರಿಕಲ್ಪನೆಗಳು ಅನೂಹ್ಯವಾಗಿದ್ದವು. ಇಂತಹ ಅನಂತ ಸೂಕ್ಷ್ಮತೆಯ ಮಹಾಭಾರತದ ಸೋದರ ಕಲಹಗಳ ಐತಿಹಾಸಿಕ ಸತ್ಯಗಳನ್ನು ಚರಿತ್ರೆಗಳೊಂದಿಗೆ ತಾದಾತ್ಮ್ಯಗೊಳಿಸಿದರು. ಹಾಗೆ ಮಾಡುವ ಮೂಲಕ ದೃಶ್ಯಾಂಕಗಳಿಗೆ ಬಗೆ ಬಗೆಯ ಬಣ್ಣ ತುಂಬಿದರು. ರಕ್ತರಾತ್ರಿ, ಕುರುಕ್ಷೇತ್ರ ನಾಟಕಗಳ ಕರಡು (ಸ್ಕ್ರಿಪ್ಟ್) ಪ್ರತಿ ಹಿಡಕೊಂಡು ನಾಟಕ ಕಂಪನಿಗಳಿಗೆ ಅಲೆದಾಡಿದರು. ಕಾವ್ಯಾತ್ಮಕ ಸಂಭಾಷಣೆಗಳನ್ನು ಕಬ್ಬಿಣದ ಕಡಲೆಯೆಂದು ಹೆದರಿ ಯಾರೊಬ್ಬರೂ ಪ್ರದರ್ಶನಕ್ಕೆ ಮುಂದೆ ಬರಲ್ಲ. ಕಡೆಗೆ ಗಟ್ಟಿ ಮತ್ತು ಕೆಟ್ಟ ಧೈರ್ಯ ಮಾಡಿದವರೆಂದರೆ ಶಾರದಾ ನಾಟ್ಯ ಮಂಡಳಿಯ ಗೋಕಾಕ ಭಗವಂತಪ್ಪ ಮತ್ತು ಬಸವಣ್ಣೆಪ್ಪನವರು. ಇದೆಲ್ಲ ಅಜಮಾಸು ಎಂಬತ್ತು ವರ್ಷಗಳ ಹಿಂದಿನ ಹಕೀಕತ್ತು. ಆದರೆ ಅದಕ್ಕೆ ಮೊದಲು ಅವರು ಎರಾಸಿ ಭರಮಪ್ಪನವರ ವಾಣಿ ವಿಲಾಸ ನಾಟಕ ಕಂಪನಿಗೆ ರಚಿಸಿಕೊಟ್ಟ ನಾಟಕದ ಹೆಸರು ವರಪ್ರದಾನ.

ಅಂತೆಯೇ ರಾಯರ ರಕ್ತರಾತ್ರಿ, ಕುರುಕ್ಷೇತ್ರ, ಅಕ್ಷಯಾಂಬರ, ಚಿತ್ರಾಂಗದ ನಾಟಕಗಳನ್ನು ಆಡದ ಹಳ್ಳಿಗಳೇ ಕನ್ನಡ ನಾಡಿನಲ್ಲಿ ಇಲ್ಲ ಎನ್ನುವಷ್ಟು ಅವು ಸುಪ್ರಸಿದ್ಧಿಯನ್ನು ಗಳಿಸಿದವು. ವರ್ತಮಾನದಲ್ಲೂ ಈ ನಾಟಕಗಳ ಪ್ರಸ್ತುತತೆ ಬೇಡಿಕೆಯಂತೆ ಇರುವುದನ್ನು ಯಾರಿಂದಲೂ ಅಲ್ಲಗಳೆಯಲಾಗದು.

ರಾಯರಿಂದ ನಾಟಕಗಳನ್ನು ಬರೆಸಿಕೊಂಡ ಪ್ರಕಾಶಕರು, ನಾಟಕ ಕಂಪನಿ ಮಾಲೀಕರು ಉದ್ಧಾರವಾದರು. ಅಷ್ಟಕ್ಕೂ ಆಗ ಗದಗ ಪಟ್ಟಣ ಪುಸ್ತಕ ಪ್ರಕಟಣ ಜಗತ್ತೇ ಆಗಿತ್ತು. ಇವರ ಕೈಬರಹದ ನಾಟಕಗಳನ್ನು ಪ್ರಕಟಿಸುವ ಪ್ರಕಾಶಕರು ರಾಯರಿಗೊಂದು ಮಸಿಕುಡಿಕೆಯ ದೌತಿಗುಳ್ಳಿ (Inkpot), ಟಾಕು (ಲೆಕ್ಕಣಿಕೆ), ಒಂದು ಬುರುಜು ಗದಗ ನರಸಿಂಗಸಾ ಬೀಡಿ ಬಂಡಲ್ ಕೊಡಿಸಿ ಅವರ ಕೈಯಲ್ಲಿ ನಲವತ್ತೋ ಐವತ್ತೋ ರೂಪಾಯಿ ಇಟ್ಟರೆ ಅದೇ ದೊಡ್ಡಮೊತ್ತದ ಗೌರವ. ಮೇಲಾಗಿ ಗಂಟೆಗೊಂದು ಕಪ್ ಬೆಲ್ಲದ ಚಹಾ ವ್ಯವಸ್ಥೆ (ಹೌದು ರಾಯರಿಗೆ ಮನೆಯಲ್ಲಿ ಅರ್ಧ ತಾಸಿಗೊಂದು ಬಾರಿ ಹಿತ್ತಾಳಿ ವಾಟಿಯ ಚಹ ಖಾಯಂ ಬೇಕಿತ್ತು). ಅಂತೆಯೇ ರಾಯರ ವಾರಗೆಯ ಮತ್ತೊಬ್ಬ ಮಹತ್ವದ ನಾಟಕಕಾರ ಎಚ್. ಟಿ. ಮಹಾಂತೇಶ ಶಾಸ್ತ್ರಿಯವರು 'ರಾಯರಿಗೆ ತುಂಬಾ ಕಮ್ಮೀ ಸಂಭಾವನೆ ನೀಡುತ್ತಿದ್ದೀರಿ' ಎಂದು ಅಂತಹ ಪ್ರಕಾಶಕರಿಗೆ ಬರೋಬ್ಬರಿ ಕ್ಲಾಸ್ ತಗೊತಿದ್ದರಂತೆ.

ಪಾರ್ಸಿ, ಬಂಗಾಳಿ, ಇಂಗ್ಲಿಷ್ ರಂಗಸಾಹಿತ್ಯದ ಪರಿಚಯವಿದ್ದ ರಾಯರಿಗೆ ಮರಾಠಿ ನಾಟಕಗಳ ನಿತಾಂತ ಪ್ರಭಾವವಿತ್ತು. ಕಿರ್ಲೋಸ್ಕರ್, ಗಡ್ಕರಿ, ಅತ್ರೇಯವರಂತಹ ಮರಾಠಿ ನಾಟಕಕಾರನ್ನು ಓದಿ, ನಾಟಕಗಳನ್ನು ನೋಡಿ ಅರಿತುಕೊಂಡಿದ್ದರು. ಹೀಗೆ ಮರಾಠಿ ರಂಗಭೂಮಿಯಿಂದ ಎಷ್ಟೇ ಪ್ರಭಾವಿತರಾಗಿದ್ದರೂ ಕನ್ನಡದ ದೇಸಿ ನೆಲೆಯ ಸರೋವರದೊಳಗೆ ಮುಳುಗಿ ಬರೆಯುವಲ್ಲಿ ರಾಯರು ನಿಷ್ಣಾತರು. ಅದು ಅವರ ಬದ್ಧಕಾವ್ಯದ ಸೋಪಜ್ಞತೆಯೇ ಹೌದು. ಜನಸಾಮಾನ್ಯರ ಮನೋಭೂಮಿಕೆಗೆ ಮಿಡಿಯುವ ಪ್ರಾಣಮಿತ್ರತ್ವದ ಆಪ್ತ ರಂಗಶಕ್ತಿ ಅವರ ನಾಟಕಗಳ ಜೀವಾಳ.

ಆದರೆ, ಕನ್ನಡ ವಿಮರ್ಶಾಲೋಕದ ಬೃಹಸ್ಪತಿಗಳು ರಾಯರ ರಂಗಸಾಹಿತ್ಯ ಗುರುತಿಸದೇ ಹೋದುದು ಸಾಂಸ್ಕೃತಿಕ ದುರಂತವೇ ಸೈ. ರಂಗಮೀಮಾಂಸಕರಿಗೆ ಆಧುನಿಕ ರಂಗಭೂಮಿಯ ಮೇಲಿದ್ದ ಅರ್ಧದಷ್ಟು ಪ್ರೀತಿ ವೃತ್ತಿರಂಗದ ಮೇಲಿರಲಿಲ್ಲ. ಕನ್ನಡ ರಂಗಭೂಮಿ ಚರಿತ್ರೆಕಾರರು ವೃತ್ತಿ ರಂಗಭೂಮಿಯನ್ನು ಕಡೆಗಣ್ಣಿನಿಂದ ಕಂಡಿದ್ದಾರೆ. ವೃತ್ತಿ ರಂಗಸಾಹಿತ್ಯವನ್ನು ಪ್ರಧಾನ ಸಂಸ್ಕೃತಿ ಧಾರೆಗೆ ಸೇರಿಸುವುದು ಒತ್ತಟ್ಟಿಗಿರಲಿ, ಅಧೀನ ರಂಗ ಸಂಸ್ಕೃತಿಯಂತೆಯೂ ಕಾಣಲಿಲ್ಲ. ಎರಡನೇ ದರ್ಜೆಯ ಸಾಹಿತ್ಯದಂತೆ ನಿರ್ಲಕ್ಷಿತ ನೆಲೆಗಳಲ್ಲಿಟ್ಟು ನೋಡಿದರು. ವಾಸ್ತವವಾಗಿ ಇದು ಪ್ರಧಾನ ಸಂಸ್ಕೃತಿಗೆ ಸೇರಬೇಕಾದ ಪ್ರಕಾರ. ಇದು ಹಣಮಂತರಾಯರನ್ನು ಕುರಿತು ಹೇಳುವ ಉಲ್ಲೇಖನೀಯ ಮಾತಾಗಿರದೇ, ಸಮಗ್ರ ವೃತ್ತಿ ರಂಗಭೂಮಿಯನ್ನು ಕಡೆಗಣಿಸಿರುವ ಮತ್ತು ರಂಗೇತಿಹಾಸಕಾರರು ತೋರಿದ (ಅ) ಪ್ರಜ್ಞಾಪೂರ್ವಕ ಅವಜ್ಞೆಯೇ ಆಗಿದೆ. ಆದರೆ, ವೃತ್ತಿರಂಗಭೂಮಿ ಜನಸಾಮಾನ್ಯರ ಲೋಕ ಮೀಮಾಂಸೆಯ ಅಖಂಡ ಪ್ರೀತಿ ಗಳಿಸಿ ಲೋಕೋಪಯೋಗಿ ಸಂಸ್ಕೃತಿಯಂತೆ ಬೆಳೆಯಿತು.

ಕನ್ನಡ ರಂಗಸಂಸ್ಕೃತಿಯ ಮೇರುಪರ್ವತವೇ ಆಗಿರುವ ರಾಯರ ಕೃತಿಗಳ ಸಮಗ್ರ ಅಧ್ಯಯನ, ಸಂಶೋಧನೆ, ಅನ್ಯಶಿಸ್ತುಗಳ ಮೂಲಕ ಗ್ರಹಿಸುವ ವಿವೇಕದ ಒಳನೋಟಗಳ ಕೆಲಸಗಳು ಆಗಬೇಕಿದೆ. ಅವರ ಹೆಸರಲ್ಲಿ ಅಂತಹದ್ದೊಂದು ವೃತ್ತಿ ರಂಗಭೂಮಿ ಅಭಿವೃದ್ಧಿ ಪ್ರಾಧಿಕಾರ ಪ್ರತಿಷ್ಠಾಪನೆಯ ಅಗತ್ಯವಿದೆ. ಅವರು ತೀರಿಹೋಗಿ ಅರ್ಧ ಶತಮಾನವೇ ಮೀರಿದರೂ ಸರ್ಕಾರ ಮತ್ತು ಸಂಸ್ಕೃತಿ ಇಲಾಖೆ ಆ ದಿಕ್ಕಿನಲ್ಲಿ ಆಲೋಚನೆ ಕೂಡ ಮಾಡಿಲ್ಲ.

ಅದೇ ಅವಿಭಜಿತ ವಿಜಯಪುರ ಜಿಲ್ಲೆಯವರಾದ ಆಧುನಿಕ ರಂಗಭೂಮಿಯ ಶ್ರೀರಂಗರ ಕುರಿತು 'ಶ್ರೀರಂಗ ಸಾರಸ್ವತ' ಎಂಬ ಸಹಸ್ರ, ಸಹಸ್ರ ಪುಟಗಳ ಸಂಪುಟಗಳನ್ನೇ ಇಲಾಖೆ ಪ್ರಕಟಿಸಿದೆ. ಅದು ಸ್ವಾಗತಾರ್ಹ. ಆದರೆ ಅದೇ ಜಿಲ್ಲೆಯ ಕಂದಗಲ್ಲರ ವ್ಯಕ್ತಿತ್ವ, ರಂಗ ಸಾಧನೆ ಕುರಿತು ಗಂಭೀರ ಚಿಂತನೆ ಮಾಡಲಿಲ್ಲ. ಅದು ಒತ್ತಟ್ಟಿಗಿರಲಿ ಕನ್ನಡ ರಂಗಸಂಸ್ಕೃತಿಯ ಮಹತ್ವದ ಪ್ರಾಕಾರವೇ ಆಗಿರುವ ಸಮಗ್ರ ವೃತ್ತಿರಂಗಭೂಮಿಯ ಕುರಿತಾದ ಒಂದೇ ಒಂದು ಸಂಪುಟ ಗಾತ್ರದ ಪುಸ್ತಕ ಪ್ರಕಟಿಸಬಾರದೇ?

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಜ್ಗ ಚಕ್ಕುಕೀಶ್ರಷ್ಟು ಕಥೆಯ ಪುಣ್ಯಕೋಟಿ ಮತ್ತು ಹುಲಿ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಒಂದು ಕಾಡಿನಲ್ಲಿ ಕಾಳಿಂಗ ಎಂಬ ಗೊಲ್ಲ ಕೊಳಲನ್ನು ಊದುತ್ತಾ ಹಸುಗಳನ್ನು ಮೇಯಿಸುತ್ತಿದ್ದ. ಈ ಹಸುಗಳ ಗುಂಪಿನಲ್ಲಿ ಪುಣ್ಯಕೋಟಿ ಎಂಬ ಹಸುವೂ ಇತ್ತು

ಇದೇ ಕಾಡಿನಲ್ಲಿ ಹಸಿದಿದ್ದ ಹುಲಿಯೊಂದು ಯಾವುದೇ ಬೇಟೆ ಸಿಗದೆ, ಪುಣ್ಯಕೋಟಿಯನ್ನು ಕೊಂದು ತಿನ್ನಬೇಕು ಎಂದು ಹೊಂಚು ಹಾಕಿ ಕಾದು ಕುಳಿತಿತ್ತು

ಹಟ್ಟಿಗೆ ಹೋಗುತ್ತಿದ್ದ ಹಸುವನ್ನು ತಡೆದ ಹುಲಿಯು ಕೊಂದು ತಿನ್ನುತ್ತೇನೆ ಎಂದಿತು. 'ಹುಲಿಯೇ ಒಂದು ನಿಮಿಷ ತಾಳು, ಹಟ್ಟಿಗೆ ಹೋಗಿ ಕರುವಿಗೆ ಹಾಲು ಕೊಟ್ಟು ಬರುತ್ತೇನೆ' ಎಂದು ಕೋರಿತು

ಪುಣ್ಯಕೋಟಿಯು ಹಟ್ಟಿಗೆ ಹೋಗಿ ಕರುವಿಗೆ ಹಾಲು ಕೊಟ್ಟು ಹುಲಿಗೆ ಕೊಟ್ಟ ಮಾತನ್ನು ಹೇಳಿ, ಸತ್ಯ ಪಾಲನೆಗಾಗಿ ಕಾಡಿಗೆ ಹೋಗುತ್ತೇನೆ ಎಂದು ಹೇಳಿತು. ಕರುವು ಕಣ್ಣೀರು ಹಾಕಿತು

ನನ್ನ ಕರುವನ್ನು ನಿಮ್ಮದೇ ಕರುವಿನಂತೆ ಚೆನ್ನಾಗಿ ನೋಡಿಕೊಳ್ಳಿ. ಹಾಯಬೇಡಿ, ಒದೆಯಬೇಡಿ ಎಂದು ಪುಣ್ಯಕೋಟಿಯು ಹಟ್ಟಿಯಲ್ಲಿದ್ದ ಇತರ ಹಸುಗಳಿಗೆ ಹೇಳಿತು

ಕೊಟ್ಟ ಮಾತು ಉಳಿಸಿ ಬಂದ ಪುಣ್ಯಕೋಟಿಯನ್ನು ನೋಡಿ ಹುಲಿಯ ಮನಸ್ಸು ಕರಗಿತು. ನಿನ್ನನ್ನು ಕೊಂದು ನಾನು ಏನು ಪಡೆಯಲಿ ಎಂದು ಪರಿತಪಿಸಿ ಎತ್ತರದಿಂದ ಹಾರಿ ಪ್ರಾಣ ಬಿಟ್ಟಿತು

ಗಣಿತದಲ್ಲಿ ಗರ್ದಿ ಗಮ್ಮತ್ತು

1 ಹಳ್ಳಿಗರು ಹೇಳುವ ಕಾಡಕಂಟಕ ಲೆಕ್ಕಗಳು

ಲೆಕ್ಕ 1. ಒಂದೂರಿನ ಗೌಡರಿಗೆ 9 ಹಗೇವುಗಳಿದ್ದವು. ಅವುಗಳಿಗೆ 1ನೇ ಹಗೇವಿನಲ್ಲಿ 1 ಚೀಲ, 2ನೇ ಹಗೇವಿನಲ್ಲಿ 2 ಚೀಲ, 3ನೇ ಹಗೇವಿನಲ್ಲಿ 3 ಚೀಲ, 4ನೇ ಹಗೇವಿನಲ್ಲಿ 4 ಚೀಲ, 5ನೇ ಹಗೇವಿನಲ್ಲಿ 5 ಚೀಲ, 6ನೇ ಹಗೇವಿನಲ್ಲಿ 6 ಚೀಲ, 7ನೇ ಹಗೇವಿನಲ್ಲಿ 7 ಚೀಲ, 8ನೇ ಹಗೇವಿನಲ್ಲಿ 8 ಚೀಲ, 9ನೇ ಹಗೇವಿನಲ್ಲಿ 9 ಚೀಲ ಜೋಳ ಹಾಕಿದ್ದರು. ಗೌಡರಿಗೆ ಮೂರು ಜನ ಗಂಡು ಮಕ್ಕಳು. ಕಾರಣಾಂತರದಿಂದ ಮೂವರು ಮಕ್ಕಳು ಬೇರೆ ಬೇರೆಯಾಗುವ ಸಂದರ್ಭ ಬಂತು. ಜೋಳ ಹಂಚಿಕೊಳ್ಳಲು ಮುಂದಾದರು. ಗೌಡರು ಹಗೇವುಗಳನ್ನು ತೆಗೆಸದೆ ಮೂವರು ಮಕ್ಕಳಿಗೂ ಸಮನಾಗಿ 3 ಜೋಳದ ಚೀಲಗಳನ್ನು ಹಂಚಿದರು. ಹಾಗಾದರೆ ಗೌಡರ ಹಂಚಿಕೆ ಹೇಗಿತ್ತು ನೀವೇ ಹೇಳಿ.

ಲೆಕ್ಕ 2. ಎರಡು ಗಿಳಿಗಳು ಹಾರಿ ಹೊರಟಿದ್ದವು. ಒಬ್ಬಾತ ಕೇಳಿದ, ನೀವು ಎಷ್ಟಿದ್ದೀರಿ? ಎಂದು. ಅದಕ್ಕೆ ಒಂದು ಗಿಳಿ ಹೇಳಿತು ನಾವು ನಮ್ಮಷ್ಟು, ನಮ್ಮರ್ಧ, ನಮ್ಮ ಗಿರ್ದ, ನೀನೊಬ್ಬ ಸೇರಿದರೆ 100 ಆಗುತ್ತೇವೆ. ಹಾಗಾದರೆ ನಾವು ಅಂದರೆ ಎಷ್ಟು?

ಶಬ್ದಗಳೊಡನೆ ಸರಸ ಅಕ್ಷರ ಆಟ

1 'ಗೆ'ಯಿಂದ ಕೊನೆಗೊಳ್ಳುವ ನಾಲ್ಕು ಹೂಗಳ ಹೆಸರು ಹೇಳಬಲ್ಲಿರಾ?

1 – ಗೆ
2 – ಗೆ
3 – ಗೆ
4 – ಗೆ

2 ಇಲ್ಲಿ ಕೊಟ್ಟಿರುವ ಪದಗಳಿಗೆ ಸಮಾನಾರ್ಥಕ ಪದ ಕಂಡುಹಿಡಿಯಬಲ್ಲಿರಾ? ಆದರೆ, ಆ ಪದಗಳೆಲ್ಲವೂ ಡಾ.ರಾಜ್ ನಟಿಸಿರುವ ಚಿತ್ರಗಳ ಹೆಸರಾಗಿರಬೇಕು.

1 ಧ್ಯೇಯ 2 ಬಂಧಮುಕ್ತ
3 ಚಂದನದ ದೇವಾಲಯ
4 ದಾರಿ ತೋರಿಸುವವ
5 ಅನಿರೀಕ್ಷಿತವಾದ

ಪದ - ಹಿಗ್ಗು

1 ಮಾರಿ 3 ಮೂಲೆ 5 ಒಟ್ಟು 7 ಸಾಣೆ
2 ಜರ 4 ಹಣ 6 ಸೋಸು 8 ಕಟ್ಟು

1		ರ		5		ಗ	
2		ರಿ		6		ಗು	
3		ಬ್ಬ		7		ಧು	
4		ಣ್ಕ		8		ಠ	

ಅದಲು ಬದಲು ಕಂಚಿ ಕದಲು

1 ದಯಾಪಾತ್ರೆ _ _ _ _
2 ನಾಣಿವೇಗ _ _ _ _
3 ದಾರಿಹಸ _ _ _ _
4 ಬಲಿಸಿದ _ _ _ _

ಟ್ವೆಂಟಿ–20 ಮ್ಯಾಚ್

ಇಲ್ಲಿ ಕೊಟ್ಟಿರುವ ವಾದ್ಯಗಳನ್ನು ಹೊಂದಿಸಿ

ಎ ವಿಭಾಗ			
1	ತಂತಿವಾದ್ಯ	A	ಶಿಲೆ
2	ಮರ್ದನವಾದ್ಯ	B	ವೀಣೆ
3	ವಾಯುವಾದ್ಯ	C	ಜಾಗಟೆ
4	ಜಲವಾದ್ಯ	D	ಡಮರುಗ
5	ಕಂಚುವಾದ್ಯ	E	ಏಕತಾರಿ
6	ದೇಗುಲವಾದ್ಯ	F	ನಗಾರಿ
7	ಶಿವನವಾದ್ಯ	G	ಜಲತರಂಗ
8	ಸಮರವಾದ್ಯ	H	ಡೊಳ್ಳು
9	ಹಂಪಿ ದೇವಾಲಯ ವಾದ್ಯ	I	ತಾಳ
10	ಜನಪದ ವಾದ್ಯ	J	ಕೊಳಲು

ವಿಶ್ವವಿದ್ಯಾಲಯಗಳಿಗೂ ಅವುಗಳು ಇರುವ ಸ್ಥಳಗಳಿಗೂ ಹೊಂದಿಸಿ

ಬಿ ವಿಭಾಗ			
1	ಕರ್ನಾಟಕ ವಿಶ್ವವಿದ್ಯಾಲಯ	A	ವಿಜಯಪುರ
2	ಕುವೆಂಪು ವಿಶ್ವವಿದ್ಯಾಲಯ	B	ಧಾರವಾಡ
3	ಕನ್ನಡ ವಿಶ್ವವಿದ್ಯಾಲಯ	C	ಶಿವಮೊಗ್ಗ
4	ರಾಜೀವಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯ	D	ಹಂಪಿ
5	ಮಹಿಳಾ ವಿಶ್ವವಿದ್ಯಾಲಯ	E	ಬೆಂಗಳೂರು

ಇಲ್ಲಿ ಕೊಟ್ಟಿರುವ ಸಂಕಲನ ಲೆಕ್ಕಗಳಿಗೂ ಉತ್ತರಗಳಿಗೂ ಹೊಂದಿಸಿ

ಸಿ ವಿಭಾಗ			
1	785 + 836 + 148 =	A	1276
2	630 + 700 + 180 =	B	775
3	315 + 144 + 316 =	C	1769
4	378 + 401 + 206 =	D	985
5	100 + 200 + 976 =	E	1510

ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ-20 ಮ್ಯಾಚ್: A ವಿಭಾಗ: 1-G;2-H;3-I;4-C;5-F;6-D;7-B;8-E;9-J;10-A

B ವಿಭಾಗ: 1-E;2-G;3-A;4-I,5-H;6-C;7-D;8-J;9-B;10-F

ಪದ ಹಿಗ್ಗು: 1. ಮದ್ದೂರು 2. ಕಾರ್ಕಳ 3. ಅಥಣಿ 4. ಬೇಲೂರು 5. ಕೊಪ್ಪಳ 6. ಬಳ್ಳಾರಿ 7. ಹುಬ್ಬಳ್ಳಿ 8. ಇಟಲಿ

ಅದಲು ಬದಲು ಕಂಚಿ ಕದಲು: 1. ಬದರಿಕಾಶ್ರಮ 2. ವಿಧ್ವಂಸಕ 3. ಮದನಾರಿ 4. ಸಂಗೀತ ಸಂಗಮ

ಶಬ್ದಗಳೊಡನೆ ಸರಸ: 1. ನಮನ 2. ವಕೀಲ 3. ಸಾದರ 4. ಗರತಿ 5. ರಮಣ 6. ಕವನ 7. ನನಗೆ 8. ಕಮರು 9. ದಾನಮ್ಮ 10. ಸಮಾನ

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ಸಂಸ್ಕೃತಿ ಎಂ.ಎಸ್., ಮೈಸೂರು

ಹರ್ಷಿಣಿ ಜಿ, ಚಿತ್ರದುರ್ಗ

ನಿರೀಕ್ಷಾ, ಬೆಂಗಳೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಲೆಜೆಂಡ್ಸ್ ಲೀಗ್ ಕ್ರಿಕೆಟ್‌ಗೆ ಸಚಿನ್ ಇಲ್ಲ

ಸಚಿನ್ ತೆಂಡೂಲ್ಕರ್

ನವದೆಹಲಿ (ಪಿಟಿಐ): ಭಾರತ ತಂಡದ ಮಾಜಿ ಆಟಗಾರ ಸಚಿನ್ ತೆಂಡೂಲ್ಕರ್ ಅವರು ಮುಂಬರುವ ಲೆಜೆಂಡ್ಸ್ ಲೀಗ್ ಕ್ರಿಕೆಟ್ (ಎಲ್‌ಎಲ್‌ಸಿ) ಟೂರ್ನಿಯಲ್ಲಿ ಆಡುವುದಿಲ್ಲ ಎಂದು ಎಸ್‌ಆರ್‌ಟಿ ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ಸ್ಪಷ್ಟಪಡಿಸಿದೆ.

ಎಲ್‌ಎಲ್‌ಸಿಯು ನಿವೃತ್ತ ಆಟಗಾರರು ಕಣಕ್ಕಿಳಿಯುವ ವೃತ್ತಿಪರ ಲೀಗ್ ಆಗಿದೆ. ಲೀಗ್‌ನಲ್ಲಿ ಆಡುವ ಭಾರತದ ಆಟಗಾರರ ತಂಡವನ್ನು ಇತ್ತೀಚೆಗೆ ಪ್ರಕಟಿಸಲಾಗಿತ್ತು.

ಬಾಲಿವುಡ್ ನಟ ಅಮಿತಾಭ್ ಬಚ್ಚನ್ ಅವರನ್ನು ಒಳಗೊಂಡ ಪ್ರಚಾರದ ವಿಡಿಯೊವೊಂದರಲ್ಲಿ ತೆಂಡೂಲ್ಕರ್ ಕೂಡ ಲೀಗ್‌ನ ಭಾಗವಾಗಲಿದ್ದಾರೆ ಎಂದು ತೋರಿಸಲಾಗಿತ್ತು. ಆದರೆ ಇದನ್ನು ಎಸ್‌ಆರ್‌ಟಿ ಎಸ್‌ಆರ್‌ಟಿ ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್ ವಕ್ತಾರರು ತಿರಸ್ಕರಿಸಿದ್ದಾರೆ.

ಎಲ್‌ಎಲ್‌ಸಿ ಇದೇ 20ರಂದು ಆರಂಭವಾಗಲಿದೆ.

ಟೆಸ್ಟ್ ಕ್ರಿಕೆಟ್‌ಗೆ ಗುಣತಿಲಕ ವಿದಾಯ

ಧನುಷ್ಕ ಗುಣತಿಲಕ

ಕೊಲಂಬೊ (ಪಿಟಿಐ): ಶ್ರೀಲಂಕಾ ಕ್ರಿಕೆಟ್ ತಂಡದ ಆರಂಭದ ಬ್ಯಾಟರ್ ಧನುಷ್ಕ ಗುಣತಿಲಕ ಅವರು ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಲು ನಿರ್ಧರಿಸಿದ್ದಾರೆ. ಸೀಮಿತ ಓವರ್‌ಗಳ ಪಂದ್ಯಗಳಿಗೆ ಆದ್ಯತೆ ನೀಡಲು ಅವರು ಈ ತೀರ್ಮಾನ ಕೈಗೊಂಡಿರುವುದಾಗಿ ಶ್ರೀಲಂಕಾ ಕ್ರಿಕೆಟ್ ಮಂಡಳಿ (ಎಸ್‌ಎಲ್) ಶನಿವಾರ ತಿಳಿಸಿದೆ.

ಕೋವಿಡ್ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಕ್ರಿಕೆಟ್ ಆಟಗಾರರ ಮೇಲೆ ಹೇರಿದ್ದ ನಿಷೇಧವನ್ನು ಶ್ರೀಲಂಕಾ ಶುಕ್ರವಾರ ವಾಪಸ್ ತೆಗೆದುಕೊಂಡಿತ್ತು. ಈ ಬೆಳವಣಿಗೆಯ ಬೆನ್ನಲ್ಲೇ ಗುಣತಿಲಕ ಅವರ ನಿರ್ಧಾರ ಹೊರಬಿದ್ದಿದೆ.

ಇಂಗ್ಲೆಂಡ್ ಪ್ರವಾಸ ಕೈಗೊಂಡಿದ್ದಾಗ ನಿಯಮ ಉಲ್ಲಂಘಿಸಿದ್ದ ಉಪನಾಯಕ ಕುಶಾಲ್ ಮೆಂಡಿಸ್, ಆರಂಭಿಕ ಬ್ಯಾಟರ್ ಗುಣತಿಲಕ ಹಾಗೂ ವಿಕೆಟ್ ಕೀಪರ್ ನಿರೋಷನ್ ಡಿಕ್ವೆಲ್ಲಾ ಮೇಲೆ ಒಂದು ವರ್ಷ ನಿಷೇಧ ಹೇರಲಾಗಿತ್ತು.

ಎಂಟು ಟೆಸ್ಟ್ ಪಂದ್ಯಗಳನ್ನು ಆಡಿರುವ ಗುಣತಿಲಕ 299 ರನ್ ಗಳಿಸಿದ್ದಾರೆ. ಅದರಲ್ಲಿ ಎರಡು ಅರ್ಧಶತಕಗಳು ಸೇರಿವೆ. 61 ಅವರ ಇನಿಂಗ್ಸ್‌ವೊಂದರ ಗರಿಷ್ಠ ರನ್.

ಮಹಿಳಾ ಏಷ್ಯಾಕಪ್ ಫುಟ್‌ಬಾಲ್‌ನಲ್ಲಿ ವಿಎಆರ್ ಜಾರಿ

ನವದೆಹಲಿ (ಪಿಟಿಐ): ಭಾರತದಲ್ಲಿ ನಡೆಯಲಿರುವ ಮಹಿಳಾ ಏಷ್ಯಾಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಮೊದಲ ಬಾರಿ ವಿಡಿಯೊ ಅಸಿಸ್ಟಂಟ್ ರೆಫರಿ (ವಿಎಆರ್) ವಿಧಾನ ಬಳಸಲಾಗುತ್ತದೆ.

ಜನವರಿ 20ರಿಂದ ಫೆಬ್ರುವರಿ ಆರರವರೆಗೆ ಮುಂಬೈ, ನವಿ ಮುಂಬೈ ಮತ್ತು ಪುಣೆಯಲ್ಲಿ ಪಂದ್ಯಗಳು ನಿಗದಿಯಾಗಿವೆ. ಕ್ವಾರ್ಟರ್ ಫೈನಲ್ ಪಂದ್ಯಗಳಿಂದ ಫೈನಲ್ ವರೆಗೆ ವಿಎಆರ್ ಬಳಸಲಾಗುತ್ತದೆ. ಪಂದ್ಯ ನಡೆಯುವ ಮೂರು ತಾಣಗಳಲ್ಲಿ ಈ ಕುರಿತ ವ್ಯವಸ್ಥೆಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ.

ಆರು ಮಂದಿ ಅಧಿಕಾರಿಗಳು ಕ್ರೀಡಾಂಗಣದಲ್ಲಿನ ಪ್ರತಿ ಕ್ರಿಯೆಯನ್ನು ಪರಿಶೀಲಿಸಲು ಏಳು ವಿಭಿನ್ನ ಲೈವ್ ಕ್ಯಾಮೆರಾಗಳ ಸಹಾಯ ಪಡೆಯಲಿದ್ದಾರೆ.

ಭಾರತ, ಆಸ್ಟ್ರೇಲಿಯಾ, ಚೀನಾ, ಚೀನಾ ಥೈಪೆ, ವಿಯೆಟ್ನಾಂ, ಇಂಡೊನೇಷ್ಯಾ, ಮ್ಯಾನ್ಮಾರ್, ದಕ್ಷಿಣ ಕೊರಿಯಾ, ಫಿಲಿಪ್ಪೀನ್ಸ್, ಇರಾನ್, ಥಾಯ್ಲೆಂಡ್ ಮತ್ತು ಹಾಲಿ ಚಾಂಪಿಯನ್ ಜಪಾನ್ ತಂಡಗಳು ಸೆಣಸಲಿವೆ.

ಆ್ಯಷಸ್ 4ನೇ ಟೆಸ್ಟ್: ಇಂಗ್ಲೆಂಡ್ ಜಯಕ್ಕೆ ಸವಾಲಿನ ಗುರಿ ನೀಡಿದ ಆಸ್ಟ್ರೇಲಿಯಾ

ಉಸ್ಮಾನ್ ಖ್ವಾಜಾ ‘ಡಬಲ್’ ಶತಕ

ಸಿಡ್ನಿ (ಎಎಫ್‌ಪಿ): ಎರಡು ವರ್ಷಗಳ ನಂತರ ಟೆಸ್ಟ್ ಕಣಕ್ಕೆ ಮರಳಿದ ಉಸ್ಮಾನ್ ಖ್ವಾಜಾ ಎರಡನೇ ಶತಕ ಸಿಡಿಸಿ ಮಿಂಚಿದರು. ಯುವ ಆಟಗಾರ ಕ್ಯಾಮರಾನ್ ಗ್ರೀನ್ ಜೊತೆ ಶತಕದ ಜೊತೆಯಾಟವನ್ನೂ ಆಡಿದರು. ಇವರಿಬ್ಬರ ಭರ್ಜರಿ ಬ್ಯಾಟಿಂಗ್ ಬಲದಿಂದ ಆಸ್ಟ್ರೇಲಿಯಾ ತಂಡ ಆ್ಯಷಸ್ ಸರಣಿಯ ನಾಲ್ಕನೇ ಟೆಸ್ಟ್‌ನಲ್ಲಿ ಇಂಗ್ಲೆಂಡ್‌ಗೆ ಸವಾಲಿನ ಗುರಿ ನೀಡಿದೆ.

388 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿರುವ ಪ್ರವಾಸಿ ಇಂಗ್ಲೆಂಡ್ ತಂಡ ಪಂದ್ಯದ ನಾಲ್ಕನೇ ದಿನದಾಟ ಮುಕ್ತಾಯಗೊಂಡಾಗ ವಿಕೆಟ್ ಕಳೆದುಕೊಳ್ಳದೆ 30 ರನ್ ಗಳಿಸಿದ್ದು ಜಯ ಗಳಿಸಲು ಇನ್ನೂ 358 ರನ್ ಬೇಕಾಗಿದೆ.

ಜಾನಿ ಬೇಸ್ಟೋ ಅವರ ಶತಕದ ನೆರವಿನಿಂದ ಮೂರನೇ ದಿನದಾಟದ ಮುಕ್ತಾಯಕ್ಕೆ ಇಂಗ್ಲೆಂಡ್ ಮೊದಲ ಇನಿಂಗ್ಸ್‌ನಲ್ಲಿ 7ಕ್ಕೆ 258 ರನ್ ಗಳಿಸಿತ್ತು. ಶನಿವಾರ ಬೆಳಿಗ್ಗೆ ಈ ಮೊತ್ತಕ್ಕೆ 36 ರನ್ ಸೇರಿಸಿ ಆಲೌಟಾಯಿತು. ಡೇವಿಡ್ ವಾರ್ನರ್ 6ನೇ ಓವರ್‌ನಲ್ಲಿ ಮರಳಿದರು. ಮಾರ್ಕಸ್ ಹ್ಯಾರಿಸ್, ಮಾರ್ನಸ್ ಲಾಬುಶೇನ್ ಮತ್ತು ಸ್ಟೀವ್ ಸ್ಮಿತ್ ಔಟಾದಾಗ ತಂಡದ ಮೊತ್ತ 86 ರನ್ ಆಗಿತ್ತು. ಈ ಸಂದರ್ಭದಲ್ಲಿ ಜೊತೆಗೂಡಿದ ಉಸ್ಮಾನ್ ಖ್ವಾಜಾ (ಔಟಾಗದೆ 101; 138 ಎಸೆತ, 10 ಬೌಂಡರಿ, 2 ಸಿಕ್ಸರ್) ಮತ್ತು ಕ್ಯಾಮರಾನ್ ಗ್ರೀನ್ (74; 122 ಎ, 7 ಬೌಂ, 1 ಸಿ) 179 ರನ್‌ಗಳ ಜೊತೆಯಾಟವಾಡಿದರು. ಈ ಮೂಲಕ ಖ್ವಾಜಾ ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ಎರಡೂ ಇನಿಂಗ್ಸ್‌ಗಳಲ್ಲಿ ಶತಕ ಸಿಡಿಸಿದ ಆಸ್ಟ್ರೇಲಿಯಾದ 3ನೇ ಆಟಗಾರ ಎನಿಸಿದರು. ಗ್ರೀನ್ ಅವರು ಜ್ಯಾಕ್ ಲೀಚ್ ಎಸೆತದಲ್ಲಿ ಜೋ ರೂಟ್‌ಗೆ ಕ್ಯಾಚ್ ನೀಡಿ ಮರಳಿದರು. ಅಲೆಕ್ಸ್ ಕ್ಯಾರಿ ಮೊದಲ ಎಸೆತದಲ್ಲೇ ಔಟಾಗುತ್ತಿದ್ದಂತೆ ನಾಯಕ ಪ್ಯಾಟ್ ಕಮಿನ್ಸ್ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡರು.

ಉಸ್ಮಾನ್ ಖ್ವಾಜಾ ಅವರ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಸಿಡ್ನಿಯಲ್ಲಿ 300ಕ್ಕೂ ಹೆಚ್ಚು ರನ್‌ಗಳ ಗುರಿ ಬೆನ್ನತ್ತಿ ಯಾವ ತಂಡವೂ ಜಯ ಗಳಿಸಿಲ್ಲ. ದಕ್ಷಿಣ ಆಫ್ರಿಕಾ ಎದುರು 2 ವಿಕೆಟ್‌ಗಳಿಗೆ 288 ರನ್ ಗಳಿಸಿದ ಆಸ್ಟ್ರೇಲಿಯಾ 2006ರಲ್ಲಿ ಇಲ್ಲಿ ಜಯಿಸಿತ್ತು. ಯಾವುದೇ ಪ್ರವಾಸಿ ತಂಡಕ್ಕೆ ನಾಲ್ಕನೇ ಇನಿಂಗ್ಸ್‌ನಲ್ಲಿ 200 ರನ್‌ಗಳ ಮೊತ್ತ ದಾಟಲು ಆಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 8ಕ್ಕೆ 416; ಇಂಗ್ಲೆಂಡ್ (ಶುಕ್ರವಾರ 70 ಓವರ್‌ಗಳಲ್ಲಿ 7ಕ್ಕೆ 258: 79.1 ಓವರ್‌ಗಳಲ್ಲಿ 294 (ಜಾನಿ ಬೇಸ್ಟೊ ಬ್ಯಾಟಿಂಗ್ 113, ಜ್ಯಾಕ್ ಲೀಚ್ ಬ್ಯಾಟಿಂಗ್ 10, ಸ್ಟುವರ್ಟ್ ಬ್ರಾಡ್ 15, ಜೇಮ್ಸ್ ಆ್ಯಂಡರ್ಸನ್ ಔಟಾಗದೆ 4; ಪ್ಯಾಟ್ ಕಮಿನ್ಸ್ 68ಕ್ಕೆ2, ಮಿಚೆಲ್ ಸ್ಟಾರ್ಕ್ 56ಕ್ಕೆ1, ಸ್ಕಾಟ್ ಬೊಲ್ಯಾಂಡ್ 36ಕ್ಕೆ4, ಕ್ಯಾಮರಾನ್ ಗ್ರೀನ್ 24ಕ್ಕೆ1, ನೇಥನ್ ಲಯನ್ 88ಕ್ಕೆ1); ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 68.5 ಓವರ್‌ಗಳಲ್ಲಿ 6ಕ್ಕೆ265 ಡಿಕ್ಲೇರ್ (ಮಾರ್ಕಸ್ ಹ್ಯಾರಿಸ್ 27, ಡೇವಿಡ್ ವಾರ್ನರ್ 3, ಮಾರ್ನಸ್ ಲಾಬುಷೇನ್ 29, ಸ್ಟೀವನ್ ಸ್ಮಿತ್ 23, ಉಸ್ಮಾನ್ ಖ್ವಾಜಾ ಔಟಾಗದೆ 101, ಕ್ಯಾಮರಾನ್ ಗ್ರೀನ್ 74; ಮಾರ್ಕ್ ವುಡ್ 65ಕ್ಕೆ2, ಜ್ಯಾಕ್ ಲೀಚ್ 84ಕ್ಕೆ4); ಇಂಗ್ಲೆಂಡ್: 11 ಓವರ್‌ಗಳಲ್ಲಿ ವಿಕೆಟ್ ಕಳೆದುಕೊಳ್ಳದೆ 30 (ಜಾಕ್ ಕ್ರಾವ್ಲಿ 22, ಹಸೀಬ್ ಹಮೀದ್ 8).

ಐಎಸ್‌ಎಲ್ ಆಟಗಾರನಿಗೆ ಸೋಂಕು

ಎಟಿಕೆಎಂಬಿ–ಒಡಿಶಾ ಎಫ್‌ಸಿ ಪಂದ್ಯ ಮುಂದೂಡಿಕೆ

ಮಡಗಾಂವ್, ಗೋವಾ (ಪಿಟಿಐ): ಆಟಗಾರನಲ್ಲಿ ಕೋವಿಡ್–19 ಸೋಂಕು ಕಾಣಿಸಿಕೊಂಡ ಕಾರಣ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯವನ್ನು ಮುಂದೂಡಲಾಗಿದೆ. ಶನಿವಾರ ಎರಡು ಪಂದ್ಯಗಳು ನಿಗದಿಯಾಗಿದ್ದವು. ಎಟಿಕೆ ಮೋಹನ್ ಬಾಗನ್ ತಂಡದ ಆಟಗಾರನಿಗೆ ಸೋಂಕು ಇರುವುದು ಖಚಿತವಾದ ಕಾರಣ ಒಡಿಶಾ ಎಫ್‌ಸಿ ನಡುವಿನ ಪಂದ್ಯ ನಡೆಸದೇ ಇರಲು ನಿರ್ಧರಿಸಲಾಯಿತು.

ಈ ವಿಷಯವನ್ನು ಮಧ್ಯಾಹ್ನ ಬಹಿರಂಗ ಮಾಡಿರುವ ಆಯೋಜಕರು ಪಂದ್ಯ ಯಾವಾಗ ನಡೆಸಬೇಕು ಎಂಬುದನ್ನು ಸದ್ಯದಲ್ಲೇ ನಿರ್ಧರಿಸಲಾಗುವುದು ಎಂದು ತಿಳಿಸಿದ್ದಾರೆ. ತಂಡದ ಇತರ ಆಟಗಾರರು ಮತ್ತು ಸಿಬ್ಬಂದಿಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಗುವುದು. ವೈದ್ಯಕೀಯ ತಜ್ಞರ ಜೊತೆ ಚರ್ಚಿಸಿ ಮುಂದಿನ ಹೆಜ್ಜೆ ಇರಿಸಲಾಗುವುದು ಎಂದು ವಿವರಿಸಲಾಗಿದೆ.ದಿನದ ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಗೋವಾ 1–0ಯಿಂದ ಚೆನ್ನೈಯಿನ್ ಎಫ್‌ಸಿ ಎದುರು ಗೆದ್ದಿತು.

ವಾರ್ಮ್ ಅಪ್ ಮಾಡಿದ ಕೇರಳ ಬ್ಲಾಸ್ಟರ್ಸ್ ಆಟಗಾರರು

ಹೈದರಾಬಾದ್-ಕೇರಳ ಬ್ಲಾಸ್ಟರ್ಸ್ ಮುಖಾಮುಖಿ: ಅಗ್ರ ಸ್ಥಾನದ ಮೇಲೆ ಕಣ್ಣಿಟ್ಟಿರುವ ಹೈದರಾಬಾದ್ ಎಫ್‌ಸಿ ಮತ್ತು ಅಗ್ರ ನಾಲ್ಕರಲ್ಲಿ ಸ್ಥಾನ ಗಳಿಸುವ ಕನಸಿನಲ್ಲಿರುವ ಕೇರಳ ಬ್ಲಾಸ್ಟರ್ಸ್ ತಂಡಗಳು ಭಾನುವಾರ ವಾಸ್ಕೊದಲ್ಲಿ ಮುಖಾಮುಖಿಯಾಗಲಿವೆ.

ಮೋಟರ್ ಸೈಕಲ್ ರೇಸ್: ರಿಹಾನ ಚಾಂಪಿಯನ್

ಚೆನ್ನೈ (ಪಿಟಿಐ): ಸ್ಥಳೀಯ ರೈಡರ್, ಆರ್‌ಎಸಿಆರ್ ಕ್ಯಾಸ್ಟ್ರಲ್ ಪವರ್ ಅಲ್ಟಿಮೇಟ್‌ನ ರಿಹಾನ ಬೀ, ಇಲ್ಲಿ ಶನಿವಾರ ನಡೆದ ಎಂಆರ್‌ಎಫ್ ಎಂಎಂಎಸ್‌ಸಿ ಎಫ್‌ಎಂಎಸ್‌ಸಿಐ ರಾಷ್ಟ್ರೀಯ ಮೋಟರ್ ಸೈಕಲ್ ರೇಸಿಂಗ್ ಚಾಂಪಿಯನ್‌ಷಿಪ್‌ನ ಮಹಿಳಾ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು. ಎರಡು ವರ್ಷಗಳ ನಂತರ ಕಣಕ್ಕೆ ಇಳಿದ ರಿಹಾನ ಭರ್ಜರಿ ರೇಸಿಂಗ್ ಪ್ರದರ್ಶಿಸಿದರು.

29 ವರ್ಷದ ಚೆನ್ನೈ ರೇಸರ್ ಪ್ರಭು ಅರುಣಗಿರಿ ಅವರು ಯಮಹಾ ತಂಡದ ಪರ ಟ್ರ್ಯಾಕ್‌ಗೆ ಇಳಿದು ಮೊದಲ ಜಯದ ಸಂಭ್ರಮ ಅನುಭವಿಸಿದರು. ಅವರು 12 ವರ್ಷಗಳ ವಿರಾಮದ ನಂತರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಿದ್ದರು. ಒಂದನೇ ಲ್ಯಾಪ್‌ನಲ್ಲಿ ಅವಘಡ ಸಂಭವಿಸಿದ ಹಿನ್ನೆಲೆಯಲ್ಲಿ ಎಂಟು ಲ್ಯಾಪ್‌ಗಳ ರೇಸನ್ನು 5ಕ್ಕೆ ಇಳಿಸಲಾಗಿತ್ತು.

ಪ್ರೀಮಿಯರ್ ಪ್ರೊ ಸ್ಟಾಕ್ 301–400 ಸಿಸಿ ವಿಭಾಗದಲ್ಲಿ ಮಹತ್ವದ 50 ಪಾಯಿಂಟ್ಸ್ ಗಳಿಸಿದ ಚೆನ್ನೈನ ರಜನಿ ಕೃಷ್ಣನ್ ಚಾಂಪಿಯನ್ ಆದರು.

ರಿಹಾನ ಬೀ